ಮಂಗಳೂರು
ಮಂಗಳವಾರ, 17 ಫೆಬ್ರವರಿ 2026
ಸಂಪುಟ 47, ಸಂಚಿಕೆ 320 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಕಾರ್ಖಾನೆಯಲ್ಲಿ ಬೆಂಕಿ; 7 ಜನ ಸಜೀವ ದಹನ |೦೭
ಭಾರತ್ ವಿಸ್ತಾರ್, ಎಐ ರೈತ ಕ್ರಾಂತಿ |೦೭
ರಣಜಿ: ಪಡಿಕ್ಕಲ್ ಚೊಚ್ಚಲ ದ್ವಿಶತಕ |೧೧

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಅಮಾವಾಸ್ಯೆ, ನಕ್ಷತ್ರ: ಧನಿಷ್ಠೆ

ದಿನದ ಮಾತು

ವಿವೇಕಿಯಾದವನು ಮೋಸಗಾರರನ್ನು ಮತ್ತು ಕಡುಪಾಪಿಗಳನ್ನು ಒಳ್ಳೆಯ ಮಾತನಾಡಿ ತಿದ್ದುತ್ತಾನೆ.
▲ಧರ್ಮಾಮೃತ

ಇರಾನ್-ಅಮೇರಿಕಾ ಯುದ್ಧ ನಡೆಯಲಿದೆಯೇ?

ರಾಘವಾಂಕಣ
• ರಾಘವೇಂದ್ರ ಸುಬ್ರಹ್ಮಣ್ಯ
• ಪುಟ ೬

ಕಿರು ಸುದ್ದಿ

ಫೆ.25, 26ರಂದು ಪ್ರಧಾನಿ ಮೋದಿ ಇಸ್ರೇಲ್ ಪ್ರವಾಸ

• ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿ ಅವರು ಫೆ.25 ಮತ್ತು 26ರಂದು ಇಸ್ರೇಲ್‌ಗೆ ಭೇಟಿ ನೀಡಲಿದ್ದಾರೆ. ಇದು ಅವರ ಮೂರು ಅವಧಿಗಳಲ್ಲಿನ ಎರಡನೇ ಇಸ್ರೇಲ್ ಪ್ರವಾಸವಾಗಲಿದೆ . ಈ ವಿಷಯವನ್ನು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಅಮೆರಿಕದ ಪ್ರಮುಖ ಯಹೂದಿ ಸಂಘಟನೆಗಳ ಅಧ್ಯಕ್ಷರ ಸಮ್ಮೇಳನದಲ್ಲಿ ಪ್ರಕಟಿಸಿದ್ದಾರೆ. ಮುಂದಿನ ವಾರ ಇಲ್ಲಿ ಯಾರು ಬರುತ್ತಿದ್ದಾರೆ? ನರೇಂದ್ರ ಮೋದಿ ಎಂದು ಅವರು ಹೇಳಿ, ಭಾರತ-ಇಸ್ರೇಲ್ ಸಂಬಂಧಗಳನ್ನು ವಿಶಾಲ ಮೈತ್ರಿ ಎಂದು ಬಣ್ಣಿಸಿದ್ದಾರೆ.

ವಿದೇಶಿ ಮಹಿಳೆ ಅತ್ಯಾಚಾರ: ಮೂವರಿಗೆ ಮರಣದಂಡನೆ

• ಗಂಗಾವತಿ: ತಾಲೂಕಿನ ಸಾಣಾಪುರದಲ್ಲಿ 11ತಿಂಗಳ ಹಿಂದೆ ವಿದೇಶಿ ಮಹಿಳೆ ಹಾಗೂ ಸ್ಥಳೀಯ ಹೋಂ ಸ್ಟೇ ಒಡತಿ ಮೇಲೆ ಸಾಮೂಹಿಕ ಅತ್ಯಾಚಾರ ಮತ್ತು ಒಡಿಶಾ ಪ್ರವಾಸಿಗನ ಹತ್ಯೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಗಂಗಾವತಿ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸಷನ್ಸ್ ನ್ಯಾಯಾಲಯವು ಮೂವರು ಅಪರಾಧಿಗಳಿಗೆ ಮರಣದಂಡನೆ ಶಿಕ್ಷೆ ವಿಧಿಸಿ ಆದೇಶಿಸಿದೆ. ಗಂಗಾವತಿಯ ಸಾಯಿನಗರದ ಮಲ್ಲೇಶ್ (ಹಂದಿಮಲ್ಲ), ಸಾಯಿ (ಚೈತನ್ಯಸಾಯಿ) ಹಾಗೂ ಶರಣಪ್ಪ (ಶರಣು ಬಸವರಾಜ್) ಶಿಕ್ಷೆಗೆ ಒಳಗಾದ ಅಪರಾಧಿಗಳು.
• ಪುಟ ೫

ಕ್ರಿಮಿನಲ್ ಕಾನೂನು ಪೂರ್ಣ ಜಾರಿಯಾದರೆ ಶಿಕ್ಷೆ ಹೆಚ್ಚಳ
• ಪುಟ ೭

ಶಿವಮೊಗ್ಗ: ರಾತ್ರಿ ವಿಮಾನ ಸಂಚಾರ ಶೀಘ್ರ
• ಪುಟ ೫

8 ಸಾವಿರ ಬ್ಯಾಂಕ್ ಖಾತೆ ಸ್ಥಗಿತ
• ಪುಟ ೭



ಭಾರತದ ಪ್ರಪ್ರಥಮ ಗೋ ಸಂಗ್ರಹಾಲಯ
• ಪುಟ ೭
ಸುದ್ದಿ ಸಮಗ್ರ

ದೇಶದ ಮೊದಲ ಘಟಕ ವರ್ಚುವಲ್‌ನಲ್ಲಿ ಇಂದು ಉದ್ಘಾಟನೆ

ಹೆಲಿಕಾಪ್ಟರ್ ಜೋಡಣೆ ಕಾರ್ಖಾನೆಗೆ ಚಾಲನೆ

• ಕೋಲಾರ: ದೇಶದಲ್ಲಿಯೇ ಮೊಟ್ಟ ಮೊದಲ ಹೆಲಿಕಾಪ್ಟರ್ ಜೋಡಣೆ ಘಟಕ ಜಿಲ್ಲೆಯ ವೇಮಗಲ್‌ನಲ್ಲಿ ಸ್ಥಾಪನೆಯಾಗಿದ್ದು, ಮಂಗಳವಾರ ಸಂಜೆ ಪ್ರಧಾನಿ ಮೋದಿ ಹಾಗೂ ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ವರ್ಚುವಲ್ ಮೂಲಕ ಚಾಲನೆ ನೀಡಲಿದ್ದಾರೆ. ಈ ವೇಳೆ ಕೇಂದ್ರ ರಕ್ಷಣಾ ಸಚಿವ ರಾಜನಾಥಸಿಂಗ್ ವೇಮಗಲ್‌ನಲ್ಲಿ ಉಪಸ್ಥಿತರಿರಲಿದ್ದಾರೆ.

ಜಿಲ್ಲೆಯಲ್ಲಿ ಈಗಾಗಲೇ ಐಫೋನ್ ತಯಾರಿಕಾ ಘಟಕ ಹಾಗೂ ರಕ್ಷಣಾ ವ್ಯವಸ್ಥೆಯ ಉಪಕರಣಗಳ ಇನ್ನಿತರ ಘಟಕಗಳನ್ನು ಯಶಸ್ವಿಯಾಗಿ ಮುನ್ನಡೆಸುತ್ತಿರುವ ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಕಂಪನಿ, ಇದೀಗ ವೇಮಗಲ್ ಕೈಗಾರಿಕಾ ಪ್ರದೇಶದ ವೇಮಗಲ್-ಕುರುಗಲ್ ಮಧ್ಯ ಭಾಗದಲ್ಲಿ ಹೆಲಿಕಾಪ್ಟರ್ ಜೋಡಣೆ ಕಾರ್ಖಾನೆಯನ್ನು ಸ್ಥಾಪಿಸುವ ಸಂಬಂಧ ಫ್ರಾನ್ಸ್‌ನ ಅತಿ ದೊಡ್ಡ ವೈಮಾನಿಕ ಸಂಸ್ಥೆ ಏರ್‌ಬಸ್ ನೊಂದಿಗೆ ಕಳೆದ ವರ್ಷ ಒಪ್ಪಂದ ಮಾಡಿಕೊಂಡಿತ್ತು.

ರಾಜನಾಥ್ ಸಿಂಗ್, ವಾಟ್ರಿನ್ ಉಪಸ್ಥಿತಿ

9 ತಿಂಗಳ ಹಿಂದೆ ಘೋಷಣೆ: ದೇಶದ ಮೊಟ್ಟಮೊದಲ ಖಾಸಗಿ ಹೆಲಿಕಾಪ್ಟರ್ ತಯಾರಿಕಾ ಘಟಕವನ್ನು ಕೋಲಾರ ಜಿಲ್ಲೆಯ ವೇಮಗಲ್ ಕೈಗಾರಿಕಾ ಪ್ರದೇಶದಲ್ಲಿ ಆರಂಭಿಸಲಾಗುವುದು ಎಂಬ ಘೋಷಣೆ ಕಳೆದ ವರ್ಷ ಮೇ ತಿಂಗಳಲ್ಲಿ ಹೊರಬಿದ್ದಿತ್ತು. ಈಗಾಗಲೇ ವೇಮಗಲ್ ಕುರುಗಲ್ ಮಧ್ಯೆ ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ರಕ್ಷಣಾ ವಲಯದ ಘಟಕ ಹೊಂದಿದ್ದು, ಈ ಘಟಕದ ಬಳಿಯೇ ಸುಮಾರು 50 ಎಕರೆ ಪ್ರದೇಶದಲ್ಲಿ ಹೆಲಿಕಾಪ್ಟರ್ ಜೋಡಣಾ ಘಟಕ ಆರಂಭಗೊಳ್ಳಲಿದೆ.

ಘಟಕ ಆರಂಭಿಸುವ ಕುರಿತು ಘೋಷಣೆ ಹೊರಬೀಳುತ್ತಿದ್ದಂತೆಯೇ ಸುಮಾರು 9 ತಿಂಗಳ ಕಾಲ ನೂರಾರು ಕಾರ್ಮಿಕರು ಘಟಕವನ್ನು ಉದ್ಘಾಟನಾ ಹಂತಕ್ಕೆ ತಂದು ನಿಲ್ಲಿಸಿದ್ದಾರೆ. ಘಟಕದ ಮತ್ತಷ್ಟು ಕಾಮಗಾರಿಗಳು ಪ್ರಗತಿಯಲ್ಲಿದ್ದು, ಸಾಂಕೇತಿಕವಾಗಿ ಫೆ.17 ರಂದು ಮಂಗಳವಾರ ಸಂಜೆ 4 ರಿಂದ 6 ಗಂಟೆ ವೇಳೆಗೆ ಘಟಕಕ್ಕೆ ಚಾಲನೆ ಸಿಗಲಿದೆ.



ಕೋಲಾರದ ವೇಮಗಲ್‌ನಲ್ಲಿ ಘಟಕ ಕಾರ್ಯಾರಂಭ

ಪ್ರಧಾನಿ ಮೋದಿ, ಮ್ಯಾಕ್ರನ್ ಭಾಗಿ

ದೇಶದ ಮೊಟ್ಟ ಮೊದಲ ಖಾಸಗಿ ಸಹಭಾಗಿತ್ವದ ಹೆಲಿಕಾಪ್ಟರ್ ಜೋಡಣಾ ಘಟಕವನ್ನು ಭಾರತದ ಪ್ರಧಾನಿ ನರೇಂದ್ರ ಮೋದಿ ಹಾಗೂ ಫ್ರಾನ್ಸ್ ಪ್ರಧಾನಿ ಎಮ್ಯಾನುಯೆಲ್ ಮ್ಯಾಕ್ರನ್ ವರ್ಚುವಲ್ ಮೂಲಕ ಉದ್ಘಾಟಿಸಲಿದ್ದಾರೆ. ಆದರೆ, ಭಾರತದ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಫ್ರಾನ್ಸ್ ರಕ್ಷಣಾ ಸಚಿವೆ ಕ್ಯಾಥರೀನ್ ವಾಟ್ರಿನ್ ವೇಮಗಲ್ ಘಟಕದಲ್ಲಿಯೇ ಉದ್ಘಾಟನಾ ಕಾರ್ಯಕ್ರಮದಲ್ಲಿ ಖುದ್ದು ಹಾಜರಿರಲಿದ್ದಾರೆ.

ಸ್ಥಳ ಪರಿಶೀಲಿಸಿದ ಜಿಲ್ಲಾಧಿಕಾರಿ

ಈಗಾಗಲೇ ಜಿಲ್ಲಾಧಿಕಾರಿ ಡಾ.ಎಂ.ಆರ್.ರವಿ, ಎಸ್ಪಿ ಕನ್ನಿಕಾ ಸಕ್ರಿವಾಲ್ ಮತ್ತಿತರ ಅಧಿಕಾರಿಗಳ ತಂಡ ಖುದ್ದು ವೇಮಗಲ್‌ಗೆ ಭೇಟಿ ನೀಡಿ, ರಕ್ಷಣೆ, ಬಿಗಿ ಭದ್ರತೆ ಕುರಿತ ಪೂರ್ವಸಿದ್ಧತೆಗಳನ್ನು ಪರಿಶೀಲಿಸಿದರು. ತಾಲ್ಲೂಕಿನ ವೇಮಗಲ್-ಕುರಗಲ್ ಕೈಗಾರಿಕಾ ಪ್ರದೇಶದಲ್ಲಿ ಸುಮಾರು 50 ಎಕರೆ ಪ್ರದೇಶದಲ್ಲಿ ನಿರ್ಮಾಣಗೊಂಡಿರುವ ಈ ಘಟಕ ದೇಶದಲ್ಲೇ ಮೊದಲ ಮಿನಿ ನಾಗರಿಕ ಹೆಲಿಕಾಪ್ಟರ್ ಘಟಕ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ. ಇದು ಅಂತಿಮ ಹೆಲಿಕಾಪ್ಟರ್ ಜೋಡಣಾ ಘಟಕ ಎಂಬ ಖ್ಯಾತಿ ಹೊಂದಿದ್ದು, ಮೊದಲ ವರ್ಷದಲ್ಲಿ ವರ್ಷಕ್ಕೆ ಎಚ್125 ಮಾದರಿಯ 10 ಹೆಲಿಕಾಪ್ಟರ್‌ಗಳನ್ನು ತಯಾರಿಸುವ ಸಾಮರ್ಥ್ಯ ಹೊಂದಿದೆ. ಈ ಹೆಲಿಕಾಪ್ಟರ್‌ಗಳು ತುರ್ತು ವೈದ್ಯಕೀಯ ಸೇವೆ, ಪ್ರವಾಸೋದ್ಯಮ, ರಕ್ಷಣಾ ಕಾರ್ಯಾಚರಣೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಬಳಕೆಯಾಗಲಿದ್ದು, ಮುಂದಿನ ಹಂತಗಳಲ್ಲಿ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸುವ ಯೋಜನೆಯೂ ಇದೆ ಎನ್ನಲಾಗಿದೆ. ವೇಮಗಲ್ ಕೈಗಾರಿಕಾ ಪ್ರದೇಶವು ದೇವನಹಳ್ಳಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ಚೆನ್ನೈ, ಬೆಂಗಳೂರು ಎಕ್ಸ್‌ಪ್ರೆಸ್ ಹೆದ್ದಾರಿಗೆ ಸಮೀಪದಲ್ಲಿದ್ದು, ಸಾಗಾಣಿಕೆ ಮತ್ತಿತರ ದೃಷ್ಟಿಯಿಂದ ಅನುಕೂಲಕರವಾಗಿದೆ. ಈ ಘಟಕದ ಆರಂಭದಿಂದಾಗಿ ಸ್ಥಳೀಯರಿಗೆ ಉದ್ಯೋಗಾವಕಾಶ ಹೆಚ್ಚಾಗಲಿದ್ದು, ಕೋಲಾರ ಜಿಲ್ಲೆಯ ಕೈಗಾರಿಕಾ ಅಭಿವೃದ್ಧಿಗೆ ಪೂರಕ ವಾತಾವರಣ ಮತ್ತು ಪ್ರೇರಣೆ ಸಿಗಲಿದೆ ಎಂದು ನಂಬಲಾಗಿದೆ.

ಹೈಕೋರ್ಟ್‌ನಿಂದ ಮಹತ್ವದ ಆದೇಶ

ಶಾಸಕ ಸುಬ್ಬಾರೆಡ್ಡಿ ಆಯ್ಕೆ ಅಸಿಂಧು

• ಬೆಂಗಳೂರು: ಕಳೆದ ವಿಧಾನಸಭೆ ಚುನಾವಣೆಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ (ಭಾಗ್ಯನಗರ) ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದ ಕಾಂಗ್ರೆಸ್ ಶಾಸಕ ಎಸ್. ಎನ್. ಸುಬ್ಬಾರೆಡ್ಡಿ ಆಯ್ಕೆಯನ್ನು ಹೈಕೋರ್ಟ್ ಅಸಿಂಧುಗೊಳಿಸಿ ಮಹತ್ವದ ಆದೇಶ ನೀಡಿದೆ.

ನಾಮಪತ್ರ ಸಲ್ಲಿಕೆ ವೇಳೆ ಸಂಪೂರ್ಣ ಆಸ್ತಿ ಘೋಷಣೆ ಮಾಡಿಲ್ಲ. ಅಪರಾಧ ಪ್ರಕರಣಗಳ ಮಾಹಿತಿಗಳನ್ನೂ ಮರೆಮಾಚಿದ್ದಾರೆ ಎಂದು ಪರಾಜಿತ ಬಿಜೆಪಿ ಅಭ್ಯರ್ಥಿ ಸಿ. ಮುನಿರಾಜು ಅವರು 2023ರ ಜೂ.24ರಂದು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ವೇಳೆ ಆಸ್ತಿ ಮಾಹಿತಿ ಉಲ್ಲಂಘನೆ ಮಾಡಿದ್ದು ದೃಢಪಟ್ಟ ಹಿನ್ನೆಲೆಯಲ್ಲಿ ಸುಬ್ಬಾರೆಡ್ಡಿ ಅವರ ಶಾಸಕ ಸ್ಥಾನವನ್ನು ಹೈಕೋರ್ಟ್ ಅಸಿಂಧು ಗೊಳಿಸಿದೆ. ನ್ಯಾಯಮೂರ್ತಿ ಎಂಜಿಎಸ್ ಕಮಲ್ ಅವರಿದ್ದ ಪೀಠ ಈ ಆದೇಶ ನೀಡಿದೆ.



ಎಸ್.ಎಸ್. ಸುಬ್ಬಾರೆಡ್ಡಿಗೆ ಸಂಕಷ್ಟ

ಆದರೆ, ಪರಾಜಿತ ಅಭ್ಯರ್ಥಿ ಸಿ. ಮುನಿರಾಜು ಅವರನ್ನು ವಿಜಯಿ ಎಂದು ಘೋಷಿಸಲು ಏಕಸದಸ್ಯ ನ್ಯಾಯಪೀಠ ನಿರಾಕರಿಸಿದೆ. ಅಸಿಂಧುಗೊಳಿಸಿದ ಆದೇಶವನ್ನು ಚುನಾವಣಾ ಆಯೋಗಕ್ಕೆ ಮತ್ತು ವಿಧಾನಸಭೆ ಕಾರ್ಯದರ್ಶಿಗೆ ರವಾನಿಸಲು ಆದೇಶಿಸಲಾಗಿದೆ. ಆದೇಶ ಪ್ರಕಟವಾಗುತ್ತಿದ್ದಂತೆ ಸುಬ್ಬಾರೆಡ್ಡಿ ಪರ ವಕೀ ಲರು, ಅರ್ಜಿಯ ಸಂಬಂಧ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವವರೆಗೆ ತಡೆಯಾಜ್ಞೆ ನೀಡಲು ಮನವಿ ಮಾಡಿದ್ದರು. ಇದಕ್ಕೆ ಅರ್ಜಿದಾರರ ಪರ ವಕೀಲರು ಆಕ್ಷೇಪಿಸಿದರು. ಅಂತಿಮವಾಗಿ ಮನವಿಯನ್ನು ಪೀಠವು ತಿರಸ್ಕರಿಸಿತು.

ಮುನಿರಾಜು ವಾಗ್ದಾಳಿ: ಹೈಕೋರ್ಟ್ ತೀರ್ಪು ಬೆನ್ನಲ್ಲೇ, ಮಾಧ್ಯಮದವರೊಂದಿಗೆ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಪರಾಜಿತ ಅಭ್ಯರ್ಥಿ ಸಿ. ಮುನಿರಾಜು ಮಾತನಾಡಿದರು. ➡ಪುಟ ೪



ಮುಂದೇನು?

ಶಾಸಕ ಸ್ಥಾನ ಅಸಿಂಧುಗೊಳಿಸಿರುವ ಹೈಕೋರ್ಟ್ ಮಧ್ಯಂತರ ತಡೆಯನ್ನು ನೀಡಿದೆ. ಮ,ಉಂದೆ ಸುಬ್ಬಾರೆಡ್ಡಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಬೇಕು. ಹೈಕೋರ್ಟ್‌ನ ಅಸಿಂಧು ತೀರ್ಪನ್ನು ಸುಪ್ರೀಂ ಕೋರ್ಟ್ ರದ್ದು ಮಾಡಿದರೆ ಮಾತ್ರ ಶಾಸಕ ಸ್ಥಾನ ಉಳಿಯಲಿದೆ. ಇಲ್ಲವಾದರೆ 6 ತಿಂಗಳ ಬಳಿಕ ಮರು ಚುನಾವಣೆ ನಡೆಯಲಿದೆ.

ಕಾಂಗ್ರೆಸ್ ವಿರುದ್ಧ ಆರ್.ಅಶೋಕ್ ಕಿಡಿ

ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ಆಯ್ಕೆ ಅಸಿಂಧು ವಿಚಾರವಾಗಿ ಎಕ್ಸ್ ಖಾತೆ ಮೂಲಕ ಕಾಂಗ್ರೆಸ್ ವಿರುದ್ಧ ಆರ್. ಅಶೋಕ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ವೋಟ್ ಚೋರಿ ಕಹಾ ಹೈ? ಕಾಂಗ್ರೆಸ್ ಪಾರ್ಟಿ ಮೇ ಹೈ! ರಾಹುಲ್ ಗಾಂಧಿ ಅವರು ಈಗ ಬಾಗೇಪಲ್ಲಿಗೆ ಬಂದು ವೋಟ್ ಚೋರಿ, ಎಲೆಕ್ಷನ್ ಚೋರಿ ವಿರುದ್ಧ ಪ್ರತಿಭಟನೆ ಮಾಡ್ತಾರಾ? ನಮ್ಮ ದೇಶದಲ್ಲಿ ಮತಗಳ್ಳತನ, ಚುನಾವಣಾ ಅಕ್ರಮಕ್ಕೆ ಯಾರಾದರೂ ಪಿತಾಮಹ ಇದ್ದರೆ ಅದು ಕಾಂಗ್ರೆಸ್ ಪಕ್ಷ ಮತ್ತು ರಾಹುಲ್ ಗಾಂಧಿ ಅವರ ಪೂರ್ವಜರು ಎಂದು ವಾಗ್ದಾಳಿ ಮಾಡಿದ್ದಾರೆ.

ಹೆಚ್ಚಿದ ಆತಂಕ | ಪೊಲೀಸ್ ತಪಾಸಣೆ ಬಳಿಕ ನಿರಾತಂಕ

8 ಕೋರ್ಟ್‌ಗೆ ಬಾಂಬ್ ಬೆದರಿಕೆ

• ಬೆಂಗಳೂರು: ಧಾರವಾಡ ಹೈಕೋರ್ಟ್ ಸೇರಿ ಎಂಟು ಜಿಲ್ಲಾ ಕೋರ್ಟ್‌ಗಳಿಗೆ ಸೋಮವಾರ ಬಾಂಬ್ ಬೆದರಿಕೆ ಇ-ಮೇಲ್ ಸಂದೇಶ ಬಂದಿದೆ. ಹೀಗಾಗಿ ಕೋರ್ಟ್‌ಗಳಲ್ಲಿ ನಡೆಯಬೇಕಿದ್ದ ಕಲಾಪಗಳು ಅರ್ಧಕ್ಕೆ ಮೊಟಕುಗೊಂಡಿದ್ದು, ಸುತ್ತಮುತ್ತಲಿನ ಪ್ರದೇಶದಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗಿವೆ. ಪೊಲೀಸ್ ತಪಾಸಣೆ ನಂತರ ಇದು ಹುಸಿ ಬಾಂಬ್ ಬೆದರಿಕೆ ಎಂದು ತಿಳಿದಿದೆ.



ಧಾರವಾಡ, ದಾವಣಗೆರೆ, ಕೊಡಗು, ಹಾಸನ, ಮಂಡ್ಯ, ಉತ್ತರ ಕನ್ನಡ, ರಾಮನಗರ, ಹಾವೇರಿ ಕೋರ್ಟ್‌ಗಳಿಗೆ ಏಕಕಾಲಕ್ಕೆ ಇ-ಮೇಲ್ ಮೂಲಕ ಬೆದರಿಕೆ ಸಂದೇಶ ರವಾನೆಯಾಗಿವೆ. ಧಾರವಾಡದ ಹೈಕೋರ್ಟ್ ಪೀಠಕ್ಕೆ ಬಂದ ಇ-ಮೇಲ್ ಬಾಂಬ್ ಬೆದರಿಕೆ ಸಂದೇಶವು ನ್ಯಾಯಾಲಯದ ಆವರಣದಲ್ಲಿ ಭೀತಿ-ಆತಂಕದ ವಾತಾವರಣ ನಿರ್ಮಿಸಿತ್ತು. ತಮಿಳುನಾಡಿನಲ್ಲಿ ಇಡಬ್ಲ್ಯುಎಸ್ ಮೀಸಲು ಅನುಷ್ಠಾನ ನಿಲ್ಲಿಸಿ. ಇಲ್ಲವಾದರೆ, ಇಲ್ಲಿನ ಹೈಕೋರ್ಟ್‌ನಲ್ಲಿ ಆರ್‌ಡಿಎಕ್ಸ್ ಬಾಂಬ್ ಮಧ್ಯಾಹ್ನ 1.15ಕ್ಕೆ ಸ್ಫೋಟಿಸುವುದಾಗಿ ಬೆದರಿಸಲಾಗಿದೆ.

ಹೈಕೋರ್ಟ್ ಹೆಚ್ಚುವರಿ ರಿಜಿಸ್ಟಾರ್ ಶಾಂತವೀರ ಶಿವಪ್ಪ ಇ-ಮೇಲ್ ಪರಿಶೀಲಿಸಿದ ತಕ್ಷಣ ಎಸ್‌ಪಿ ಗುಂಜನ್ ಆರ್ಯಗೆ ಮಾಹಿತಿ ನೀಡಿದ್ದು, ಎಚ್ಚೆತ್ತ ಎಸಿ ತಮ್ಮ ತಂಡದ ಜತೆ ಹೈಕೋರ್ಟ್‌ಗೆ ಆಗಮಿಸಿ, ನ್ಯಾಯಾಧೀಶರು, ನ್ಯಾಯವಾದಿಗಳು ಹೊರಗಡೆ ಕಳುಹಿಸಿದರು. ಜತೆಗೆ ಸುರಕ್ಷತೆ, ಜೀವ ರಕ್ಷಣೆಯ ಮುಂಜಾಗೃತೆ ದೃಷ್ಟಿಯಿಂದ ಎಲ್ಲ ಕೋರ್ಟ್ ಕಲಾಪಗಳನ್ನು ಅರ್ಧದಲ್ಲೇ ಮೊಟಕುಗೊಳಿಸಲಾಗಿದೆ. ➡ಪುಟ ೪

25-30 ಕಾಂಗ್ರೆಸ್ ಶಾಸಕರಿಂದ ಆಸ್ಟ್ರೇಲಿಯಾ ಪ್ರವಾಸ

ಇಂದು ವಿದೇಶಕ್ಕೆ ಶಾಸಕರ ತಂಡ

• ಬೆಂಗಳೂರು: ರಾಜ್ಯ ಕಾಂಗ್ರೆಸ್‌ನಲ್ಲಿ ರಾಜಕೀಯದ ಬಿಸಿ ಬಿಸಿ ಚರ್ಚೆಯ ನಡುವೆಯೇ ಸುಮಾರು 25ಕ್ಕೂ ಹೆಚ್ಚು ಕಾಂಗ್ರೆಸ್ ಶಾಸಕರ ತಂಡ ವಿದೇಶಿ ಪ್ರವಾಸಕ್ಕೆ ಸಿದ್ಧವಾಗಿದೆ. ವಿದೇಶಕ್ಕೆ ಹೋಗಬೇಕೋ ಬೇಡವೋ ಎಂಬ ಬಗ್ಗೆ ಪರ-ವಿರೋಧ ಚರ್ಚೆಗಳ ನಡುವೆಯೇ ಈ ಪ್ರವಾಸ ನಿಗದಿಯಾಗಿದೆ. ಮಂಗಳವಾರ 25-30 ಕಾಂಗ್ರೆಸ್ ಶಾಸಕರು ವಿದೇಶ ಪ್ರವಾಸ ಬೆಳೆಸಲಿದ್ದಾರೆ. ಇದರಲ್ಲಿ ಪರಿಷತ್ ಸದಸ್ಯರೂ ಇದ್ದಾರೆ. ಮಂಗಳವಾರ ರಾತ್ರಿ 8 ಗಂಟೆಗೆ ಬೆಂಗಳೂರಿನಿಂದ ಆಸ್ಟ್ರೇಲಿಯಾಕ್ಕೆ ಪ್ರಯಾಣಿಸಲಿದ್ದು, ಈ ಪ್ರವಾಸ ಸಾಕಷ್ಟು ಕುತೂಹಲಕ್ಕೆ ಕಾರಣವಾಗಿದೆ.



ಮಾರ್ಚ್ 1ಕ್ಕೆ ವಾಪಸ್

ವಿದೇಶಕ್ಕೆ ತೆರಳಲು ಕೆಲವರ ಹಿಂದೇಟು: ವಿದೇಶಕ್ಕೆ ಹೊರಟು ನಿಂತ ಶಾಸಕರ ಪೈಕಿ ಕೆಲವು ಶಾಸಕರು ವೀಸಾ ಸಿಗದ ಕಾರಣ ಪ್ರವಾಸ ರದ್ದು ಮಾಡಿದ್ದಾರೆ. ➡ಪುಟ ೪

ಸ್ವಂತ ಖರ್ಚಿನಲ್ಲಿ ಪ್ರವಾಸ

ಶಾಸಕರು ತಮ್ಮ ಸ್ವಂತ ಖರ್ಚಿನಲ್ಲಿ ವಿದೇಶಕ್ಕೆ ಪ್ರವಾಸ ಹೋಗುತ್ತಾರೆ. ಸಾಮಾಜಿಕ, ಧಾರ್ಮಿಕ ವಿಚಾರದ ಬಗ್ಗೆ ಅಧ್ಯಯನ ನಡೆಸಲು ಎಲ್ಲರೂ ಹೋಗುತ್ತಿದ್ದಾರೆ ಎಂದು ಸಮಾಜ ಕಲ್ಯಾಣ ಖಾತೆ ಸಚಿವ ಎಚ್.ಸಿ.ಮಹದೇವಪ್ಪ ಸ್ಪಷ್ಟಪಡಿಸಿದ್ದಾರೆ. ಮಾಧ್ಯಮದವರೊಂದಿಗೆ ಸೋಮವಾರ ಮಾತನಾಡಿದ ಅವರು, ಶಾಸಕರು ವಿದೇಶ ಪ್ರವಾಸ ಹೋಗುವುದು ಗಂಭೀರ ವಿಚಾರವೇನಲ್ಲ. ಪ್ರವಾಸಕ್ಕೆ ಹೋದರೆ, ಕೆಲವೊಂದು ವಿಚಾರಗಳು ಅಭಿವೃದ್ಧಿ ಆಗುತ್ತೆ ಎನ್ನುವ ಕಾರಣಕ್ಕೆ ಪ್ರವಾಸಕ್ಕೆ ಹೋಗುತ್ತಾರೆ. ನನ್ನನ್ನು ಪ್ರವಾಸಕ್ಕೆ ಕರೆಯಬೇಕು ಎಂದೇನಿಲ್ಲ. ನಾನೇನೂ ಆ ಸ್ಥಿತಿಯಲ್ಲಿ ಸದ್ಯಕ್ಕೆ ಇಲ್ಲ. ಎಲ್ಲರೂ ಕರೆಯುವುದಕ್ಕೆ ನಾನೇನು ಮಗುನಾ ಎಂದು ಪ್ರಶ್ನಿಸಿದರು.

ಪ್ರಿಯಾಂಕ್ ಖರ್ಗೆ ವಿರುದ್ಧ ಬಿಜೆಪಿ ಕಿಡಿ



ಹತಾಶೆಯ, ಬಾಲಿಶತನದ, ಅವಿವೇಕದ ಹೇಳಿಕೆ: ಬಿವೈವಿ

• ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘದ ಕುರಿತು ಸಚಿವ ಪ್ರಿಯಾಂಕ್ ಖರ್ಗೆ ನೀಡಿರುವ ಹೇಳಿಕೆಗೆ ಬಿಜೆಪಿ ವ್ಯಾಪಕ ಆಕ್ರೋಶ ವ್ಯಕ್ತಪಡಿಸಿದೆ. ಈ ಬಗ್ಗೆ ಮಾತನಾಡಿರುವ ಬಿಜೆಪಿ ನಾಯಕರು ಕಾಂಗ್ರೆಸ್ ಹಾಗೂ ಪ್ರಿಯಾಂಕ್ ಖರ್ಗೆ ವಿರುದ್ಧ ವಾಗ್ದಾಳಿ ನಡೆಸಿದರು. ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸಚಿವ ಪ್ರಿಯಾಂಕ್ ಅವರು ಆರೆಸ್ಸೆಸ್ ವಿರುದ್ಧ ದ್ವೇಷದಿಂದ, ಹತಾಶರಾಗಿ ಅಥವಾ ಬಾಲಿಶತನದಿಂದ ಈ ಹೇಳಿಕೆ ಕೊಟ್ಟಿದ್ದಾರೆಯೇ? ಇದನ್ನು ಅವಿವೇಕತನದ ಹೇಳಿಕೆ ಎಂದು ಕರೆಯಬಹುದು; ಜನರು ಗ್ರಾಮೀಣ ಭಾಷೆಯಲ್ಲಿ ತಲೆಹರಟೆ, ಉಡಾಫೆ ಎಂದು ಕರೆಯುತ್ತಾರೆ ಎಂದರು. ➡ಪುಟ ೪

> **ನೀವು ಯಾವ ಸಮುದಾಯದಿಂದ ಬಂದಿದ್ದೀರೋ ಆ ಸಮುದಾಯದ ಜನರು ಸಂಕಷ್ಟದಲ್ಲಿದ್ದಾರೆ. ನಿಮ್ಮ ಸರಕಾರ ದಲಿತರ 39 ಸಾವಿರ ಕೋಟಿ ಹಣವನ್ನು ನುಂಗಿದೆ. ಈ ಕುರಿತು ನೀವು ಒಂದು ದಿನವೂ ಪ್ರಸ್ತಾಪ ಮಾಡಿಲ್ಲವೇಕೆ?**
>
> ■ ಛಲವಾದಿ ನಾರಾಯಣಸ್ವಾಮಿ, ವಿಧಾನ ಪರಿಷತ್ ವಿಪಕ್ಷ ನಾಯಕ

ಶಬರಿಮಲೆಗೆ ಎಲ್ಲಾ ವಯಸ್ಸಿನ ಮಹಿಳೆಯರ ಪ್ರವೇಶ ಕುರಿತ ಪ್ರಕರಣ

9 ನ್ಯಾಯಮೂರ್ತಿಗಳ ಪೀಠ ರಚನೆ

• ಹೊಸದಿಲ್ಲಿ: ಶಬರಿಮಲೆಗೆ ಎಲ್ಲಾ ವಯೋಮಿತಿಯ ಮಹಿಳೆಯರ ಪ್ರವೇಶಕ್ಕೆ ಅವಕಾಶ ಕೋರುವ ಮತ್ತು ಇದೇ ರೀತಿ ಇತರ ಆರಾಧನಾ ಕೇಂದ್ರಗಳಲ್ಲೂ ಮಹಿಳೆಯರಿಗೆ ಪ್ರವೇಶಾವಕಾಶ ಕಲ್ಪಿಸಲು ಆಗ್ರಹಿಸುವ ಪ್ರಕರಣಗಳ ಇತ್ಯರ್ಥಕ್ಕಾಗಿ 9 ನ್ಯಾಯಮೂರ್ತಿಗಳನ್ನೊಳಗೊಂಡ ವಿಸ್ತತ ನ್ಯಾಯಪೀಠವನ್ನು ಸರ್ವೋಚ್ಚ ನ್ಯಾಯಾಲಯ ಆಡಳಿತಾತ್ಮಕ ಆದೇಶ ಮೂಲಕ ರಚಿಸಲಿದೆ. ಈ ವಿಸ್ತತ ನ್ಯಾಯಪೀಠ ಏ.7ರಂದು ಬೆಳಗ್ಗೆ 10.30ರಿಂದ ವಿಚಾರಣೆ ಶುರು ಮಾಡಲಿದೆ. ಈ ಹಿನ್ನೆಲೆಯಲ್ಲಿ, ಕೇರಳ ಸರಕಾರ ಸಹಿತ ಕಕ್ಷಿಗಾರರು ಮತ್ತು ಪ್ರತಿವಾದಿಗಳು 2026ರ ಮಾ.14ರಂದು ಅಥವಾ ಈ ದಿನಾಂಕದೊಳಗೆ ತಮ್ಮ ಲಿಖಿತ ಉತ್ತರಗಳ ಸಲ್ಲಿಸಬೇಕು ಎಂದು ನ್ಯಾಯಾಲಯ ನಿರ್ದೇಶನ ನೀಡಿದೆ.

ಶಬರಿಮಲೆ ಪ್ರಕರಣವನ್ನು ವಿಸ್ತತ ಪೀಠಕ್ಕೆ ವಹಿಸುವ ಸಮರ್ಥನೀಯತೆ ಪ್ರಶ್ನಿಸಿ ಹಿಂದೆಯೂ ಆಕ್ಷೇಪಗಳು ವ್ಯಕ್ತವಾಗಿದ್ದವು. ಆದರೆ ಪ್ರಕರಣದ ಪರಿಶೀಲನಾ ಹಂತದಲ್ಲೂ ಸುಪ್ರೀಂಕೋರ್ಟ್ ನಿರ್ದಿಷ್ಟ ಪ್ರಶ್ನೆಗಳನ್ನು ವಿಸ್ತತ ನ್ಯಾಯಪೀಠದ ಪರಾಮರ್ಶೆಗೆ ನೀಡಬಹುದೆಂದು 9 ನ್ಯಾಯಮೂರ್ತಿಗಳನ್ನು ಒಳಗೊಂಡ ನ್ಯಾಯಪೀಠ 2020ರ ಫೆಬ್ರವರಿಯಲ್ಲಿ ನಿರ್ಣಾಯಕ ತೀರ್ಪು ನೀಡಿತ್ತು. ➡ಪುಟ ೪





2018ರ ತೀರ್ಪಿಗೆ ವ್ಯಕ್ತವಾಗಿತ್ತು ಆಕ್ರೋಶ

ಶಬರಿಮಲೆಗೆ 10ರಿಂದ 50ರೊಳಗಿನ ಮಹಿಳೆಯರ ಪ್ರವೇಶ ನಿಷೇಧಿಸುವುದು ಲಿಂಗ ತಾರತಮ್ಯಕ್ಕೆ ಎಡೆ ಮಾಡುತ್ತದೆ ಮತ್ತು ಸಾಂವಿಧಾನಿಕ ಸಿದ್ಧಾಂತಗಳ ಉಲ್ಲಂಘನೆಗೆ ಸಮ. ಹಾಗಾಗಿ ಎಲ್ಲಾ ವಯೋಮಿತಿಯ ಮಹಿಳೆಯರೂ ಶಬರಿಮಲೆಗೆ ತೆರಳಬಹುದು ಎಂದು 2018 ಸೆ.28ರಂದು ಸುಪ್ರೀಂಕೋರ್ಟ್‌ನ ಆಗಿನ ಮುಖ್ಯ ನ್ಯಾಯಮೂರ್ತಿ ದೀಪಕ್ ಮಿಶ್ರಾ ನೇತೃತ್ವದ ಪಂಚ ಸದಸ್ಯ ಪೀಠ ತೀರ್ಪಿತ್ತಿತ್ತು. ಈ ತೀರ್ಪಿಗೆ ಕೇರಳಾದ್ಯಂತ ವ್ಯಾಪಕ ಪ್ರತಿಭಟನೆ ವ್ಯಕ್ತವಾಗಿತ್ತು. ಅಯ್ಯಪ್ಪ ಸ್ವಾಮಿಗೆ ಸಮರ್ಪಿತ ಶಬರಿಮಲೆಯ ಸಾಂಪ್ರದಾಯಿಕ ನಿಯಮಗಳನ್ನು ಸಂರಕ್ಷಿಸಬೇಕೆಂದು ಹಲವಾರು ರಾಜಕೀಯ ಪಕ್ಷಗಳು ಆಗ್ರಹ ಮುಂದಿಟ್ಟಿದ್ದವು. ಸುಪ್ರೀಂಕೋರ್ಟ್ ತೀರ್ಪನ್ನು ಆಕ್ಷೇಪಿಸಿ ನ್ಯಾಯಾಲಯಕ್ಕೆ ಹಲವು ಮೇಲ್ಮನವಿಗಳು ಸಲ್ಲಿಕೆಯಾಗಿದ್ದವು. ➡ಪುಟ ೪

ನಾನು ಗಾಂಧಿವಾದಿ; ರಾಹುಲ್‌ವಾದಿಯಲ್ಲ

• ಹೊಸದಿಲ್ಲಿ: ಕೇರಳದ ಪಿಣರಾಯಿ ವಿಜಯನ್ ನೇತೃತ್ವದ ಎಲ್‌ಡಿಎಫ್ ಸರ್ಕಾರವನ್ನು ಹೊಗಳಿ ಕಾಂಗ್ರೆಸ್ ನಾಯಕರ ಕೆಂಗಣ್ಣಿಗೆ ಗುರಿಯಾಗಿರುವ ಮಾಜಿ ಕೇಂದ್ರ ಸಚಿವ ಹಾಗೂ ಹಿರಿಯ ಕಾಂಗ್ರೆಸ್ ನಾಯಕ ಮಣಿಶಂಕರ್ ಅಯ್ಯರ್, ಇದೀಗ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯನ್ನೂ ತೀವ್ರವಾಗಿ ತರಾಟೆಗೆತ್ತಿಕೊಂಡಿದ್ದಾರೆ. ನಾನು ಗಾಂಧಿವಾದಿಯೇ ವಿನಾ ರಾಹುಲ್‌ವಾದಿಯಲ್ಲ ಎಂದು ಹೇಳುವ ಮೂಲಕ ತಮ್ಮ ಮೇಲೆ ಮುಗಿಬಿದ್ದ ರಾಹುಲ್ ನಿಷ್ಠ ಕಾಂಗ್ರೆಸ್ ನಾಯಕರಿಗೆ ಕುಟುಕಿದ್ದಾರೆ. ಪಿಣರಾಯಿ ವಿಜಯನ್ ಮತ್ತೆ ಮುಖ್ಯಮಂತ್ರಿಯಾಗಲಿದ್ದಾರೆ ಎಂಬ ಅವರ ಹೇಳಿಕೆಗೆ ಕಾಂಗ್ರೆಸ್ ನಾಯಕರು ಕಿಡಿಕಾರಿದ್ದು, ಆ ಬಳಿಕ ಕಾಂಗ್ರೆಸ್‌ನೊಳಗಣ ಆಂತರಿಕ ಬಿಕ್ಕಟ್ಟು ಹೊರಬರಲಾರಂಭಿಸಿದೆ. ➡ಪುಟ ೪



ಕೈನಾಯಕತ್ವ ವಿರುದ್ಧ ತಿರುಗಿಬಿದ್ದ ಮಣಿಶಂಕರ್ ಅಯ್ಯರ್

ಬೆಳ್ಳಿ ಬಂಗಾರ (ಬೆಂಗಳೂರು)	ಬೆಳ್ಳಿ: 2,45,200(2,53,000) ಅಪರಂಜಿ ಚಿನ್ನ: 15,420(15,530) ಆಭರಣ ಚಿನ್ನ: 14,340(14,460) ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)
ಷೇರು ಸೂಚ್ಯಂಕ	ಬಿಎಸ್‌ಇ 83,277(650↑) ಎನ್‌ಎಸ್‌ಇ 25,682(211↑)
$1 = ₹90.76	

ಕಿರುಸುದ್ದಿ

ಭಾಗ್ಯಶ್ರೀ ಆರ್.ಗೆ ಡಾಕ್ಟರೇಟ್ ಪದವಿ



ಮಂಗಳೂರು: ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜಿನ ವಾಣಿಜ್ಯ ವಿಭಾಗದ ಉಪನ್ಯಾಸಕಿ ಭಾಗ್ಯಶ್ರೀ ಆರ್., ಮಂಗಳೂರು ವಿಶ್ವವಿದ್ಯಾನಿಲಯದ ವಾಣಿಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ಪ್ರೊ. ಪ್ರೀತಿ ಕೀರ್ತಿ ಡಿಸೋಜ ಅವರ ಮಾರ್ಗದರ್ಶನದಲ್ಲಿ ಮಂಡಿಸಿದ 'ಎನ್ ಎಂಪಿರಿಕಲ್ ಸ್ಟಡಿ ಆಫ್ ಲೈವಲಿವುಡ್ ಪ್ಯಾಟರ್ನ್ ಆಫ್ ಸಿವಿಕ್ ಎಂಪ್ಲಾಯಿಸ್ ಎಂಗೇಜ್ಡ್ ಇನ್ ಸಾಲಿಡ್ ವೇಸ್ಟ್ ಮ್ಯಾನೇಜ್ಮೆಂಟ್ ಇನ್ ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್' ಎಂಬ ವಿಷಯದ ಕುರಿತಾಗಿ ಮಂಡಿಸಿದ ಮಹಾಪ್ರಬಂಧಕ್ಕೆ ಮಂಗಳೂರು ವಿಶ್ವವಿದ್ಯಾ ನಿಲಯವು ಪಿ.ಎಚ್.ಡಿ ಪದವಿ ನೀಡಿ ಗೌರವಿಸಿದೆ. ಇವರು ಆರ್. ಎಲ್. ಜನಾರ್ಧನ ನಾಯ್ಕ ಹಾಗೂ ಲೀಲಾವತಿಯವರ ಪುತ್ರಿ ಹಾಗೂ ಸತ್ಯನಾರಾಯಣ ಪ್ರಸಾದ್ ಕೆ. ಅವರ ಪತ್ನಿ.

ಭರತ್‌ರಾಜ್ ಎಸ್. ನೇಜಾರ್‌ಗೆ ಅರ್ಥಶಾಸ್ತ್ರದಲ್ಲಿ ಪಿಎಚ್‌ಡಿ ಪದವಿ



ಬ್ರಹ್ಮಾವರ: ಬ್ರಹ್ಮಾವರದ ಸೈಂಟ್ ಮೇರಿಸ್ ಸಿರಿಯನ್ ಕಾಲೇಜಿನಲ್ಲಿ ಪ್ರಸ್ತುತ ವಿಭಾಗದ ಮುಖ್ಯಸ್ಥರಾಗಿ ಮತ್ತು ಅರ್ಥಶಾಸ್ತ್ರ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವ ಡಾ. ಭರತ್‌ರಾಜ್ ಎಸ್. ನೇಜಾರ್ ಕುವೆಂಪು ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರದಲ್ಲಿ ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್‌ಡಿ) ಪದವಿಯನ್ನು ಪಡೆದಿದ್ದಾರೆ. ಕುವೆಂಪು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಡಾ. ಬಿ. ಜಯರಾಮ ಭಟ್ ಅವರ ಮಾರ್ಗದರ್ಶನದಲ್ಲಿ 'ಗ್ರಾಮೀಣ ಅಭಿವೃದ್ಧಿಯಲ್ಲಿ ರಸ್ತೆಗಳ ಪಾತ್ರ – ಉಡುಪಿ ಜಿಲ್ಲೆಯಲ್ಲಿ ಒಂದು ಅಧ್ಯಯನ' ಎಂಬ ಮಹಾ ಪ್ರಬಂಧ ವನ್ನು ಮಂಡಿಸಿ,ಉಡುಪಿ ಜಿಲ್ಲೆಗೆ ವಿಶೇಷ ಉಲ್ಲೇಖದೊಂದಿಗೆ ಗ್ರಾಮೀಣ ರಸ್ತೆ ಮೂಲಸೌಕರ್ಯವು ಗ್ರಾಮೀಣ ಪ್ರದೇಶಗಳಲ್ಲಿ ಆರ್ಥಿಕ ಬೆಳವಣಿಗೆ, ಉದ್ಯೋಗ ಸೃಷ್ಟಿ, ಮಾರುಕಟ್ಟೆ ಪ್ರವೇಶ ಮತ್ತು ಒಟ್ಟಾರೆ ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೆ ಹೇಗೆ ಕೊಡುಗೆ ನೀಡುತ್ತದೆ ಎಂಬುದರ ಕುರಿತು ಆಳವಾದ ವಿಶ್ಲೇಷಣೆಯನ್ನು ಸಂಶೋಧನೆಯು ಒದಗಿಸುತ್ತದೆ. ಡಾ. ಭರತ್‌ರಾಜ್ ಎಸ್. ನೇಜಾರ್ ಅವರು ಉಷಾ ಮತ್ತು ದಿ.ಸದಾನಂದ ಅವರ ಪುತ್ರ, ಹಾಗೂ ಬ್ರಹ್ಮಾವರ ಹಾರಾಡಿ ಗ್ರಾಮದ ನಿವಾಸಿಯಾಗಿದ್ದಾರೆ.

ವಿದ್ಯಾರ್ಥಿಗಳ ಉತ್ಕೃಷ್ಟ ಸಾಧನೆ





ಕುಂದಾಪುರ: ಇನ್ಸ್ಟಿಟ್ಯೂಟ್ ಆಫ್ ಕಾಸ್ಟ್ ಅಕೌಂಟಿಂಗ್ ಆಫ್ ಇಂಡಿಯಾ ನಡೆಸುವ ಸಿಎಂಎ ಇಂಟರ್‌ಮೀಡಿಯಟ್ ಗ್ರೂಪ್ ಜಿಜಿ ಡಿಸೆಂಬರ್ 2025ರಲ್ಲಿ ನಡೆದ ಪರೀಕ್ಷೆಯಲ್ಲಿ ಕುಂದಾಪುರದ ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ ವಿಭಾಗದ ಪ್ರಾಕ್ತನ ವಿದ್ಯಾರ್ಥಿಗಳಾದ ಅನುಶ್ರೀ ಹಾಗೂ ಯಶವಂತ ಎನ್. ಉತ್ತೀರ್ಣವಾಗುವ ಮೂಲಕ ಉತ್ಕೃಷ್ಟ ಸಾಧನೆಗೈದಿದ್ದಾರೆ. ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ಸಾಧಕ ವಿದ್ಯಾರ್ಥಿಗಳಿಗೆ ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು, ಬೋಧಕ ಮತ್ತು ಬೋಧಕೇತರರು ಅಭಿನಂದನೆ ಸಲ್ಲಿಸಿದ್ದಾರೆ.

ಕರಾಟೆ ಚಾಂಪಿಯನ್‌ಶಿಪ್: ತನ್ವಿ ಪ್ರಥಮ, ವಂಶಿಕಾ ದ್ವಿತೀಯ





ಕುಂದಾಪುರ: ರಾಜ್ಯ ಮಟ್ಟದ ಇಂಟರ್ ಡುಜೊ ಕರಾಟೆ ಚಾಂಪಿಯನ್ ಶಿಪ್ ಕೆ.ಡಿ.ಎಫ್ ಕಪ್ 2026ರ ಕುಮಿಟೆ ವಿಭಾಗದಲ್ಲಿ ಕುಂದಾಪುರದ ಶ್ರೀ ವೆಂಕಟರಮಣ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿಯರಾದ ತನ್ವಿ ಹಾಗೂ ವಂಶಿಕಾ ಭಂಡಾರ್‌ಕರ್ ಕ್ರಮವಾಗಿ ಪ್ರಥಮ ಮತ್ತು ದ್ವಿತೀಯ ಬಹುಮಾನ ಪಡೆದುಕೊಂಡಿದ್ದಾರೆ. ಇವರಿಗೆ ಶಾಲಾ ಆಡಳಿತ ಮಂಡಳಿ, ಮುಖ್ಯ ಶಿಕ್ಷಕರು, ಬೋಧಕ ಮತ್ತು ಬೋಧಕೇತರ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ.

ಮಾನಸಿಕ ಅಸ್ವಸ್ಥೆ ನಾಪತ್ತೆ



ಉಡುಪಿ: ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದ ಬ್ರಹ್ಮಾವರ ತಾಲೂಕು ಹಿಲಿಯಾಣ ಗ್ರಾಮ ಚೋರಾಡಿ ನಿವಾಸಿ ರತಿ (37) ಎಂಬ ಮಹಿಳೆಯು ಜ. 31 ರಂದು ಮನೆಯಿಂದ ಹೊರಗೆ ಹೋದವರು ವಾಪಸು ಬಾರದೇ ನಾಪತ್ತೆಯಾಗಿದ್ದಾರೆ. ಇವರ ಬಗ್ಗೆ ಮಾಹಿತಿ ದೊರೆತಲ್ಲಿ ಶಂಕರನಾರಾಯಣ ಪೊಲೀಸ್ ಠಾಣೆಯ ಉಪನಿರೀಕ್ಷಕರನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.



ಧರ್ಮಸ್ಥಳದಲ್ಲಿ ಶಿವರಾತ್ರಿ ಪ್ರಯುಕ್ತ ಸೋಮವಾರ ಬೆಳಗ್ಗಿನ ಜಾವ ರಥೋತ್ಸವ ನಡೆಯಿತು. ನಾಡಿನೆಲ್ಲೆಡೆಯಿಂದ ಬಂದ ಸಾವಿರಾರು ಭಕ್ತರು ರಥೋತ್ಸವ ವೀಕ್ಷಿಸಿ ಧನ್ಯತೆಯನ್ನು ಹೊಂದಿದರು.

ಫೆ.20ರಿಂದ 25ರವರೆಗೆ ಧರ್ಮ ದೈವಗಳ ಪುನರ್‌ಪ್ರತಿಷ್ಠೆ, ಧರ್ಮನೇಮ

ಜಪ್ಪು ಗುಡ್ಡೆಚಾವಡಿ ಪ್ರವೇಶೋತ್ಸವ

ಮಂಗಳೂರು: ಮಂಗಳೂರು ಹೋಬಳಿ ಮನೆತನ ಜಪ್ಪು ಗುಡ್ಡೆಚಾವಡಿ ಪ್ರವೇಶೋತ್ಸವ, ಧರ್ಮ ದೈವಗಳ ಪುನರ್‌ಪ್ರತಿಷ್ಠೆ ಹಾಗೂ ಧರ್ಮನೇಮ ಕಾರ್ಯಕ್ರಮ ಫೆ.20ರಿಂದ 25ರವರೆಗೆ ನಡೆಯಲಿದೆ.

ಜಪ್ಪು ಗುಡ್ಡೆ ಚಾವಡಿಯೆಂದೇ ಕರೆಯಲಾಗುವ ಜಪ್ಪು ಗುಡ್ಡೆ ಗುತ್ತು ಮನೆಯನ್ನು ನೂತನವಾಗಿ ಪುನರ್ ನಿರ್ಮಿಸಲಾಗಿದೆ. ಹಳೆಯ ಪರಂಪರೆ ಉಳಿಸಿಕೊಂಡು ಸಾಂಸ್ಕೃತಿಕ, ಧಾರ್ಮಿಕ ಕೇಂದ್ರವಾಗಿ ಮುಂದುವರಿಯುವಂತೆ ರೂಪಿಸಲಾಗಿದೆ. ಫೆ.20ರಂದು ಸಂಜೆ 4ರಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಆರಂಭಗೊಳ್ಳಲಿವೆ. 21ರಂದು ಬೆಳಗ್ಗೆ 7ರಿಂದ ಗಣಪತಿ ಹೋಮ, ಅನುಜ್ಞಾ ಕಲಶಾಭಿಷೇಕ ಸಹಿತ ವಿವಿಧ ಧಾರ್ಮಿಕ ಕಾರ್ಯಕ್ರಮ ನಡೆಯಲಿದೆ ಎಂದು ಜಪ್ಪು ಗುಡ್ಡೆಗುತ್ತು ಭುಜಂಗ ಶೆಟ್ಟಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.

ಫೆ. 22ರಂದು ಪ್ರಾತಃಕಾಲ 4ಕ್ಕೆ ಕಂಬಿರ್ಸ್ಥಾನದಿಂದ ಮುಂಡಿತ್ತಾಯ ವೈದ್ಯನಾಥ ಮತ್ತು ಪರಿವಾರ ದೈವಗಳ ಭಂಡಾರವು ಜಪ್ಪುಗುಡ್ಡೆಗುತ್ತು ಚಾವಡಿಗೆ ಹೊರಡಲಿದೆ. ಬೆಳಗ್ಗೆ 7.40ಕ್ಕೆ ಗೃಹಪ್ರವೇಶ, ಮುಂಡಿತ್ತಾಯ ವೈದ್ಯನಾಥ, ಕಾಂತೇರಿ ಜುಮಾದಿ ಬಂಟ, ಅಣ್ಣಪ್ಪ ಪಂಜುರ್ಲಿ, ಕೊರತಿ ದೈವಗಳ ಸಾನಿಧ್ಯ ಸಂಕಲ್ಪ ಪ್ರತಿಷ್ಠೆ, ಜೀವಕಲಶಾಭಿಷೇಕ, ಸಾನಿಧ್ಯ ಕಲಶಾಭಿಷೇಕ, ಬೆಳಗ್ಗೆ 11.30ಕ್ಕೆ ಮುಂಡಿತ್ತಾಯ ವೈದ್ಯನಾಥ ದೈವದರ್ಶನ, ಪಲ್ಲಪೂಜೆ, ಮಹಾ ಅನ್ನಸಂತರ್ಪಣೆ, ಸಂಜೆ 6ರಿಂದ ಮುಂಡಿತ್ತಾಯ ವೈದ್ಯನಾಥ, ಸಾರಾಳ ಜುಮಾದಿ ಬಂಟ, ಕಾಂತೇರಿ ಜುಮಾದಿ ಬಂಟ ಹಾಗೂ ಪರಿವಾರ ದೈಗಳಿಗೆ ಧರ್ಮನೇಮ ನಡೆಯಲಿದೆ ಎಂದರು.

ಫೆ.23ರಂದು ಪ್ರಾತಃಕಾಲ ದೈವದ ಭಂಡಾರ ನಿರ್ಗಮನ, ಸಂಜೆ 4.30ರಿಂದ ಕುಣಿತ ಭಜನೆ, 24ರಂದು ಸಂಜೆ 5.30ರಿಂದ ಕಟೀಲು ಮೇಳದಿಂದ ಶ್ರೀದೇವಿ ಮಹಾತ್ಮೆ ಯಕ್ಷಗಾನ, 25ರಂದು ಸಂಜೆ 7ಕ್ಕೆ ಅಣ್ಣಪ್ಪ ಪಂಜುರ್ಲಿ ಹಾಗೂ ಕೊರತಿ ದೈವದ ಕೋಲ ನಡೆಯಲಿದೆ ಎಂದು ವಿವರಿಸಿದರು.

ಜಪ್ಪು ಗುಡ್ಡೆಗುತ್ತು ಬಂಟ ಸಮುದಾಯದಕ್ಕೆ ಸೇರಿದ ಮನೆತನವಾಗಿದ್ದು, ತುಳುನಾಡಿನ ಉದ್ದಗಲದಲ್ಲೂ ಕುಟುಂಬಗಳನ್ನು ಹೊಂದಿದೆ. ಜಪ್ಪುಗುಡ್ಡೆಗುತ್ತು ಮನೆತನದ ಪಟ್ಟ ಸ್ವೀಕರಿಸಿದ ಯಜಮಾನರು 'ಸುಬ್ಬಯ್ಯ ಭಂಡ್ರಿಯಾಲ್' ಎಂಬ ಹೆಸರಿನಲ್ಲಿ ಕರೆಯಲ್ಪಡುತ್ತಾರೆ ಎಂದು ಹೇಳಿದರು.

ಪ್ರಮುಖರಾದ ಮಾಲಾಡಿ ಅಜಿತ್ ಕುಮಾರ್ ರೈ ಕೊಡಿಯಾಲ್‌ಗುತ್ತು, ನಿಟ್ಟೆಗುತ್ತು ರವಿರಾಜ್ ಶೆಟ್ಟಿ ಜಪ್ಪುಗುಡ್ಡೆಗುತ್ತು ಗಣೇಶ್ ಶೆಟ್ಟಿ ತಿರುವೈಲುಗುತ್ತು ಪ್ರವೀಣ್‌ಚಂದ್ರ ಆಳ್ವ ಡಾ. ಸಾಯಿಗೀತಾ ಹೆಗ್ಡೆ ದಿಲ್‌ರಾಜ್ ಆಳ್ವ ಉಪಸ್ಥಿತರಿದ್ದರು.

ವಾಹನಗಳ ಪಿಯುಸಿಗೆ ಹೋಲೋಗ್ರಾಮ್ ಪೂರೈಕೆ ಸ್ಥಗಿತ | ಸಂದಿಗ್ಧ ಸ್ಥಿತಿಯಲ್ಲಿ ವಾಹನ ಮಾಲಕ

ಹೀಗಾದ್ರೆ ಹೊಗೆ ತಪಾಸಣೆ ಹ್ಯಾಗೆ?


ಐ.ಬಿ. ಸಂದೀಪ್ ಕುಮಾರ್

ದಿಗಂತ ವಿಶೇಷ

ಮಂಗಳೂರು: ವಾಹನಗಳಿಂದ ಹೊರಬರುವ ಹೊಗೆಯಿಂದ ಪರಿಸರ ಮಾಲಿನ್ಯ ಉಂಟಾಗುವುದನ್ನು ತಡೆಗಟ್ಟುವ ಉದ್ದೇಶದಿಂದ ಸರ್ಕಾರದ ಹೋಲೋಗ್ರಾಮ್ ಇರುವ ಮಾಲಿನ್ಯ ನಿಯಂತ್ರಣ ದೃಢೀಕರಣ ಪತ್ರ (ಪಿಯುಸಿ) ವಾಹನ ಮಾಲಕರು ಹೊಂದಿರಬೇಕಾದ್ದು ಕಡ್ಡಾಯ. ಆದರೆ, ಕಳೆದ ಎರಡು ತಿಂಗಳಿನಿಂದ ಮಾಲಿನ್ಯ ತಪಾಸಣೆ ಕೇಂದ್ರಗಳಿಗೆ ಸಾರಿಗೆ ಇಲಾಖೆಯು ಹೋಲೋಗ್ರಾಮ್ ಸ್ಟಿಕ್ಕರ್ ಪೂರೈಸದೇ ಇರುವ ಕಾರಣ ವಾಹನಗಳ ಮಾಲಕರು ಈಗ ಸಂದಿಗ್ಧ ಪರಿಸ್ಥಿತಿ ಎದುರಿಸುತ್ತಿದ್ದಾರೆ.

ಏನೆನ್ನುತ್ತದೆ ಕಾನೂನು ನಿಯಮ?

ಮೋಟಾರು ವಾಹನ ಕಾಯ್ದೆಯಡಿ, ಪ್ರತಿ ವಾಹನ ಮಾಲಿನ್ಯ ನಿಯಂತ್ರಣ ಪತ್ರ (ಪಿಯುಸಿ) ಹೊಂದುವುದು ಕಡ್ಡಾಯ. ಇದು ವಾಹನದಿಂದ ಹೊರಬರುವ ಕಾರ್ಬನ್ ಮಾನಾಕ್ಸೈಡ್ (ಸಿಒ) ಮತ್ತು ಹೈಡ್ರೋಕಾರ್ಬನ್ (ಎಚ್‌ಸಿ)ಗಳನ್ನು ಅಳೆಯುತ್ತದೆ. ಹೊಸ ವಾಹನಗಳಿಗೆ ಸಾಮಾನ್ಯವಾಗಿ ಮೊದಲ ಬಾರಿಗೆ 1 ವರ್ಷ ಮಾನ್ಯತೆ ಇರುತ್ತದೆ. ನಂತರ ಪ್ರತಿ 6 ತಿಂಗಳಿಗೊಮ್ಮೆ ನವೀಕರಿಸಬೇಕು. ಮಾಲಿನ್ಯ ನಿಯಂತ್ರಣ ಪತ್ರದೊಂದಿಗೆ ಮಾನ್ಯತೆ ಕೊನೆಗೊಳ್ಳುವ ದಿನಾಂಕದ ಸ್ಟಿಕ್ಕರನ್ನು ಕೇಂದ್ರಗಳು ನೀಡುತ್ತವೆ. ಮಾನ್ಯವಾದ ಮಾಲಿನ್ಯ ನಿಯಂತ್ರಣ ಪತ್ರ ಇಲ್ಲದಿದ್ದರೆ ರೂ.1 ಸಾವಿರದಿಂದ ರೂ.2 ಸಾವಿರದವರೆಗೆ ದಂಡ ವಿಧಿಸಬಹುದಾಗಿದೆ.





ರಾಜ್ಯದಲ್ಲಿ 2600 ಕೇಂದ್ರಗಳು

ರಾಜ್ಯದಲ್ಲಿ ಸುಮಾರು 2600 ಆರ್‌ಟಿಒ ಅನುಮೋದಿತ ಮಾಲಿನ್ಯ ತಪಾಸಣಾ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದೆ. ಈ ಹೊಗೆ ತಪಾಸಣಾ ಕೇಂದ್ರಗಳು ವಾಹನಗಳ ಹೊಗೆಯನ್ನು ತಪಾಸಣೆ ನಡೆಸಿ ಸರಕಾರದ ಹೋಲೋಗ್ರಾಮ್ ಇರುವಂತಹ ಮಾಲಿನ್ಯ ನಿಯಂತ್ರಣ ಪತ್ರಗಳನ್ನು ನೀಡುತ್ತದೆ. ಈ ಹೋಲೋಗ್ರಾಮ್‌ಗಳನ್ನು ಬೆಂಗಳೂರಿನಿಂದಲೇ ರಾಜ್ಯದ ವಿವಿದೆಡೆ ಕಾರ್ಯ ನಿರ್ವಹಿಸುತ್ತಿರುವ ಮಾಲಿನ್ಯ ತಪಾಸಣಾ ಕೇಂದ್ರಗಳಿಗೆ ಪೂರೈಸಲಾಗುತ್ತದೆ. ಪ್ರತಿಯೊಂದು ಕೇಂದ್ರಗಳು ಸರಾಸರಿ ತಿಂಗಳಿಗೆ 350ರಿಂದ 400 ವಾಹನಗಳ ಹೊಗೆ ತಪಾಸಣೆ ನಡೆಸಿ ಮಾಲಿನ್ಯ ನಿಯಂತ್ರಣ ಪತ್ರಗಳನ್ನು ನೀಡುತ್ತವೆ. ವಿಪರ್ಯಾಸವೆಂದರೆ ಬಹುತೇಕ ಕೇಂದ್ರಗಳ ಮಾಲಕರು ಆರ್‌ಟಿಒ ಮಧ್ಯವರ್ತಿಗಳ ಮೂಲಕವೇ ಹೋಲೋಗ್ರಾಮ್‌ಗಳನ್ನು ಪಡೆದುಕೊಳ್ಳುತ್ತಿದ್ದಾರೆ.

ಸರಕಾರ ಸ್ಪಂದಿಸಿಲ್ಲ

ಮಾಸಿಕ ಸುಮಾರು 5 ಲಕ್ಷ ಹೋಲೋಗ್ರಾಮ್ ಸ್ಟಿಕ್ಕರ್‌ಗಳನ್ನು ಮಾಲಿನ್ಯ ತಪಾಸಣಾ ಕೇಂದ್ರಗಳಿಗೆ ರವಾನಿಸಲಾಗುತ್ತದೆ. ಆದರೆ, ಇತ್ತೀಚಿನ ದಿನಗಳಲ್ಲಿ ಇದು ಶೂನ್ಯಕ್ಕೆ ಇಳಿಯುವ ಹಂತಕ್ಕೆ ತಲುಪಿದೆ. ಈ ವಿಚಾರವನ್ನು ಸಂಬಂಧಪಟ್ಟ ಇಲಾಖೆ ಸರಕಾರದ ಗಮನಕ್ಕೆ ತಂದರೂ ಯಾವುದೇ ಪ್ರತಿಕ್ರಿಯೆ ದೊರಕಿಲ್ಲ ಎಂಬುದು ಹಿರಿಯ ಅಧಿಕಾರಿಯೋರ್ವರ ಅಳಲು.

ಮುಂದೇನು ಗೊತ್ತಿಲ್ಲ...!

ನನ್ನ ಬಳಿ ಇದೀಗ ಕೇವಲ 30 ಹೋಲೋಗ್ರಾಮ್ ಸ್ಟಿಕ್ಕರ್‌ಗಳಷ್ಟೇ ಬಾಕಿ ಉಳಿದಿದೆ. ಮುಂದೇನು ಮಾಡಬೇಕೆಂದು ತೋಚುತ್ತಿಲ್ಲ. ಹೋಲೋಗ್ರಾಮ್ ಸ್ಟಿಕ್ಕರ್‌ಗಳನ್ನು ಬೆಂಗಳೂರಿನಿಂದ ತರಿಸಿಕೊಳ್ಳಲು ನಾವು ಮಧ್ಯವರ್ತಿಗಳನ್ನೇ ಅವಲಂಬಿಸಬೇಕಾಗಿದೆ. ಇದಕ್ಕಾಗಿ ನಾವು ಅವರಿಗೆ ನಿಗದಿತ ಮೊತ್ತವನ್ನು ನೀಡುತ್ತೇವೆ. ಬಹುಶಃ ಸರಕಾರ ಹೋಲೋಗ್ರಾಮ್ ಸ್ಟಿಕ್ಕರ್‌ಗಳನ್ನು ಪೂರೈಸುವ ಗುತ್ತಿಗೆದಾರರಿಗೆ ಹಣ ಪಾವತಿಸಲು ಬಾಕಿ ಇರಬಹುದು.

■ ಪ್ರದೀಪ್, ಮಾಲಕರು, ಮಾಲಿನ್ಯ ತಪಾಸಣಾ ಕೇಂದ್ರ, ಮಂಗಳೂರು

ನಕಲಿ ಹೋಲೋಗ್ರಾಮ್‌ಗಳು

ಮಾಲಿನ್ಯ ನಿಯಂತ್ರಣ ಪತ್ರಕ್ಕೆ ಅಗತ್ಯವಿರುವ ಹೋಲೋಗ್ರಾಮ್ ಪೂರೈಕೆ ಇಲ್ಲದ ಕಾರಣ 2025ನೇ ಸಾಲಿನಲ್ಲಿ ರಾಜ್ಯದ ಸುಮಾರು 400ಕ್ಕೂ ಅಧಿಕ ಹೊಗೆ ತಪಾಸಣಾ ಕೇಂದ್ರಗಳು ಮುಚ್ಚುಗಡೆ ಭೀತಿಯನ್ನು ಎದುರಿಸುವಂತಾಗಿದೆ. ಹೋಲೋಗ್ರಾಮ್ ಇಲ್ಲದ ಮಾಲಿನ್ಯ ನಿಯಂತ್ರಣ ಪತ್ರಕ್ಕೆ ಯಾವುದೇ ಮಾನ್ಯತೆ ಇರುವುದಿಲ್ಲ. ನಕಲಿ ಹೋಲೋಗ್ರಾಮ್‌ಗಳ ತಯಾರಿ. ಸಾರಿಗೆ ಇಲಾಖೆಯೊಳಗಿನ ಹೊಂದಾಣಿಕೆ ಕೊರತೆ ಯಿಂದ ಹೋಲೋಗ್ರಾಮ ಸ್ಟಿಕ್ಕರ್‌ಗಳ ಪೂರೈಕೆ ಸ್ಥಗಿತಗೊಳ್ಳುವಂತಾಗಿದೆಯೇ ಎಂಬ ಪ್ರಶ್ನೆ ಎದುರಾಗಿದೆ. ಈ ಮಧ್ಯೆ ನಕಲಿ ಹೋಲೋಗ್ರಾಮ್ ಸ್ಟಿಕ್ಕರ್‌ಗಳನ್ನು ತಯಾರಿಸುವವರ ಹಾವಳಿ ಹೆಚ್ಚಾಗುವಂತಾಗಿದೆ. ಇದರಿಂದಾಗಿ ವಾಹನಗಳ ತಪಾಸಣೆ ನಡೆಸುವ ಪೊಲೀಸರಿಗೂ ಗೊಂದಲ ಉಂಟಾಗುವಂತಾಗಿದೆ.

ಎಲ್ಲರಿಗೂ ಸಂಕಷ್ಟ

ಕರ್ನಾಟಕ ರಾಜ್ಯದಲ್ಲಿ ಸುಮಾರು 68 ಆರ್‌ಟಿಒ ಕಚೇರಿಗಳಿವೆ. ಸಾರಿಗೆ ಇಲಾಖೆಯೊಂದಿಗೆ ನೋಂದಾವಣೆ ಮಾಡಿಕೊಂಡ ಪೆಟ್ರೋಲ್ ಬಂಕ್‌ಗಳಲ್ಲಿ, ವಾಹನ ಸರ್ವೀಸ್ ಸ್ಟೇಷನ್‌ಗಳಲ್ಲಿ ಮತ್ತು ಇತರ ಖಾಸಗಿಯವರು ನಡೆಸುತ್ತಿರುವ ಅಧಿಕೃತ ಹೊಗೆ ತಪಾಸಣಾ ಕೇಂದ್ರಗಳಿಗೆ ಈ ಹೋಲೋಗ್ರಾಮ್ ಸ್ಟಿಕ್ಕರ್ ಒದಗಿಸಲಾಗುತ್ತದೆ. ಇದೀಗ ಹೋಲೋಗ್ರಾಮ್ ಪೂರೈಕೆಯಾಗದ ಹಿನ್ನೆಲೆಯಲ್ಲಿ ಎಲ್ಲರೂ ಸಂಕಷ್ಟ ಎದುರಿಸುವಂತಾಗಿದೆ.

ಕರ್ನಾಟಕ ಬ್ಯಾಂಕ್ | ದೆಬಾಸಿಶ್ ಪಾಂಡಾರಿಂದ ಉಪನ್ಯಾಸ

ನಾಳೆ 102ನೇ ಸಂಸ್ಥಾಪಕರ ದಿನಾಚರಣೆ

ಮಂಗಳೂರು: ಸಾರ್ವಜನಿಕ ರಂಗದ ಪ್ರತಿಷ್ಠಿತ ಬ್ಯಾಂಕ್‌ಗಳಲ್ಲಿ ಒಂದಾದ ಕರ್ಣಾಟಕ ಬ್ಯಾಕ್ ತನ್ನ 102ನೇ ಸಂಸ್ಥಾಪಕರ ದಿನಾಚರಣೆಯನ್ನು ನಾಳೆ(ಫೆ.18) ಆಚರಿಸುತ್ತಿದೆ.

ಮಂಗಳೂರಿನ ಮಹಾವೀರ ವೃತ್ತದ ಬಳಿ ಇರುವ ಕರ್ಣಾಟಕ ಬ್ಯಾಂಕಿನ ಮುಖ್ಯ ಕಚೇರಿಯ ನಾಲ್ಕನೇ ಮಹಡಿಯಲ್ಲಿ ಸಂಜೆ 4 ಗಂಟೆಗೆ ಸಂಸ್ಥಾಪನಾ ದಿದ ಅಂಗವಾಗಿ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ನಿವೃತ್ತ ಐಎಎಸ್ ಅಧಿಕಾರಿ ದೆಬಾಸಿಶ್ ಪಾಂಡಾ ಅವರು ಸಂಸ್ಥಾಪಕರ ದಿನಾಚರಣೆಯ ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಕರ್ಣಾಟಕ ಬ್ಯಾಂಕಿನ ಮುಖ್ಯಸ್ಥ ಪಿ.ಪ್ರದೀಪ್ ಕುಮಾರ್ ಅಧ್ಯಕ್ಷತೆ ವಹಿಸಲಿದ್ದು, ಬ್ಯಾಂಕಿನ ಆಡಳಿತ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಘವೇಂದ್ರ ಭಟ್ ಉಪಸ್ಥಿತರಿರುವರು.

ಪಾಂಡಾ ಅವರ ಕುರಿತು

ಉತ್ತರ ಪ್ರದೇಶದ 1987ರ ಕೇಡರ್‌ನ ಐಎಎಸ್ ಅಧಿಕಾರಿಯಾದ ದೆಬಾಸಿಶ್ ಪಾಂಡಾ ಅವರು ಮೂರು ದಶಕಗಳಿಗೂ ಹೆಚ್ಚು ಕಾಲ ತಮ್ಮ ಸೇವಾ ಜೀವನದಲ್ಲಿ ಹಣಕಾಸು, ವಿಮೆ, ಸಾರ್ವಜನಿಕ ಆರೋಗ್ಯ, ಕೃಷಿ, ಕಾನೂನು ಸುವ್ಯವಸ್ಥೆ ಮತ್ತು ನಗರಾಭಿವೃದ್ಧಿ ಕ್ಷೇತ್ರಗಳಲ್ಲಿ ಮಹತ್ವದ ಕೊಡುಗೆ ನೀಡಿದ್ದಾರೆ.

ಉತ್ತರ ಪ್ರದೇಶ ಸರ್ಕಾರದಲ್ಲಿ ಸೇವೆ ಸಲ್ಲಿಸುವ ವೇಳೆ ಅವರು ಭಾರತದ ಅತಿ ದೊಡ್ಡ ತುರ್ತು ಪ್ರತಿಕ್ರಿಯಾ ವ್ಯವಸ್ಥೆಯಾದ 'ಡಯಲ್ 112' ಅನ್ನು ಪರಿಚಯಿಸಿ, ಗ್ರೇಟರ್ ನೋಯ್ಡಾದ ನಗರ ಆಡಳಿತ ವ್ಯವಸ್ಥೆಯನ್ನು ಆಧುನೀಕರಿಸಿದ್ದರು. 2022ರಿಂದ 2025ರವರೆಗೆ ಅವರು ಐಆರ್‌ಡಿಎಐ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿ '2047ರೊಳಗೆ ಎಲ್ಲರಿಗೂ ವಿಮೆ' ಎಂಬ ಯೋಜನೆಯನ್ನು ಮುಂದಿಟ್ಟಿದ್ದರು. 2020ರಿಂದ 2022ರವರೆಗೆ ಹಣಕಾಸು ಸೇವೆಗಳ ಇಲಾಖೆಯ ಕಾರ್ಯದರ್ಶಿಯಾಗಿ ಬ್ಯಾಂಕುಗಳ ವಿಲೀನ, ಹಣಕಾಸು ಒಳಗೊಳ್ಳಿಕೆ ಹಾಗೂ ಕೋವಿಡ್-19 ಅವಧಿಯ ಹಣಕಾಸು ಕ್ರಮಗಳನ್ನು ಯಶಸ್ವಿಯಾಗಿ ಅವರು ಮುನ್ನಡೆಸಿದ್ದರು.

ಮಹಿಳಾ ತಂಡದಿಂದ ಸಂಗೀತ ಕಾರ್ಯಕ್ರಮ

ಉಪನ್ಯಾಸದ ನಂತರ ಖ್ಯಾತ ಕಲಾವಿದರ ತಂಡದಿಂದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ. ಈ ಎಲ್ಲಾ ಕಾರ್ಯಕ್ರಮದಲ್ಲಿ ಮಹಿಳಾ ಸಾಧಕರೇ ಪಾಲ್ಗೊಳ್ಳುತ್ತಿರುವುದು ವಿಶೇಷ. ಗಾಯನದಲ್ಲಿ ವಿದುಷಿ ಮಾನಸಿ ಪ್ರಸಾದ್, ಘಟಂ ನಲ್ಲಿ ವಿದುಷಿ ಸುಕನ್ಯಾ ರಾಮಗೋಪಾಲ್, ವಯಲಿನ್‌ನಲ್ಲಿ ವಿದುಷಿ ಸಿ.ವಿ.ಶ್ರುತಿ, ವೀಣೆಯಲ್ಲಿ ವಿದುಷಿ ವಿ.ಜಿ. ಶ್ರೀಲತಾ ನಿಕ್ಷಿತ್, ಮೃದಂಗದಲ್ಲಿ ವಿದುಷಿ ರಂಜನಿ ಸಿದ್ಧಾಂತಿ ವೆಂಕಟೇಶ್ ಹಾಗೂ ಮೋರ್ಸಿಂಗ್‌ನಲ್ಲಿ ವಿದುಷಿ ಭಾಗ್ಯಲಕ್ಷ್ಮಿ ಕೃಷ್ಣ ಅವರು ಪಾಲ್ಗೊಳ್ಳಲಿದ್ದಾರೆ.



ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆಗೆ ಜಿಲ್ಲಾ ಬಿಜೆಪಿ ಖಂಡನೆ

ದ.ಕ.ಕ್ಕೆ ಸಚಿವರ ಕೊಡುಗೆ ಬಹಿರಂಗಪಡಿಸಲಿ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆ ಕೋಮು ಭಾವನೆಯಿಂದ ಅಭಿವೃದ್ಧಿ ಆಗುತ್ತಿಲ್ಲ ಎಂದು ಹೇಳಿಕೆ ನೀಡಿರುವ ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆಯನ್ನು ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿ ತೀವ್ರವಾಗಿ ಖಂಡಿಸಿದೆ.

ಸೋಮವಾರ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಕಳೆದ ಎರಡೂವರೆ ವರ್ಷಗಳಿಂದ ಐಟಿ ಬಿಟಿ ಸಚಿವರಾಗಿ ರುವ ಪ್ರಿಯಾಂಕ್ ಖರ್ಗೆ ದ.ಕ. ಜಿಲ್ಲೆಗೆ ಏನು ಕೊಡುಗೆ ನೀಡಿದ್ದಾರೆ ಎಂಬುದನ್ನು ಮೊದಲು ಹೇಳಲಿ. ಅವರದ್ದೇ ಕ್ಷೇತ್ರ ವಾಗಿರುವ ಕಲಬುರಗಿಗೆ ಏನು ಕೊಡುಗೆ ನೀಡಿದ್ದಾರೆ ಎಂಬುದನ್ನು ಬಹಿರಂಗಪಡಿಸಲಿ ಎಂದು ಸವಾಲು ಹಾಕಿದರು.

ಸಚಿವರಾಗಿ ದ.ಕ. ಜಿಲ್ಲೆಗೆ ಯಾವ ಪ್ರಯೋಜನವೂ ಆಗಿಲ್ಲ. ಯಾವುದೇ ಐಟಿ ಬಿಟಿ ಸಂಸ್ಥೆಗಳನ್ನು ನೀಡಿಲ್ಲ. ಉದ್ಯೋಗ ಸೃಷ್ಟಿಯೂ ಆಗಿಲ್ಲ. ಬಂಡವಾಳ ಹೂಡಿಕೆಯ ಕೆಲಸವನ್ನೂ ಮಾಡಿಲ್ಲ. ಏನಾದರೂ ಕೊಡುಗೆ ನೀಡಿದ ಉದಾಹರಣೆ ಇದ್ದರೆ ತಿಳಿಸಲಿ ಎಂದು ಟೀಕಿಸಿದರು.

ಜಿಲ್ಲೆಯಲ್ಲಿ ಗಲಭೆ, ಅಶಾಂತಿ ನಿರ್ಮಾಣ ಆಗಿರುವುದು ಕಾಂಗ್ರೆಸ್ ಅವಧಿಯಲ್ಲಿ. ದ.ಕ. ಜಿಲ್ಲೆಯ ಅಭಿವೃದ್ಧಿಗೆ ಎಲ್ಲ ಪಕ್ಷಗಳ ಜನಪ್ರತಿನಿಧಿಗಳು ಕೊಡುಗೆ ನೀಡಿದ್ದಾರೆ. ಜಿಲ್ಲೆಯಲ್ಲಿ 8 ಮೆಡಿಕಲ್ ಕಾಲೇಜುಗಳಿವೆ. ಪ್ರಿಯಾಂಕ್ ಖರ್ಗೆ ತವರು ಜಿಲ್ಲೆ ಕಲಬುರಗಿಯಲ್ಲಿ ಎಷ್ಟಿವೆ? ಶಿಕ್ಷಣಕ್ಕೆ ದೇಶದೆಲ್ಲೆಡೆಯಿಂದ ದ.ಕ.ಕ್ಕೆ ಬರುತ್ತಾರೆ, ಕಲಬುರಗಿಗೆ ಹೋಗುತ್ತಾರಾ? ಅತೀ ಹಿಂದುಳಿದ ಜಿಲ್ಲೆಗಳ ಪೈಕಿ ಕಲಬುರಗಿ ಇದೆ. ತಮ್ಮ ಜಿಲ್ಲೆಯನ್ನು ಅಭಿವೃದ್ಧಿ ಮಾಡಲು ಆಗದವರು ದ.ಕ. ಜಿಲ್ಲೆಯ ಬಗ್ಗೆ ಕೀಳಾಗಿ ಮಾತನಾಡುವುದು ಸಲ್ಲದು ಎಂದರು.

ಮಂಗಳೂರು ಉತ್ತರ ಶಾಸಕ ಡಾ.ಭರತ್ ಶೆಟ್ಟಿ, ಪ್ರಧಾನ ಕಾರ್ಯದರ್ಶಿಗಳಾದ ಪ್ರೇಮಾನಂದ ಶೆಟ್ಟಿ, ಯತೀಶ್ ಆರ್ವಾರ್, ಕಾರ್ಯದರ್ಶಿ ದಿನೇಶ್ ಅಮ್ಟೂರು, ಕೋಶಾಧಿಕಾರಿ ಸಂಜಯ ಪ್ರಭು, ಮಾಧ್ಯಮ ಸಂಚಾಲಕ ವಸಂತ ಜೆ.ಪೂಜಾರಿ ಉಪಸ್ಥಿತರಿದ್ದರು.



ಸ್ಥಾನಕ್ಕಾಗಿ ಬಕೆಟ್!

ಪ್ರಿಯಾಂಕ ಖರ್ಗೆಯವರು ರಾಹುಲ್ ಗಾಂಧಿ ಅವರಿಗೆ ಬಕೆಟ್ ಹಿಡಿಯುವ ಮೂಲಕ ಸೂಕ್ತ ಸ್ಥಾನಮಾನದ ನಿರೀಕ್ಷೆಯಲ್ಲಿದ್ದಾರೆ. ಅವರನ್ನು ಮೆಚ್ಚಿಸಲು ಕೀಳು ಮಟ್ಟದ ಹೇಳಿಕೆಯನ್ನು ನೀಡಲಾರಂಭಿಸಿದ್ದಾರೆ. ಆರೆಸ್ಸೆಸ್, ಬಿಜೆಪಿ ಕುರಿತಾದ ತಮ್ಮ ಬೇಜವಾಬ್ದಾರಿ ಹೇಳಿಕೆ ಬಗ್ಗೆ ಕೂಡಲೆ ಅವರು ಕ್ಷಮೆ ಕೇಳಬೇಕು.

■ ಡಾ.ವೈ.ಭರತ್ ಶೆಟ್ಟಿ, ಶಾಸಕರು

ಬ್ಯಾಂಕಿಂಗ್ ಸೇವೆಯಲ್ಲಿ ದೇಶಕ್ಕೇ ಮಾದರಿಯಾಗಿರುವ ಎಸ್‌ಸಿಡಿಸಿಸಿ ಬ್ಯಾಂಕ್‌ನಿಂದ ಗ್ರಾಹಕರಿಗೆ ಮತ್ತೊಂದು ಕೊಡುಗೆ

ಯುಪಿಐ, ಐಎಂಪಿಎಸ್ ಸೌಲಭ್ಯಕ್ಕೆ ಇಂದು ಚಾಲನೆ: ಡಾ.ಎಂ.ಎನ್.ಆರ್.

ಮಂಗಳೂರು: ಬ್ಯಾಂಕಿಂಗ್ ಸೇವೆಯಲ್ಲಿ ದೇಶಕ್ಕೆ ಮಾದರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ (ಎಸ್‌ಸಿಡಿಸಿಸಿ ಬ್ಯಾಂಕ್) ಅತ್ಯಾಧುನಿಕ ತಂತ್ರಜ್ಞಾನದ ಬ್ಯಾಂಕಿಂಗ್ ಸೇವೆಗಳನ್ನು ಗ್ರಾಹಕರಿಗೆ ನೀಡುತ್ತಿದ್ದು, ಇದೀಗ ಗ್ರಾಹಕರಿಗೆ ಡಿಜಿಟಲ್ ಬ್ಯಾಂಕಿಂಗ್ – ಯುಪಿಐ ಮತ್ತು ಐಎಂಪಿಎಸ್ ಸೌಲಭ್ಯ ಒದಗಿಸುತ್ತಿದೆ. ಬ್ಯಾಂಕಿನ ಗ್ರಾಹಕರಿಗೆ ಡಿಜಿಟಲ್ ಬ್ಯಾಂಕಿಂಗ್ ಸೇವೆಗಳಾದ ಯುಪಿಐ ಮತ್ತು ಐಎಂಪಿಎಸ್ ಸೌಲಭ್ಯಗಳಿಗೆ ಅಧಿಕೃತ ಚಾಲನಾ ಕಾರ್ಯಕ್ರಮ ಫೆ. 17ರಂದು ಮಧ್ಯಾಹ್ನ 12 ಗಂಟೆಗೆ ಬ್ಯಾಂಕಿನ ಸಭಾಂಗಣದಲ್ಲಿ ನಡೆಯಲಿದೆ ಎಂದು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ. ಮಂಗಳೂರು ಅಧ್ಯಕ್ಷ ಡಾ. ಎಂ.ಎನ್. ರಾಜೇಂದ್ರಕುಮಾರ್ ತಿಳಿಸಿದರು.



ಡಿಜಿಟಲ್ ಬ್ಯಾಂಕಿಂಗ್ ಸೇವೆಗಳನ್ನು ಮತ್ತಷ್ಟು ವಿಸ್ತರಿಸುವ ಉದ್ದೇಶದಿಂದ ಎಸ್‌ಸಿಡಿಸಿಸಿ ಬ್ಯಾಂಕ್ 16 ಸೆಪ್ಟೆಂಬರ್ 2025ರಿಂದ ಐಎಂಪಿಎಸ್ ಸೇವೆಯನ್ನು ಆರಂಭಿಸಿದೆ. ಈ ಸೇವೆಯ ಮೂಲಕ ಎಸ್‌ಸಿಡಿಸಿಸಿ ಬ್ಯಾಂಕಿನ ಮೊಬೈಲ್ ಅಪ್ಲಿಕೇಶನ್ ಬಳಸಿ ಗ್ರಾಹಕರು ಕ್ಷಣಾರ್ಧದಲ್ಲಿ ಹಣ ವರ್ಗಾವಣೆ ಮಾಡುವ ಸೌಲಭ್ಯವನ್ನು ಪಡೆಯುತ್ತಿದ್ದಾರೆ. ಐಎಂಪಿಎಸ್ ಎಂಬುದು ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ ಅಭಿವೃದ್ಧಿಪಡಿಸಿದ ತ್ವರಿತ ಹಣ ವರ್ಗಾವಣೆ ವ್ಯವಸ್ಥೆಯಾಗಿದ್ದು, ಇದು 24X7, ವಾರಾಂತ್ಯ ಮತ್ತು ಸಾರ್ವಜನಿಕ ರಜೆ ದಿನಗಳಲ್ಲಿಯೂ ಕಾರ್ಯನಿರ್ವಹಿಸುತ್ತದೆ. ಪಿ2ಎ ಮೂಲಕ ಖಾತೆ ಸಂಖ್ಯೆ ಮತ್ತು ಐಎಫ್‌ಎಸ್‌ಸಿ ಬಳಸಿ ಯಾವುದೇ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಮಾಡಬಹುದು ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.

ಅತ್ಯಂತ ಮಹತ್ವದ ಹೆಜ್ಜೆ

ಡಿಜಿಟಲ್ ಭಾರತ ಪರಿಕಲ್ಪನೆಯನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ನಮ್ಮ ಬ್ಯಾಂಕ್ ಅತ್ಯಂತ ಮಹತ್ವದ ಹೆಜ್ಜೆಯನ್ನು ಇಟ್ಟಿದ್ದು, ಯುಪಿಐ ಸೇವೆಯನ್ನು ಕಳೆದ ಜನವರಿ 21ರಿಂದ ಪ್ರಾರಂಭಿಸಿದೆ. ಯುಪಿಐ ಸೇವೆಯ ಮೂಲಕ ನಮ್ಮ ಗ್ರಾಹಕರು ಸುಲಭವಾಗಿ ಹಾಗೂ ಸುರಕ್ಷಿತವಾಗಿ ಹಣ ವರ್ಗಾವಣೆ ಮಾಡಬಹುದು. ಗ್ರಾಹಕರು ಗೂಗಲ್ ಪೇ, ಫೋನ್ ಪೇ, ಭೀಮ್, ವಾಟ್ಸ್ ಆಪ್ ಪೇ, ಪೇಟಿಎಂ, ಫ್ರೀಚಾರ್ಜ್, ಸೂಪರ್‌ಮನಿ ಮುಂತಾದ ಅಪ್ಲಿಕೇಶನ್‌ಗಳ ಮೂಲಕ ಸುಲಭವಾಗಿ ವ್ಯವಹಾರಗಳನ್ನು ನಡೆಸಬಹುದು. ಈ ಸೇವೆಯ ಮೂಲಕ ಗ್ರಾಹಕರು ಬ್ಯಾಂಕ್‌ಗೆ ಭೇಟಿ ನೀಡುವ ಅವಶ್ಯಕತೆ ಇಲ್ಲದೆ, ಮನೆಯಲ್ಲಿಯೇ ಅಥವಾ ಎಲ್ಲಿಂದ ಬೇಕಾದರೂ 24X7 ಸಮಯದಲ್ಲಿ ಹಣ ವರ್ಗಾವಣೆ ಮಾಡಬಹುದು. ಯುಪಿಐ ಮೂಲಕ ಗ್ರಾಹಕರು ತಕ್ಷಣ ಹಣ ಕಳುಹಿಸಬಹುದು ಹಾಗೂ ಸ್ವೀಕರಿಸಬಹುದು, ಈ ಎಲ್ಲಾ ವ್ಯವಹಾರಗಳು ಯುಪಿಐ ಪಿನ್ ಮತ್ತು ಎರಡು ಹಂತದ ಭದ್ರತಾ ವ್ಯವಸ್ಥೆಯಿಂದ ಸುರಕ್ಷಿತವಾಗಿರುತ್ತವೆ. ಎಸ್‌ಸಿಡಿಸಿಸಿ ಬ್ಯಾಂಕ್‌ನ ಆರ್ಥಿಕ ವ್ಯವಸ್ಥೆ ವೀಕ್ಷಿಸಿ ನಮಗೆ ಈ ಅವಕಾಶ ದೊರೆತಿದೆ ಎಂದು ವಿವರಿಸಿದರು.

ಬ್ಯಾಂಕ್ ಉಪಾಧ್ಯಕ್ಷ ವಿನಯ್ ಕುಮಾರ್ ಸೂರಿಂಜೆ, ನಿರ್ದೇಶಕರಾದ ಭಾಸ್ಕರ್ ಎಸ್. ಕೋಟ್ಯಾನ್, ಶಶಿಕುಮಾರ್ ರೈ ಬಾಲ್ಯೊಟ್ಟು, ಎಸ್. ಬಿ.ಜಯರಾಮ್ ರೈ, ಸದಾಶಿವ ಉಳ್ಳಾಲ್, ಜೈರಾಜ್ ಬಿ.ರೈ, ಮೋನಪ್ಪ ಶೆಟ್ಟಿ ಎಕ್ಕಾರು, ಸಹಕಾರ ಸಂಘಗಳ ಉಪ ನಿಬಂಧಕ ರಮೇಶ್ ಎಚ್.ಎನ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗೋಪಾಲಕೃಷ್ಣ ಭಟ್ ಉಪಸ್ಥಿತರಿದ್ದರು.

ಆಧುನಿಕ ಸೇವೆಗೆ ಬದ್ಧ

ಯುಪಿಐ ಸೇವೆಯಿಂದ ಸಣ್ಣ ವ್ಯಾಪಾರಿಗಳು, ರೈತರು, ಅಂಗಡಿ ಮಾಲಿಕರು, ವಿದ್ಯಾರ್ಥಿಗಳು, ಉದ್ಯೋಗಿಗಳು ಎಲ್ಲರೂ ಪ್ರಯೋಜನ ಪಡೆಯಬಹುದು. ಒಬ್ಬ ಚಿಲ್ಲರೆ ವ್ಯಾಪಾರಿಯೂ ಈಗ ಕ್ಯೂಆರ್ ಕೋಡ್ ಮೂಲಕ ಡಿಜಿಟಲ್ ಪಾವತಿ ಸ್ವೀಕರಿಸಬಹುದು. ಇದು ನಮ್ಮ ಬ್ಯಾಂಕಿನ ಆರ್ಥಿಕತೆಯನ್ನು ಇನ್ನಷ್ಟು ಬಲಪಡಿಸುತ್ತದೆ. ಇದು ದಿನನಿತ್ಯದ ಸಣ್ಣ ಮೊತ್ತದ ಪಾವತಿಗಳಿಗೆ, ಇ-ಕಾಮರ್ಸ್ ವ್ಯವಹಾರಗಳಿಗೆ ಹಾಗೂ ವ್ಯಕ್ತಿಯಿಂದ ವ್ಯಕ್ತಿಗೆ ಹಣ ವರ್ಗಾವಣೆ ಮಾಡಲು ಅತ್ಯಂತ ಅನುಕೂಲಕರವಾಗಿದೆ. ನಮ್ಮ ಬ್ಯಾಂಕ್ ಸದಾ ಗ್ರಾಹಕರಿಗೆ ಅತ್ಯುತ್ತಮ ಹಾಗೂ ಆಧುನಿಕ ಸೇವೆಗಳನ್ನು ಒದಗಿಸಲು ಬದ್ಧವಾಗಿದೆ. ಯುಪಿಐ ಸೇವೆಯಿಂದ ನಮ್ಮ ಗ್ರಾಹಕರಿಗೆ ಮತ್ತಷ್ಟು ಸುಲಭ ಮತ್ತು ವೇಗವಾದ ಬ್ಯಾಂಕಿಂಗ್ ಅನುಭವ ಸಿಗಲಿದೆ ಎಂಬ ವಿಶ್ವಾಸ ನಮಗಿದೆ ಎಂದು ಡಾ.ಎಂ.ಎನ್. ರಾಜೇಂದ್ರಕುಮಾರ್ ತಿಳಿಸಿದರು.

ಹೊಸ ದಿಗಂತ
ಮಂಗಳವಾರ, 17 ಫೆಬ್ರವರಿ 2026
ಮಂಗಳೂರು



ಸಾರ್ಥಕ ಸರ್ಕಾರ

ಜನಸೇವೆಯಲ್ಲಿ ಸಾರ್ಥಕ ಸಾವಿರ ದಿನ

ಸರ್ಕಾರದಿಂದ 7ನೇ ಗ್ಯಾರಂಟಿ ನಿಶ್ಚಿತ

ರಾಜ್ಯದಲ್ಲಿ ಸರ್ಕಾರದ ಸಾಧನೆ ಹೇಗಿದೆ?



ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಐತಿಹಾಸಿಕ ಯೋಜನೆಗಳ ಮೂಲಕ ದಾಖಲೆ ನಿರ್ಮಿಸುತ್ತಿದೆ. ಕಳೆದ 1ಸಾವಿರ ದಿನಗಳ ಆಡಳಿತದಲ್ಲಿ ರಾಜ್ಯ ಸರ್ಕಾರ ಜನಪರ ಆಡಳಿತ ನೀಡಿದೆ. ಪಂಚ ಗ್ಯಾರಂಟಿಗಳ ಮೂಲಕ ಕೇವಲ ರಾಜ್ಯ ಮಾತ್ರವಲ್ಲದೇ ಇಡೀ ದೇಶಕ್ಕೆ ಮಾದರಿಯಾಗಿದೆ. ನಮ್ಮ ಯೋಜನೆಗಳನ್ನು ಜನ ಸ್ವೀಕರಿಸಿದಂತೆ ದೇಶದಲ್ಲಿ ಇತರ ರಾಜ್ಯಗಳು, ಮುಖ್ಯವಾಗಿ ಕೇಂದ್ರದ ಮೋದಿ ಸರ್ಕಾರವೇ ಗ್ಯಾರಂಟಿ ಯೋಜನೆಗಳನ್ನು ಅಳವಡಿಸಿಕೊಂಡಿದೆ. ರಾಜ್ಯದಲ್ಲಿಂದು ಕ್ರಾಂತಿ ಸ್ವರೂಪದಲ್ಲಿ ಬದಲಾವಣೆ ಕಾಣಬಹುದಾಗಿದೆ. 1.16ಲಕ್ಷ ಕೋಟಿ ರೂ.ಗೂ ಅಧಿಕ ಅನುದಾನದಲ್ಲಿ ಶಕ್ತಿ, ಗೃಹಲಕ್ಷ್ಮಿ ಗೃಹಜ್ಯೋತಿ,ಯುವನಿಧಿ. ಅನ್ನಭಾಗ್ಯ ಯೋಜನೆಗಳು ಜನರ ಮನ,ಮನೆ ಮುಟ್ಟಿವೆ. ಇದೇ ರೀತಿ ಕಂದಾಯ ಇಲಾಖೆಯಿಂದಲೂ ಕ್ರಾಂತಿಕಾರಕ ಯೋಜನೆಯನ್ನು ಪರಿಚಯಿಸುತ್ತಿದ್ದು, ಖಾತೆಗಳಿಗೆ ಅಲೆಯುತ್ತಿದ್ದಜನರ ಬವಣೆ ನೀಗಿಸಲೆಂದೇ 'ಭೂ ಗ್ಯಾರಂಟಿ' ಯೋಜನೆ ಪರಿಚಯಿಸಲಾಗಿದೆ. ಕಂದಾಯ ಇಲಾಖೆ ಜನರೊಂದಿಗೆ ನೇರ ಸಂಬಂಧ ಹೊಂದಿರುವ ಇಲಾಖೆ. ಹೀಗಾಗಿ ರೈತರು ಜನಸಾಮಾನ್ಯರು ನಿತ್ಯ ಕಂದಾಯ ಇಲಾಖೆಗೆ ಅಲೆಯುವ ಪರಿಸ್ಥಿತಿಯಿತ್ತು. ಈ ಪರಿಸ್ಥಿತಿಗೆ ಬದಲಾಗಿ ಡಿಜಿಟಲ್ ಸ್ಪರ್ಶ ನೀಡಿ ಜನರ ಒದ್ದಾಟಕ್ಕೆ ಮುಕ್ತಿ ನೀಡಲಾಗಿದೆ.ಜತೆಗೆ, ಪೋಡಿ ಖಾತೆಗಳಿಗೆ ಅಲೆಯುತ್ತಿದ್ದವರಿಗೆ ನನ್ನ ಆಸ್ತಿ ಯೋಜನೆ ನೆರವಾಗಿದೆ. ರಾಜ್ಯದಲ್ಲಿ 6ನೇ ಗ್ಯಾರಂಟಿ ಭೂ ಗ್ಯಾರಂಟಿಯಾದರೆ 7ನೇ ಗ್ಯಾರಂಟಿಯಾಗಿ ನೀರಿನ ಗ್ಯಾರಂಟಿ ನೀಡಲು ಸರ್ಕಾರ ಸಿದ್ಧತೆ ನಡೆಸಿದೆ. ರಾಜ್ಯದ ಪ್ರತಿಯೊಬ್ಬರಿಗೂ ಕುಡಿಯುವ ನೀರು, ಕೃಷಿಗೆ ಅಗತ್ಯ ನೀರಾವರಿ ವ್ಯವಸ್ಥೆ ಸೇರಿದಂತೆ ಎಲ್ಲರಿಗೂ ಅಗತ್ಯ ನೀರಿನ ಸೌಕರ್ಯ ಒದಗಿಸುವ ನಿಟ್ಟಿನಲ್ಲಿ ನೀರು ಗ್ಯಾರಂಟಿಯನ್ನು ನೀಡಲಿದೆ.

ಕೇಂದ್ರದಿಂದ ರಾಜ್ಯಕ್ಕೆ ತೆರಿಗೆ ನಷ್ಟ: ಡಿ.ಕೆ.ಶಿವಕುಮಾರ್

ದೇಶದಲ್ಲೆ ಅತಿ ಹೆಚ್ಚು ತೆರಿಗೆ ಕಟ್ಟುವ ನಮ್ಮ ರಾಜ್ಯಕ್ಕೆ ಪ್ರತಿ ಬಾರಿ ಅನ್ಯಾಯವಾಗುತ್ತಿದೆ.ಕೇಂದ್ರ ಹಣಕಾಸು ಸಚಿವರು ಕೃಷ್ಣಾ ಮೇಲ್ದಂಡೆ ಯೋಜನೆಗೆ ಅನುದಾನ ನೀಡುವುದಾಗಿ ಘೋಷಿಸಿದರು, ನಂತರ ರಾಜ್ಯ ಸರ್ಕಾರವೂ ಇದನ್ನು ರಾಷ್ಟ್ರೀಯ ಯೋಜನೆ ಘೋಷಿಸಲಾಗುವುದು ಎಂದೂ ತಿಳಿಸಿತು. ಆದರೆ ಅನುದಾನವಾಗಲಿ, ರಾಷ್ಟ್ರೀಯ ಹಣಕಾಸು ಆಯೋಗದಲ್ಲಿ ಶಿಫಾರಸ್ಸು ಮಾಡಲಾಗಿದ್ದ 11,495 ಕೋಟಿ ರೂ.ಗಳು ರಾಜ್ಯಕ್ಕೆ ನೀಡಲಿಲ್ಲ ಎಂದು ಡಿ.ಕೆ.ಶಿವಕುಮಾರ್ ಅಸಮಾಧಾನ ವ್ಯಕ್ತಪಡಿಸಿದರು. 14ನೇ ಆಯೋಗದಲ್ಲಿ 4.71 % ರಾಜ್ಯಕ್ಕೆ ಕೊಡಲಾಗಿತ್ತು. 15 ನೇಆಯೋಗದಲ್ಲಿ 3.64% ಕ್ಕೆ ಇಳಿಸಿದರು. ಇದರಿಂದ ಐದು ವರ್ಷಗಳಲ್ಲಿ ರಾಜ್ಯಕ್ಕೆ 1,25,000 ಕೋಟಿ ಕಡಿಮೆಯಾಯಿತು. ಈ ಅನುದಾನದ ಕಡಿತದ ಬಗ್ಗೆ ಪ್ರಶ್ನಿಸುವುದು ರಾಜ್ಯದ ಎಲ್ಲ ಜನಪ್ರತಿನಿಧಿಗಳ ಜವಾಬ್ದಾರಿ. 4.50 ಕೋಟಿ ತೆರಿಗೆ ಕೊಟ್ಟರೆ, ನಮಗೆ ಕೇವಲ 55 ರಿಂದ 60 ಸಾವಿರ ಕೋಟಿ ಮರಳಿ ಬರುತ್ತದೆ. ಎಂಟು ವರ್ಷದಿಂದ ಹೆಚ್ಚು ಜಿಎಸ್‌ಟಿ ಪಡೆದು, ಈಗ ಕೇಂದ್ರ ಸರ್ಕಾರ ಹಠಾತ್ತಾಗಿ ಜಿಎಸ್‌ಟಿಯಿಂದ 12-15 ಸಾವಿರ ಕೋಟಿ ನಷ್ಟವಾಗುತ್ತದೆ. ಇದು ಏಳು ಕೋಟಿ ಕನ್ನಡಿಗರಿಗೆ ಆದ ನಷ್ಟ

ಹೂಡಿಕೆ, ಉದ್ಯೋಗ ಸೃಷ್ಟಿಯಲ್ಲಿ ನಂ.1

ಕರ್ನಾಟಕದ ಕಾಂಗ್ರೆಸ್ ಸರ್ಕಾರವು ತನ್ನ ಆಡಳಿತದ ಯಶಸ್ವಿ 1000 ದಿನಗಳನ್ನು ಪೂರೈಸಿದ್ದು, ಈ ಅವಧಿಯಲ್ಲಿ ರಾಜ್ಯದ ಅಭಿವೃದ್ಧಿ ಮತ್ತು ಜನಸಾಮಾನ್ಯರ ಆರ್ಥಿಕ ಭದ್ರತೆಗೆ ಹೊಸ ಭಾಷ್ಯ ಬರೆದಿದೆ. ನುಡಿದಂತೆ ನಡೆದ ಸರ್ಕಾರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಕಾಂಗ್ರೆಸ್, ತಾನು ನೀಡಿದ್ದ 593 ಭರವಸೆಗಳ ಪೈಕಿ ಈಗಾಗಲೇ 242 ಭರವಸೆಗಳನ್ನು ಈಡೇರಿಸುವ ಮೂಲಕ ಶೇ. 40ರಷ್ಟು ಗುರಿ ಸಾಧಿಸಿದೆ.

ಕರ್ನಾಟಕವು ಇಂದು ದೇಶದಲ್ಲೇ ಬೆಳವಣಿಗೆಯಲ್ಲಿ ಮೊದಲ ಸ್ಥಾನದಲ್ಲಿದ್ದು (ಶೇ.10.2), ವಿದೇಶಿ ನೇರ ಬಂಡವಾಳ ಹೂಡಿಕೆ (ಎಫ್‌ಡಿಐ)ಯಲ್ಲಿ ಎರಡನೇ ಸ್ಥಾನದಲ್ಲಿದೆ. ಇನ್ವೆಸ್ಟ್ ಕರ್ನಾಟಕ 2025 ಸಮಾವೇಶದಲ್ಲಿ 10.27 ಲಕ್ಷ ಕೋಟಿ ರೂ. ಹೂಡಿಕೆಯ ಗುರಿ ಸಾಧಿಸಲಾಗಿದ್ದು, ಇದರಿಂದ 6 ಲಕ್ಷ ಉದ್ಯೋಗಗಳು ಸೃಷ್ಟಿಯಾಗಲಿವೆ. ದೇಶದ ಸರಾಸರಿ ಶೇ.18ಕ್ಕೆ ಹೋಲಿಸಿದರೆ ಕರ್ನಾಟಕದಲ್ಲಿ ನಿರುದ್ಯೋಗ ದರ ಕೇವಲ ಶೇ.2.5 ರಷ್ಟಿದೆ. ದೊಡ್ಡಬಳ್ಳಾಪುರದಲ್ಲಿ ಕ್ವಿನ್ (ಕೆಡಬ್ಲ್ಯುಐಎನ್) ಸಿಟಿ, ಕಲಬುರಗಿಯಲ್ಲಿ ಮೆಗಾ ಜವಳಿ ಪಾರ್ಕ್ ಸ್ಥಾಪನೆಗೆ ಚಾಲನೆ ನೀಡಲಾಗಿದೆ.

ರೈತರು ಮತ್ತು ಶೋಷಿತರ ಪರ ಆಡಳಿತ

ಕೇಂದ್ರದ ನೆರವಿಲ್ಲದಿದ್ದರೂ ಸರ್ಕಾರ ತನ್ನ ಬೊಕ್ಕಸದಿಂದ 38 ಲಕ್ಷ ರೈತರಿಗೆ 4,047 ಕೋಟಿ ರೂ.ಗಳ ಪರಿಹಾರ ವಿತರಿಸಿದೆ. 20 ಸಾವಿರ ಪೌರಕಾರ್ಮಿಕರನ್ನು ಮಾಸಿಕ 39 ಸಾವಿರ ರೂ. ವೇತನದೊಂದಿಗೆ ಖಾಯಂಗೊಳಿಸಿ ಐತಿಹಾಸಿಕ ತೀರ್ಮಾನ ಕೈಗೊಳ್ಳಲಾಗಿದೆ. ರಾಜ್ಯದಲ್ಲಿ 500 ಹೊಸ ಕರ್ನಾಟಕ ಪಬ್ಲಿಕ್ ಶಾಲೆಗಳ ಆರಂಭ ಹಾಗೂ ಸರ್ಕಾರಿ ಶಾಲೆಗಳ ಮೂಲಸೌಕರ್ಯಕ್ಕೆ 725 ಕೋಟಿ ರೂ. ಬಿಡುಗಡೆ ಮಾಡಲಾಗಿದೆ.

ಬ್ರ್ಯಾಂಡ್ ಬೆಂಗಳೂರು ಮತ್ತು ಮೂಲಸೌಕರ್ಯ

ಬೆಂಗಳೂರಿನ ಸಂಚಾರ ದಟ್ಟಣೆ ನಿವಾರಿಸಲು 40,000 ಕೋಟಿ ರೂ. ವೆಚ್ಚದ ಸುರಂಗ ರಸ್ತೆ ಯೋಜನೆ ಹಾಗೂ ಮೆಟ್ರೋ ಜಾಲವನ್ನು 2026ರ ವೇಳೆಗೆ 175 ಕಿ.ಮೀ.ಗೆ ವಿಸ್ತರಿಸುವ ಗುರಿ ಇಟ್ಟುಕೊಳ್ಳಲಾಗಿದೆ. ಬಿಡದಿಯ 8,500 ಎಕರೆ ಪ್ರದೇಶದಲ್ಲಿ ಭಾರತದ ಮೊದಲ ಎಐ (ಕೃತಕ ಬುದ್ಧಿಮತ್ತೆ) ನಗರ (ಎಐ ಸಿಟಿ) ನಿರ್ಮಾಣವಾಗುತ್ತಿದೆ.

ಆರೋಗ್ಯ ಕ್ಷೇತ್ರದಲ್ಲಿ ನವಚೈತನ್ಯ

ಗೃಹ ಆರೋಗ್ಯ ಯೋಜನೆಯಡಿ ಮನೆ-ಮನೆಗೆ ತೆರಳಿ ಆರೋಗ್ಯ ತಪಾಸಣೆ ಮಾಡಲಾಗುತ್ತಿದ್ದು, ತಾಯಿ ಮರಣ ಪ್ರಮಾಣವನ್ನು ಶೇ. 24ರಷ್ಟು ಕಡಿಮೆ ಮಾಡುವಲ್ಲಿ ಸರ್ಕಾರ ಯಶಸ್ವಿಯಾಗಿದೆ. ಆಹಾರದಲ್ಲಿ ಕೃತಕ ಬಣ್ಣ ಬಳಕೆಯನ್ನು ನಿಷೇಧಿಸಿ ಜನರ ಆರೋಗ್ಯ ರಕ್ಷಣೆಗೆ ದಿಟ್ಟ ಹೆಜ್ಜೆ ಇಡಲಾಗಿದೆ. ಪ್ರತಿಪಕ್ಷಗಳ ಟೀಕೆಗಳ ನಡುವೆಯೂ ಕಾಂಗ್ರೆಸ್ ಸರ್ಕಾರವು ಕರ್ನಾಟಕವನ್ನು ದೇಶದ ಆರ್ಥಿಕ ಮತ್ತು ಶೈಕ್ಷಣಿಕ ನಕ್ಷೆಯಲ್ಲಿ ಅಗ್ರಸ್ಥಾನಕ್ಕೆ ತರುವಲ್ಲಿ ಯಶಸ್ವಿಯಾಗಿದೆ. 1000 ದಿನಗಳ ಈ ಸಂಭ್ರಮವು ಕನ್ನಡಿಗರ ಸರ್ವತೋಮುಖ ಅಭಿವೃದ್ಧಿಯ ಸಂಕೇತವಾಗಿದೆ.

ಇಡೀ ದೇಶದಲ್ಲೇ ರಾಜ್ಯ ನಂ.1

ಪಂಚಾಯತ್ ರಾಜ್ ವೀಕೇಂದ್ರಿಕರಣದಲ್ಲಿ ಕರ್ನಾಟಕವು ಇಡೀ ದೇಶದಲ್ಲೇ ನಂ.1 ಸ್ಥಾನದಲ್ಲಿದೆ. ಕೇಂದ್ರ ಸರ್ಕಾರವೇ ನಮ್ಮ ಸರ್ಕಾರದ ಸಾಧನೆಯನ್ನು ಅನುಮೋದಿಸಿದೆ. ಇದು ಸಂವಿಧಾನದ 73ನೇ ತಿದ್ದುಪಡಿಯನ್ನು ನಮ್ಮ ಸರ್ಕಾರ ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುತ್ತಿರುವುದಕ್ಕೆ ನಿದರ್ಶನ. ಇನ್ನು ರಾಜ್ಯದಲ್ಲಿ 3888 ಕೂಸಿನ ಮನೆ ಕಾರ್ಯನಿರ್ವಹಿಸುತ್ತಿದ್ದು, ಗ್ರಾಮೀಣ ಜನರ ಸ್ವಾವಲಂಬಿ ಬದುಕಿಗೆ ಬೆಂಬಲ ನೀಡಿವೆ, ಪೌಷ್ಟಿಕ ಆಹಾರ ಒದಗಿಸುವ ಮೂಲಕ ಗ್ರಾಮೀಣ ಮಕ್ಕಳ ಆರೋಗ್ಯಯುತ ಬೆಳವಣಿಗೆಗೆ ಕಾರಣವಾಗಿದೆ. ವೈಜ್ಞಾನಿಕವಾಗಿ ಜವಾಬ್ದಾರಿ ನಕ್ಷೆ ರೂಪಿಸಿ ಪಂಚಾಯತಿಗಳ ಸಾಮರ್ಥ್ಯವನ್ನು ಹೆಚ್ಚಿಸಿ, ಇನ್ನಷ್ಟು ಬಲ ತುಂಬುವ ಕೆಲಸ ನಡೆದಿದೆ ಎಂದು ತಮ್ಮ ಇಲಾಖೆಯ ಸಾಧನೆಗಳ ಬಗ್ಗೆ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಮನ ಬಿಚ್ಚಿ ಮಾತನಾಡಿದ್ದಾರೆ..

ಪಿಡಿಒಗಳ ವರ್ಗಾವಣೆಯನ್ನೂ ಕೌನ್ಸಿಲಿಂಗ್ ಮೂಲಕ ನಡೆಸಿದ್ದೀರಿ ನಿಮ್ಮ ಅಭಿಪ್ರಾಯ ?

ಮೊದಲ ಬಾರಿಗೆ ಪಿಡಿಒ ವರ್ಗಾವಣೆಯನ್ನು ಕೌನ್ಸಲಿಂಗ್ ಮೂಲಕ ನಡೆಸಿ, ಪಾರದರ್ಶಕ, ಮತ್ತು ಪ್ರಾಮಾಣಿಕ ಮಾದರಿಯ ವರ್ಗಾವಣೆಗೆ ಕಾರಣವಾಗಿದೆ. ದಶಕಗಳ ಕಾಲ ಕಗ್ಗಂಟಾಗಿ ಉಳಿದಿದ್ದ ಪಿಡಿಒ ಮುಂಬಡ್ತಿ ವಿಷಯವನ್ನು ಬಗೆಹರಿಸುವಲ್ಲಿ ಪ್ರಯತ್ನಿಸಲಾಗಿದೆ

ರಾಜ್ಯದಲ್ಲಿ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಹೇಗಿದೆ ?

5,200 ಕೋಟಿ ವೆಚ್ಚದಲ್ಲಿ ಪ್ರಗತಿ ಪಥ, 7,110 ಕಿ.ಮೀ. ಗ್ರಾಮೀಣ ರಸ್ತೆ ಅಭಿವೃದ್ಧಿ. 1000 ಕೋಟಿ ರೂ. ವೆಚ್ಚದಲ್ಲಿ ಕಲ್ಯಾಣ ಪಥ, 1,150 ಕಿ.ಮೀ ರಸ್ತೆ ಅಭಿವೃದ್ಧಿಪಡಿಸಲಾಗುವುದು. ಗ್ರಾಮೀಣ ಪ್ರದೇಶದ ಸಾಮಾಜಿಕ, ಆರ್ಥಿಕ ಪ್ರಗತಿಗೆ ಅನುಕೂಲ. ರೈತರ ಜಮೀನಿಗೆ ರಸ್ತೆ ಸಂಪರ್ಕ ಕಲ್ಪಿಸಲು ಕೃಷಿ ಪಥ ಯೋಜನೆ ರೂಪಿಸಲಾಗಿದೆ. ಹಸಿರು ಪಥ, 5000 ಕಿ.ಮೀ ರಸ್ತೆ ಬದಿ ಗಿಡಗಳನ್ನು ನೆಟ್ಟು ಪೋಷಿಸುವ ಗುರಿ, ಈಗಾಗಲೇ 2215 ಕಿ.ಮೀ ರಸ್ತೆ ಬದಿಯಲ್ಲಿ ಗಿಡಗಳನ್ನು ನಡೆಲಾಗಿದೆ.

ರಾಜ್ಯದಲ್ಲಿ ನರೇಗಾ ಸಾಧನೆ ಹೇಗಿದೆ ?



ನರೇಗಾ ಯೋಜನೆಯಲ್ಲಿ 2023/24ನೇ ಸಾಲಿನಲ್ಲಿ 13.85 ಕೋಟಿ ಮಾನವ ದಿನಗಳ ಸೃಜನೆ, 98.9% ಪ್ರಗತಿ ಸಾಧನೆ, 3839.22 ಕೋಟಿ ಕೂಲಿ ಹಣ ಜಮೆ. 2024/25ನೇ ಸಾಲಿನಲ್ಲಿ 13.14 ಕೋಟಿ ಮಾನವ ದಿನಗಳ ಸೃಜನೆ, 101.1% ಪ್ರಗತಿ ಸಾಧನೆ. 4214.5 ಕೋಟಿ ಕೂಲಿ ಹಣ ಜಮೆ ಮಾಡಿದ್ದೇವೆ.

ಅರಿವು ಕೇಂದ್ರದ ಮೂಲಕ ಎಷ್ಟು ಜನ ನೋಂದಾಯಿಸಿಕೊಂಡಿದ್ದಾರೆ?

ಅರಿವು ಕೇಂದ್ರ, ರಾಜ್ಯದ 5715 ಗ್ರಾಮೀಣ ಗ್ರಂಥಾಲಯಗಳನ್ನು ಅರಿವು ಕೇಂದ್ರಗಳಾಗಿ ಮೇಲ್ದರ್ಜೆಗೆ, ಕಂಪ್ಯೂಟರ್, ಇಂಟರ್ನೆಟ್ ವ್ಯವಸ್ಥೆ ಕಲ್ಪಿಸಿ ಡಿಜಿಟಲೀಕರಣ ಮಾಡಲಾಗಿದೆ. ಅರಿವು ಕೇಂದ್ರಗಳ ಕಾರ್ಯಾಚರಣೆಯ ಸಮಯವನ್ನು 8 ಗಂಟೆಗೆ ಏರಿಸಲಾಗಿದೆ. 49.14 ಲಕ್ಷ ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದಾರೆ. 132 ಕೋಟಿ ವೆಚ್ಚದಲ್ಲಿ ಅರಿವು ಕೇಂದ್ರಗಳಿಗೆ ಸ್ವಂತ ಕಟ್ಟಡ ಹೊಂದಲು ಕ್ರಮ ವಹಿಸಲಾಗುತ್ತಿದೆ.

ಪ್ರಮುಖ ನಿರ್ಧಾರಗಳು

- ಕಂದಾಯ ನ್ಯಾಯಾಲಯಗಳಲ್ಲಿ ಬಾಕಿ ಇದ್ದ ಶೇ. 80ಕ್ಕೂ ಹೆಚ್ಚು ಪ್ರಕರಣಗಳ ಇತ್ಯರ್ಥ.
- ಕಂದಾಯ ನ್ಯಾಯಾಲಯಗಳ ನಿರ್ವಹಣೆಯನ್ನು ಆನ್ಲೈನ್ ಮೂಲಕ ಪಾರದರ್ಶಕಗೊಳಿಸಲಾಗಿದೆ.
- ದಾಖಲೆರಹಿತ 4,050ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಿಸಲಾಗಿದೆ.
- 2ಲಕ್ಷಕ್ಕೂ ಅಧಿಕ ಫಲಾನುಭವಿಗಳಿಗೆ ಹಕ್ಕು ಪತ್ರ ವಿತರಿಸಲಾಗಿದೆ.
- ಬಿ'ಖಾತೆಗಳನ್ನು 'ಎ' ಖಾತೆಗಳನ್ನಾಗಿ ಪರಿವರ್ತಿಸಲು ಅನುಮೋದನೆ
- ಕೃಷಿ ಯಾಂತ್ರಿಕೀಕರಣಕ್ಕೆ ಉತ್ತೇಜನ ನೀಡಲು ರೈತರಿಗೆ ರಿಯಾಯಿತಿ ದರದಲ್ಲಿ ಉಪಕರಣಗಳ ವಿತರಣೆ.
- 2025-26ರ ಬಜೆಟ್‌ನಲ್ಲಿ ಬಂಡವಾಳ ವೆಚ್ಚಕ್ಕಾಗಿ 83,200 ಕೋಟಿ ರೂ. ಮೀಸಲು.
- ಬೆಂಗಳೂರು ನಗರದ ಅಭಿವೃದ್ಧಿ ಯೋಜನೆಗಳಿಗಾಗಿ 1.5 ಲಕ್ಷ ಕೋಟಿ ರೂ.ಮೀಸಲು.

ರಾಜ್ಯದಲ್ಲಿ ಗ್ರಾಮ ಪಂಚಾಯಿತಿಗಳ ತೆರಿಗೆ ಸಂಗ್ರಹಣೆ ಹೇಗಿದೆ?

ಗ್ರಾಮ ಪಂಚಾಯತಿಗಳ ತೆರಿಗೆ ಸಂಗ್ರಹಕ್ಕೆ ಒತ್ತು ನೀಡಿದ ಪರಿಣಾಮ ಸುಮಾರು 1270 ಕೋಟಿ ರೂ. ತೆರಿಗೆ ಸಂಗ್ರಹಿಸಲಾಗಿದೆ, ಇದು ದಾಖಲೆ ಮೊತ್ತವಾಗಿದೆ. ಈ ಹಣ ಗ್ರಾಮ ಪಂಚಾಯತಿಗಳ ಬಲವರ್ಧನೆಗೆ ಕಾರಣವಾಗಲಿದೆ. ಕೇಂದ್ರ ಸಚಿವರೇ ಟ್ವೀಟ್ ಮಾಡಿ ಈ ಬಗ್ಗೆ ಶ್ಲಾಘನೆ ಮಾಡಿದ್ದು ನಮ್ಮ ಸಾಧನೆಗೆ ಹಿಡಿದ ಕನ್ನಡಿ.

ಜೆಜೆಎಂ ಕಾಮಗಾರಿ ಪ್ರಗತಿ ಎಲ್ಲಿಗೆ ಬಂದಿದೆ ?

ಸಮೀಕರಿಸುವ ಮೂಲಕ ಪ್ರಗತಿಗೆ ವೇಗ ನೀಡುವ ನಿಟ್ಟಿನಲ್ಲಿ ಪಂಚಮಿತ್ರ ಪೋರ್ಟಲ್, ವಾಟ್ಸಾಪ್ ಚಾಟ್ ಬಾಟ್ ಮೂಲಕ ಜನರ ಅಹವಾಲುಗಳಿಗೆ ಸ್ಪಂದಿಸುವ ಕೆಲಸವಾಗಿದೆ. ಪರಿಣಾಮಕಾರಿ ಜೆಜೆಎಂ ಅನುಷ್ಠಾನ, 14.84 ಲಕ್ಷ. ಗ್ರಾಮೀಣ ಮನೆಗಳಿಗೆ ನೀರು ಸಂಪರ್ಕ ಒದಗಿಸಲಾಗಿದೆ.

ಗ್ರಾಮೀಣ ಭಾಗದಲ್ಲಿ ಘನತ್ಯಾಜ್ಯ ನಿರ್ವಹಣೆ, ವಿಂಗಡನೆ ಹೇಗಿದೆ?

ಗ್ರಾಮೀಣ ಘನ ತ್ಯಾಜ್ಯ ನಿರ್ವಹಣೆಯನ್ನು ಗಂಭೀರವಾಗಿ ಪರಿಗಣಿಸಲಾಗಿದೆ, ಮಹಿಳಾ ಸ್ವಸಹಾಯ ಸಂಘಗಳಿಗೆ ತ್ಯಾಜ್ಯ ವಿಂಗಡಣೆ ಹಾಗೂ ವೈಜ್ಞಾನಿಕವಾಗಿ ಘನ ತ್ಯಾಜ್ಯ ವಿಲೇವಾರಿ ಮಾಡುವ ಹಂತದವರೆಗೆ ತರಬೇತಿಯನ್ನು ನೀಡಲಾಗಿದೆ. ಇದುವರೆಗೂ 18551 ಮಹಿಳೆಯರಿಗೆ ತರಬೇತಿ ನೀಡಲಾಗಿದ್ದು, 12237 ಮಹಿಳೆಯರು ಘನ ತ್ಯಾಜ್ಯ ನಿರ್ವಹಣೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದುವರೆಗೂ ಸ್ವ-ಸಹಾಯ ಸಂಘಗಳ 5209 ಮಹಿಳೆಯರಿಗೆ ವಾಹನ ಚಾಲನೆ ತರಬೇತಿ ನೀಡಲಾಗಿದ್ದು, 3514 ಮಹಿಳೆಯರು ಘನ ತ್ಯಾಜ್ಯ ವಿಲೇವಾರಿ ವಾಹನ ಚಾಲನೆ ಮಾಡುತ್ತಿದ್ದಾರೆ.

ಬದುಗಳ ನಿರ್ಮಾಣದ ಪ್ರಗತಿ ಹೇಗಿದೆ?

ಗ್ರಾಮೀಣ ಜನರ ಆಸ್ತಿಗಳಿಗೆ ರಕ್ಷಣೆ ಒದಗಿಸುವ ಇ -ಸ್ವತ್ತು ಯೋಜನೆ ಜಾರಿ, ತಾಂತ್ರಿಕ ಸುಧಾರಣಾ ಕ್ರಮಗಳೊಂದಿಗೆ ಇ ಸ್ವತ್ತು ವಿತರಣೆಗೆ ಕ್ರಮ ವಹಿಸಲಾಗುತ್ತಿದೆ. ಕೃಷಿ ಕವಚ ಯೋಜನೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಅಂತರ್ಜಲ ವೃದ್ಧಿಗಾಗಿ ಕ್ರಮ ವಹಿಸಲಾಗಿದೆ, 50,000 ಬದುಗಳ ನಿರ್ಮಾಣ ಗುರಿ, 17,930 ಬದುಗಳನ್ನು ನಿರ್ಮಿಸಲಾಗಿದೆ.

ಕಾಯಕ ಗ್ರಾಮದ ಉದ್ದೇಶ ಏನು?

ಗ್ರಾಮೀಣ ಆಸ್ತಿ ಮೌಲ್ಯೀಕರಣಕ್ಕೆ ಒತ್ತು ನೀಡಿದ ಪರಿಣಾಮವಾಗಿ, ಗ್ರಾಮ ಪಂಚಾಯತಿಗಳ ಸುಮಾರು 11 ಲಕ್ಷ ಆಸ್ತಿಗಳನ್ನು ಗುರುತಿಸಲಾಗಿದೆ. ಕಾಯಕ ಗ್ರಾಮ, ಪ್ರತಿ ಜಿಲ್ಲೆಯಲ್ಲಿನ ಹಿಂದುಳಿದ ಗ್ರಾಮಗಳನ್ನು ಆಯ್ಕೆ ಮಾಡಿ, ಅವುಗಳಲ್ಲಿ ಪರಿಣಾಮಕಾರಿ ಪ್ರಗತಿ ಕಂಡುಕೊಳ್ಳಲು ಕಾಯಕ ಗ್ರಾಮ ಯೋಜನೆಯಡಿಯಲ್ಲಿ ಅಧಿಕಾರಿಗಳಿಗೆ ಗ್ರಾಮಗಳನ್ನು ದತ್ತು ನೀಡುವ ಕಾರ್ಯಕ್ರಮ ರೂಪಿಸಲಾಗಿದೆ.

ದಿಗಂತದತ್ತ ಶಕ್ತಿ ಯೋಜನೆ

ಗ್ಯಾರಂಟಿ ಸರ್ಕಾರ 1 ಸಾವಿರ ದಿನ ಪೂರೈಸಿದ ಹಿನ್ನೆಲೆಯಲ್ಲಿ ಪಂಚ ಗ್ಯಾರಂಟಿಗಳಲ್ಲಿ ಒಂದಾದ ಶಕ್ತಿ ಯೋಜನೆಯ ಯಶೋಗಾಥೆಯ ಬಗ್ಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು, ಹೊಸ ದಿಗಂತ ಜತೆಗೆ ಮಾತನಾಡಿದ್ದು, ಇಲಾಖೆಯಲ್ಲಿ ಕೈಗೊಂಡ ದಿಟ್ಟಕ್ರಮಗಳನ್ನು ವಿವರಿಸಿದ್ದಾರೆ.

ಶಕ್ತಿಯೋಜನೆಯಿಂದ ಸರ್ಕಾರಕ್ಕೆ ಹೊರೆಯಾಗಿದೆಯೇ?

ಚುನಾವಣೆ ವೇಳೆ ನೀಡಿದ ಭರವಸೆಯಂತೆ ಜನಪರ ಆಡಳಿತ ನೀಡಿದ್ದೇವೆ. ಪಂಚ ಗ್ಯಾರಂಟಿಗಳಿಗೆ ಕೋಟಿಗಟ್ಟಲೆ ಫಲಾನುಭವಿಗಳು ಇದ್ದಾರೆ. 579 ಕೋಟಿ ಫಲಾನುಭವಿಗಳಿದ್ದಾರೆ, ಪ್ರತಿ ತಿಂಗಳು 1 ಕೋಟಿ 65 ಲಕ್ಷ ಮನೆಗಳಿಗೆ ಗೃಹಜ್ಯೋತಿ, 1 ಕೋಟಿ 24 ಲಕ್ಷ ಜನರಿಗೆ ಗೃಹಲಕ್ಷ್ಮೀ, 72 ಕೋಟಿ ಫಲಾನುಭವಿಗಳಿಗೆ ಅನ್ನಭಾಗ್ಯ ಯೋಜನೆ ಸೇರಿದಂತೆ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದೇವೆ. ವಿರೋಧ ಪಕ್ಷಗಳು ಏನೇ ಅಪಪ್ರಚಾರ ಮಾಡಿದರೂ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಬಿಜೆಪಿ ಅಧಿಕಾರದಲ್ಲಿ ಇದ್ದಾಗ ಸಾಲ ಮಾಡಿ ಹೋಗಿತ್ತು. ಹಣ ಇಲ್ಲದೇ 2 ಲಕ್ಷ 71 ಸಾವಿರ ಕೋಟಿ ರೂ. ಕಾಮಗಾರಿಗಳಿಗೆ ಅನುಮೋದನೆ ನೀಡಿದರು, 80 ಸಾವಿರ ಕೋಟಿ ರೂ. ಸಾಲ ಹೊರೆ ಮಾಡಿದರು, ಇದು ನಮ್ಮ ಸರ್ಕಾರಕ್ಕೆ ಆರ್ಥಿಕ ತೊಂದರೆಯಾಯಿತು. ಇದನ್ನೂ ಮೀರಿ ನಾವು ಅಭಿವೃದ್ಧಿ ಕಾರ್ಯಕೈಗೊಂಡಿದ್ದೇವೆ.

ಸಾರಿಗೆ ಇಲಾಖೆ ಪುನಶ್ಚೇತನಕ್ಕೆ ನೀವು ಕೈಗೊಂಡ ಕ್ರಮಗಳೇನು?

ಶಕ್ತಿ ಯೋಜನೆ ಪ್ರಾರಂಭದಲ್ಲಿ ನಮಗೆ ಬಸ್‌ಗಳ ಕೊರತೆ ಆಗಿತ್ತು, ನಂತರ 5,800 ಬಸ್ ಖರೀದಿಸಲಾಯಿತು. ಈಗ ಮತ್ತೆ 2,000 ಬಸ್ ಖರೀದಿಸಿದ್ದೇವೆ. ಬಿಜೆಪಿ ಅಧಿಕಾರದಲ್ಲಿ ಬಸ್‌ಗಳ ಖರೀದಿ ಆಗಿದಿಲ್ಲ, ಹೊಸ ನೇಮಕಾತಿಯೂ ಆಗಿದ್ದಿಲ್ಲ. ಈ ನಾವು 10,000 ನೇಮಕಾತಿ ಮಾಡಿದ್ದೇವೆ. ಇನ್ನೂ 2,000 ಬಸ್ ಖರೀದಿ ನಂತರ ಪ್ರಯಾಣಿಕರಿಗೆ ಹೆಚ್ಚಿನ ಬಸ್ ಸೇವೆ ಒದಗಿಸಲಾಗುವುದು. 679 ಕೋಟಿ ಮಹಿಳೆಯರು ಪ್ರಯಾಣಿಸಿದ್ದು, ಸರ್ಕಾರ 17,000ಕ್ಕೂ ಅಧಿಕ ಕೋಟಿ ರೂ. ಖರ್ಚು ಮಾಡಿದೆ.

ಸಾರಿಗೆ ನೌಕರರ ಕಲ್ಯಾಣಕ್ಕೆ ಸರ್ಕಾರದ ಕೊಡುಗೆ ಏನು?

ಸಾರಿಗೆ ಸಿಬ್ಬಂದಿ ಅಪಘಾತದಲ್ಲಿ ಮೃತರಾದರೆ 1 ಕೋಟಿ ಪರಿಹಾರ ನೀಡಲಿದ್ದೇವೆ, ಸೇವೆಯಲ್ಲಿ ಇದ್ದಾಗ ಮೃತರಾದರೆ ಪಿಂಚಣಿ ಜತೆಗ 10 ಲಕ್ಷ ನೀಡಿಲಿದ್ದೇವೆ, ಸಿಬ್ಬಂದಿಯ ಮಕ್ಕಳಿಗೆ ಸ್ಕಾಲರ್‌ಶಿಪ್ ಸೇರಿದಂತೆ ಸಿಬ್ಬಂದಿಯ ಕಲ್ಯಾಣಕ್ಕೆ ಅನೇಕ ಯೋಜನೆಗಳನ್ನು ತಂದಿದ್ದೇವೆ. ಅಪಘಾತದಲ್ಲಿ ಪ್ರಯಾಣಿಕರು ಮೃತರಾದರೆ ನಾವೇ 10 ಲಕ್ಷ ರೂ.ಪರಿಹಾರ ನೀಡುತ್ತೇವೆ. ಆದ್ಯತೆ ಮೇರೆಗೆ ನಿಗಮವಾರು ವರ್ಗಾವಣೆ ಕಲ್ಪಿಸಿದ್ದೇವೆ. 6 ಸಾವಿರ ಕೋಟಿ ಸಾಲ ಮಾಡಿ ಹೋದರು, ನಾವು ಸಿಬ್ಬಂದಿಗೆ 1ರಿಂದ 7 ನೇ ತಾರೀಖಿನೊಳಗಗಿ ಸಂಬಂಳ ನೀಡುತ್ತಿದ್ದೇವೆ.

ನಿಗಮಗಳಿಗೆ ಹೊಸ ಬಸ್ ಸಿಗಲಿದೆಯೇ?

ಸರ್ಕಾರ ಸಾಲದ ರೂಪದಲ್ಲಿ ನಮಗೆ 2,000 ಕೋಟಿ ರೂ. ನೀಡಿದೆ. ಸರ್ಕಾರವೇ ತೀರಿಸುತ್ತಿದೆ. 7900 ಬಸ್‌ಗಳ ಖರೀದಿಗೆ ಸರ್ಕಾರ ನೆರವು ನೀಡಿದೆ. ನಾನು ಬಂದ ಮೇಲೆ ನಿಗಮಗಳನ್ನು ಸ್ವಾಯತ್ತ ಸಂಸ್ಥೆಗಳನ್ನಾಗಿ ಮಾಡಲಾಯಿತು. ಮೊದಲು ನಿಗಮಗಳು ಕೆಎಸ್‌ಆರ್‌ಟಿಸಿ ಮೇಲೆ ಅವಲಂಬನೆಯಾಗಿತ್ತು. ಇಗ ಅವರ ಬಸ್‌ಗಳನ್ನು ಅವರೇ ಖರೀದಿ ಮಾಡಬೇಕಿರುವುದರಿಂದ ಎಲ್ಲಾ ನಿಗಮಗಳಿಗೂ ಹೊಸ ಬಸ್ ಸಿಗಲಿದೆ. ಕೆಎಸ್‌ಆರ್‌ಟಿಸಿ 70 ಬಸ್, ಕಲ್ಯಾಣ ಕರ್ನಾಟಕ 56 ಮತ್ತು ವಾಯುವ್ಯ 10 ಸೇರಿ ಒಟ್ಟು 156 ಹೊಸ ಬಸ್‌ಗಳು ಬರಲಿದ್ದು, ಅವು ದೂರ ಪ್ರಯಾಣಿಕ ಬಸ್ ಆಗಿವೆ.

ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ಸಾರಿಗೆ ಸಾಮರ್ಥ್ಯ ಹೇಗಿದೆ?

ಪ್ರಯಾಸೋದ್ಯಮಕ್ಕೆ ಪ್ಯಾಕೇಜ್ ಮೂಲಕ್ ಬಸ್ ಸೇವೆ ಒದಗಿಸಿದ್ದೇವೆ. ದೇಶದಲ್ಲೇ ನಮ್ಮದು ನಂ.1 ಸಾರಿಗೆಯಾಗಿದೆ. ನಮ್ಮದೆ 26 ಸಾವಿರ ಬಸ್‌ಗಳು ಇವೆ. ನಮ್ಮಲ್ಲಿರುವ ತಂತ್ರಜ್ಞಾನ, ಐಷಾರಾಮಿ ಬಸ್‌ಗಳು ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ಬಸ್‌ಗಳು ಅತ್ಯುತ್ತಮವಾಗಿವೆ. ಹಲವಾರು ಪ್ರಶಸ್ತಿಗಳು ಬಂದಿವೆ. ಬಿಎಂಟಿಸಿಗೆ 4,500 ಇವಿ ಬಸ್‌ಗಳ ಬೇಡಿಕೆ ಇದೆ. ಬೇರೆ ನಿಗಮಗಳಿಗೆ 7,500 ಬಸ್‌ಗಳ ಬೇಡಿಕೆ ಇದೆ ಇವುಗಳ ಆದಷ್ಟು ಬೇಗ ಇಲಾಖೆಗೆ ಸೇಪರ್ಡೆಯಾಗಲಿವೆ.



- ಕ್ರಾಂತಿಕಾರಕ ಮಾದರಿಯ 300 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಪ್ರಾರಂಭಿಸಲಾಗುತ್ತಿದೆ.
- ಪ್ರೊ.ಸುಖದೇವ್ ಥೋರಟ್ ಸಮಿತಿಯ ವರದಿಯನ್ನು ಅನುಷ್ಠಾನಗೊಳಿಸುವ ಪ್ರಕ್ರಿಯೆ ಆರಂಭವಾಗಿದೆ.
- ಬೆಂಗಳೂರು, ಮೈಸೂರು ಸೇರಿದಂತೆ ಹತ್ತಕ್ಕೂ ಹೆಚ್ಚು ನಗರಗಳು 'ಹೆಲ್ತ್ ಹಬ್'ಗಳಾಗಿ ರೂಪುಗೊಳ್ಳುತ್ತಿವೆ.

ಬಡವರಿಗೆ ಗ್ಯಾರಂಟಿ ಸಹಕಾರಿ

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಗ್ಯಾರಂಟಿ ಯೋಜನೆಗಳು ನಾಡಿನ ಬಡವರಿಗೆ ಹೆಚ್ಚೆಚ್ಚು ಅನುಕೂಲವಾಗಿದೆ. ಸ್ವಾವಲಂಬಿ ಬದುಕಿಗೆ ನಾಂದಿಯಾಗಿವೆ. ಗ್ಯಾರಂಟಿ ಅನ್ನುವುದು ಬಡಜನರ ಬದುಕು ಎಂಬಂತಾಗಿದೆ. ಗ್ಯಾರಂಟಿ ಯೋಜನೆಗಳ ಬಗ್ಗೆ ಟೀಕೆ ಟಿಪ್ಪಣಿಗಳು ಏನೇ ಇರಲಿ, ಇಂದು ಬೇರೆ ರಾಜ್ಯಗಳ ಬೇರೆ ಪಕ್ಷಗಳೇ ಈ ಯೋಜನೆಗಳನ್ನು ಅನುಷ್ಠಾನಗೊಳಿಸಿಕೊಂಡಿವೆ. ಈ ಗ್ಯಾರಂಟಿಗಳ ಕುರಿತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಸಂದರ್ಶನವಿದು.

ನಿಮ್ಮ ಸರ್ಕಾರದ ಗ್ಯಾರಂಟಿಗಳಿಂದ ಜನರ ಬದುಕು ಹೇಗೆ ಹಸನಾಗಿದೆ?

ನಮ್ಮ ಸರ್ಕಾರದ ಗ್ಯಾರಂಟಿಗಳು ಕೇವಲ ಘೋಷಣೆಗಳಲ್ಲ, ಜನಜೀವನಕ್ಕೆ ನೇರವಾಗಿ ತಲುಪಿದ ಆರ್ಥಿಕ ಭದ್ರತೆ, ಶಕ್ತಿ, ಗೃಹಲಕ್ಷ್ಮಿ, ಅನ್ನಭಾಗ್ಯ ಮುಂತಾದ ಉಳಿದಿದೆ, ಕುಟುಂಬದ ಖರ್ಚು ಕಡಿಮೆಯಾಗಿದೆ. ಗ್ರಾಮೀಣ ಮತ್ತು ನಗರ ಬಡ ಕುಟುಂಬಗಳಿಗೆ ಇದು ನಿಜವಾದ ನೆಮ್ಮದಿಯಾಗಿದೆ. ಜನರು ಸರ್ಕಾರ ನಮ್ಮ ಜೊತೆ ಇದೆ ಎಂಬ ಭರವಸೆ ಹೊಂದಿದ್ದಾರೆ. ಅದೇ ನಮ್ಮ ಯಶಸ್ಸು. ಗ್ಯಾರಂಟಿ ಯೋಜನೆ ಅನುಷ್ಠಾನವಾದಾಗಿನಿಂದ ರಾಜ್ಯದ ಕಟ್ಟಕಡೆಯವರಿಗೂ ಯೋಜನೆಯ ಲಾಭ ತಲುಪುತ್ತಿದೆ.

ಶಕ್ತಿ ಯೋಜನೆ ಆರಂಭವಾದಾಗ ಆಪಾದನೆಗಳು ಬಂದಿದ್ದವು?

ಯಾವುದೇ ದೊಡ್ಡ ಜನಪರ ಯೋಜನೆ ಆರಂಭವಾದಾಗ ಕೆಲವರು ಅನುಮಾನ ವ್ಯಕ್ತಪಡಿಸುವುದು ಸಹಜ. ಆದರೆ ಶಕ್ತಿ ಯೋಜನೆ ಇಂದು ಮಹಿಳೆಯರ ಸ್ವಾವಲಂಬನೆಯ ಸಂಕೇತವಾಗಿದೆ. ಲಕ್ಷಾಂತರ ಮಹಿಳೆಯರು ಉಚಿತ ಪ್ರಯಾಣದ ಸೌಲಭ್ಯದಿಂದ ಉದ್ಯೋಗ, ಶಿಕ್ಷಣ, ಆರೋಗ್ಯ ಸೇವೆಗಳತ್ತ ಸುಲಭವಾಗಿ ಹೋಗುತ್ತಿದ್ದಾರೆ.

ಗೃಹಲಕ್ಷ್ಮಿ ಯೋಜನೆಯಲ್ಲಿ ಬಹಳಷ್ಟು ಜನರಿಗೆ ಅನುಕೂಲವಾಗಿದೆ. ಆದಾಗ್ಯೂ ನಮಗೆ ಹಣ ಬಂದಿಲ್ಲ ಅಂತಿದ್ದಾರಲ್ಲ?

ಗೃಹಲಕ್ಷ್ಮಿ ಯೋಜನೆಯಡಿ ಕೋಟ್ಯಂತರ ಮಹಿಳೆಯರ ಖಾತೆಗೆ ನೇರವಾಗಿ ಹಣ ಜಮೆಯಾಗುತ್ತಿದೆ. ಕೆಲವೆಡೆ ಬ್ಯಾಂಕ್ ತಾಂತ್ರಿಕ ಸಮಸ್ಯೆ, ದಾಖಲೆ ತೊಂದರೆ ಅಥವಾ ಖಾತೆ ಲಿಂಕ್ ಆಗದಿರುವುದು ಕಾರಣವಾಗಿರಬಹುದು. ಅಂತಹ ಎಲ್ಲ ಸಮಸ್ಯೆಗಳನ್ನು ಪರಿಹರಿಸಲು ನಾವು ವಿಶೇಷ ಶಿಬಿರಗಳನ್ನು ನಡೆಸುತ್ತಿದ್ದೇವೆ.

ಈ ಗ್ಯಾರಂಟಿಗಳೇ ಕಾಂಗ್ರೆಸ್‌ಗೆ ಶ್ರೀ ರಕ್ಷೆ?

ಗ್ಯಾರಂಟಿಗಳು ಯಾವ ಪಕ್ಷದ ರಕ್ಷಣೆಗಾಗಿ ಅಲ್ಲ ? ಜನರ ರಕ್ಷೆಗಾಗಿ, ಜನರು ಅನುಭವಿಸುತ್ತಿರುವ ಲಾಭವೇ ನಮ್ಮ ಶಕ್ತಿ, ಜನರ ವಿಶ್ವಾಸವೇ ನಮ್ಮ ದೊಡ್ಡ ಶ್ರೀರಕ್ಷೆ. ನಾವು ಕೆಲಸ ಮಾಡುತ್ತಿದ್ದೇವೆ.

ಈ ಯೋಜನೆಗಳು ಮುಂದೆಯೂ ಮುಂದುವರೆಯುತ್ತವೆಯೇ?

ಖಂಡಿತ. ಈ ಯೋಜನೆಗಳು ತಾತ್ಕಾಲಿಕವಲ್ಲ, ಸಾಮಾಜಿಕ ಭದ್ರತಾ ವ್ಯವಸ್ಥೆಯ ಭಾಗ, ಸರ್ಕಾರ ತನ್ನ ಆರ್ಥಿಕ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿರ್ವಹಿಸುತ್ತಾ, ಜನಪರ ಯೋಜನೆಗಳನ್ನು ಮುಂದುವರಿಸುತ್ತದೆ.



- ಜನರ ಮನೆಬಾಗಿಲಿಗೇ ತೆರಳಿ ಆರೋಗ್ಯ ತಪಾಸಣೆ ಮಾಡುವ ನೂತನ ಕಾರ್ಯಕ್ರಮ ಜಾರಿ.
- ಆಹಾರ ಕಲಬೆರಕೆ ವಿರುದ್ಧ ಕಠಿಣ ಸಮರ ಸಾರಲಾಗಿದ್ದು, ಕ್ರಿಮಿನಲ್ ಕೃತ್ಯವೆಂದು ಪರಿಗಣಿಸಲಾಗಿದೆ.
- ರೈತರಿಗೆ ಹೆಚ್ಚುವರಿ ಬಿತ್ತನೆ ಬೀಜ ಮತ್ತು ರಸಗೊಬ್ಬರಕ್ಕಾಗಿ 2,000 ಕೋಟಿ ರೂ. ಸಹಾಯಧನ
- ಹಗಲು ವೇಳೆಯಲ್ಲಿ ರೈತರಿಗೆ 7 ಗಂಟೆಗಳ ನಿರಂತರ ವಿದ್ಯುತ್ ನೀಡಲು ಕ್ರಮ.
- ರಾಜ್ಯದ 227 ಸ್ಥಳೀಯ ಸಂಸ್ಥೆಗಳಲ್ಲಿ 9,574 ಕೋಟಿ ರೂ. ವೆಚ್ಚದಲ್ಲಿ ಕುಡಿಯುವ ನೀರಿನ ಯೋಜನೆ
- ಕಟ್ಟಡ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕಾಗಿ 42 ವಸತಿ ಶಾಲೆಗಳ ಸ್ಥಾಪನೆ.
- ದೇವಸ್ಥಾನದ ಅರ್ಚಕರ ತಸ್ತೀಕ್ ಮತ್ತು ಗೌರವ ಧನವನ್ನು 60,000 ರೂ.ನಿಂದ 72,000 ರೂ.ಏರಿಕೆ
- ಸುಮಾರು 8.5 ಲಕ್ಷ ಮಕ್ಕಳು ವಸತಿ ಶಾಲೆ ಹಾಗೂ ವಿದ್ಯಾರ್ಥಿ ನಿಲಯಗಳಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ.
- ಮಹಿಳಾ ಕಾರ್ಮಿಕರಿಗೆ ವಾರ್ಷಿಕವಾಗಿ 12 ದಿನಗಳ ವೇತನ ಸಹಿತ ಋತುಚಕ್ರರಜೆ ನೀಡುವ ಕ್ರಾಂತಿಕಾರಕ ನಿರ್ಧಾರ.
- ಅಕ್ಕ ಕಾರ್ಯಪಡೆಗಳ ಮೂಲಕ 25ಕ್ಕೂ ಹೆಚ್ಚು ಆರ್ಥಿಕ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ.

ಪ್ರಾಚೀನ ವೈಜ್ಞಾನಿಕ ಮನೋಭಾವದ ಪ್ರತಿಬಿಂಬ

• **ಕೊಯಮತ್ತೂರು:** ಭಾರತದ ಬಾಹ್ಯಾಕಾಶ ಕಾರ್ಯಾಚರಣೆಗಳಾದ ಚಂದ್ರಯಾನ ಮತ್ತು ಆದಿತ್ಯ-ಎಲ್ 1 ರಾಷ್ಟ್ರದ ಪ್ರಾಚೀನ ವೈಜ್ಞಾನಿಕ ಪರಂಪರೆಯ ಆಧುನಿಕ ಅಭಿವ್ಯಕ್ತಿಗಳನ್ನು ಪ್ರತಿನಿಧಿಸುತ್ತವೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ.


ಈಶಾ ಯೋಗ ಕೇಂದ್ರದಲ್ಲಿ ಭಾನುವಾರ ನಡೆದ ಮಹಾ ಶಿವರಾತ್ರಿ ಆಚರಣೆಯಲ್ಲಿ ಮಾತನಾಡಿದ ಅವರು, ಈ ತಾಂತ್ರಿಕ ಸಾಧನೆಗಳ ಮೂಲ ಭಾರತದ ಸಾಂಸ್ಕೃತಿಕ ಅಸ್ಮಿತೆಯಲ್ಲಿದೆ. ಭಾರತ ಚಂದ್ರಯಾನ, ಮಂಗಳಯಾನ ಮತ್ತು ಆದಿತ್ಯ-ಎಲ್1ನಂತಹ ಕಾರ್ಯಾಚರಣೆಗಳನ್ನು ಪ್ರಾರಂಭಿಸಿದಾಗ, ಇದು ಕೇವಲ ತಾಂತ್ರಿಕ ಸಾಧನೆಯಲ್ಲ, ಇದು ನಮ್ಮ ಸಾಂಸ್ಕೃತಿಕ ಗುರುತಿನ ಭಾಗವಾಗಿರುವ ಪ್ರಾಚೀನ ಜ್ಞಾನದ ಆಧುನಿಕ ಅಭಿವ್ಯಕ್ತಿ ಎಂದರು.

ಸೂರ್ಯ ಮತ್ತು ಚಂದ್ರರು ಭಾರತದ ಪಂಚಾಂಗ ಮತ್ತು ಹಬ್ಬಗಳ ಅವಿಭಾಜ್ಯ ಅಂಗಗಳು ಎಂದ ಅವರು, ನಮ್ಮ ಉಪವಾಸಗಳು, ಹಬ್ಬಗಳು ಮತ್ತು ಶುಭ ಸಮಯಗಳನ್ನು ನಿಖರವಾದ ವೈಜ್ಞಾನಿಕ ಲೆಕ್ಕಾಚಾರಗಳ ಮೂಲಕ ನಿರ್ಧರಿಸಲಾಗುತ್ತದೆ. ಈಗ ಸಂಪ್ರದಾಯ ಮತ್ತು ತಂತ್ರಜ್ಞಾನ ಒಟ್ಟಾಗಿ ಮುಂದುವರಿಯುತ್ತಿವೆ ಎಂದರು. ನಿಜವಾದ ರಾಷ್ಟ್ರೀಯ ಭದ್ರತೆ, ದೈಹಿಕ ಶಕ್ತಿಯ ಬದಲು ಆಧ್ಯಾತ್ಮಿಕ ಮೂಲದಿಂದ ಬರುತ್ತದೆ. ನಿಜವಾದ ಭದ್ರತೆ ಕೇವಲ ಬಾಹ್ಯ ಶಕ್ತಿಯಿಂದಲ್ಲ, ಬಲವಾದ ರಾಷ್ಟ್ರೀಯ ಪ್ರಜ್ಞೆಯಿಂದ ಬರುತ್ತದೆ ಎಂದು ಹೇಳಿದ ಅವರು, ನಿರ್ಭೀತ ಸಮಾಜ ಮಾತ್ರ ಬಲವಾದ ರಾಷ್ಟ್ರವನ್ನು ನಿರ್ಮಿಸಬಹುದು ಎಂದು ಹೇಳಿದರು. ಭಗವಂತ ಶಿವನಿಂದ ಸ್ಫೂರ್ತಿ ಪಡೆದು ಮಾನವೀಯ ನೆರವು ಮತ್ತು ಅಗತ್ಯ ನಿರ್ಣಾಯಕ ಕ್ರಮಗಳೆರಡನ್ನೂ ಸಾಧ್ಯವಾಗಿಸಿದ ಸಶಸ್ತ್ರ ಪಡೆಗಳನ್ನು ಶ್ಲಾಘಿಸಿದರು. ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಕೂಡ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸಾಧಕರಿಗೆ ಭವ್ಯ ಭಾರತ ಭೂಷಣ ಪ್ರಶಸ್ತಿ ಪ್ರದಾನ

ಕೊಯಮತ್ತೂರಿನ ಈಶಾ ಯೋಗ ಕೇಂದ್ರದಲ್ಲಿ ನಡೆದ ಮಹಾಶಿವರಾತ್ರಿ ಆಚರಣೆಯ ಸಂದರ್ಭದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಭವ್ಯ ಭಾರತ ಭೂಷಣ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು. ಪುರಸ್ಕೃತರಲ್ಲಿ ಇಸ್ರೋ ವಿಜ್ಞಾನಿಗಳಾದ ನಂಬಿ ನಾರಾಯಣ್ ಮತ್ತು ಕಿರಣ್ ಕುಮಾರ್, ನರ್ತಕಿ ಅಲರ್ಮೆಲ್ ವಳ್ಳಿ, ಪಿಟೀಲು ವಾದಕ ಎನ್. ರಾಜಮ್, ಇತಿಹಾಸಕಾರ ವಿಕ್ರಮ್ ಸಂಪತ್ ಮತ್ತು ಬ್ಯಾಡ್ಮಿಂಟನ್ ಚಾಂಪಿಯನ್ ಸೈನಾ ನೆಹ್ವಾಲ್ ಸೇರಿದ್ದಾರೆ. ಮೂರು ಸಶಸ್ತ್ರ ಪಡೆಗಳ ಕಮಾಂಡ್‌ಗಳು ಆಪರೇಷನ್ ಸಿಂದೂರ್‌ನ ಯಶಸ್ಸಿಗೆ ವಿಶೇಷ ಮನ್ನಣೆ ಪಡೆದಿವೆ.

ರಾಮ ಬಾಣ



22 ಸಾವಿರಕ್ಕೂ ಹೆಚ್ಚು ರೈತರಿಗೆ ಪಿಎಂ-ಕಿಸಾನ್ ಹಣ ಬಿಡುಗಡೆ

• **ಬೆಂಗಳೂರು:** ಕರ್ನಾಟಕದ ಸಾವಿರಾರು ರೈತರಿಗೆ ಪಿಎಂ - ಕಿಸಾನ್ ಯೋಜನೆಯಡಿ ಬಾಕಿ ಉಳಿದಿದ್ದ ಹಣವನ್ನು ಬಿಡುಗಡೆ ಮಾಡುವಂತೆ ಕೃಷಿ ಸಚಿವ ಚಲುವರಾಯಸ್ವಾಮಿ ಸಲ್ಲಿಸಿದ್ದ ಮನವಿಗೆ ಕೇಂದ್ರ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಿದ್ದು, 22 ಸಾವಿರಕ್ಕೂ ಹೆಚ್ಚು ರೈತರಿಗೆ ಪಿಎಂ-ಕಿಸಾನ್ ಹಣ ಬಿಡುಗಡೆ ಮಾಡಿದೆ.

ರಾಜ್ಯ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅವರು 2025ರ ಡಿ.17 ರಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಪತ್ರ ಬರೆದು, ತಾಂತ್ರಿಕ ಕಾರಣಗಳಿಂದ ರಾಜ್ಯದ ಸುಮಾರು 30 ಸಾವಿರಕ್ಕೂ ಹೆಚ್ಚು ಅರ್ಹ ರೈತರು ಯೋಜನೆಯ ಲಾಭದಿಂದ ವಂಚಿತರಾಗುತ್ತಿರುವುದನ್ನು ಗಮನಕ್ಕೆ ತಂದಿದ್ದರು.

ಇದಕ್ಕೆ ಪೂರಕವಾಗಿ ಸ್ಪಂದಿಸಿರುವ ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್, ರಾಜ್ಯ ಸರ್ಕಾರ ನೀಡಿರುವ ದೃಢೀಕರಣದ ಆಧಾರದ ಮೇಲೆ ಈಗಾಗಲೇ 22 ಸಾವಿರಕ್ಕೂ ಹೆಚ್ಚು ಫಲಾನುಭವಿಗಳನ್ನು 22ನೇ ಕಂತಿನ ಪಾವತಿ ಪಟ್ಟಿಯಲ್ಲಿ ಸೇರಿಸಲಾಗಿದ್ದು, ಶೀಘ್ರದಲ್ಲೇ ಅವರಿಗೆ ಹಣ ಬಿಡುಗಡೆಯಾಗಲಿದೆ ಎಂದು ತಿಳಿಸಿದ್ದರು. ಈ ಬೆಳವಣಿಗೆಯ ಕುರಿತು ಪ್ರತಿಕ್ರಿಯಿಸಿರುವ ಸಚಿವ ಎನ್. ಚಲುವರಾಯಸ್ವಾಮಿ, ರಾಜ್ಯದ ರೈತರ ಹಿತದೃಷ್ಟಿಯಿಂದ ನಾವು ಸಲ್ಲಿಸಿದ ಮನವಿಯನ್ನು ಪುರಸ್ಕರಿಸಿ, ತಾಂತ್ರಿಕ ಅಡೆತಡೆಗಳನ್ನು ನಿವಾರಿಸಿ ರೈತರಿಗೆ ನ್ಯಾಯ ಒದಗಿಸಿದ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ರಾಜ್ಯ ಸರ್ಕಾರದ ಪರವಾಗಿ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದು ತಿಳಿಸಿದ್ದಾರೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

ಕಾಂಗ್ರೆಸ್ಸಿಗರೇ ನಿಜವಾದ ಹಿಂದುಗಳು, ಬಿಜೆಪಿಯವರು ಹಿಂದುತ್ವವಾದಿಗಳು
– ರಾಮಲಿಂಗಾರೆಡ್ಡಿ
– ಹಿಂದುತ್ವ ವಿರೋಧಿಗಳು ನಿಜವಾದ ಹಿಂದುಗಳಾಗಲು ಸಾಧ್ಯವೆ?

ದಿನ ಭವಿಷ್ಯ

ಮೇಷ
ಹಣಕಾಸು ಸ್ಥಿತಿ ಅಷ್ಟೇನೂ ಪೂರಕವಲ್ಲ. ಕ್ಲಿಷ್ಟ ಪರಿಸ್ಥಿತಿಯಲ್ಲಿ ದುಡುಕಿನ ನಿರ್ಧಾರ ತಾಳದಿರಿ. ಸಂಯಮದ ನಡೆಯಿರಲಿ.

ವೃಷಭ
ಪ್ರತಿಯೊಂದನ್ನೂ ಸ್ಪಷ್ಟ ಮಸ್ತಿಷ್ಕದೊಂದಿಗೆ ನಿಭಾಯಿಸಿ. ಗೊಂದಲಕ್ಕೆ ಅವಕಾಶ ಕೊಡಬೇಡಿ. ಚಂಚಲ ನಿಲುವು ಒಳ್ಳೆಯ ಫಲ ತರಲಾರದು.

ಮಿಥುನ
ಆಪ್ತರ ಜತೆ ವ್ಯವಹರಿಸುವಲ್ಲಿ ನಿಮ್ಮ ಅಹಂ ಸಮಸ್ಯೆ ತರುತ್ತದೆ. ಅವರ ಬಗ್ಗೆ ಸೂಕ್ತ ಸ್ಪಂದನೆ ಇರಲಿ. ಸಣ್ಣ ಮಾತಿಗೂ ಜಗಳಕ್ಕೆ ಇಳಿಯಬೇಡಿ.

ಕಟಕ
ಮನೆಯವರಿಗೆ ಸಂಬಂಧಿಸಿ ಏನೋ ಚಿಂತೆ ಕಾಡುತ್ತದೆ. ಆ ಬಗ್ಗೆ ನಿಮ್ಮಲ್ಲೇ ಗೊಂದಲವಿದೆ. ಮೊದಲು ಖಚಿತ ನಿಲುವು ತಾಳಿ. ಆರ್ಥಿಕ ಹಿನ್ನಡೆ.

ಸಿಂಹ
ಅದೃಷ್ಟ ಇಂದು ನಿಮ್ಮ ಜತೆಗಿಲ್ಲ. ಯಾವುದಾದರೂ ಯೋಜನೆ ಇದ್ದಲ್ಲಿ ಮುಂದೂಡಿ. ಖರೀದಿ ಹುಮ್ಮಸ್ಸು ಜೇಬಿಗೆ ದೊಡ್ಡ ಕತ್ತರಿ ಹಾಕಬಹುದು.

ಕನ್ಯಾ
ಹೃದಯದ ಭಾವನೆ ಮುಚ್ಚಿಡಬೇಡಿ. ಸಂಬಂಧಿಸಿದವರ ಮುಂದೆ ತೆರೆದಿಡಿ. ಆರ್ಥಿಕ ಪರಿಸ್ಥಿತಿ ಉತ್ತಮ. ಬಂಧುವೊಬ್ಬರ ಆರೋಗ್ಯ ಕೆಡಬಹುದು.

ತುಲಾ
ಏರುಪೇರಿನ ದಿನ. ಸಂವಹನದ ಕೊರತೆ. ಕೆಲಸದಲ್ಲಿ ವಿಳಂಬ. ಶೀತ, ನೆಗಡಿಯ ಸಮಸ್ಯೆ ಕಾಣಿಸಿಕೊಳ್ಳಬಹುದು. ವೃತ್ತಿ ಒತ್ತಡ ಅಧಿಕ.

ವೃಶ್ಚಿಕ
ಮಾನಸಿಕ ತಾಕಲಾಟ. ಕೆಲಸದ ಮೇಲೆ ವಿಶ್ವಾಸವೆ ನಿಲ್ಲದು. ನಿಮ್ಮ ನಿಲುವಿನಲ್ಲಿ ದೊಡ್ಡ ಬದಲಾವಣೆ ಅಳವಡಿಸಬೇಡಿ. ಇರುವ ಸ್ಥಿತಿ ಮುಂದುವರಿಸಿ.

ಧನು
ಇಂದು ಕೆಲಸದಲ್ಲಿ ಉದಾಸೀನತೆ. ಆಪ್ತರು ಮತ್ತು ಮನೆಯ ಸುತ್ತಲೇ ಮನಸ್ಸು ತಿರುಗುತ್ತಿರುತ್ತದೆ. ಕಾನೂನು ತೊಡಕಿದ್ದರೆ ಪ್ರತಿಕೂಲ ಬೆಳವಣಿಗೆ.

ಮಕರ
ಅಸಂತೃಪ್ತಿ. ಇನ್ನೂ ಗಳಿಸಬೇಕೆಂಬ ಹಪಾಹಪಿ. ಆದರೆ ಆ ನಿಟ್ಟಿನಲ್ಲಿ ಪ್ರಯತ್ನ ವಿಫಲ. ಇದು ಇಂದಿನ ನಿಮ್ಮ ಗ್ರಹಗತಿ. ಕೌಟುಂಬಿಕ ಅಸಹಕಾರ.

ಕುಂಭ
ನಿಮ್ಮ ಸುತ್ತಲೂ ಕೋಲಾಹಲ ಪರಿಸ್ಥಿತಿ ಉಂಟಾದೀತು. ನೀವಂತೂ ಸಹನೆಯಿಂದ ಇರಿ. ದುಡುಕಿನಿಂದ ಪ್ರತಿಕ್ರಿಯೆ ತೋರಬೇಡಿ.

ಮೀನ
ಸಮಸ್ಯೆ ಪರಿಹಾರದ ದಾರಿ ತೋರಲಿದೆ. ಆದರೆ ನಿಮ್ಮ ನಿಲುವಿನಲ್ಲಿ ಸ್ಪಷ್ಟತೆ ಇರಲಿ.ಇತರರ ಸಲಹೆಗೆ ಮನಸ್ಸು ತೆರೆದಿರಲಿ. ಕೌಟುಂಬಿಕ ವಾಗ್ವಾದ.

ರಾಹುಕಾಲ: 3.00– 4.30
ಗುಳಿಕಕಾಲ: 12.00–1.30

ಅದೃಷ್ಟ ಸಂಖ್ಯೆ: 7,0,5,1

ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಬಣ್ಣನೆ

ಎಲ್ಲರಲ್ಲೂ ಶಿವನು ಜೀವಂತ

• **ಕೊಯಂಬತ್ತೂರು/ಬೆಂಗಳೂರು:** ಮಾನವ ಕುಲವು ಒತ್ತಡ, ಆತಂಕ ಮತ್ತು ಆಂತರಿಕ ಅಶಾಂತಿಯ ಮೂಲಕ ಸಾಗುತ್ತಿರುವಾಗ, ಶಿವನ ಪ್ರಸ್ತುತತೆ ಇನ್ನಷ್ಟು ಗಹನವಾಗುತ್ತದೆ. ಶಿವನು ಒಂದು ಜೀವಂತ ಸಾಧ್ಯತೆ, ಅವ್ಯವಸ್ಥೆಯ ನಡುವೆಯೂ ಸಮತೋಲನವನ್ನು ಹೇಗೆ ಕಾಪಾಡಿಕೊಳ್ಳಬೇಕು ಎಂಬುದನ್ನು ತೋರಿಸುವ ಸಾಧ್ಯತೆ ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದರು.

ಕೊಯಂಬತ್ತೂರಿನ ಈಶ ಯೋಗ ಕೇಂದ್ರದಲ್ಲಿ ನಡೆದ ನವರಾತ್ರಿ ಸಮಾರಂಭದಲ್ಲಿ ಮಾತನಾಡಿದ ಅವರು, ನಾನು ಅನುಭವಿಸುತ್ತಿರುವ ದೈವತ್ವವು, ಯಾರೂ ಹೇಳದಿದ್ದರೂ ಸಹ ಈ ಸ್ಥಳವು ದೇವ ದೇವ ಮಹಾದೇವನ ಅನುಗ್ರಹಕ್ಕೆ ಪಾತ್ರವಾಗಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಶಿವನು ಸಂಪೂರ್ಣ ಆಂತರಿಕ ಶಾಂತಿಯನ್ನು ಮತ್ತು ಅದೇ ಸಮಯದಲ್ಲಿ ಕ್ರಿಯಾಶೀಲತೆ ಮತ್ತು ರೂಪಾಂತರವನ್ನು ಸಂಕೇತಿಸುತ್ತಾನೆ. ಆಧ್ಯಾತ್ಮಿಕತೆ ಎಂಬುದು ಜೀವನವನ್ನು ಹೆಚ್ಚು ಪರಿಣಾಮಕಾರಿ ಮತ್ತು ಸಮತೋಲನಗೊಳಿಸುವ ಒಂದು ವಿಜ್ಞಾನ ಎಂದು ತೋರಿಸಿಕೊಡುವ ಮೂಲಕ ಸದ್ಗುರುಗಳು ಮಹಾಶಿವರಾತ್ರಿಯನ್ನು ಒಂದು ಅಂತರಾಷ್ಟ್ರೀಯ ಆಧ್ಯಾತ್ಮಿಕ ಸಂಭ್ರಮಾಚರಣೆಯನ್ನಾಗಿ ಮಾಡಿದ್ದಾರೆ ಎಂದು ಅವರು ಹೇಳಿದರು.

ಈಶ ಫೌಂಡೇಶನ್ ಜಗ್ಗಿ ವಾಸುದೇವ್ ಮಾತನಾಡಿ, ಆದಿಯೋಗಿ ಕೇವಲ ಭೂತಕಾಲಕ್ಕೆ ಸೇರಿದವನಲ್ಲ. ಆದಿಯೋಗಿ ಭವಿಷ್ಯತ್ತಿಗೆ ಸೇರಿದವನು, ಏಕೆಂದರೆ ಅವನು ನೀಡಿರುವುದು ನಂಬಿಕೆಯ ಕಟ್ಟುಪಾಡುಗಳು, ತತ್ವಶಾಸ್ತ್ರಗಳು, ಸಿದ್ಧಾಂತಗಳು, ಬೋಧನೆಗಳನ್ನಲ್ಲ ಬದಲಾಗಿ ಆನಂದ ಮಯ ಜೀವನಕ್ಕೆ ಸಾಧನಗಳನ್ನು ನೀಡಿದ್ದಾನೆ ಎಂದು ತಿಳಿಸಿದ್ದಾರೆ.

ಭವ್ಯ ಭಾರತವನ್ನು ನಿರ್ಮಿಸಲು ಕೊಡುಗೆ ನೀಡಿದ ಮತ್ತು ನೀಡುತ್ತಿರುವವರನ್ನು ಗುರುತಿಸಿ ಭವ್ಯ ಭಾರತ ಭೂಷಣ್ ಪ್ರಶಸ್ತಿ ನೀಡಲಾಯಿತು. ಈ ಶಿವರಾತ್ರಿಯಿಂದ ಆರಂಭವಾದ ಈ ಪ್ರಶಸ್ತಿಯನ್ನು ವಿವಿಧ ಕ್ಷೇತ್ರದ 10 ಜನರಿಗೆ ಪ್ರದಾನ ಮಾಡಲಾಯಿತು. ಈಶ ಮಹಾಶಿವರಾತ್ರಿಯು ಪ್ರಪಂಚದಾದ್ಯಂತ 25 ಭಾಷೆಗಳಲ್ಲಿ ಪ್ರಸಾರವಾಗಿದ್ದು, 200ಕ್ಕೂ ಹೆಚ್ಚು ಟಿವಿ ಚಾನೆಲ್ ಗಳು ಹಾಗೂ ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳಲ್ಲಿ ನೇರಪ್ರಸಾರ ಮಾಡಲಾಗಿತ್ತು. ದೇಶದಾದ್ಯಂತದ ಹಲವಾರು ಪ್ರಮುಖ ಗಣ್ಯರು, ಆಧ್ಯಾತ್ಮಿಕ ನಾಯಕರು, ರಾಜಕೀಯ ಗಣ್ಯರು ಹಾಗೂ ಕ್ರೀಡಾಪಟುಗಳು, ಉದ್ಯಮದ ಪ್ರಮುಖರು, ನಟರು, ಗಾಯಕರು ಮತ್ತು ಕಲಾವಿದರು ಸೇರಿದಂತೆ ಲಕ್ಷಾಂತರ ಜನರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



9 ನ್ಯಾಯಮೂರ್ತಿಗಳ ಪೀಠ ರಚನೆ

ಪುಟ 0 ➡ ಈ ಮೂಲಕ ಸಮರ್ಥನೀಯತೆ ಅಥವಾ ಸಾಧ್ಯಾಸಾಧ್ಯತೆ ವಿಚಾರ ಅಂತಿಮಗೊಂಡಿದ್ದು, ನ್ಯಾಯಾಲಯಕ್ಕಿನ್ನು ಈ ವಿಚಾರವಾಗಿ ತಡೆಯಾಗದು ಎಂದು ಸುಪ್ರೀಂಕೋರ್ಟ್ ತನ್ನ ಈಚಿನ ಆದೇಶದಲ್ಲಿ ಹೇಳಿದೆ.

ವಿಚಾರಣಾ ದಿನಾಂಕಗಳು: ಮೇಲ್ಮನವಿ ದಾರರು ಮತ್ತು ಇದನ್ನು ಬೆಂಬಲಿಸುವವರ ಮೇಲ್ಮನವಿಗಳ ವಿಚಾರಣೆ ಏ.7ರಿಂದ 9ರವರೆಗೆ ನಡೆಯಲಿದೆ. ಮೂಲ ಮೇಲ್ಮನವಿ ಸಲ್ಲಿಸಿದವರು ಮತ್ತು ಇದನ್ನು ವಿರೋಧಿಸುವವರ ದೂರುಗಳ ವಿಚಾರಣೆ ಏ.14ರಿಂದ ಏ.16ರವರೆಗೆ ಇರುವುದು. ಪ್ರತಿವಾದಿಗಳ ಉತ್ತರಕ್ಕೆ ಕಕ್ಷಿದಾರರ ಪ್ರತ್ಯುತ್ತರಗಳಿದ್ದಲ್ಲಿ ಏ.21ರಂದು ವಿಚಾರಣೆ. ಅಮಿಕಸ್ ಕ್ಯೂರಿ ಅಥವಾ ನ್ಯಾಯಾಲಯ ಪರ ವಕೀಲರಿಂದ ಅಂತಿಮ ಅಭಿಮತವು ಏ.22ರಂದು ವ್ಯಕ್ತವಾಗಲಿದೆ.

ಕೆಲವು ಪ್ರಕರಣಗಳಲ್ಲಿ ವಿಸ್ತೃತ ಪೀಠ ರಚನೆ

ಸುಪ್ರೀಂ ಈ ಹಿಂದೆ ಕೆಲವು ಸಂದರ್ಭಗಳಲ್ಲಿ 9 ನ್ಯಾಯಮೂರ್ತಿಗಳ ವಿಸ್ತೃತ ಪೀಠ ರಚಿಸಿದೆ.

- 1992ರಲ್ಲಿ ಇಂದ್ರ ಸಾಹ್ನಿ ವರ್ಸಸ್ ಕೇಂದ್ರ ಸರ್ಕಾರ ಪ್ರಕರಣ ಸಂಬಂಧ 9 ನ್ಯಾಯಮೂರ್ತಿಗಳ ಪೀಠ ತೀರ್ಪು ನೀಡಿದೆ. ಇದು ಮಂಡಲ್ ತೀರ್ಪು ಎಂದೂ ಪ್ರಸಿದ್ಧವಾಗಿದೆ.
- 1994ರಲ್ಲಿ ಎಸ್.ಆರ್. ಬೊಮ್ಮಾಯಿ ವರ್ಸಸ್ ಕೇಂದ್ರ ಸರ್ಕಾರ ಪ್ರಕರಣದಲ್ಲಿ 9 ಜಡ್ಜ್‌ಗಳ ಪೀಠ ತೀರ್ಪು ನೀಡಿದೆ.
- 2027ರಲ್ಲಿ ಪುಟ್ಟಸ್ವಾಮಿ ಮತ್ತು ಕೇಂದ್ರ ಸರ್ಕಾರ ನಡುವಿನ ಗೌಪ್ಯತೆ ಹಕ್ಕಿನ ಪ್ರಕರಣದಲ್ಲಿ 9 ನ್ಯಾಯಮೂರ್ತಿಗಳ ಪೀಠವನ್ನು ರಚಿಸಲಾಗಿತ್ತು.

2018ರ ತೀರ್ಪಿಗೆ ವ್ಯಕ್ತವಾಗಿತ್ತು ಆಕ್ರೋಶ

ಪುಟ 0 ➡ಆದರೆ ಪಿಣರಾಯಿ ಸರಕಾರ ಆ ದಿನಗಳಲ್ಲಿ ಸುಪ್ರೀಂಕೋರ್ಟ್ ಆದೇಶ ಪಾಲನೆಗೆ ಮುಂದಾಗಿತ್ತು. ಮಾತ್ರವಲ್ಲ, 2018ರ ಸುಪ್ರೀಂ ತೀರ್ಪಿನ ನಂತರದಲ್ಲಿ ಕೇರಳ ಹೊರತುಪಡಿಸಿ ಆಂಧ್ರಪ್ರದೇಶ, ತೆಲಂಗಾಣ, ಗೋವಾ, ತಮಿಳುನಾಡುಗಳಿಂದ 51 ಮಹಿಳೆಯರು ಶಬರಿಮಲೆಗೆ ತೆರಳಿದ್ದಾರೆಂದು 2020ರಲ್ಲಿ ಸುಪ್ರೀಂಕೋರ್ಟ್‌ಗೆ ವರದಿ ನೀಡಿತ್ತು. ಮಸೀದಿಗಳಿಗೆ ಮಹಿಳೆಯರ ಪ್ರವೇಶ, ಪಾರ್ಸಿಯೇತರರನ್ನು ವಿವಾಹವಾದ ಮಹಿಳೆಯರಿಗೆ 5 ದೇಗುಲಗಳಿಗೆ ತೆರಳಲು ಅವಕಾಶ ನೀಡಬೇಕೆನ್ನುವಂತಹ ಕೆಲವು ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇವೆ.

ಪ್ರಿಯಾಂಕ್ ಖರ್ಗೆ ವಿರುದ್ಧ ಬಿಜೆಪಿ ಕಿಡಿ

ಪುಟ 0 ➡ಜವಾಬ್ದಾರಿಯುತ ಸಚಿವ ಸ್ಥಾನದಲ್ಲಿರುವ ಪ್ರಿಯಾಂಕ್ ಖರ್ಗೆ ಅವರು ಆರೆಸ್ಸೆಸ್‌ನ 100 ವರ್ಷದ ಸಾಧನೆ, ಸಮಾಜ ಕಟ್ಟುವ ನಿಟ್ಟಿನಲ್ಲಿ ಆರೆಸ್ಸೆಸ್ಸಿನ ಸಮರ್ಪಣಾ ಮನೋಭಾವ, ದೇಶ ಕಟ್ಟುವ ನಿಟ್ಟಿನಲ್ಲಿ ಆರೆಸ್ಸೆಸ್ಸಿನ ಪಾತ್ರ ಏನು?– ಇದ್ಯಾವುದನ್ನೂ ಅರ್ಥ ಮಾಡಿಕೊಳ್ಳುವ ಗೋಜಿಗೆ ಹೋಗದೆ ಮಾತಿನ ಚಪಲಕ್ಕೆ ಮತ್ತು ಮಾಧ್ಯಮಗಳಲ್ಲಿ ಸುದ್ದಿ ಆಗಬೇಕೆಂದು ಹೀಗೆ ಮಾತನಾಡಿದಂತಿದೆ. ಮುಖ್ಯಮಂತ್ರಿ ಬದಲಾವಣೆ ಕುರಿತ ಚರ್ಚೆ ನಡೆದಿದ್ದು, ಅವರು ಇದರಲ್ಲಿ ಆಕಾಂಕ್ಷಿಯೇ ತಿಳಿದಿಲ್ಲ ಎಂದು ತಿಳಿಸಿದರು. ಪ್ರಿಯಾಂಕ್ ಖರ್ಗೆ ಅವರು ಎರಡನೇ ಬಾರಿಗೆ ಸಚಿವರಾಗಿದ್ದಾರೆ. ಇಷ್ಟು ಸುದೀರ್ಘವಾಗಿ ರಾಜಕೀಯ ಅನುಭವ ಇರುವ ಮತ್ತು ಎಲ್ಲ ರಾಜಕೀಯ ಸ್ಥಾನಮಾನ ಅನುಭವಿಸಿದ ಕುಟುಂಬದವರಾಗಿದ್ದು, ಗುಲ್ಬರ್ಗ ಜಿಲ್ಲೆ ಅತ್ಯಂತ ಹಿಂದುಳಿದ ಜಿಲ್ಲೆ ಯಾಕೆ ಎಂಬುದಕ್ಕೆ ಪ್ರಿಯಾಂಕ್ ಅವರಿಂದ ಉತ್ತರಿಸಲು ಸಾಧ್ಯವಾಗಿಲ್ಲ ಎಂದು ಟೀಕಿಸಿದರು.

ತಂದೆ, ಮಗ ಆರ್‌ಎಸ್‌ಎಸ್ ಬಗ್ಗೆ ಅಧ್ಯಯನ ಮಾಡಲಿ

ಆರ್‌ಎಸ್‌ಎಸ್ ಸ್ಥಾಪನೆಯಾಗಿ ನೂರು ವರ್ಷವಾಗಿದೆ. ಇವತ್ತು ವಿಶ್ವದಲ್ಲಿ ನಂಬರ್ ಒನ್ ದೇಶಭಕ್ತ ಸಂಘಟನೆ ಆರ್‌ಎಸ್‌ಎಸ್ ಆರ್‌ಎಸ್‌ಎಸ್‌ನಿಂದ ಹೊರಬಂದವರು ದೇಶಸೇವೆ; ಸಮಾಜಸೇವೆ ಮಾಡುತ್ತಾರೆ. ಅದನ್ನು ನೋಡಿ ಇವರಿಗೆ ಸಹಿಸಿಕೊಳ್ಳಲು ಆಗುತ್ತಿಲ್ಲ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ರವಿಕುಮಾರ್ ಆಕ್ಷೇಪಿಸಿದರು. ಈ ದೇಶದ ಅಭಿವೃದ್ಧಿಗೆ ಆರೆಸ್ಸೆಸ್ ಬಹಳ ದೊಡ್ಡ ಕೊಡುಗೆ ನೀಡುತ್ತಿದೆ ಎಂದು ತಿಳಿಸಿದರು. ಪ್ರಿಯಾಂಕ್ ಖರ್ಗೆ ಮತ್ತು ಅವರ ತಂದೆ ಆರು ತಿಂಗಳು ಆರ್‌ಎಸ್‌ಎಸ್ ಕುರಿತು ಅಧ್ಯಯನ ಮಾಡಲು ಬರಬೇಕೆಂದು ರವಿಕುಮಾರ್ ಮನವಿ ಮಾಡಿದರು. ಆಗ ನಿಮಗೆ ಆರ್‌ಎಸ್‌ಎಸ್ ಬಗ್ಗೆ ಗೊತ್ತಾಗಬಹುದು ಎಂದು ಆಶಿಸಿದರು.

ಎಂಟು ಕೋರ್ಟ್‌ಗೆ ಬಾಂಬ್ ಬೆದರಿಕೆ

ಪುಟ 0 ➡ಸ್ಥಳಕ್ಕೆ ಅಗ್ನಿಶಾಮಕ ದಳ ಸಹ ಆಗಮಿಸಿದ್ದು, ಗುಂಜನ್ ಆರ್ಯ ನೇತೃತ್ವದ ಬೆರಳಚ್ಚು ತಜ್ಞರು, ಬಾಂಬ್ ನಿಷ್ಕ್ರಿಯ ದಳ ಸುಮಾರು ಒಂದುವರೆ ಗಂಟೆ ಪರಿಶೀಲನೆ ಮಾಡಿದೆ. ಹೈಕೋರ್ಟ್‌ನ ಮೂಲೆ-ಮೂಲೆ ಪರಿಶೀಲಿಸಿದರೂ ಯಾವುದೇ ವಸ್ತುಗಳು ಲಭ್ಯವಾಗಲಿಲ್ಲ. ನಂತರ ಇದೊಂದು ಹುಸಿ ಬಾಂಬ್ ಕರೆ ಎಂದು ಸ್ಪಷ್ಟವಾಗಿದೆ.

ಹಾವೇರಿಯಲ್ಲೂ ಬೆದರಿಕೆ: ಹಳೆಯ ಪಿ.ಬಿ.ರಸ್ತೆಯಲ್ಲಿರುವ ಜಿಲ್ಲಾ ಕೋರ್ಟ್ ಕಟ್ಟಡಕ್ಕೆ ಬಾಂಬ್ ಇಡಲಾಗಿದೆ ಎಂದು ಅನಾಮಿಕ ಮೇಲ್‌ನಿಂದ ಸಂದೇಶ ಬಂದ ಹಿನ್ನೆಲೆಯಲ್ಲಿ ಮುಖ್ಯ ನ್ಯಾಯಾಧೀಶರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಉತ್ತರಕನ್ನಡ ನ್ಯಾಯಾಲಯಕ್ಕೂ ಬಾಂಬ್ ಭಯ: ಉತ್ತರ ಕನ್ನಡ ಜಿಲ್ಲೆಯ ಪ್ರಧಾನ ಮತ್ತು ಸತ್ರ ನ್ಯಾಯಾಲಯದ ಕಾರ್ಯಾಲಯದಲ್ಲಿರುವ ಕಂಪ್ಯೂಟರ್ ವಿಭಾಗಕ್ಕೆ ಬೆಳಗ್ಗೆ 8.25ಕ್ಕೆ ಈ ಮೇಲ್ ಸಂದೇಶ ರವಾನಿಸಲಾಗಿದ್ದು ಸುನ್ನಿಯಾ ದಾಸನ್ ಎನ್ನುವವರ ಮೇಲ್ ಐಡಿ sunniya dasan@outlook.com ಮೂಲಕ ಸಂದೇಶ ರವಾನಿಸಲಾಗಿದೆ.

ಹಾಸನ ಜಿಲ್ಲಾ ಕೋರ್ಟ್‌ಗೆ ಬಾಂಬ್ ಸ್ಫೋಟ ಭೀತಿ: ಹಾಸನದ ಜಿಲ್ಲಾ ನ್ಯಾಯಾಲಯಕ್ಕೆ ಬೆದರಿಕೆ ಸಂದೇಶ ಬಂದಿರುವ ಮಾಹಿತಿ ತಿಳಿದು ನಗರ ಠಾಣೆ ಪೊಲೀಸರು ನ್ಯಾಯಾಲಯ ಆವರಣಕ್ಕೆ ಧಾವಿಸಿ ಪ್ರಾಥಮಿಕ ಪರಿಶೀಲನೆ ನಡೆಸಿದರು. ನಂತರ ಬಾಂಬ್ ನಿಷ್ಕ್ರಿಯದಳ ಮತ್ತು ಶ್ವಾನದಳವನ್ನು ಸ್ಥಳಕ್ಕೆ ಕರೆಸಿಕೊಂಡು ಸಂಪೂರ್ಣ ಆವರಣ ತಪಾಸಣೆ ಮಾಡಲಾಯಿತು. ಜತೆಗೆ ಹೆಚ್ಚುವರಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಯಿತು.

ರಾಮನಗರ ಕೋರ್ಟ್‌ಗೂ ಬೆದರಿಕೆ: ರಾಮನಗರದ ನ್ಯಾಯಾಲಯ ಸಮುಚ್ಚಯಕ್ಕೆ ಅನಾಮಧೇಯ ವ್ಯಕ್ತಿ ಇ-ಮೇಲ್ ಮೂಲಕ ಬಾಂಬ್ ಇಟ್ಟಿರುವುದಾಗಿ ಬೆದರಿಕೆ ಸಂದೇಶ ರವಾನೆಯಾಗಿರುವ ಹಿನ್ನೆಲೆ ಈ ಬಗ್ಗೆ ಜಿಲ್ಲಾ ಸತ್ರ ನ್ಯಾಯಾಧೀಶರು, ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಎಂ.ಎಚ್. ಅಣ್ಣಯ್ಯನವರ ಅವರು ಅನಾಮಿಕ ವ್ಯಕ್ತಿಯ ಸಂದೇಶದ ವಿವರಗಳನ್ನು ಮಾಧ್ಯಮಕ್ಕೆ ಬಿಡುಗಡೆ ಮಾಡಿದರು. ಅದೇ ರೀತಿ ದಾವಣಗೆರೆ ಮತ್ತು ಕೊಡಗು ಕೋರ್ಟ್‌ಗಳ ಆವರಣದಲ್ಲಿ ಬೆಳಗ್ಗೆ 11 ಗಂಟೆಯಿಂದ ಬಾಂಬ್ ನಿಷ್ಕ್ರಿಯ ದಳ, ಶ್ವಾನ ದಳ ಸ್ಥಳಕ್ಕೆ ಆಗಮಿಸಿ ತೀವ್ರ ತಪಾಸಣೆ ನಡೆಸಿದರು. ಆದರೆ, ಯಾವುದೇ ಬಾಂಬ್ ವಸ್ತುಗಳು ಪತ್ತೆಯಾಗಿಲ್ಲ. ಇದೊಂದು ಹುಸಿ ಬಾಂಬ್ ಸಂದೇಶವಾಗಿದೆ ಎಂದು ಬಾಂಬ್ ನಿಷ್ಕ್ರಿಯ ದಳ ಮಾಹಿತಿ ನೀಡಿದೆ.

ಶಾಸಕ ಸುಬ್ಬಾರೆಡ್ಡಿ ಆಯ್ಕೆ ಅಸಿಂಧು

ಪುಟ 0 ➡ ತಪ್ಪು ಮಾಹಿತಿ ಕೊಟ್ಟು ಸರ್ಕಾರ ಮತ್ತು ಚುನಾವಣಾ ಆಯೋಗಕ್ಕೆ ವಂಚನೆ ಮಾಡಿದ್ದನ್ನು ಅರ್ಜಿ ಸಲ್ಲಿಸಿದ್ದೆವು ಎಂದು ತಿಳಿಸಿದರು. ಶಾಸಕ ಸ್ಥಾನದಿಂದ ಎಸ್.ಎನ್. ಸುಬ್ಬಾರೆಡ್ಡಿ ಆಯ್ಕೆಯನ್ನು ಅಸಿಂಧುಗೊಳಿಸಿ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ. ಈ ತೀರ್ಪಿನಿಂದ ನನಗೆ ಖುಷಿಯಿದೆ, ನ್ಯಾಯ ಸಿಕ್ಕಿದೆ. ಸುಬ್ಬಾರೆಡ್ಡಿ ವಿರುದ್ಧ ಸಾವಿರಾರು ಕೋಟಿ ರೂ. ಹಗರಣವಿದೆ. ಕೋರ್ಟ್‌ನಲ್ಲಿ ಸಮರ್ಥವಾಗಿ ವಾದ ಮಂಡಿಸಿದ್ದರಿಂದ ತೀರ್ಪು ಬಂದಿದೆ. ಈ ತೀರ್ಪಿನಿಂದ ನ್ಯಾಯಾಲಯದ ಮೇಲೆ ಜನರಲ್ಲಿ ವಿಶ್ವಾಸ ಹೆಚ್ಚಾಗಿದೆ ಎಂದು ಮುನಿರಾಜು ಹೇಳಿದರು.

ನಾನು ಅರ್ಜಿ ಹಾಕಿದ ಮೇಲೆ ಸರ್ಕಾರಕ್ಕೆ ಜಿಎಸ್‌ಟಿ ತೆರಿಗೆ ಕಟ್ಟಿದ್ದಾರೆ: ಪುತ್ರಿಯ ಹೆಸರಿನಲ್ಲಿರುವ ಜಮೀನು ವಿವರ ತೋರಿಸಿರಲಿಲ್ಲ. ಪತ್ನಿಯ ಹೆಸರಿನಲ್ಲಿ ಜಮೀನು, ಕಂಪನಿ ಇದ್ದರೂ ತೋರಿಸಿರಲಿಲ್ಲ. ಕುಣಿಗಲ್ ಶಾಸಕ ಡಾ. ರಂಗನಾಥ್ ಅವರಿಗೆ 23 ಲಕ್ಷ ರೂ. ದುಡ್ಡು ಕೊಟ್ಟಿದ್ದು ತೋರಿಸಿರಲಿಲ್ಲ. ವೈ.ಎ. ನಾರಾಯಣಸ್ವಾಮಿ ಅವರಿಗೂ 28 ಲಕ್ಷ ರೂ ದುಡ್ಡು ಕೊಟ್ಟಿದ್ದು ತೋರಿಸಿಕೊಂಡಿಲ್ಲ. ನಾನು ಅರ್ಜಿ ಹಾಕಿದ ಮೇಲೆ ಸರ್ಕಾರಕ್ಕೆ ಜಿಎಸ್‌ಟಿ ತೆರಿಗೆ ಕಟ್ಟಿದ್ದಾರೆ. ಸಣ್ಣಪುಟ್ಟ ತಪ್ಪಾಗಿದೆ ಎಂದು ಕೋರ್ಟ್ ಮುಂದೆ ಒಪ್ಪಿಕೊಂಡಿದ್ದಾರೆ ಎಂದರು.



ಉತ್ತರ ಕರ್ನಾಟಕದ ಆರಾಧ್ಯ ದೈವವಾದ ಹುಬ್ಬಳ್ಳಿ ನಗರದ ಸದ್ಗುರು ಸಿದ್ಧಾರೂಢ ಸ್ವಾಮೀಜಿಯ ಮಹಾ ರಥೋತ್ಸವ ಭಕ್ತ ಸಾಗರದ ಮಧ್ಯೆ ಸೋಮವಾರ ಅದ್ದೂರಿಯಾಗಿ ನಡೆಯಿತು.
ಚಿತ್ರ: ಮಂಜುನಾಥ ಜರತಾರಘರ

ಪ್ರಿಯಾಂಕ್ ಖರ್ಗೆ ಹೇಳಿಕೆ ಸಮರ್ಥಿಸಿಕೊಂಡ ದಿನೇಶ್

• **ಬೆಳಗಾವಿ:** ಕೋಮುವಾದದ ಕಾರಣ ಕರಾವಳಿಯಲ್ಲಿ ಐಟಿ-ಬಿಟಿ ಕಂಪನಿಗಳು ಬಂಡವಾಳ ಹಾಕಲು ಹೆದರುತ್ತಿವೆ ಎಂಬ ಪ್ರಿಯಾಂಕ್ ಖರ್ಗೆ ಅವರ ಅಭಿಪ್ರಾಯವನ್ನು ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಸಮರ್ಥಿಸಿಕೊಂಡಿದ್ದಾರೆ. ಸೋಮವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕೋಮು ಸೌಹಾರ್ದತೆ ಕಾಪಾಡುವ ಉದ್ದೇಶದಿಂದ ರಾಜ್ಯ ಸರ್ಕಾರದ ಹಲವು ಕ್ರಮಗಳ ನಂತರ ಪರಿಸ್ಥಿತಿ ಸುಧಾರಿಕೊಂಡಿವೆ.

ಪ್ರಿಯಾಂಕ್ ಖರ್ಗೆ ಅವರು ಹೇಳಿದ್ದು ಸರಿಯಿದೆ. ಪರಿಸ್ಥಿತಿ ಸುಧಾರಿಸಿದರೆ ದಕ್ಷಿಣ ಕನ್ನಡ ಜಿಲ್ಲೆಗೆ ಹೆಚ್ಚು ಜನ ಬರುತ್ತಾರೆ ಎಂದು ಹೇಳಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಯಕ್ರಮವೊಂದರಲ್ಲಿ, ಕೋಮವಾರದ ವಿಚಾರದ ಬಗ್ಗೆ ಮಾತನಾಡಿದ ಪ್ರಿಯಾಂಕ್ ಖರ್ಗೆ, ಕೋಮುವಾದ ಪರಿಸ್ಥಿತಿ ಕಾರಣ ಹೂಡಿಕೆಗೆ ಅಡ್ಡಿಯಾಗಿದೆ ಎಂದರು. ಅಲ್ಲಿನ ಪರಿಸ್ಥಿತಿ ಸುಧಾರಿಸುವ ಬಗ್ಗೆ ಸರ್ಕಾರ ಕೂಡಲೇ ಕ್ರಮ ಕೈಗೊಳಲಾಗುವುದು. ಹಾಗೂ ಅಲ್ಲಿ ಶಾಂತಿಯುತ ವಾತಾವರಣವಿದ್ದು, ಆ ಜಿಲ್ಲೆಯಲ್ಲಿಯೇ ಹೆಚ್ಚಿನ ಮಟ್ಟದಲ್ಲಿ ಹೂಡಿಕೆ ಮಾಡುವ ಪ್ರಯತ್ನ ಮಾಡಿಕೊಳ್ಳಲಾಗುವುದು ಎಂದು ಹೇಳಿದರು. ಸರ್ಕಾರ ಕಾನೂನು ಸುವ್ಯವಸ್ಥೆಯ ಬಗ್ಗೆ ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳಲಿದೆ. ಕಾಂಗ್ರೆಸ್ ಸರ್ಕಾರ ಯಾರ ಪರವಾಗಿಯೂ ಇಲ್ಲ, ಯಾರ ವಿರುದ್ಧವೂ ಇಲ್ಲ. ಯಾರೇ ಆಗಲಿ ಕಾನೂನಿನ ವಿರುದ್ಧ ಕೆಲಸ ಮಾಡಿದರೆ ಅಂತವರ ಮೇಲೆ ಕೂಡಲೇ ಕ್ರಮ ಕೈಗೊಳ್ಳಲಾಗುವುದು ಎಂದರು. ಇನ್ನು ಪ್ರವಾಸೋದ್ಯಮದ ಬಗ್ಗೆ ಮಾತನಾಡಿದ ಅವರು, ರಾಜ್ಯ ಸರ್ಕಾರ ಇದರ ಬಗ್ಗೆ ಹೆಚ್ಚಿನ ಮಟ್ಟದಲ್ಲಿ ಒತ್ತು ನೀಡಲಾಗುತ್ತದೆ. ಮಂಗಳೂರಿನಲ್ಲಿ ಫೈವ್ ಸ್ಟಾರ್ ಹೋಟೆಲ್ ನಿರ್ಮಾಣಕ್ಕೆ ಅನುಮತಿ ನೀಡಲಾಗಿದೆ ಎಂದರು.

ನಾನು ಗಾಂಧಿವಾದಿ, ರಾಹುಲ್‌ವಾದಿಯಲ್ಲ

ಪುಟ 0 ➡ರಾಹುಲ್‌ಗಾಂಧಿ ಮತ್ತು ಅವರ ಬೆಂಬಲಿಗರನ್ನು ಟೀಕಿಸಲು, ಅಂಬೇಡ್ಕರ್ ಅವರ ಆತ್ಮಚರಿತ್ರೆ 'ಎ ಪಾರ್ಟ್ ಅಪಾರ್ಟ್' ಉಲ್ಲೇಖಿಸಿದ ಅಯ್ಯರ್, 'ಒಂದು ಭಾಗ ಹೌದು, ಆದರೆ ಬೇರೆ' ಎಂದು ಅದರಲ್ಲಿ ಹೇಳಲಾಗಿದ್ದು, ಇದರಂತೆ ನಾನು ಕೂಡ ಅದನ್ನೇ ಹೇಳುತ್ತಿದ್ದೇನೆ. ನಾನು ಪಕ್ಷದ ಸದಸ್ಯ ಎಂಬುದನ್ನು ರಾಹುಲ್ ಗಾಂಧಿ ಮರೆತಿರಬಹುದು. ಆದ್ದರಿಂದ ನಾನು ಒಬ್ಬ ಗಾಂಧಿವಾದಿ, ನಾನೊಬ್ಬ ನೆಹರೂವಾದಿ, ನಾನೊಬ್ಬ ರಾಜೀವ್ ವಾದಿ, ಆದರೆ ನಾನು ರಾಹುಲ್‌ವಾದಿಯಲ್ಲ ಎಂದು ವ್ಯಂಗ್ಯವಾಡಿದರು.

ನಾನು ಕಾಂಗ್ರೆಸ್‌ನಲ್ಲಿದ್ದೇನೆ. ಅದನ್ನು ಬಿಟ್ಟು ಹೋಗಿಲ್ಲ. ಒಂದು ವೇಳೆ ಪವನ್ ಖೇರಾ (ತನ್ನನ್ನು ಟೀಕಿಸಿದ ಕಾಂಗ್ರೆಸ್ ವಕ್ತಾರ-ರಾಹುಲ್ ನಿಷ್ಠ) ನನ್ನನ್ನು ಉಚ್ಚಾಟಿಸಲು ಮುಂದಾದರೆ ನಾನು ಸಂತೋಷದಿಂದ ಹೊರಹೋಗುವೆ ಮತ್ತು ಹೊರಹೋದ ಬಳಿಕ ಹಿಂದಿನಿಂದ ಅವರಿಗೆ ಒದೆಯುವೆ''ಎಂದರು. ಪವನ್ ಖೇರಾ ಬಗ್ಗೆ ನನಗೆ ಗೌರವ ಇಲ್ಲ, ಹಾಗೆಂದು ಪೂರಾ ತಿರಸ್ಕಾರವೂ ಇಲ್ಲ ಎಂದರು.

ಏನಿದರ ಹಿನ್ನೆಲೆ?: ಇದಕ್ಕೂ ಮುನ್ನ ಭಾನುವಾರ ಕೇರಳದ ಎಡರಂಗ ಆಯೋಜಿಸಿದ್ದ 'ವಿಷನ್ 2031:ಡೆವಲಪ್‌ಮೆಂಟ್ ಅಂಡ್ ಡೆಮಾಕ್ರಸಿ' ಹೆಸರಿನ ಅಂತಾರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣದಲ್ಲಿ ಮಾತನಾಡಿದ್ದ ಮಣಿಶಂಕರ್ ಅಯ್ಯರ್, ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರನ್ನು ಶ್ಲಾಘಿಸಿ, ಮುಂಬರುವ ಕೇರಳ ವಿಧಾನಸಭಾ ಚುನಾವಣೆಯಲ್ಲಿ ಪಿಣರಾಯಿ ಸರ್ಕಾರ ಮತ್ತೆ ಅಧಿಕಾರಕ್ಕೆ ಬರಲಿದೆ ಎಂಬ ಆಶಾವಾದ ವ್ಯಕ್ತಪಡಿಸಿದ್ದರು. ಇದು ಈ ಬಾರಿ ಅಧಿಕಾರಕ್ಕೆ ಬರುವ ಕನಸು ಕಾಣುತ್ತಿರುವ ಕಾಂಗ್ರೆಸ್‌ನಲ್ಲಿ ಭಾರೀ ಬಿರುಗಾಳಿಯನ್ನೇ ಎಬ್ಬಿಸಿತು.

ಆದರೆ, ಅಯ್ಯರ್ ಹೇಳಿಕೆಗೂ ಕಾಂಗ್ರೆಸ್‌ಗೂ ಸಂಬಂಧವಿಲ್ಲ. ಅದು ಅವರ ವೈಯಕ್ತಿಕವಾದುದು. ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಅಧಿಕಾರಕ್ಕೆ ಬರಲಿದೆ ಎಂದು ಪವನ್ ಖೇರಾ ಮತ್ತು ಜೈರಾಮ್ ರಮೇಶ್ ತರಾತುರಿಯಲ್ಲಿ ಹೇಳಿಕೆ ನೀಡಿದರು. ಕೇರಳದಲ್ಲಿ ಹೇಗಾದರೂ ಅಧಿಕಾರಕ್ಕೆ ಬರಬೇಕೆಂದು ಹೆಣಗಾಡುತ್ತಿರುವ ಕಾಂಗ್ರೆಸ್ ಇದೀಗ, ರಾಹುಲ್ ನಾಯಕತ್ವದ ವಿರುದ್ಧ ತೀವ್ರ ಅಸಮಾಧಾನ ಹೊಂದಿರುವ ಶಶಿ ತರೂರ್ ಅವರಂತಹವರನ್ನು ಕೂಡ ಮನವೊಲಿಸಿ ಪಕ್ಷದಲ್ಲಿ ಉಳಿಸಿ, ಪಕ್ಷದಲ್ಲಿ ಯಾವುದೇ ಗೊಂದಲ ಇಲ್ಲ ಎಂಬಂತೆ ಬಿಂಬಿಸಲು ಯತ್ನಿಸಿತ್ತು. ಆದರೆ ಅಯ್ಯರ್ ಅವರ ಹೇಳಿಕೆ ಈಗ ಎಲ್ಲ ತಲೆಕೆಳಗಾಗುವಂತೆ ಮಾಡಿದೆ.

ಗಾಂಧಿ ವಿರುದ್ಧ ನೆಹರೂ ಬಂಡಾಯ ಎದ್ದಿದ್ದರು!

ಕೇರಳದ ಜನತೆಗೆ ಕಾಂಗ್ರೆಸ್ ನಾಯಕತ್ವದಲ್ಲಿ ಏನಾಗುತ್ತಿದೆ ಎಂಬುದು ಗೊತ್ತಿಲ್ಲ ಎಂದು ನೀವು ಭಾವಿಸಿದ್ದೀರಾ? ಕನಿಷ್ಠ ಪಕ್ಷ ಪಿಣರಾಯಿ ಸರ್ಕಾರದಲ್ಲಿ ಶಿಸ್ತಾದರೂ ಇದೆ. ಅಲ್ಲಿ ಮಣಿಶಂಕರ್ ಅಯ್ಯರ್‌ಗಳಿಲ್ಲ. ನಾನು ಮಣಿಶಂಕರ್. ಯಾಕೆಂದರೆ, ನೆಹರೂ ಮಹಾತ್ಮಾ ಗಾಂಧಿ ವಿರುದ್ಧ ಬಂಡೆದಿದ್ದರು. ಸುಭಾಷ್‌ಚಂದ್ರ ಬೋಸ್ ಅವರು ಕೂಡ ಗಾಂಧಿ ವಿರುದ್ಧ ಬಂಡೆದಿದ್ದರು. ಆದರೂ ಗಾಂಧಿ ಅವರು ನೆಹರೂ ಅವರನ್ನು ಪ್ರಧಾನಿಯನ್ನಾಗಿಸಿದರು. ಒಂದು ವೇಳೆ 1945ರ ಆ.17ರ ವಿಮಾನ ದುರಂತದಲ್ಲಿ ಸುಭಾಷ್‌ಚಂದ್ರ ಬೋಸ್ ಅವರು ಬದುಕುಳಿದಿರುತ್ತಿದ್ದರೆ ಅವರು ಖಂಡಿತವಾಗಿಯೂ ರಾಷ್ಟ್ರಪತಿಗಳಾಗುತ್ತಿದ್ದರು. ಹಾಗಾದರೆ ಅಂದು ಅವರು ಹೇಗೆ ಭಿನ್ನಮತವನ್ನು ನಿಭಾಯಿಸಿದರು ಮತ್ತು ಈಗಿನ ಕಾಂಗ್ರೆಸ್ ಹೇಗೆ ನಿಭಾಯಿಸುತ್ತಿದೆ ಎಂದು ಅವರು ಪ್ರಸಕ್ತ ಗಾಂಧಿ ಕುಟುಂಬದ ನಾಯಕತ್ವವನ್ನು ಉಲ್ಲೇಖಿಸಿ ಹೇಳಿದರು. ಪವನ್ ಖೇರಾ ಒಬ್ಬ ಕೈಗೊಂಬೆ. ಆತ ಕೇವಲ ಪಕ್ಷದ ಸಂಸದ ಜೈರಾಮ್ ರಮೇಶ್ ಏನು ಹೇಳಿಕೊಡುತ್ತಾರೋ ಅದನ್ನು ಪುನರಾವರ್ತಿಸುತ್ತಾರಷ್ಟೇ. ಅವರೊಬ್ಬ ವಕ್ತಾರನಲ್ಲ, ಬದಲಿಗೆ ಒಂದು ಪಂಜರದ ಗಿಣಿ ಎಂದು ಮಣಿಶಂಕರ್ ಖೇರಾ ಬನ್ನ ಜಾಲಾಡಿದರು.

ವೇಣುಗೋಪಾಲ್ ರೌಡಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯ ಆಪ್ತ ಹಾಗೂ ಪ್ರಸಕ್ತ ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಒಬ್ಬ ರೌಡಿ. ಇಂತಹ ವ್ಯಕ್ತಿಯನ್ನು ಸರ್ದಾರ್ ಪಟೇಲ್ ಮಟ್ಟಕ್ಕೆ ರಾಹುಲ್ ಗಾಂಧಿ ಮಟ್ಟಕ್ಕೆ ಎತ್ತರಿಸುವ ಪಕ್ಷದ ಸ್ಥಿತಿ ಏನೆಂಬುದನ್ನು ನೀವು ಊಹಿಸಿಕೊಳ್ಳಿ. ನಾನು ಉತ್ತರವಾಗಿ ಹೇಳಬೇಕಾದುದು ಇಷ್ಟೇ ಎಂದು ಅಯ್ಯರ್ ನುಡಿದರು.

ಇಂದು ವಿದೇಶಕ್ಕೆ ಶಾಸಕರ ತಂಡ

ಪುಟ 0 ➡ಆದರೆ ಹೈಕಮಾಂಡ್ ಕೆಂಗಣ್ಣಿಗೆ ಗುರಿ ಆಗಬಹುದು ಎಂಬ ಪರೋಕ್ಷ ಆತಂಕವೇ ಇದಕ್ಕೆ ಕಾರಣ ಎಂಬುದು ಕೆಲವರು ಅಭಿಪ್ರಾಯ. ಕುಟುಂಬಸಹಿತ ಪ್ರವಾಸಕ್ಕೆ ತೆರಳಲು ಮುಂದಾಗಿದ್ದರೂ ಈ ಪ್ರವಾಸ ರಾಜಕೀಯವಾಗಿ ಸಾಕಷ್ಟು ಸದ್ದು ಮಾಡಿರುವ ಹಿನ್ನೆಲೆಯಲ್ಲಿ ಶಾಸಕರು ಗೊಂದಲಕ್ಕೆ ಒಳಗಾಗಿದ್ದು, ಪ್ರವಾಸ ಹೊರಡಲು ಹಿಂದೇಟು ಹಾಕುತ್ತಿದ್ದಾರೆ. ಇನ್ನು ಕೆಲವು ಶಾಸಕರು ಗಟ್ಟಿ ಮನಸ್ಸು ಮಾಡಿ ಪ್ರವಾಸಕ್ಕೆ ಮುಂದಾಗಿದ್ದಾರೆ. ಹೀಗಾಗಿ ಮಂಗಳವಾರ ರಾತ್ರಿ ಬೆಂಗಳೂರಿನಿಂದ ಆಸ್ಟ್ರೇಲಿಯಾಗೆ ಶಾಸಕರು ಪ್ರವಾಸ ಬೆಳೆಸಲಿದ್ದಾರೆ. ಮಾರ್ಚ್ 1ರಂದು ಮತ್ತೆ ಬೆಂಗಳೂರಿಗೆ ಮರಳಲಿದ್ದಾರೆ. ಕೃಷಿ ಹಾಗೂ ಹೈನುಗಾರಿಕೆ ಕುರಿತಾಗಿ ಅಧ್ಯಯನ ಮಾಡುವ ನಿಟ್ಟಿನಲ್ಲಿ ಈ ಪ್ರವಾಸ ಎಂಬುದು ಶಾಸಕರ ಸಮರ್ಥನೆಯಾಗಿದೆ.

ಶಾಸಕರ ಪ್ರವಾಸ ನಾನಾ ರೀತಿಯ ವ್ಯಾಖ್ಯಾನಕ್ಕೆ ಒಳಗಾಗಿತ್ತು. ನಾಯಕತ್ವ ಬದಲಾವಣೆಯ ಚರ್ಚೆಯ ಸಂದರ್ಭದಲ್ಲಿ ದಿಢೀರ್ ವಿದೇಶಕ್ಕೆ ತೆರಳುತ್ತಿರುವ ಅಗತ್ಯ ಏನಿದೆ ಎಂಬ ಪ್ರಶ್ನೆ ಉದ್ಭವಿಸಿತ್ತು. ಈ ನಡುವೆ ಪಶುಸಂಗೋಪನೆ ಇಲಾಖೆಯಿಂದ ಪ್ರವಾಸ ಆಯೋಜನೆ ಮಾಡಲಾಗಿದೆ ಎನ್ನಲಾಗಿತ್ತು. ಆದರೆ ಸಚಿವ ಕೆ.ವೆಂಕಟೇಶ್ ಅವರು ಇದನ್ನು ನಿರಾಕರಿಸಿದ್ದರು.

ರಾಷ್ಟ್ರೀಯ ಭದ್ರತೆಗೆ ಜಿಟಿಆರ್‌ಇ ಪ್ರಯತ್ನ: ರಾಜನಾಥ್ ಸಿಂಗ್

• ಬೆಂಗಳೂರು: ಆಪರೇಷನ್ ಸಿಂದೂರ ರಕ್ಷಣಾ ವಲಯದಲ್ಲಿ ಭಾರತದ ಬೆಳೆಯುತ್ತಿರುವ ಆತ್ಮನಿರ್ಭರತೆಯನ್ನು ಪ್ರದರ್ಶಿಸಿದೆ. ವಿಶ್ವದರ್ಜೆಯ ದೇಶೀಯ ವ್ಯವಸ್ಥೆಗಳ ತಯಾರಿಕೆಯತ್ತ ಹೆಚ್ಚಿನ ಗಮನ ಹರಿಸುವ ಅಗತ್ಯವಿದೆ ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದರು.

ಬೆಂಗಳೂರಿನ ಡಿಆರ್‌ಡಿಒ ಅಧೀನದ ಗ್ಯಾಸ್ ಟರ್ಬೈನ್ ಸಂಶೋಧನಾ ಸಂಸ್ಥೆಗೆ (ಜಿಟಿಆರ್‌ಇ) ಭೇಟಿ ನೀಡಿ ಪ್ರಗತಿಯಲ್ಲಿರುವ ದೇಶೀಯ ಮಿಲಿಟರಿ ಗ್ಯಾಸ್ ಟರ್ಬೈನ್ ಇಂಜಿನ್ ಅಭಿವೃದ್ಧಿ ಯೋಜನೆಗಳ ಸ್ಥಿತಿಗತಿಗಳನ್ನು ಪರಾಮರ್ಶಿಸಿದರು.

ಬಳಿಕ ಮಾತನಾಡಿದ ಅವರು, ಏರೋ ಇಂಜಿನ್ ಅಭಿವೃದ್ಧಿಯಲ್ಲಿ ಸ್ವಾವಲಂಬನೆ ಸಾಧಿಸಲು ಕೇಂದ್ರ ಸರ್ಕಾರ ಬದ್ಧವಾಗಿದೆ. ಆತ್ಮನಿರ್ಭರತೆಯ ಮೂಲಕ ರಾಷ್ಟ್ರೀಯ ಭದ್ರತೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಜಿಟಿಆರ್‌ಇ ಪ್ರಯತ್ನಗಳನ್ನು ಶ್ಲಾಘಿಸಿದರು ಮತ್ತು ಡಿಆರ್‌ಡಿಒ ಭಾರತದ ಕಾರ್ಯತಂತ್ರದ ಸಾಮರ್ಥ್ಯದ ಅಡಿಪಾಯ ಎಂದು ಬಣ್ಣಿಸಿದರು. ಪ್ರಸ್ತುತ ವೇಗವಾಗಿ ಬದಲಾಗುತ್ತಿರುವ ಭೌಗೋಳಿಕ ರಾಜಕೀಯ ಪರಿಸ್ಥಿತಿಯಲ್ಲಿ ಏರೋ ಇಂಜಿನ್ ತಂತ್ರಜ್ಞಾನದಲ್ಲಿ ಆತ್ಮನಿರ್ಭರತೆ ಸಾಧಿಸುವುದು ಅತ್ಯಂತ ನಿರ್ಣಾಯಕವಾಗಿದೆ ಎಂದು ಅವರು ಹೇಳಿದರು.

ಭಾರತದಲ್ಲಿ ಏರೋ ಇಂಜಿನ್‌ಗಳ ಅಭಿವೃದ್ಧಿಗೆ ಆದ್ಯತೆ ನೀಡಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ದೇಶೀಯ ನಿರ್ಣಾಯಕ ತಂತ್ರಜ್ಞಾನಗಳನ್ನು ಹೊಂದಿರುವ ರಾಷ್ಟ್ರಗಳು ಮಾತ್ರ ಸುರಕ್ಷಿತವಾಗಿರಲು ಮತ್ತು ತಮ್ಮನ್ನು ತಾವು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಹೇಳಿದರು. ಪ್ರತಿಯೊಂದು ಕ್ಷೇತ್ರದಲ್ಲೂ ಸ್ವಾವಲಂಬನೆ ಸಾಧಿಸುವುದು ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಬದ್ಧತೆಯಾಗಿದೆ ಎಂದು ತಿಳಿಸಿದರು.



“ ಆಪರೇಷನ್ ಸಿಂದೂರ ಕಾರ್ಯಾಚರಣೆಯಲ್ಲಿ ರಕ್ಷಣಾ ಪಡೆಗಳು ರಕ್ಷಣಾ ವಲಯದಲ್ಲಿ ಭಾರತದ ಬೆಳೆಯುತ್ತಿರುವ ಆತ್ಮನಿರ್ಭರತೆಯನ್ನು ಪ್ರದರ್ಶಿಸಿವೆ. ಸಂವಹನ ವ್ಯವಸ್ಥೆ, ಕಣ್ಗಾವಲು ಸಾಧನಗಳು, ದಾಳಿ ಮಾಡುವ ಶಸ್ತ್ರಾಸ್ತ್ರಗಳೆಲ್ಲವೂ ದೇಶೀಯವಾಗಿದ್ದವು. ಇದು ನಮ್ಮ ಸೈನಿಕರ ನೈತಿಕ ಸ್ಥೈರ್ಯವನ್ನು ಹೆಚ್ಚಿಸಿತು. ನಾಗರಿಕರಲ್ಲಿ ಹೆಮ್ಮೆ ಮೂಡಿಸಿತು.

■ ರಾಜನಾಥ್‌ಸಿಂಗ್, ಕೇಂದ್ರ ರಕ್ಷಣಾ ಸಚಿವ

ಕಾಲಕ್ಕಿಂತ ಮುಂದಿರಬೇಕು

ತಂತ್ರಜ್ಞಾನ ಕ್ಷೇತ್ರದಲ್ಲಿ ಜಿಟಿಆರ್‌ಇ ಪ್ರಯತ್ನಗಳು ಶ್ಲಾಘನೀಯವಾಗಿದೆ. ಏರೋ ಇಂಜಿನ್ ಗಳಲ್ಲಿ ಸ್ವಾವಲಂಬನೆ ಸಾಧಿಸುವ ಜೊತೆಗೆ ದೇಶಾದ್ಯಂತ ಬಲವಾದ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವ ಮೂಲಕ ಮುಂದಿನ ಪೀಳಿಗೆಯ ಇಂಜಿನ್‌ಗಳ ಮೇಲೆ ಗಮನ ಹರಿಸಿ. ಸುಧಾರಿತ ಮಧ್ಯಮ ಯುದ್ಧ ವಿಮಾನ ವಿನ್ಯಾಸ ಮತ್ತು ಅಭಿವೃದ್ಧಿಯತ್ತ ವೇಗವಾಗಿ ಸಾಗುತ್ತಿದ್ದೇವೆ. ಏರೋ ಇಂಜಿನ್ ಕ್ಷೇತ್ರದಲ್ಲಿ ಪರಿಣತಿ ಪಡೆಯಲು ನಾವು ಹಿಂದೆ ಹಲವಾರು ಪ್ರಯತ್ನಗಳನ್ನು ಮಾಡಿದ್ದೇವೆ. ಈಗ ಆ ಪ್ರಯತ್ನಗಳನ್ನು ಪೂರ್ಣಗೊಳಿಸುವ ಸಮಯ ಬಂದಿದೆ. ನಾವು ಕೇವಲ 5ನೇ ಪೀಳಿಗೆಯ ಇಂಜಿನ್‌ಗಳಿಗೆ ಸೀಮಿತವಾಗಬಾರದು. ನಾವು ಆದಷ್ಟು ಬೇಗ 6ನೇ ಪೀಳಿಗೆಯ ಸುಧಾರಿತ ತಂತ್ರಜ್ಞಾನಗಳ ಅಭಿವೃದ್ಧಿಯನ್ನು ಪ್ರಾರಂಭಿಸಬೇಕು. ಅವುಗಳ ಮೇಲಿನ ಸಂಶೋಧನೆಯು ಇಂದಿನ ಅಗತ್ಯವಾಗಿದೆ. ಕೃತಕ ಬುದ್ಧಿಮತ್ತೆ, ಮಷಿನ್ ಲರ್ನಿಂಗ್ ಮತ್ತು ಹೊಸ ವಸ್ತುಗಳ ಬಳಕೆ ಹೆಚ್ಚುತ್ತಿದೆ. ನಾವು ಕಾಲಕ್ಕಿಂತ ಮುಂದಿರಬೇಕೆಂದು ರಾಜನಾಥ್ ಸಿಂಗ್ ಹೇಳಿದರು.

ಮಹಾರಥೋತ್ಸವ...



ತುಮಕೂರು ಸಿದ್ಧಗಂಗಾ ಮಠದಲ್ಲಿ ಸೋಮವಾರ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಯ ಮಹಾರಥೋತ್ಸವ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಕಿರುಸುದ್ದಿ

ಫೆ.27ರಂದು ಜೆಡಿಎಸ್ ಬೃಹತ್ ಸಮಾವೇಶ: ನಿಖಿಲ್

• ವಿಜಯಪುರ: ಕರ್ನಾಟಕದ ರಾಜಕೀಯ ಇತಿಹಾಸದಲ್ಲಿಯೇ ಜೆಡಿಎಸ್ ಪಕ್ಷ 25 ವಸಂತಗಳನ್ನು ಪೂರ್ಣಗೊಳಿಸಿರುವುದು ಗಮನಾರ್ಹ ದಾಖಲೆಯೇ. ಹೀಗಾಗಿ ಪಕ್ಷದ ಬೆಳ್ಳಿ ಮಹೋತ್ಸವವನ್ನು ಎಲ್ಲೆಡೆ ಆಚರಣೆ ಮಾಡುವುದು ಮಾಜಿ ಪ್ರಧಾನಿ, ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರ ಸದಾಶಯವಾಗಿದೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ,



ಈ ಸದಾಶಯದ ಭಾಗವಾಗಿ ಎಲ್ಲ ಕಡೆ ಸಮಾವೇಶ, ಕಾರ್ಯಕರ್ತರ ಸಭೆ ಸೇರಿದಂತೆ ವಿವಿಧ ಕಾರ್ಯ ಚಟುವಟಿಕೆಗಳನ್ನು ಸಂಘಟಿಸಲಾಗುತ್ತಿದೆ. ಇದರ ಭಾಗವಾಗಿ ವಿಜಯಪುರದಲ್ಲಿ ಫೆ.27ರಂದು ಕಿತ್ತೂರ ಕರ್ನಾಟಕ ವಿಭಾಗದ ಜೆಡಿಎಸ್ ಬೃಹತ್ ಸಮಾವೇಶ ಸಂಘಟಿಸಲಾಗಿದೆ ಎಂದರು. ಇಲ್ಲಿನ ಸಿಂದಗಿ ಬೈಪಾಸ್ ಬಳಿ ಬೃಹತ್ ಮೈದಾನದಲ್ಲಿ ಈ ಬೃಹತ್ ಸಮಾವೇಶ ನಡೆಯಲಿದೆ. ಈ ಬಗ್ಗೆ ಸಕಲ ಸಿದ್ಧತೆಗಳನ್ನು ಭರದಿಂದ ಕೈಗೊಳ್ಳಲಾಗುತ್ತಿದೆ. 1 ಲಕ್ಷಕ್ಕೂ ಅಧಿಕ ಕಾರ್ಯಕರ್ತರು ಈ ಸಮಾವೇಶದಲ್ಲಿ ಭಾಗವಹಿಸುವ ನಿರೀಕ್ಷೆ ಇದ್ದು, ಹಲವಾರು ಮಾಜಿ ಸಚಿವರು ಈ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಶಿಕ್ಷಕರ ಡಿಜಿಟಲ್ ಹಾಜರಾತಿ ಶೀಘ್ರ

• ಬೆಂಗಳೂರು: ರಾಜ್ಯದ ಶಾಲೆಗಳಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಹಾಜರಾತಿ ಡಿಜಿಟಲೀಕರಣಗೊಳ್ಳಲಿದ್ದು, ಶಿಕ್ಷಕರ ಡಿಜಿಟಲ್ ಹಾಜರಾತಿ ತಕ್ಷಣವೇ ಕಡ್ಡಾಯವಾಗಿ ಜಾರಿಗೆ ಬರಲಿದ್ದು, ವಿದ್ಯಾರ್ಥಿಗಳ ಡಿಜಿಟಲ್ ಹಾಜರಾತಿ ಪ್ರಕ್ರಿಯೆ ಮುಂದಿನ ಶೈಕ್ಷಣಿಕ ವರ್ಷದಿಂದ ಅನುಷ್ಠಾನಗೊಳ್ಳಲಿದೆ. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸರ್ಕಾರಿ ಪ್ರಾಥಮಿಕ, ಪ್ರೌಢ ಶಾಲೆಯ ಶಿಕ್ಷಕರು, ಪಿಯು ಉಪನ್ಯಾಸಕರು, ಮುಖ್ಯ ಶಿಕ್ಷಕರು, ಪ್ರಾಂಶುಪಾಲರು, ಸಿಬ್ಬಂದಿ, ಇಲಾಖೆಯ ಕಚೇರಿಗಳಲ್ಲಿನ ಬೋಧಕೇತರ ಸಿಬ್ಬಂದಿ ಮತ್ತು ಅಧಿಕಾರಿಗಳು ತಮ್ಮ ಹಾಜರಾತಿಯನ್ನು ಕರ್ತವ್ಯ ಸ್ಥಳದಲ್ಲಿ ಪ್ರತಿದಿನ ಹಾಗು ತರಬೇತಿ ಸಮಯದಲ್ಲಿ ತರಬೇತಿ ಕೇಂದ್ರದಲ್ಲಿ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ನಡೆಸುವ ಪರೀಕ್ಷೆಯ ಮೌಲ್ಯಮಾಪನ ಸಮಯಯಲ್ಲಿ ಮೌಲ್ಯಮಾಪನ ಕೇಂದ್ರದಲ್ಲಿ ಕಡ್ಡಾಯವಾಗಿ ಡಿಜಿಟಲ್ ಸ್ವರೂಪದಲ್ಲಿ ಹಾಜರಾತಿ ದಾಖಲಿಸಬೇಕು ಎಂದು ಶಾಲಾ ಶಿಕ್ಷಣ ಇಲಾಖೆ ಆದೇಶಿಸಿದೆ. ಕರ್ನಾಟಕ ಅಡ್ವಾನ್ಸ್ ಅಟೆಂಡೆನ್ಸ್ ಮ್ಯಾನೇಜ್‌ಮೆಂಟ್ ಸಿಸ್ಟಂ (ಕರ್ತವ್ಯ) ಮೊಬೈಲ್ ಅಪ್ಲಿಕೇಶನ್‌ನಲ್ಲಿ ಕೃತಕ ಬುದ್ಧಿಮತ್ತೆ (ಎಐ), ಭೌಗೋಳಿಕ ಮಾಹಿತಿ ವ್ಯವಸ್ಥೆಯ ಮೂಲಕ ಜಿಯೋ ಫೆನ್ಸಿಂಗ್ ಮಾಡಿ ಮುಖ ಚಹರೆಯಲ್ಲಿ ಹಾಜರಾತಿಯನ್ನು ದಾಖಲಿಸಿಕೊಳ್ಳಲಾಗುತ್ತದೆ. ಶಿಕ್ಷಕರು, ಸಿಬ್ಬಂದಿ ತಮ್ಮ ಕರ್ತವ್ಯ ಸ್ಥಳದಲ್ಲಿ ಪ್ರತಿದಿನ (ಇನ್ ಟೈಂ, ಔಟ್ ಟೈಂ) ಎರಡು ಬಾರಿ ಹಾಜರಾತಿ ದಾಖಲಿಸುವುದು ಕಡ್ಡಾಯವಾಗಿರಲಿದೆ. ಅಲ್ಲದೇ, 2026-27ನೇ ಶೈಕ್ಷಣಿಕ ವರ್ಷದಿಂದ ನಿರಂತರ ಕಾರ್ಯಕ್ರಮದಡಿ ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆ, ಪಿಯು ಕಾಲೇಜುಗಳ ಮಕ್ಕಳ ಹಾಜರಾತಿಯನ್ನು ಮುಖ ಚಹರೆ ಗುರುತಿಸುವ ತಂತ್ರಜ್ಞಾನ ಬಳಸಿ ಸಂಗ್ರಹಿಸಲು ಇಲಾಖೆ ಮುಂದಾಗಿದೆ. ಇ-ಆಡಳಿತ ಇಲಾಖೆ 2.16 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಪಡಿಸಿರುವ ಕೃತಕ ಬುದ್ಧಿಮತ್ತೆ ಆಧಾರಿತ ವಿದ್ಯಾರ್ಥಿಗಳ ಮುಖ ಚಹರೆ ಮೇಲ್ವಿಚಾರಣೆ ವ್ಯವಸ್ಥೆಯನ್ನು ಮುಂದಿನ ಶೈಕ್ಷಣಿಕ ವರ್ಷದ ಆರಂಭದಿಂದಲೇ ಸರ್ಕಾರಿ ಮತ್ತು ಅನುದಾನಿತ ಶಾಲಾ ಕಾಲೇಜುಗಳಲ್ಲಿ ಜಾರಿಗೊಳಿಸಲು ಇಲಾಖೆ ಆದೇಶ ಹೊರಡಿಸಿದೆ.

ರಾಜ್ಯ ಕೈಗಾರಿಕಾ ನಿಗಮದ ಅಧ್ಯಕ್ಷ ನಂಜಯ್ಯನಮಠ ಭರವಸೆ

ಶೀಘ್ರ ರಾತ್ರಿ ವಿಮಾನ ಸಂಚಾರ

• ಶಿವಮೊಗ್ಗ: ಮುಂದಿನ ಆರೇಳು ತಿಂಗಳಲ್ಲಿ ಇಲ್ಲಿನ ವಿಮಾನ ನಿಲ್ದಾಣದಲ್ಲಿ ರಾತ್ರಿಯೂ ವಿಮಾನಗಳು ಸಂಚರಿಸಲು ಅನುಕೂಲವಾಗುವಂತೆ ಅಗತ್ಯವಿರುವ ಎಲ್ಲಾ ಕ್ರಮ ಕೈಗೊಳ್ಳಲಾಗುವುದು. ಈ ತಿಂಗಳ ಅಂತ್ಯದೊಳಗಾಗಿ ಸುಮಾರು 6 ಕೋಟಿ ರೂ. ವೆಚ್ಚದ ಕಾಮಗಾರಿ ಆರಂಭಗೊಳ್ಳಲಿವೆ ಎಂದು ರಾಜ್ಯ ಕೈಗಾರಿಕಾ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ನಂಜಯ್ಯನಮಠ ಹೇಳಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನೈಟ್ ಲ್ಯಾಂಡಿಂಗ್ ವ್ಯವಸ್ಥೆ ಕಲ್ಪಿಸಲು ನಿಯಮಾನುಸಾರ ಮಣ್ಣನ್ನು ಗುಣಮಟ್ಟದ ಪರೀಕ್ಷೆಗಾಗಿ ರವಾನಿಸಲಾಗಿದ್ದು, ಇನ್ನೊಂದು ವಾರದಲ್ಲಿ ವರದಿ ಬರುವ ನಿರೀಕ್ಷೆ ಇದೆ. ಈ ಎಲ್ಲಾ ಕಾಮಗಾರಿಗಳ ಸಕಾಲಿಕ ಪರಿಶೀಲನೆಗಾಗಿ ತಾವು ಖುದ್ದಾಗಿ ಆಗಮಿಸಿ, ಪರಿಶೀಲಿಸಿ ಸೂಕ್ತ ಮಾರ್ಗದರ್ಶನ ನೀಡುವುದಾಗಿ ಅವರು ತಿಳಿಸಿದರು.

ಈ ಹಿಂದೆ ವಿಮಾನ ನಿಲ್ದಾಣದ ಪರವಾನಗಿ ನವೀಕರಣದ ಸಮಸ್ಯೆಯನ್ನು ಇತ್ಯರ್ಥಗೊಳಿಸಿ, ಆಡಳಿತಾತ್ಮಕ ಅಡತಡೆಗಳನ್ನು ನಿವಾರಿಸಿಕೊಳ್ಳಲಾಗಿದೆ. ಬಾಕಿ ಇದ್ದ 22 ಲಕ್ಷ ರೂ. ದಂಡ ಪಾವತಿಸಲಾಗಿದ್ದು, ಮುಂದಿನ ಮೂರು ವರ್ಷಗಳ ಅವಧಿಗೆ ಪರವಾನಗಿ ನವೀಕರಿಸುವ ಅಗತ್ಯವಿಲ್ಲ ಎಂದರು.

ಹವಾಮಾನ ವೈಪರೀತ್ಯ ಹಾಗೂ ಮತ್ತಿತರ ಹಲವು ಕಾರಣಗಳಿಗಾಗಿ ಇಳಿಯಬೇಕಾದ ವಿಮಾನಗಳು ಇಳಿಯದೇ ಹಿಂದಿರುಗಿ ಹೋಗುವುದನ್ನು ನಿಯಂತ್ರಿಸಲು, ರಾತ್ರಿ ಸಂಚಾರಕ್ಕೆ ಮತ್ತು ಸರಕು ಸಾಗಾಣಿಕೆಗೆ ಅನುಕೂಲ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಅಗತ್ಯವಾಗಿರುವ ದಿಕ್ಸೂಚಿ ಯಾಂತ್ರಿಕ ವ್ಯವಸ್ಥೆ (DBOR)ಗೆ ಟೆಂಡರ್‌ಪ್ರಕ್ರಿಯೆ ಪೂರ್ಣಗೊಂಡಿದೆ.



ಪಂಚತಾರಾ ಹೊಟೇಲ್

ವಿಮಾನ ನಿಲ್ದಾಣದಲ್ಲಿ ಈಗಾಗಲೇ ಕಾಯ್ದಿರಿಸಲಾಗಿರುವ 17 ಎಕರೆ ನಿವೇಶನದಲ್ಲಿ ಸಾರ್ವಜನಿಕ ಸಹಭಾಗಿತ್ವದಲ್ಲಿ ಬೃಹತ್ ವಾಣಿಜ್ಯ ಸಂಕೀರ್ಣ ಮತ್ತು ಪಂಚತಾರಾ ಹೋಟೆಲ್ ನಿರ್ಮಿಸುವ ಕುರಿತು ಈಗಾಗಲೇ ನಿಗಮದ ಸಭೆಯಲ್ಲಿ ಸಮಾಲೋಚನೆ ನಡೆಸಲಾಗಿದೆ. ಶೀಘ್ರದಲ್ಲಿ ಈ ವಿಷಯದ ಕುರಿತು ಸೂಕ್ತ ನಿರ್ಣಯ ಕೈಗೊಳ್ಳಲಾಗುವುದು ಎಂದರು. ಇಲ್ಲಿ ಪೈಲೆಟ್ ತರಬೇತಿ ಕೇಂದ್ರ ಆರಂಭಿಸಲು ಈ ಹಿಂದೆ ಖಾಸಗಿ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಆದರೆ, ಯಾವುದೇ ಕಂಪನಿಗಳು ಆಸಕ್ತಿ ತೋರಿ ಮುಂದೆ ಬಂದಿಲ್ಲ. ಆದರೂ ಪೈಲೆಟ್ ತರಬೇತಿ ಕೇಂದ್ರ ಆರಂಭಿಸಲು ಇನ್ನೊಮ್ಮೆ ಆಸಕ್ತ ತರಬೇತಿ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗುವುದು ಎಂದರು.

ವಿದ್ಯುತ್ ಸಂಪರ್ಕ ವ್ಯವಸ್ಥೆಯೂ ಪೂರ್ಣಗೊಂಡಿದೆ ಎಂದರು.

ಉಡಾನ್ ಯೋಜನೆ ಮುಂದುವರಿಸಲು ಮನವಿ: ಶಿವಮೊಗ್ಗದಿಂದ ಬೆಂಗಳೂರು, ಚೆನ್ನೈ, ಹೈದ್ರಾಬಾದ್, ಗೋವಾ ಸೇರಿದಂತೆ ಹಲವು ಪ್ರದೇಶಗಳಿಗೆ ತೆರಳುವ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದೆ. ಕೇಂದ್ರ ಪುರಸ್ಕೃತ ಹಾಗೂ ವಿಮಾನ ಪ್ರಯಾಣಕ್ಕೆ ರಿಯಾಯಿತಿ ಒದಗಿಸುವ ಉಡಾನ್ ಯೋಜನೆಯ ಅವಧಿ ಶೀಘ್ರದಲ್ಲಿ ಮುಕ್ತಾಯಗೊಳ್ಳಲಿದೆ. ಆದ್ದರಿಂದ ಪ್ರಯಾಣಿಕರಿಗೆ ಹೆಚ್ಚಿನ ಪ್ರಯಾಣದರ ಪಾವತಿಸುವ ಹೊರೆ ಬೀಳದಂತೆ ನೋಡಿಕೊಳ್ಳಲು ಸ್ಥಳೀಯ ಸಂಸದರು ಹಾಗೂ ಜನಪ್ರತಿನಿಧಿಗಳ ಸಹಕಾರವನ್ನು ಪಡೆದು, ಸದರಿ ಯೋಜನೆಯನ್ನು ಮುಂದುವರೆಸಲು ಕೇಂದ್ರ ವಿಮಾನಯಾನ ಸಚಿವರಿಗೆ ಮನವಿ ಮಾಡಲಾಗುತ್ತದೆ ಎಂದರು. ಸಭೆಯಲ್ಲಿ ವಿಮಾನ ನಿಲ್ದಾಣದ ಮುಖ್ಯಸ್ಥ ಕಮಾಂಡರ್ ಶಮಂತ್, ವಿದ್ಯಾಧರ್ ಸಾಲಿಮಠ್ ಇದ್ದರು.

ತಲಾ ಒಂದು ನಿವೇಶನ

ವಿಮಾನ ನಿಲ್ದಾಣದ ನಿರ್ಮಾಣಕ್ಕಾಗಿ ಭೂಮಿ ನೀಡಿ ಸಹಕರಿಸಿದ ರೈತರ 370 ಕುಟುಂಬಗಳಿಗೆ ಅಂದಿನ ಅಧಿಕಾರಿ-ಜನಪ್ರತಿನಿಧಿಗಳು ನೀಡಿದ ಭರವಸೆಯಂತೆ ತಲಾ ಒಂದು ನಿವೇಶನ ನೀಡಿರುವುದಿಲ್ಲ. ಈ ಬಗ್ಗೆ ಸಂತ್ರಸ್ತರು ಅನೇಕ ಬಾರಿ ಸರ್ಕಾರದ ಗಮನ ಸೆಳೆಯುವ ಕಾರ್ಯ ಮಾಡಿದ್ದಾರೆ. ಅಲ್ಲದೇ ನ್ಯಾಯಾಲಯವೂ ಕೂಡ ಸಂತ್ರಸ್ತರ ಪರವಾಗಿ ತೀರ್ಪು ನೀಡಿರುವುದು ಗಮನಕ್ಕೆ ಬಂದಿದೆ. ಈ ಸಮಸ್ಯೆಯ ಇತ್ಯರ್ಥಗೊಳಿಸಲು ಖುದ್ದಾಗಿ ಮುಖ್ಯಮಂತ್ರಿಗಳ ಗಮನಸೆಳೆದು ಅಗತ್ಯವಿರುವ ಅನುದಾನ ಬಿಡುಗಡೆಗೆ ಮನವಿ ಮಾಡಲಾಗುತ್ತದೆ ಎಂದರು.

ಔಷಧ ಸರಬರಾಜಿಗೆ ವಿಜಯೇಂದ್ರ ಆಗ್ರಹ

• ಬೆಂಗಳೂರು: ಶಾಸಕರಿಗೆ ವಿದೇಶ ಪ್ರವಾಸ ಭಾಗ್ಯ ದಯಪಾಲಿಸಿದ ಮುಖ್ಯಮಂತ್ರಿಯವರು ಆರೋಗ್ಯ ಸಚಿವರನ್ನೂ ಆಸ್ಟ್ರೇಲಿಯ, ನ್ಯೂಜಿಲೆಂಡ್‌ಗೆ ಕಳಿಸಿದರೆ ಬಡವರ ಪರಿಸ್ಥಿತಿ ಏನಾದೀತು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕಳವಳ ವ್ಯಕ್ತಪಡಿಸಿದ್ದಾರೆ.



ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಗ್ರಾಮೀಣ ಭಾಗದ ಸರ್ಕಾರಿ ಆಸ್ಪತ್ರೆಗಳಲ್ಲಿ ಇದೀಗ ಔಷಧಿ ಸಿಗದೇ ಬಡಜನರು ಪರದಾಡುತ್ತಿದ್ದಾರೆ. ಎಷ್ಟೋಕಡೆ ಶಸ್ತ್ರಚಿಕಿತ್ಸೆಗಳನ್ನು ಮುಂದೂಡಿದ ಮಾಹಿತಿ ಬರುತ್ತಿದೆ. ಆರೋಗ್ಯ ಇಲಾಖೆ ಸಚಿವರು, ಮುಖ್ಯಮಂತ್ರಿಗಳು ಇದರ ಕುರಿತು ಗಮನ ಹರಿಸುತ್ತಿಲ್ಲ. ಸಚಿವರು, ಶಾಸಕರನ್ನು ಹೊರಕ್ಕೆ ಕಳಿಸುವ ಮುಂಚಿತವಾಗಿ ಔಷಧಿ ಸಮರ್ಪಕ ಸರಬರಾಜಿಗೆ ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಜನಪ್ರಿಯತೆಯನ್ನು ಸಹಿಸಲು ಸಾಧ್ಯವಾಗದೇ ಜನೌಷಧಿ ಕೇಂದ್ರಗಳಿಗೂ ಕಲ್ಲು ಹಾಕುವ ಕೆಲಸವನ್ನು ಕಾಂಗ್ರೆಸ್ ಸರ್ಕಾರ ಮಾಡಿತ್ತು. ಗ್ರಾಮೀಣ ಭಾಗದಲ್ಲಿ ಕೃತಕವಾಗಿ ಔಷಧಿ ಕೊರತೆಯನ್ನು ಸೃಷ್ಟಿಸಿ, ಟೆಂಡರ್ ಕರೆಯದೇ ತುರ್ತು ಖರೀದಿ ಎಂದು ಕಳ್ಳ ದಂಧೆ ಮಾಡಲು ಸರ್ಕಾರ ಹೊರಟಿದೆಯೇ ಎಂಬ ವಿಚಾರ ರಾಜ್ಯದ ಜನರ ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ. ರಾಜ್ಯ ಸರ್ಕಾರ, ಸಚಿವರು ಎಚ್ಚತ್ತುಕೊಂಡು ಇದರ ಕುರಿತು ಗಮನ ಹರಿಸಬೇಕು. ಈ ಸಮಸ್ಯೆಯನ್ನು ಕೂಡಲೇ ಪರಿಹರಿಸಬೇಕು ಎಂದು ಒತ್ತಾಯಿಸಿದರು.

ವಿಧಾನಪರಿಷತ್ ವಿಪಕ್ಷ ಮುಖ್ಯ ಸಚೇತಕ ಎನ್. ರವಿಕುಮಾರ್, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ಎಸ್. ನಂದೀಶ್ ರೆಡ್ಡಿ, ವಿಪ ಸದಸ್ಯ ಶಾಂತಾರಾಮ ಬುಡ್ನ ಸಿದ್ದಿ, ಚಾಮರಾಜನಗರ ಜಿಲ್ಲಾಧ್ಯಕ್ಷ ಮತ್ತು ಮಾಜಿ ಶಾಸಕ ನಿರಂಜನ್ ಕುಮಾರ್ ಉಪಸ್ಥಿತರಿದ್ದರು.

ಕನಿಷ್ಠ ಒಂದು ಸಾವಿರ ಕೋಟಿ ಕೊಡಿಸಿ

ಶೋಷಿತ- ಪೀಡಿತ ಸಮುದಾಯಗಳ ಯುವಜನರ ಅಭಿವೃದ್ಧಿಗಾಗಿ ಹಿಂದೆ ಯಡಿಯೂರಪ್ಪನವರು ವಿವಿಧ ಮಂಡಳಿಗಳ ಮೂಲಕ 550 ಕೋಟಿ ನೀಡಿದ್ದರು. ಸಿದ್ದರಾಮಯ್ಯ ಅವರು ಬಜೆಟ್ ಮಂಡಿಸಿದರೆ ಕನಿಷ್ಠ ಒಂದು ಸಾವಿರ ಕೋಟಿ ಕೊಡಿಸಿ ಎಂದು ಒತ್ತಾಯವನ್ನು ಮುಂದಿಟ್ಟರು. ಪರಿಶಿಷ್ಟ ವರ್ಗ, ಪಂಗಡಗಳಿಗೂ ಶಕ್ತಿ ತುಂಬಿ ಎಂದು ಆಗ್ರಹಿಸಿದರು.

400 ಕೋಟಿ ರೂ. ದರೋಡೆ ಪ್ರಕರಣಕ್ಕೆ ಟ್ವಿಸ್ಟ್

ದರೋಡೆ ನಡೆದಿಲ್ಲ: ಎಸ್‌ಐಟಿ

• ಬೆಳಗಾವಿ: ಗೋವಾ-ಕರ್ನಾಟಕ ಗಡಿಯ ಚೋರ್ಲಾ ಘಾಟನಲ್ಲಿ 400 ಕೋಟಿ ರೂ. ದರೋಡೆ ಪ್ರಕರಣಕ್ಕೆ ಈಗ ಮತ್ತೊಂದು ಟ್ವಿಸ್ಟ್ ಪಡೆದುಕೊಂಡಿದ್ದು, ಈ ಘಟನೆ ನಡೆದದ್ದೇ ಸುಳ್ಳು ಎಂಬ ಅನುಮಾನಕ್ಕೆ ಬಲ ಸಿಕ್ಕಿದೆ.

ಬೆಳಗಾವಿ ಸಮೀಪದ ಗಡಿ ಪ್ರದೇಶದಲ್ಲಿ ಹಣ ಸಾಗಿಸುತ್ತಿದ್ದ ಎರಡು ಕಂಟೇನರ್‌ಗಳನ್ನು ದರೋಡೆ ಮಾಡಲಾಗಿದೆ ಎಂದು ನೀಡಿದ್ದ ದೂರಿನ ಮೇಲೆ ಮಹಾರಾಷ್ಟ್ರ ಸರ್ಕಾರ ಎಸ್‌ಐಟಿ ರಚಿಸಿ ತನಿಖೆ ನಡೆಸಿತ್ತು. ಸುಮಾರು ಒಂದು ತಿಂಗಳು ತನಿಖೆ ನಡೆಸಿದ ಎಸ್‌ಐಟಿ ತಂಡ, ಬೆಳಗಾವಿ ಖಾನಾಪುರ ತಾಲೂಕಿನ ಚೋರ್ಲಾ ಘಾಟ್‌ಬಳಿ ದರೋಡೆ ನಡೆದಿದೆ ಎಂಬುದಕ್ಕೆ ಯಾವುದೇ ಸಾಕ್ಷ್ಯ ಸಿಕ್ಕಿಲ್ಲ ಎಂದು ವರದಿ ಸಲ್ಲಿಸಿದೆ ಎಂದು ತಿಳಿದು ಬಂದಿದೆ.

ದೂರು ನೀಡಿದ್ದ ಸಂದೀಪ್ ಪಾಟೀಲ್ ಹೇಳಿಕೆಯಲ್ಲಿ ಸ್ಥಳ, ಸಮಯ, ಪ್ರಯಾಣ ಮಾರ್ಗ ಹಾಗೂ ಕರೆ ವಿವರಗಳಲ್ಲಿ ಗಂಭೀರ ವ್ಯತ್ಯಾಸಗಳು ಕಂಡು ಬಂದಿವೆ ಎಂಬುದು ಎಸ್‌ಐಟಿ ತನಿಖೆಯಲ್ಲಿ ಬಹಿರಂಗವಾಗಿದೆ ಎಂಬುವುದರ ಬಗ್ಗೆ ತಿಳಿದು ಬಂದಿದೆ. ಖಾನಾಪುರ್ರ ತಾಲೂಕಿನ ಚೋರ್ಲಾ ಘಾಟ್‌ನಲ್ಲಿ ಯಾವುದೇ ದರೋಡೆ ನಡೆದಿಲ್ಲ ಎಂದು ಎಸ್‌ಐಟಿ ಸ್ಪಷ್ಟಪಡಿಸಿದೆ. ಹೀಗಾಗಿ ಸಾಕ್ಷ್ಯಗಳ ಕೊರತೆಯಿಂದ ಪ್ರಕರಣದಲ್ಲಿ ಬಂಧಿತರಾಗಿದ್ದ ಆರೋಪಿಗಳನ್ನು ನ್ಯಾಯಾಲಯ ಸೋಮವಾರ ಬಿಡುಗಡೆ ಮಾಡಲಾಗುವುದು ಎಂದು ಕೆಲ ಮೂಲಗಳು ತಿಳಿಸಿವೆ.

ಈ ಘಟನೆಯಿಂದ ಕರ್ನಾಟಕ-ಮಹಾರಾಷ್ಟ್ರ ಎರಡೂ ರಾಜ್ಯಗಳಲ್ಲಿ ಭಾರೀ ಸಂಚಲನ ಮೂಡಿಸಿತ್ತು. ಸುಳ್ಳು ದೂರು ನೀಡಿದ ಆರೋಪದ ಮೇಲೆ ಸಂದೀಪ್ ಪಾಟೀಲ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ನಾಸಿಕ್ ಪೊಲೀಸರಿಂದ ಮಾಹಿತಿ ಕೂಡ ಲಭ್ಯವಾಗಿದೆ ಎನ್ನಲಾಗುತ್ತಿದೆ.

ಏನಿದು 400 ಕೋಟಿ ರೂ.ದರೋಡೆ ಪ್ರಕರಣ?

ಬೆಳಗಾವಿಯ ಚೋರ್ಲಾ ಘಾಟ್ ಪ್ರದೇಶದಲ್ಲಿ 2025ರ ಅಕ್ಟೋಬರ್ 25ರಂದು 2 ಕಂಟೇನರ್‌ಗಳಲ್ಲಿದ್ದ ಸುಮಾರು 400 ಕೋಟಿ ರೂ. ನಗದು ಹಣ ದರೋಡೆ ಮಾಡಲಾಗಿತ್ತು ಎಂದು ಮಹಾರಾಷ್ಟ್ರದ ನಾಸಿಕ್ ಮೂಲದ ಉದ್ಯಮಿ ಸಂದೀಪ್ ದತ್ತಾ ಪಾಟೀಲ್ ಇತ್ತೀಚಿಗೆ ಮಹಾರಾಷ್ಟ್ರ ಪೊಲೀಸರಿಗೆ ದೂರು ನೀಡಿದ್ದರು. ಅವರು ದೂರು ನೀಡಿದ ನಂತರ ಪ್ರಕರಣ ಬೆಳಕಿಗೆ ಬಂದಿದ್ದು ದೇಶದಾದ್ಯಂತ ಸಂಚಲನ ಮೂಡಿಸಿತ್ತು. ದೂರುದಾರರ ಪ್ರಕಾರ ದರೋಡೆಯಾದ ಹಣ ಗುಜರಾತ್ ಮೂಲದ ಬಿಲ್ಡರ್ ಕಿಶೋರ್ ಸವಲಾ ಸೇಠ್ ಅವರಿಗೆ ಸೇರಿದ್ದು, ಅದರಲ್ಲಿ ರದ್ದಾದ 2,000 ರೂ.ಮುಖ ಬೆಲೆಯ ನೋಟುಗಳೂ ಇದ್ದವು ಎನ್ನಲಾಗಿದೆ. ಆದರೆ ಇದೀಗ, ಅಂಥದ್ದೊಂದು ಪ್ರಕರಣ ನಡೆದಿರುವ ಸಾಧ್ಯತೆಯನ್ನೇ ಮಹಾರಾಷ್ಟ್ರ ಎಸ್‌ಐಟಿ ಅಲ್ಲಗಳೆದಿದೆ. ಜತೆಗೆ, ವರದಿಯನ್ನೂ ಸಿದ್ಧಪಡಿಸಿದೆ.

ಎಫ್‌ಐಆರ್ ದಾಖಲಿಸಲು ಒತ್ತಾಯ

ದೂರುದಾರ ಸಂದೀಪ್ ಪಾಟೀಲ್ ಬೆಳಗಾವಿ ಜಿಲ್ಲಾ ಪೊಲೀಸ್ ಅಧೀಕ್ಷಕರಿಗೆ ಭಾನುವಾರ ಪತ್ರ ಬರೆದು ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುವಂತೆ ಒತ್ತಾಯಿಸಿದ್ದಾರೆ. ಮಹಾರಾಷ್ಟ್ರ ಎಸ್‌ಐಟಿ ಪಾರದರ್ಶಕ ತನಿಖೆ ನಡೆಸುತ್ತಿಲ್ಲ. ಪ್ರಕರಣಕ್ಕೆ ಸಂಬಂಧಿಸಿದ ಆಡಿಯೋ ದಾಖಲೆಗಳು ನನ್ನ ಬಳಿ ಇವೆ ಎಂದು ತಿಳಿಸಿದ್ದು, ಆ ದಾಖಲೆಗಳ ಆಧಾರದಲ್ಲಿ ಮರು ತನಿಖೆ ನಡೆಸಬೇಕೆಂದು ಆಗ್ರಹಿಸಿದ್ದಾರೆ.

ಸತ್ಯಶೋಧನಾ ವರದಿ ಎಐಸಿಸಿಗೆ: ಉಗ್ರಪ್ಪ

• ಶಿವಮೊಗ್ಗ: ಕಳೆದ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಹೀನಾಯವಾಗಿ ಸೋತಿದ್ದರ ಬಗ್ಗೆ ಕಾಂಗ್ರೆಸ್ ಸತ್ಯಶೋಧನಾ ಸಮಿತಿ ವರದಿ ಸಿದ್ಧಪಡಿಸಿ ಕೆಪಿಸಿಸಿಗೆ ನೀಡಿತ್ತು. ವರದಿ ಎಐಸಿಸಿಗೂ ತಲುಪಿದೆ ಎಂದು ಮಾಜಿ ಸಂಸದ, ಸಮಿತಿ ಅಧ್ಯಕ್ಷರೂ ಆದ ವಿ.ಎಸ್. ಉಗ್ರಪ್ಪ ಹೇಳಿದರು. ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಶಿವಮೊಗ್ಗವೂ ಸೇರಿ ರಾಜ್ಯದೆಲ್ಲೆಡೆ ಪ್ರವಾಸ ಮಾಡಿ ಸತ್ಯದ ವರದಿಯನ್ನೇ ನೀಡಿದ್ದೇನೆ. ವರದಿ ನೀಡುವುದಷ್ಟೇ ನನ್ನ ಕೆಲಸವಾಗಿತ್ತು. ಅಷ್ಟು ಕೆಲಸವನ್ನು ಮಾಡಿದ್ದೇನೆ. ವರದಿಯನ್ನು ನೋಡಿ ಕ್ರಮ ತೆಗೆದುಕೊಳ್ಳುವ ಜವಾಬ್ದಾರಿ ಹೈಕಮಾಂಡ್‌ಗೆ ಬಿಟ್ಟಿದ್ದು ಎಂದರು.



ಎಸ್ಸಿ/ಎಸ್ಟಿ ಮೀಸಲಾತಿ ಹೆಚ್ಚಿಸಿ

ಮೀಸಲಾತಿಯನ್ನು ಸಂವಿಧಾನದ 9ನೇ ಪರಿಚ್ಛೇದಕ್ಕೆ ಜಾರಿಗೊಳಿಸದೇ ರಾಜ್ಯದ ವಾಲ್ಮೀಕಿ ಜನಾಂಗ ಸೇರಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸುಮಾರು 4 ಕೋಟಿ ಜನರಿಗೆ ಕೇಂದ್ರ ಸರ್ಕಾರ ಅನ್ಯಾಯ ಮಾಡಿದೆ ಎಂದು ರಾಜ್ಯ ವಾಲ್ಮೀಕಿ ಸಮಾಜದ ಸಮಾನ ಮನಸ್ಕರ ವೇದಿಕೆ ಅಧ್ಯಕ್ಷರೂ ಆಗಿರುವ ಮಾಜಿ ಸಂಸದ ವಿ.ಎಸ್.ಉಗ್ರಪ್ಪ ಆಕ್ರೋಶ ವ್ಯಕ್ತಪಡಿಸಿದರು. ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿಸದ ಹೊರತು ಅದು ಜಾರಿಯಾಗುವುದಿಲ್ಲ. ಇದರಿಂದ ಕೋಟ್ಯಂತರ ಎಸ್‌ಸಿ, ಎಸ್‌ಟಿ ಹಾಗೂ ಹಿಂದುಳಿದ ವರ್ಗಗಳಿಗೆ ಅನ್ಯಾಯವಾಗಲಿದೆ. ಆದ್ದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ತಮ್ಮ ಇಚ್ಛಾಶಕ್ತಿ ಪ್ರದರ್ಶಿಸಬೇಕು. ಸಿಎಂ ಸಿದ್ದರಾಮಯ್ಯ ಅವರು ಪ್ರಧಾನಿ ಬಳಿ ಸರ್ವಪಕ್ಷ ನಿಯೋಗ ಕರೆದೊಯ್ಯುವಂತೆ ಒತ್ತಾಯಿಸಿದರು.

ಸೋಮವಾರದಿಂದಲೇ ಪರಿಷ್ಕೃತ ದರ ಜಾರಿ

• ಬೆಂಗಳೂರು: ಡೀಸೆಲ್ ದರ ಹೆಚ್ಚಳ ಹಿನ್ನೆಲೆಯಲ್ಲಿ ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ಸಾಗಿಸುವ ಲಗೇಜ್ ದರವನ್ನು ಪರಿಷ್ಕರಿಸಲಾಗಿದ್ದು, ಪರಿಷ್ಕೃತ ದರ ಸೋಮವಾರದಿಂದಲೇ ಜಾರಿಗೆ ಬಂದಿದೆ. ಡೀಸೆಲ್, ಸಿಬ್ಬಂದಿ ಹಾಗೂ ಇತರೆ ವೆಚ್ಚಗಳ ಹೆಚ್ಚಳ ಹಿನ್ನೆಲೆಯಲ್ಲಿ ನಿಗಮದ ಬಸ್‌ಗಳಲ್ಲಿ ಸಾಗಿಸುವ ಲಗೇಜ್ ದರವನ್ನು ಪರಿಷ್ಕರಿಸಲಾಗಿದೆ. ಪ್ರತಿ ಬಾರಿಯೂ ಲಗೇಜು ದರ ಏರಿಕೆ ಬಸ್ ಪ್ರಯಾಣ ದರ ಏರಿಕೆಯೊಂದಿಗೆ ಆಗುತ್ತದೆ. ಕಳೆದ ವರ್ಷ ಜನವರಿಯಲ್ಲಿ ಬಸ್ ಪ್ರಯಾಣ ದರ ಏರಿಕೆಯಾಗಿತ್ತು. ಆದರೆ, ಲಗೇಜು ದರ ಏರಿಕೆ ಮಾಡಿರಲಿಲ್ಲ. ಇನ್ನು ಯಾವಾಗಲೂ ಬಸ್ ಪ್ರಯಾಣ ದರ ಎಷ್ಟು ಹೆಚ್ಚಾಗಿರುತ್ತದೆಯೋ ಅಷ್ಟೇ ಲಗೇಜು ದರವೂ ಹೆಚ್ಚಾಗುತ್ತದೆ. ಕಳೆದ ಬಾರಿ ಶೇ.15 ಬಸ್ ಪ್ರಯಾಣ ದರ ಹೆಚ್ಚಾಗಿತ್ತು. ಅದರಂತೆ ಈ ಬಾರಿ ಲಗೇಜು ದರವು ಶೇ.15 ಹೆಚ್ಚಾಗಿದೆ.


ಪರಿಷ್ಕೃತ ಲಗೇಜ್ ದರ

ಹಂತ	ಹಳೇ ದರ	ಪರಿಷ್ಕೃತ ದರ
1-5	₹5	₹6
6-10	₹10	₹12
11-15	₹14	₹20
16-20	₹18	₹25
21-25	₹21	₹28

ಜನರ ತೆರಿಗೆ ಹಣ ಜಾಹೀರಾತಿಗೆ ಖರ್ಚು: ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ

ರಾಜ್ಯದಲ್ಲಿ ಎನ್‌ಡಿಎಗೆ ಪೂರ್ಣ ಬಹುಮತ

• ಚಿಕ್ಕನಾಯಕನಹಳ್ಳಿ: ರಾಜ್ಯದ ಜನರಿಗೆ ಇನ್ನೊಬ್ಬರಿಗೆ ಕೊಡುವ ಶಕ್ತಿಯನ್ನು ಕೊಡಬೇಕಿತ್ತು. ಆದರೆ, ದಿನನಿತ್ಯ ಇನ್ನೊಬ್ಬರ ಮುಂದೆ ಕೈಯೊಡ್ಡುವ ಪರಿಸ್ಥಿತಿಗೆ ಜನರನ್ನು ದೂಡಲಾಗಿದೆ. ರಾಜ್ಯದ ತೆರಿಗೆ ಹಣವನ್ನು ಜಾಹಿರಾತಿಗೆ ಬಳಸುತ್ತಿದ್ದಾರೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವರಾದ ಎಚ್.ಡಿ. ಕುಮಾರಸ್ವಾಮಿ ಬೇಸರ ವ್ಯಕ್ತಪಡಿಸಿದರು.



ಪಟ್ಟಣದ ಹೈಸ್ಕೂಲ್ ಮೈದಾನದಲ್ಲಿ ಸೋಮವಾರ ಜಿಲ್ಲಾಡಳಿತ ಹಾಗೂ ತಾಲೂಕು ಆಡಳಿತ ಆಯೋಜಿಸಲಾಗಿದ್ದ ಜನಸ್ಪಂದನದ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಮಾತನಾಡಿದರು. ಜನರು ಬುದ್ಧಿವಂತರಾಗಬೇಕು. ಇನ್ನೊಬ್ಬರಿಗೆ ಕೊಡುವ ಶಕ್ತಿ ತಮಗೆ ಬರದೇ ಇರುವ ಬಗ್ಗೆ ಅವರು ಆಲೋಚನೆ ಮಾಡಬೇಕು. ಮಹಾತ್ಮ ಗಾಂಧೀಜಿ ಅವರ ರಾಮರಾಜ್ಯದ ಕನಸು ನನಸು ಎಂದರೆ ತಾನು ಒಬ್ಬರ ಮುಂದೆ ಕೈಚಾಚುವುದು ಅಲ್ಲ, ಇನ್ನೊಬ್ಬರಿಗೆ ಕೊಡುವುದು ಎಂದು ಕೇಂದ್ರ ಸಚಿವರು ಹೇಳಿದರು. ಪರೋಕ್ಷವಾಗಿ ಅವರು ರಾಜ್ಯ ಸರ್ಕಾರ ಜಾರಿಗೆ ತಂದಿರುವ ಗ್ಯಾರಂಟಿಗಳ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿದರು.

ಕರ್ನಾಟಕ ಸರ್ಕಾರ ಆರ್ಥಿಕವಾಗಿ ದಿವಾಳಿಯಾಗಿದೆ ಎಂದು ನಾನು ಹೇಳುವುದಿಲ್ಲ. ಆದರೆ, ಜನರನ್ನು ಶಾಶ್ವತವಾಗಿ ಆರ್ಥಿಕ ಸಬಲರನ್ನಾಗಿ ಮಾಡುವಷ್ಟು ಸಂಪನ್ಮೂಲ ರಾಜ್ಯದಲಿದೆ ಎಂದು ಎಂದಷ್ಟೇ ನಾನು ಹೇಳುತ್ತಿದ್ದೇನೆ ಎಂದವರು ನುಡಿದರು. ಅಭಿವೃದ್ಧಿ ಎನ್ನುವುದು ಪ್ರಚಾರದಲ್ಲಿ ಮಾತ್ರ ಕಾಣುತ್ತಿದೆ. ಕೇವಲ ಜಾಹೀರಾತುಗಳಲ್ಲಿ ಅಭಿವೃದ್ಧಿ ಕಾಣುತ್ತಿದೆ. ನೂರಾರು ಕೋಟಿ ಜನರ ತೆರಿಗೆ ಹಣವನ್ನು ಪೋಲು ಮಾಡಿ ಜಾಹೀರಾತು ನೀಡಲಾಗುತ್ತಿದೆ. ನಾನು ಎರಡು ಬಾರಿ ಮುಖ್ಯಮಂತ್ರಿ ಆಗಿದ್ದಾಗ ಸಾಕಷ್ಟು ಜನಪರ ಕೆಲಸಗಳನ್ನು ಮಾಡಿದ್ದೇನೆ.

ಆದರೆ, ಅದನ್ನು ಪ್ರಚಾರಕ್ಕೆ ಬಳಕೆ ಮಾಡಿಕೊಳ್ಳಲಿಲ್ಲ. ಈಗ ನೋಡಿದರೆ ಕೆಲಸಕ್ಕಿಂತ ಪ್ರಚಾರವೇ ಜಾಸ್ತಿಯಾಗಿದೆ ಎಂದು ಅವರು ಟೀಕಿಸಿದರು. ಪ್ರಚಾರಕ್ಕಿಂತ ಕರ್ತವ್ಯವೇ ಮಿಗಿಲು ಎಂದು ನಾನು ನಂಬಿದ್ದೇನೆ. ಕೇವಲ ರಾಜಕೀಯ ಲಾಭದ ಭರವಸೆಗಳಿಂದ ಜನರಿಗೆ ಉಪಯೋಗವಿಲ್ಲ. ಅವರನ್ನು ಶಾಶ್ವತವಾಗಿ ಮೇಲೆತ್ತುವ ಕೆಲಸ ಆಗಬೇಕಿದೆ. ಕೃಷಿಕರಿಗೆ ಶಕ್ತಿ ತುಂಬಬೇಕಿದೆ. ಶಿಕ್ಷಣ, ಆರೋಗ್ಯ, ಉದ್ಯೋಗ, ವಸತಿ ಸೌಲಭ್ಯಗಳು ಎಲ್ಲರಿಗೂ ಕೈಗೆಟುಕುವ ರೀತಿಯಲ್ಲಿರಬೇಕು. ಆದರೆ, ರಾಜ್ಯದಲ್ಲಿ ಬೇರೆಯದೇ ಪರಿಸ್ಥಿತಿ ಇದೆ ಎಂದು ಕೇಂದ್ರ ಸಚಿವರು ಕಳವಳ ವ್ಯಕ್ತಪಡಿಸಿದರು.

ಜಾತಿ ಹೆಸರಿನ ಮೇಲೆ ರಾಜಕೀಯ ಸಲ್ಲದು

ಸರ್ಕಾರಿ ಕಾರ್ಯಕ್ರಮದಲ್ಲಿ ಸಂವಿಧಾನದ ಪೀಠಿಕೆ ಓದಿ ನಾವು ಜಾತ್ಯತೀತರು ಎಂದು ಹೇಳುತ್ತೇವೆ. ಆದರೆ, ಆದಾದ ಮೇಲೆ ಜಾತಿ ಹೆಸರಿನ ಮೇಲೆ ರಾಜಕೀಯ ಮಾಡುತ್ತೇವೆ. ಇವತ್ತು ರಾಜಕೀಯ ಲಾಭಕ್ಕಾಗಿ, ಮೀಸಲಾತಿಗಾಗಿ ಜಾತಿಗಳನ್ನು ಒಡೆಯಲಾಗುತ್ತಿದೆ. ಆಮೇಲೆ ನಾವು ಜಾತ್ಯತೀತರು ಎಂದು ಹೇಳಿಕೊಳ್ಳುತ್ತಾರೆ. ಈ ವೈರುಧ್ಯಕ್ಕೆ ಏನು ಹೇಳುವುದು ಎಂದು ಅವರು ಬೇಸರ ವ್ಯಕ್ತಪಡಿಸಿದರು. ಜನತೆ ಜಾತಿಯ ವ್ಯಾಮೋಹದಿಂದ ಹೊರಬರದೇ ಹೋದರೆ ಅಭಿವೃದ್ಧಿ ಎಂಬುದು ಮರೀಚಿಕೆ ಆಗುತ್ತದೆ. ಕೃತಕ ಬುದ್ಧಿಮತ್ತೆ ಕಾಲದಲ್ಲಿಯೂ ನಮ್ಮ ಜಾತಿ ರಾಜಕಾರಣ ನಡೆಯುತ್ತಿದೆ ಎಂದು ಅವರು ಹೇಳಿದರು.

ವಿದೇಶಿ ಮಹಿಳೆ ಮೇಲೆ ಗ್ಯಾಂಗ್ ರೇಪ್ | ಒಡಿಶಾ ಪ್ರಜೆ ಹತ್ಯೆಗೈದ ಪ್ರಕರಣ

ಅತ್ಯಾಚಾರ: ಮೂವರಿಗೆ ಮರಣದಂಡನೆ

• ಗಂಗಾವತಿ: ತಾಲೂಕಿನ ಸಾಣಾಪುರದಲ್ಲಿ 11ತಿಂಗಳ ಹಿಂದೆ ವಿದೇಶಿ ಮಹಿಳೆ ಹಾಗೂ ಸ್ಥಳೀಯ ಹೋಂ ಸ್ಟೇ ಒಡತಿ ಮೇಲೆ ಸಾಮೂಹಿಕ ಅತ್ಯಾಚಾರ ಮತ್ತು ಒಡಿಶಾ ಪ್ರವಾಸಿಗನ ಹತ್ಯೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಗಂಗಾವತಿ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಮೂವರು ಅಪರಾಧಿಗಳಿಗೆ ಮರಣದಂಡನೆ ಶಿಕ್ಷೆ ವಿಧಿಸಿ ಆದೇಶಿಸಿದೆ.

ಗಂಗಾವತಿಯ ಸಾಯಿನಗರದ ಮಲ್ಲೇಶ್ (ಹಂದಿಮಲ್ಲ), ಸಾಯಿ (ಚೈತನ್ಯಸಾಯಿ) ಹಾಗೂ ಶರಣಪ್ಪ (ಶರಣು ಬಸವರಾಜ್) ಶಿಕ್ಷೆಗೆ ಒಳಗಾದ ಅಪರಾಧಿಗಳು. 2025ರ ಮಾರ್ಚ್ ತಿಂಗಳಲ್ಲಿ ತಾಲೂಕಿನ ಹಂಪಿಯ ಸಾಣಾಪೂರ ಬಳಿ ಈ ಪೈಶಾಚಿಕ ಕೃತ್ಯ ನಡೆದಿತ್ತು. ಇಸ್ರೇಲ್ ಮೂಲದ ಮಹಿಳೆಯ ಮೇಲೆ ಅತ್ಯಾಚಾರ ವೆಸಗಿದ್ದರು. ಈ ಘಟನೆಯಲ್ಲಿ ಒಡಿಶಾ ಪ್ರವಾಸಿಗನ ಕೊಲೆಯಾಗಿತ್ತು. ಈ ಘಟನೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗಿ ಜಿಲ್ಲೆಯ ಪ್ರವಾಸೋದ್ಯಮದ ಮೇಲೆ ಕರಿನೆರಳು ಬಿದ್ದಿತ್ತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಮಲ್ಲೇಶ್ ಅಲಿಯಾಸ್ ಹಂದಿಮಲ್ಲ, ಸಾಯಿ ಹಾಗೂ ಶರಣಪ್ಪ ಮೂವರ ಮೇಲೆ ಅತ್ಯಾಚಾರ, ಕೊಲೆ ಪ್ರಕರಣ ದಾಖಲಾಗಿತ್ತು. ಬಳಿಕ ಪೊಲೀಸರು ಅತ್ಯಂತ ಚುರುಕಾಗಿ ತನಿಖೆ ನಡೆಸಿ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ಈ ಪ್ರಕರಣದಲ್ಲಿ ಮಲ್ಲೇಶ್ ಅಲಿಯಾಸ್ ಹಂದಿಮಲ್ಲ, ಸಾಯಿ ಮತ್ತು ಶರಣಪ್ಪ ಎಂಬ ಮೂವರನ್ನು ಆರೋಪಿಗಳೆಂದು ಹೆಸರಿಸಲಾಗಿತ್ತು. ಸುದೀರ್ಘ ವಿಚಾರಣೆ ನಡೆಸಿದ ನ್ಯಾಯಾಲಯವು, ಸಾಕ್ಷ್ಯಾಧಾರಗಳನ್ನು ಪರಿಗಣಿಸಿ ಈ ಮೂವರೂ ದೋಷಿಗಳು ಎಂದು ಆದೇಶಿಸಿದೆ.

ಪಾನಮತ್ತರಾಗಿ ಇದೇ ಮಾರ್ಗದಲ್ಲಿ ಬಂದಿದ್ದ ಅಪರಾಧಿಗಳು ವಿದೇಶಿ ಮಹಿಳೆ, ಹೊಂ ಸ್ಟೇ ಒಡತಿ ಮೇಲೆ ಅತ್ಯಾಚಾರ ಎಸಗಿದ್ದರು.

9 ತಿಂಗಳಲ್ಲೇ ತೀರ್ಪು

ಇಡೀ ದೇಶವನ್ನೇ ಬೆಚ್ಚಿ ಬೀಳಿಸಿದ್ದ ಇಸ್ರೇಲ್ ಮಹಿಳೆ ಅತ್ಯಾಚಾರ ಮತ್ತು ಓರ್ವ ಪ್ರವಾಸಿಗನ ಕೊಲೆ ಪ್ರಕರಣ ಸಂಬಂಧ ಗಂಗಾವತಿ ನ್ಯಾಯಾಲ ಯವು ಫೆ.6ರಂದು ಮೂವರು ಆರೋಪಿಗಳನ್ನು ದೋಷಿಗಳೆಂದು ತೀರ್ಪು ನೀಡಿತ್ತು. ನ್ಯಾಯಾಧೀಶ ಸದಾನಂದ ನಾಗಪ್ಪ ನಾಯಕ ಅವರು ಅಪರಾಧಿಗಳಿಗೆ ಗಲ್ಲು ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದ್ದಾರೆ.



ಸಂಪಾದಕೀಯ

ಸೂಕ್ತ ಡಿಜಿಟಲ್ ನಿಯಮಗಳು

ಎಐ (ಕೃತಕ ಬುದ್ಧಿಮತ್ತೆ)ಯೆಂಬುದು ಈಗ ಎರಡಲಗಿನ ಕತ್ತಿಯಂತಾಗಿದೆ. ಅದು ಲಾಭಕರವಾಗಿರುವಂತೆಯೆ ಬಹಳಷ್ಟು ಹಾನಿಯನ್ನೂ ಹೊತ್ತು ತರುತ್ತಿದೆ. ವಂಚಕರಿಗೆ ತಮ್ಮ ವಂಚನೆಯ ಕಾರ್ಯವನ್ನು ಸುಗಮಗೊಳಿಸಲು ಎಐ ನೆರವಾಗುತ್ತಿದೆ. ಡಿಜಿಟಲ್ ಅರೆಸ್ಟ್‌ನಿಂದ ಹಿಡಿದು ಬ್ಯಾಂಕ್ ವಂಚನೆಯ ತನಕ ವಂಚಕರು ಎಐ ತಂತ್ರಜ್ಞಾನ ಬಳಸಿಕೊಂಡು ಜನರನ್ನು ಏಮಾರಿಸುತ್ತಿದ್ದಾರೆ. ಇದರ ಜತೆಗೇ ಸುಳ್ಳು ಸುದ್ದಿ ಹಬ್ಬಿಸುವಲ್ಲಿ ಮತ್ತು ಯಾರಾದರೊಬ್ಬರ ಕುರಿತು ಅಪಪ್ರಚಾರ ನಡೆಸುವಲ್ಲಿ ಕೂಡಾ ಎಐ ತಂತ್ರಜ್ಞಾನ ಬಳಸಿಕೊಳ್ಳಲಾಗುತ್ತಿದೆ. ಕೇಂದ್ರ ವಿತ್ತ ಸಚಿವೆ



ನಿರ್ಮಲಾ ಸೀತಾರಾಮನ್ ಅವರು ಆ್ಯಪ್ ಒಂದರ ಪರವಾಗಿ ಮಾತನಾಡುವ ಎಐ ರಚಿತ ವಿಡಿಯೋವೊಂದು ಬಹಳಷ್ಟು ಮಂದಿಯನ್ನು ಮೋಸಗೊಳಿಸಿತ್ತು. ಪ್ರಧಾನಿ ಮೋದಿಯವರನ್ನು ಅವಹೇಳನ ಮಾಡುವ ರೀತಿಯ ಹಲವಾರು ಎಐ ರಚನೆಯ ವಿಡಿಯೋಗಳು, ಚಿತ್ರಗಳು ಆಗಾಗ ಪ್ರಸಾರವಾಗುತ್ತಿರುತ್ತವೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರಕಾರವು ಇನ್ನು ಮುಂದೆ ಎಐ ರಚನೆಯ ಚಿತ್ರಣಗಳಿಗೆಲ್ಲ ಅದರ ಮೆಟಾಡೇಟಾ ನಮೂದಿಸಿರಬೇಕು ಎಂಬುದನ್ನು ಕಡ್ಡಾಯಗೊಳಿಸಿದೆ. ಇದರಿಂದಾಗಿ ತಾವು ನೋಡುತ್ತಿರುವುದು ಸತ್ಯವೇ ಸುಳ್ಳೇ, ವಿಡಿಯೋದ ಮೂಲ ಎಲ್ಲಿಯದು ಎಂಬುದು ತಿಳಿಯಲು ಜನರಿಗೆ ಸಹಾಯಕವಾಗಲಿದೆ.

ಸಿಂಥೆಟಿಕ್ ಆಗಿ ರೂಪುಗೊಂಡ ಮಾಹಿತಿಗಳೆಲ್ಲವನ್ನೂ ಸ್ಪಷ್ಟವಾಗಿ ನಮೂದಿಸಿರಬೇಕು ಎಂಬ ನಿಯಮ ಜಾರಿಗೆ ತರುವ ಮೂಲಕ ಸರಕಾರವು ಇವುಗಳಲ್ಲಿ ಪಾರದರ್ಶಕತೆ ತರಲು ಉದ್ದೇಶಿಸಿದೆ. ಆನ್‌ಲೈನ್ ಮೂಲಕ ಬರುವ ಮಾಹಿತಿಗಳ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳುವುದೂ ಈ ಪ್ರಯತ್ನದ ಹಿಂದಡಗಿದೆ. ಕೆಲವರು ಇದು ಸೆನ್ಸಾರ್‌ಶಿಪ್ ಎಂದು ಟೀಕಿಸುವುದಿದೆಯಾದರೂ ಇದು ಸೆನ್ಸಾರ್‌ಶಿಪ್ ಅಲ್ಲ, ಅದಕ್ಕಿಂತಲೂ ಮುಖ್ಯವಾಗಿ ಮಾಹಿತಿ ಬಹಿರಂಗ ಪ್ರಕ್ರಿಯೆ ಎನ್ನಬಹುದು. ಎಐನ್ನು ನಿಷೇಧಿಸುವುದು ಇಲ್ಲಿನ ಉದ್ದೇಶವಲ್ಲ, ಅದನ್ನು ಹೆಚ್ಚು ಪಾರದರ್ಶಕಗೊಳಿಸುವುದೇ ಪ್ರಧಾನ ಉದ್ದೇಶ ಎಂಬುದನ್ನು ಅರಿಯಬೇಕು. ತಿರುಚಿದ ವಿಡಿಯೋಗಳು ವ್ಯಕ್ತಿಯ ಮಾನಹರಣಕ್ಕೆ, ಬ್ಲಾಕ್‌ಮೇಲಿಗೆ ಕಾರಣವಾಗುವ ಸಾಧ್ಯತೆಯಿರುವುದರಿಂದ ಎಐ ಮೇಲೆ ಇಂತಹ ಕೆಲವು ನಿಬಂಧನೆ ಹಾಕುವುದು ಅಗತ್ಯವಾಗಿದೆ. ಹಾಗೆಂದು ಡೀಪ್‌ಫೇಕ್‌ನ್ನು ಸಂಪೂರ್ಣ ನಿಯಂತ್ರಿಸುವುದು ಅಷ್ಟು ಸುಲಭವಲ್ಲ ಎಂಬುದೂ ನಿಜವೆ. ಸೂಕ್ತ ಕ್ರಮ ತೆಗೆದುಕೊಳ್ಳುವ ಮೊದಲೇ ಅದು ಕೋಟ್ಯಂತರ ಜನರನ್ನು ತಲುಪುವುದಿದೆ. ಆದರೂ ಸರಕಾರ ಈ ನಿಟ್ಟಿನಲ್ಲಿ ಇಟ್ಟಿರುವ ಕ್ರಮವನ್ನು ಶ್ಲಾಘಿಸಬೇಕು. ಇಂತಹ ವಿಡಿಯೋಗಳನ್ನು ಹರಡುವ ಸಾಮಾಜಿಕ ಜಾಲತಾಣಗಳೂ ಈ ನಿಯಮವನ್ನು ಕಡ್ಡಾಯವಾಗಿ ಪಾಲಿಸಬೇಕು.

ಇರಾನ್-ಅಮೇರಿಕಾ ಯುದ್ಧ ನಡೆಯಲಿದೆಯೇ?

ರಾಘವಾಂಕಣ
• ರಾಘವೇಂದ್ರ ಸುಬ್ರಹ್ಮಣ್ಯ
raghavaankana@gmail.com



ಕಳೆದ ವಾರದ ಅಂಕಣದಲ್ಲಿ ಅಮೇರಿಕಾ ಮತ್ತು ಇರಾನ್ ನಡುವೆ ಯುದ್ಧ ನಡೆಯಬಹುದೋ ಇಲ್ಲವೋ ಎಂಬುದರ ಬಗ್ಗೆ ಅವಲೋಕಿಸಿದ್ದೆ. ಪೂರ್ಣಪ್ರಮಾಣದ ಯುದ್ಧದ ಬದಲಿಗೆ ಅಮೇರಿಕಾ ತನ್ನ ನಿಕ್ಸನ್ ನಂತರದ ಕಾಲಾವಧಿಯಲ್ಲಿ ಕಲಿತು, ಅನುಸರಿಸಿ ಲ್ಯಾಟೀನ್ ಅಮೇರಿಕಾ, ಭಾರತ, ರಷ್ಯಾ, ತೈವಾನ್, ಫಿಲಿಪ್ಪೀನ್ಸ್, ಕ್ಯೂಬಾ, ಮಧ್ಯಪ್ರಾಚ್ಯ ಇತ್ಯಾದಿ ದೇಶಗಳಲ್ಲಿ ಮತ್ತೆ ಮತ್ತೆ ಒಳ್ಳೆಯ ಫಲಿತಾಂಶ ಪಡೆದಿರುವ ತನ್ನ ಅಭ್ಯಾಸವಾದ 'ಪ್ರಾಕ್ಸಿ-ವಾರ್' ಮೂಲಕವೇ ಇರಾನನ್ನು ಅಲ್ಲಾಡಿಸಲು ಪ್ರಯತ್ನಿಸುತ್ತದೆ ಎಂದಿದ್ದೆ. ಸದ್ಯಕ್ಕೆ ಅದೇ ತಂತ್ರವೇ ಮುಂದುವರೆಯುವ ಲಕ್ಷಣಗಳಿವೆ. ಈ ಪ್ರಹಸನ ಪೂರ್ಣಪ್ರಮಾಣದ ಯುದ್ಧಕ್ಕೆ ತಿರುಗುವ ಸಾಧ್ಯತೆಗಳು ಕಡಿಮೆಯೇ. ಅದಕ್ಕೆ ಮುಖ್ಯ ಕಾರಣ ಅಮೇರಿಕಾ ಅಥವಾ ಇರಾನ್ ಎರಡೂ ಪಕ್ಷಗಳಲ್ಲವೇ ಅಲ್ಲ. ಅಮೇರಿಕಾಕ್ಕೆ ಈ ಯುದ್ಧ ನಡೆದರೂ, ನಡೆಯದಿದ್ದರೂ ಹೆಚ್ಚಿನ ವ್ಯತ್ಯಾಸವಾಗುವುದಿಲ್ಲ. ಇತ್ತಕಡೆ ಇರಾನ್ ದಶಕಗಳಿಂದ ಹೆದರಿಸೋದೇ ಆಯ್ತು, ನಮ್ಮನ್ನು ಬಗ್ಗಿಸಲು ಅವರಿಗೆ ಸಾಧ್ಯವೇ ಆಗಿಲ್ಲ, ಯುದ್ಧ ನಡೆದರೆ ನಡೆದೇ ಬಿಡಲಿ ಎಂಬ ನಿಲುವಿನಲ್ಲಿದೆ. ಒಟ್ಟಿನಲ್ಲಿ ಇಬ್ಬರೂ ಯುದ್ಧಸನ್ನದ್ಧರಾಗಿ ನಿಂತಿದ್ದಾರೆ.

ಹೌದು. ಹೊಡೆಯುವ ತರಾತುರಿಯಲ್ಲಿ ಅಮೇರಿಕಾ ಇದ್ದರೆ, ಮಟ್ಟಹಾಕುವ ಜಿದ್ದಿನಲ್ಲಿ ಇರಾನ್ ಇದೆ. ಅಮೇರಿಕಾದ ಒಂದು ಕ್ಷಿಪಣಿ ನಮ್ಮ ಮೇಲೆ ಬಿದ್ದರೂ, ತೆಲ್-ಅವಿವ್ ಮೇಲೆ ಪರಮಾಣು ಬಾಂಬ್ ಬಿದ್ದೇ ಸರಿ ಎಂದು ಇರಾನ್ ಹೇಳಿಯಾಗಿದೆ. ನೆನಪಿರಲಿ, ನಾವು ಅಣುಬಾಂಬ್ ತಯಾರಿಸುವುದಿಲ್ಲ ಎಂಬ ಎನ್‌ಪಿಟಿ ಸಂಧಾನಕ್ಕೆ ಅಂದರೆ ನಾನ್-ಪ್ರೊಲಿಫರೇಷನ್ ಟ್ರೀಟೀ ನಾವಾಗಿಯೇ ಅಣುಬಾಂಬ್ ಮೊದಲಿಗೆ ಬಳಸುವುದಿಲ್ಲ ಎಂಬ ನೀತಿಗೆ ಇರಾನ್ ಯಾವುದೇ ನಿರ್ದಿಷ್ಟ ಅಂತರರಾಷ್ಟ್ರೀಯ ಒಪ್ಪಂದಕ್ಕೆ ಸಹಿ ಹಾಕಿಲ್ಲ. ಅತ್ತಕಡೆ ಅಮೇರಿಕಾ ಕೂಡಾ ಇದೇ ಮನಸ್ಥಿತಿಯಲ್ಲಿದೆ. ಅಂದರೆ ಇಬ್ಬರಲ್ಲಿ ಯಾರು ಬೇಕಾದರೂ ಅಣುಬಾಂಬ್ ಹಾಕಲಿಕ್ಕೆ ಬಟನ್ ಒತ್ತಬಹುದು. ಒಮಾನ್ ಮತ್ತು ಸ್ವಿಟ್ಜರ್ಲ್ಯಾಂಡ್ ಸಾಮಾನ್ಯವಾಗಿ ಜಗತ್ತಿನ ಎಲ್ಲಾ ಶಾಂತಿ ಸಂಧಾನಗಳಲ್ಲಿ ಮುಂಚೂಣಿಯಲ್ಲಿರುವ ಹೆಸರುಗಳು. ಇದರ ಜೊತೆಗೇ ಟರ್ಕಿ, ಸೌದಿ ಅರೇಬಿಯಾ, ಕತಾರ್ ಮತ್ತು ರಷ್ಯಾ ಕೂಡಾ ಯುದ್ಧವಾಗದಂತೆ ತಡೆಯಲು ಮಾತುಕತೆಗೆ ತಮ್ಮ ನೆರವನ್ನು ಘೋಷಿಸಿವೆ. ಟರ್ಕಿಗೆ ಅಮೇರಿಕಾದ ಬಳಿ ಬೆನ್ನು ತಟ್ಟಿಸಿಕೊಳ್ಳುವ ಆಸೆ, ರಷ್ಯಾಕ್ಕೆ ಅಮೇರಿಕಾದ ಮೂತಿ ತಿವಿಯುವ ಆಸೆ. ಹಾಗಾಗಿ ಈ ಮಾತುಕತೆಗೆ ಮುಂದೆಬಂದಿವೆ ಎಂದುಕೊಳ್ಳೋಣ. ಸೌದಿ ಮತ್ತು ಕತಾರ್ ಯಾಕೆ ಈ ಮಾತುಕತೆಗೆ ಬರುತ್ತಿವೆ? ಇಸ್ಲಾಮಿನ ಪ್ರಮುಖ ಪಂಗಡಗಳಾದ ಸುನ್ನಿ ಮತ್ತು ಶಿಯಾ ಕೇಂದ್ರಗಳಾಗಿರುವ ಸೌದಿ ಮತ್ತು ಇರಾನ್ ನಡುವೆ ಸ್ನೇಹಸಂಬಂಧ ಅಷ್ಟಕ್ಕಷ್ಟೇ. ಕತಾರ್ ಮೇಲಂತೂ ಕಳೆದ ವರ್ಷ ಇರಾನ್ ಕ್ಷಿಪಣಿಗಳನ್ನೇ ಉಡಾಯಿಸಿತ್ತು. ಆದರೂ ಯಾಕೆ ಇವರೆಡೂ ದೇಶಗಳು ಸಂಧಾನಕ್ಕೆ ಮುಂದಾಗಿವೆ!?

ಆರ್ಥಿಕ ಮತ್ತು ಇಂಧನ ಬಿಕ್ಕಟ್ಟಿನ ದೃಷ್ಟಿಯಿಂದ ನೋಡಿದರೆ, ಅಮೇರಿಕಾ ತನ್ನ ಮೇಲೆ ಧಾಳಿ ಮಾಡಿದರೆ ಅಥವಾ ಧಾಳಿಯ ಬಗ್ಗೆ ಯೋಚಿಸಿದರೂ ಕೂಡಾ, ಜಗತ್ತಿನ ಶೇ. 20ರಷ್ಟು ತೈಲ ರಫ್ತಾಗುವ ಬಿಹಾರ್ಮುಜ್ ಜಲಸಂಧಿ'ಯನ್ನು ಮುಚ್ಚುವುದಾಗಿ ಇರಾನ್ ಬೆದರಿಕೆ ಹಾಕಿದೆ. ಒಂದು ವೇಳೆ ಯುದ್ಧ ನಡೆದು ಈ ಮಾರ್ಗ ಬಂದ್ ಆದರೆ, ಗಲ್ಫ್ ರಾಷ್ಟ್ರಗಳ ಹಣಕಾಸಿನ ಮುಖ್ಯ ನಾಳವೇ ಬಂದ್ ಆದಂತೆ. ಇದರಿಂದಾಗಿ ಕಚ್ಚಾ ತೈಲದ ಬೆಲೆ ಪ್ರತಿ ಬ್ಯಾರೆಲ್‌ಗೆ 120 ಡಾಲರ್ ದಾಟಬಹುದು. ಇದು ಜಾಗತಿಕ ಆರ್ಥಿಕ ಹಿಂಜರಿತಕ್ಕೆ ಕಾರಣವಾಗುವುದಲ್ಲದೆ, ತೈಲ ಮಾರಾಟದ ಮೇಲೆ ಅವಲಂಬಿತವಾಗಿರುವ ಗಲ್ಫ್ ರಾಷ್ಟ್ರಗಳ ಬಜೆಟ್ ಸಮತೋಲನವನ್ನು ತಪ್ಪಿಸಬಹುದು. ಅನ್ನಾಹಾರಗಳನ್ನದರೂ ವಿಮಾನದ ಮೂಲಕ ತರಿಸಿಕೊಳ್ಳಬಹುದು. ಆದರೆ, ತೈಲವನ್ನು ವಿಮಾನಗಳ ಮೂಲಕ ರಫ್ತುಮಾಡಲಿಕ್ಕಾಗುವುದಿಲ್ಲ.

ಎರಡನೆಯದಾಗಿ, ಈ ಯುದ್ಧ (ನಡೆದರೆ) ಧಾರ್ಮಿಕ ಮತ್ತು ರಾಜತಾಂತ್ರಿಕ ಧ್ರುವೀಕರಣಕ್ಕೆ ದಾರಿ ಮಾಡಿಕೊಡಲಿದೆ. ಗಲ್ಫ್ ಪ್ರದೇಶದಲ್ಲಿ ಸುನ್ನಿ ಮತ್ತು ಶಿಯಾ ಪಂಗಡಗಳ ನಡುವಿನ ಧಾರ್ಮಿಕ ಭಿನ್ನತೆಗಳು ಈಗಾಗಲೇ ರಾಜಕೀಯ ಸ್ವರೂಪ ಪಡೆದಿವೆ. ಇರಾನ್ ಶಿಯಾ ಬಹುಸಂಖ್ಯಾತ ರಾಷ್ಟ್ರವಾಗಿದ್ದರೆ, ಸೌದಿ ಅರೇಬಿಯಾದಂತಹ ದೇಶಗಳು ಸುನ್ನಿ ಮುಸ್ಲಿಂ ನಾಯಕತ್ವವನ್ನು ಹೊಂದಿವೆ. ಯುದ್ಧ ಸಂಭವಿಸಿದರೆ, ಮಧ್ಯಪ್ರಾಚ್ಯದ ಎಲ್ಲಾ ದೇಶಗಳು ಯಾವುದಾದರೂ ಒಂದು ಬಣವನ್ನು ಬೆಂಬಲಿಸಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಗುತ್ತದೆ. ಮೂರನೆಯದಾಗಿ, ಗಲ್ಫ್ ರಾಷ್ಟ್ರಗಳಿಗೆ ತಮ್ಮ ವಿಷನ್ 2030 ಮತ್ತು ಆರ್ಥಿಕ ವೈವಿಧ್ಯೀಕರಣಕ್ಕೆ ಈ ಯುದ್ಧ ಮಾರಕ ಹೊಡೆತ ನೀಡಲಿದೆ. 2030ರ ಹೊತ್ತಿಗೆ ಇಡೀ ಗಲ್ಫ್ ಒಕ್ಕೂಟ 'ವಿಷನ್ 2030' ಅಡಿಯಲ್ಲಿ ಸಾವಿರಾರು ಕೋಟಿ ಡಾಲರ್ ಹೂಡಿಕೆ ಮಾಡುತ್ತಿವೆ. ಈ ಸಮಯದಲ್ಲಿ ಯುದ್ಧದ ಭೀತಿ ಹುಟ್ಟಿದರೆ ಅದು ವಿದೇಶಿ ಹೂಡಿಕೆದಾರರನ್ನು ಹಿಮ್ಮೆಟ್ಟಿಸಬಹುದು ಮತ್ತು ಈ ಮಹತ್ವಾಕಾಂಕ್ಷೆಯ ಯೋಜನೆಗಳಿಗೆ ತಡೆಯೊಡ್ಡಬಹುದು.

ಈ ಮೂರು ಕಾರಣಗಳಿಂದಾಗಿ ಈ ಯುದ್ಧವನ್ನು ಹೇಗಾದರೂ ಮಾಡಿ ತಡೆಯಲಿಕ್ಕೆ ಗಲ್ಫ್ ರಾಷ್ಟ್ರಗಳು ತೆರೆಮರೆಯಲ್ಲಿ ಬಹಳ ದೊಡ್ಡ ಪ್ರಯತ್ನ ನಡೆಸಿವೆ. 2026ರ ಆರಂಭದಲ್ಲಿ, ಅಮೆರಿಕವು ಇರಾನ್‌ನ ಸವಾಲುಗಳನ್ನು ಎದುರಿಸಲು ಪಶ್ಚಿಮ ಏಷ್ಯಾದಲ್ಲಿ ತನ್ನ 'ಸೆಂಟ್ರಲ್ ಕಮಾಂಡ್' ಮೂಲಕ ಅತ್ಯಾಧುನಿಕ ಕ್ಷಿಪಣಿ ನಿರೋಧಕ ವ್ಯವಸ್ಥೆಗಳನ್ನು ಮತ್ತು ಐದನೇ ತಲೆಮಾರಿನ ಯುದ್ಧವಿಮಾನಗಳನ್ನು ನಿಯೋಜಿಸಿತು. ವಿಶೇಷವಾಗಿ ಕತಾರ್‌ನ ಅಲ್-ಉದೈದ್ ಮತ್ತು ಯುಎಇಯ ಅಲ್-ದಫ್ರಾ ವಾಯುನೆಲೆಗಳಲ್ಲಿ ಮಿಲಿಟರಿ ಸನ್ನದ್ಧತೆಯನ್ನು ಹೆಚ್ಚಿಸಿಕೊಂಡು, ಇದಕ್ಕೆ ಬ್ಯಾಕ್-ಅಪ್ ಆಗಿ ರಷ್ಯಾ ವಿರುದ್ಧ ಬಳಸುವ ಯೋಚನೆಯಿಟ್ಟುಕೊಂಡು ಒಂದಾನೊಂದು ಕಾಲದಲ್ಲಿ ಟರ್ಕಿಯಲ್ಲಿ ನಿಯೋಜಿಸಿದ್ದ ತನ್ನ ಕ್ಷಿಪಣಿಗಳನ್ನೂ ಇರಾನ್ ಕಡೆಗೆ ಮುಖಮಾಡಿಸಿತ್ತು. ಇತ್ತೀಚಿನ ವರದಿಗಳ ಪ್ರಕಾರ, ಅಮೆರಿಕವು ಇರಾನ್‌ನ ಡ್ರೋನ್ ದಾಳಿಗಳನ್ನು ತಡೆಯಲು ಈ ಎಲ್ಲಾ ವಾಯು ಮತ್ತು ನೌಕಾನೆಲೆಗಳಲ್ಲಿ 'ಲೇಸರ್ ಡಿಫೆನ್ಸ್ ಸಿಸ್ಟಮ್' ಅನ್ನು ಪ್ರಾಯೋಗಿಕವಾಗಿ ಅಳವಡಿಸಿದೆ.

ಇದರ ಮಧ್ಯ ಜಿಸಿಸಿ ರಾಷ್ಟ್ರಗಳು ಈಗ ಕೇವಲ ಅಮೆರಿಕದ ಮೇಲೆ ಅವಲಂಬಿತವಾಗದೆ, ತಮ್ಮ ರಕ್ಷಣಾ ನೀತಿಯನ್ನು ವೈವಿಧ್ಯಗೊಳಿಸುವತ್ತ ತಲೆಹಾಕಿವೆ. ಸೌದಿ ಅರೇಬಿಯಾ ಮತ್ತು ಯುಎಇ ದೇಶಗಳು ಚೀನಾ ಮತ್ತು ಫ್ರಾನ್ಸ್‌ನೊಂದಿಗೆ ರಕ್ಷಣಾ ತಂತ್ರಜ್ಞಾನ ಹಂಚಿಕೆ ಒಪ್ಪಂದಗಳನ್ನು ಮಾಡಿಕೊಂಡಿವೆ. ಭಾರತದಿಂದ ರಕ್ಷಣಾ ವಲಯದಲ್ಲಿ ಬಹಳ ದೊಡ್ಡ ಸಂಧಾನಗಳಾಗಿವೆ. ಇರಾನ್‌ನ ಕ್ಷಿಪಣಿ ಬೆದರಿಕೆಯನ್ನು ಎದುರಿಸಲು ಈ ಎಲ್ಲಾ ದೇಶಗಳು ಸೇರಿ 'ಇಂಟಿಗ್ರೇಟೆಡ್ ಏರ್ ಅಂಡ್ ಮಿಸೈಲ್ ಡಿಫೆನ್ಸ್' ವ್ಯವಸ್ಥೆಯನ್ನು ಜಾರಿಗೆ ತರಲು ಒಲವು ತೋರುತ್ತಿವೆ. ಯುದ್ಧದ ಸಂದರ್ಭದಲ್ಲಿ ತಮ್ಮ ನೆಲವನ್ನು ಇರಾನ್ ಮೇಲೆ ದಾಳಿ ಮಾಡಲು ಬಳಸದಂತೆ ಅಮೆರಿಕಕ್ಕೆ ಈ ರಾಷ್ಟ್ರಗಳು ಸೂಚನೆ ನೀಡಿರುವುದು ಹೊಸ ರಾಜತಾಂತ್ರಿಕ ಬೆಳವಣಿಗೆಯಾಗಿದೆ. ಈ ಕಾರ್ಯತಂತ್ರದ ಬದಲಾವಣೆ ಗಲ್ಫ್ ರಾಷ್ಟ್ರಗಳು ತಮ್ಮ ಸ್ವಂತ ಭದ್ರತೆಯ ಬಗ್ಗೆ ಹೆಚ್ಚು ಜಾಗೃತವಾಗಿರುವುದನ್ನು ತೋರಿಸುತ್ತದೆ.

ಕುತೂಹಲಕಾರಿ ವಿಷಯವೆಂದರೆ, ಈ ಹಿಂದೆ ಇರಾನ್ ವಿರುದ್ಧ ಕಠಿಣ ನಿಲುವು ಹೊಂದಿದ್ದ ಸೌದಿ ಅರೇಬಿಯಾ ಮತ್ತು ಯುಎಇ ಈಗ 'ಸಂಘರ್ಷಕ್ಕಿಂತ ಮಾತುಕತೆ' ಲೇಸು ಎಂಬ ನಿಲುವಿಗೆ ಬಂದಿವೆ. ಅಮೆರಿಕದ ಮಿಲಿಟರಿ ದಾಳಿಯು ಇರಾನ್ ಪ್ರಭುತ್ವವನ್ನು ಪತನಗೊಳಿಸಿದರೆ, ಅದು ಆ ಭಾಗದಲ್ಲಿ ಭೀಕರ ಅರಾಜಕತೆಯನ್ನು ಸೃಷ್ಟಿಸಬಹುದು ಎಂಬುದು ಇವರ ಆತಂಕ. ಮಾತ್ರವಲ್ಲದೇ, ಈ ಹುಚ್ಚರ ಆಟದಲ್ಲಿ ಇರಾನ್ ಮೇಲೇನೇನಾದರೂ ಅಣುಬಾಂಬ್ ಬಿದ್ದರೆ, ಅದರ ಎರಡನೇ ಅಲೆಯ ವಿನಾಶಕ್ಕೆ ತುತ್ತಾಗುವುದು ಯುಎಇ, ಒಮಾನ್, ಕತಾರ್, ಕುವೈತ್ ಮತ್ತು ಬಹರೈನ್. ಛಬರ್ ಬಂದರಿನ ಮೇಲೆ ಅಮೇರಿಕಾದ ಅಣುಬಾಂಬ್ ಬಿದ್ದರೆ, ಅದರಿಂದ ಹುಟ್ಟುವ ಸುನಾಮಿ ಯುಎಇ ಮತ್ತು ಕತಾರ್ ಅನ್ನು ಸುಲಭವಾಗಿ ಮುಳುಗಿಸುತ್ತದೆ.

ಸೌದಿ ಅರೇಬಿಯಾ ಸ್ವಲ್ಪ ದೂರದಲ್ಲಿದ್ದರೂ, ಯಾವುದೇ ಜಿಸಿಸಿ ದೇಶದ ಮೇಲೆ ನಡೆದ ವಿನಾಶದ ಕೃತ್ಯ, ಸೌದಿ ಅರೇಬಿಯಾಕ್ಕೆ ನಡೆಸಿದ ವಿನಾಶಕ್ಕೇ ಸಮ. ಆದ್ದರಿಂದಲೇ ಒಮಾನ್ ಮತ್ತು ಕತಾರ್ ಈಗ ಅಮೆರಿಕ ಹಾಗೂ ಇರಾನ್ ನಡುವೆ ಮಧ್ಯಸ್ಥಿಕೆ ವಹಿಸುತ್ತಿವೆ.

ಅಮೆರಿಕ ಮತ್ತು ಇರಾನ್ ನಡುವಿನ ಯುದ್ಧವು ಕೇವಲ ಎರಡು ದೇಶಗಳ ನಡುವಿನ ಹೋರಾಟವಾಗಿ ಉಳಿಯದೆ, ಇಡೀ ಪಶ್ಚಿಮ ಏಷ್ಯಾವನ್ನು ಸುಡಬಲ್ಲದು ಎಂಬ ಸತ್ಯ ಇದೀಗ ಈ ದೇಶಗಳಿಗೆ ಮನವರಿಕೆಯಾಗಿದೆ. ಅಂತಿಮವಾಗಿ, ರಾಜತಾಂತ್ರಿಕ ಪರಿಹಾರವೇ ಈ ಬಿಕ್ಕಟ್ಟಿಗೆ ಏಕೈಕ ದಾರಿಯೆಂಬುದು ಗಲ್ಫ್ ದೇಶಗಳ ಒಮ್ಮತದ ನಿರ್ಧಾರ ಹಾಗೂ ಅದೇ ಅವರ ಸದ್ಯದ ಗುರಾಣಿ ಕೂಡ. ಹೀಗೆ ಟ್ರಂಪ್ ಮತ್ತು ಖೊಮೇನಿಯ ನಡುವಿನ ಅಹಂಕಾರದ ಯುದ್ಧ, ಅರೇಬಿಯನ್ ಪ್ರಸ್ಥಭೂಮಿಗೆ ಎರವಾಗಿ ನಿಂತಿದೆ. ವಿವೇಚನೆಯ ಮಾತೇ ಕೊನೆಯದಾಗಿ ಮನ್ನಣೆ ಪಡೆಯಲಿ ಎಂಬುದು ಎಲ್ಲರ ಆಶಯ.

ಕೃತಕ ಬುದ್ಧಿಮತ್ತೆ, ಲೇ ಆಫ್ ಮತ್ತು 'ನಮ್ಮ ನಾಳೆ'


ಹೊಸ ಸವಾಲು ಬರುತ್ತಿರುವಾಗ ಕೆಲಸವೇ ಜೀವನ ಎಂಬ ಭ್ರಮೆ ಬಿಟ್ಟು, ಬದುಕಲು ಕೆಲಸ ಮಾಡುವ ಪ್ರಜ್ಞೆ ಬರಬೇಕಿದೆ.

▸ ಪ್ರಸನ್ನ ಹೆಗಡೆ

ಸೆಪ್ಟೆಂಬರ್ 2008ರಲ್ಲಿ ಅಮೆರಿಕದಲ್ಲಿ ನಡೆದ ಲೇಮನ್ ಬ್ರದರ್ಸ್ ಕಂಪನಿಯ ಹಗರಣ ಇಡೀ ವಿಶ್ವದ ಆರ್ಥಿಕತೆಯ ಮೇಲೆ ಬೀರಿದ ಪರಿಣಾಮ ಭೀಕರ. ಜಾಗತಿಕ ಆರ್ಥಿಕ ರಂಗ ಒಮ್ಮೆಲೆ ಬೆಚ್ಚಿಬಿದ್ದಿತ್ತು. ಲಕ್ಷಾಂತರ ಜನರ ಉದ್ಯೋಗ ಹೋಯಿತು, ಶ್ರೀಮಂತ ದೇಶಗಳ ಮಧ್ಯಮ ವರ್ಗ ನಡುಗಿ ಹೋಯಿತು, ಭಾರತ ಸೇರಿದಂತೆ ಅನೇಕ ಅಭಿವೃದ್ಧಿಶೀಲ ರಾಷ್ಟ್ರಗಳ ಮೇಲೂ ಅದರ ಛಾಯೆ ಬಿದ್ದಿತ್ತು. ಆ ಆಘಾತದಿಂದ ಚೇತರಿಸಿಕೊಳ್ಳಲು ವಿಶ್ವಕ್ಕೆ ಒಂದು ದಶಕಕ್ಕೂ ಹೆಚ್ಚು ಕಾಲ ಬೇಕಾಯಿತು.

ಆ ನೋವು ಮರೆಯಾಗುವ ಮೊದಲೇ 2020ರಲ್ಲಿ ಕೋವಿಡ್ ಮಹಾಮಾರಿ ಜಗತ್ತನ್ನು ಮತ್ತೊಮ್ಮೆ ತಲ್ಲಣಗೊಳಿಸಿತು. ವ್ಯಾಪಾರ ವಹಿವಾಟು ಸ್ಥಗಿತಗೊಂಡಿತು, ದೇಶ-ದೇಶಗಳ ನಡುವಣ ಗಡಿಗಳು ಮುಚ್ಚಿದವು, ಕೋಟ್ಯಂತರ ಜನ ಕೆಲಸ ಕಳೆದುಕೊಂಡರು. ಅದರ ನಂತರ ಪ್ರಪಂಚ ಮತ್ತೆ ಹಳಿ ಹತ್ತುತ್ತಿದೆ ಎಂದು ನಿಟ್ಟುಸಿರು ಬಿಡುವ ಮೊದಲೇ, 2022ರ ಮಧ್ಯದಿಂದ ಮತ್ತೊಂದು ಆರ್ಥಿಕ ಚಳಿ ಜಗತ್ತಿನ ತಂತ್ರಜ್ಞಾನ ವಲಯದಲ್ಲಿ ಮೆಲ್ಲಗೆ ಶುರುವಾಗಿ 2023, 2024ರಲ್ಲಿ ಭರ್ಜರಿಯಾಗಿ ಅಪ್ಪಳಿಸಿತು. ಅದರ ಕಂಪು 2025-26ರ ವರೆಗೂ ಮುಂದುವರಿದಿದೆ.

2022ರಲ್ಲಿ ಅಮೆರಿಕದ ಟೆಕ್ ಕಂಪನಿಗಳಲ್ಲಿ ಸುಮಾರು 93,000 ಉದ್ಯೋಗಿಗಳು ಕೆಲಸ ಕಳೆದುಕೊಂಡರು. 2023 ರಲ್ಲಿ ಅದು ದ್ವಿಗುಣವಾಗಿ ಸುಮಾರು 2,64,000 ಜನ ಕೆಲಸ ಕಳೆದುಕೊಂಡರು. ಮೆಟಾದ ಮಾರ್ಕ್ ಜೂಕರ್ಬರ್ಗ್ ಆ ವರ್ಷವನ್ನು 'Year of Efficiency' ಎಂದು ಕರೆದ. 2024ರಲ್ಲಿ ಸ್ವಲ್ಪ ಇಳಿಮುಖವಾಗಿ ಸುಮಾರು 1,52,000 ಉದ್ಯೋಗಿಗಳು ಟೆಕ್ ಕ್ಷೇತ್ರ ಬಿಡಬೇಕಾಯಿತು. 2025ರಲ್ಲಿ ಜಗತ್ತಿನಾದ್ಯಂತ ಟೆಕ್ ಕ್ಷೇತ್ರದಲ್ಲಿ 2,45,953 ಮಂದಿ ಕೆಲಸ ಕಳೆದುಕೊಂಡಿದ್ದಾರೆ; ಅಂದರೆ ಪ್ರತಿದಿನ ಸರಾಸರಿ 674 ಉದ್ಯೋಗಿಗಳು ಕೆಲಸ ಕಳೆದುಕೊಂಡ ಲೆಕ್ಕ. 2026ರ ಮೊದಲ ಆರು ವಾರಗಳಲ್ಲಿ ಇದಾಗಲೇ 36,000ಕ್ಕೂ ಹೆಚ್ಚು ಮಂದಿ ಉದ್ಯೋಗ ಕಳೆದುಕೊಂಡಿದ್ದಾರೆ.ಇದೆಲ್ಲ ಅಧಿಕೃತ ದಾಖಲೆ ಹೇಳುವ ಕಥೆ. ಅನಧಿಕೃತವಾಗಿ ಕೆಲಸ ಕಳೆದುಕೊಳ್ಳುವವರ ಸಂಖ್ಯೆಯ ಲೆಕ್ಕವೇ ಇಲ್ಲ ಎಂದು ಹೇಳಬಹುದು.



ಒಂದು ಕಾಲದಲ್ಲಿ ಅಭೇದ್ಯ ಎಂದು ಕಾಣುತ್ತಿದ್ದ ಗೂಗಲ್, ಮೆಟಾ, ಮೈಕ್ರೋಸಾಫ್ಟ್ ನಂತಹ ದಿಗ್ಗಜ ಕಂಪನಿಗಳಲ್ಲಿ ಎರಡು ದಶಕಕ್ಕೂ ಮೀರಿ ಕೆಲಸ ಮಾಡಿದ್ದ ಅನೇಕ ಅನುಭವಿ ಉದ್ಯೋಗಿಗಳೂ ಈ ಬಾರಿ ಕೆಲಸ ಕಳೆದುಕೊಂಡಿದ್ದಾರೆ. ಇಂಟೆಲ್ ಒಂದೇ ಕಂಪನಿ 2025ರಲ್ಲಿ ಸುಮಾರು 33,900 ಜನರನ್ನು ಕೆಲಸದಿಂದ ತೆಗೆದಿದೆ. ಇದು ಅದರ ಒಟ್ಟು ಉದ್ಯೋಗ ಸಂಖ್ಯೆಯ 25-30%. ಮೈಕ್ರೋಸಾಫ್ಟ್ 19,215 ಉದ್ಯೋಗಿ ಗಳನ್ನು ವಜಾಗೊಳಿಸಿದೆ. ಅಮೆಜಾನ್ 30,000 ಉದ್ಯೋಗ ಕಡಿತದ ಯೋಜನೆ ಪ್ರಕಟಿಸಿದ್ದು ಅದರ ಇತಿಹಾಸದಲ್ಲೇ ಅತಿ ದೊಡ್ಡ ವಜಾ ಕ್ರಮ ಎನ್ನಲಾಗಿದೆ. ಭಾರ ತೀಯ ಐಟಿ ದಿಗ್ಗಜ ಟಾಟಾ ಕನ್ಸಲ್ಟೆನ್ಸಿ ಸರ್ವೀಸ್ (TCS) ಕೂಡಾ 12,000 ಉದ್ಯೋಗಿಗಳನ್ನು ಕೈಬಿಟ್ಟಿದೆ.

2008ರ ಆರ್ಥಿಕ ಬಿಕ್ಕಟ್ಟಿಗೆ ಬ್ಯಾಂಕಿಂಗ್ ವಲಯದ ಅತಿ ದುಡುಕು ಮತ್ತು ಅಪಾಯಕಾರಿ ಸಾಲ ನೀಡಿಕೆ ಕಾರಣ ವಾಗಿತ್ತು. ಈ ಬಾರಿ ಕಾರಣಗಳು ಬೇರೆಯೇ ಇವೆ. ಕೋವಿಡ್ ಸಮಯದಲ್ಲಿ ಡಿಜಿಟಲ್ ಸೇವೆಗಳ ಬೇಡಿಕೆ ಅಗಾಧವಾಗಿ ಏರಿತು. ಎಲ್ಲ ಟೆಕ್ ಕಂಪನಿಗಳು ತರಾತುರಿಯಲ್ಲಿ ಸಾವಿರಾರು ಜನರನ್ನು ನೇಮಕ ಮಾಡಿಕೊಂಡವು. 2021ರಲ್ಲಿ ಸ್ಟಾರ್ಟಪ್‌ಗಳಿಗೆ ಹಣ ಎಷ್ಟು ಸುಲಭವಾಗಿ ಹರಿದು ಬಂತೆಂದರೆ, ಅನೇಕ ಕಂಪನಿಗಳು ಲಾಭ-ನಷ್ಟದ ಲೆಕ್ಕಾಚಾರ ಬಿಟ್ಟು ಬರೀ ಬೆಳೆಯುತ್ತ ಹೋಗುವ ಮತ್ತು ಹಣ ಖರ್ಚು ಮಾಡುವ (Cash Burn) ಸ್ಪರ್ಧೆಯಲ್ಲಿ ಮುಳುಗಿಹೋದವು.

ಕೋವಿಡ್ ನಂತರ ಡಿಜಿಟಲ್ ಬೇಡಿಕೆ ಇಳಿದಾಗ, ಉಕ್ರೇನ್ -ರಷ್ಯಾ ಯುದ್ಧ ಮತ್ತು ಅದರಿಂದಾಗಿ ಜಾಗತಿಕ ಬೆಲೆ ಏರಿಕೆ, ತೀವ್ರ ಹಣದುಬ್ಬರ, ಬಡ್ಡಿ ದರ ಏರಿಕೆ ಎಲ್ಲ ಒಟ್ಟಿಗೆ ಸಂಭವಿಸಿ ಟೆಕ್ ವಲಯ ತಲ್ಲಣಗೊಂಡಿತು. Sequoia, KKR ಮತ್ತು Combinator ನಂತಹ ಬಂಡವಾಳ ಹೂಡಿಕೆದಾರರು ತಾವು ಹಣ ಹಾಕಿದ ಸ್ಟಾರ್ಟಪ್‌ಗಳಿಗೆ ನೇರ ಸೂಚನೆ ನೀಡಿದರು: "ಖರ್ಚು ಕಡಿಮೆ ಮಾಡಿ, ಲಾಭದತ್ತ ಗಮನ ಕೊಡಿ." ಪರಿಣಾಮ - ಸಾಮೂಹಿಕ ಉದ್ಯೋಗ ಕಡಿತ.

ಇದರ ಜೊತೆಗೆ ಈಗ ಹೊಸ ಭೂತ ಒಂದು ಬಂದಿದೆ-ಕೃತಕ ಬುದ್ಧಿಮತ್ತೆ ಅಥವಾ Artificial Intelligence (AI). 2025ರ ವೇಳೆಗೆ ಜಗತ್ತಿನಾದ್ಯಂತ ನಡೆದ ಉದ್ಯೋಗ ಕಡಿತಗಳಲ್ಲಿ ಸುಮಾರು ಶೇ.27ರಷ್ಟು ನೇರವಾಗಿ AI ಮತ್ತು ಸ್ವಯಂಚಾಲಿತ ತಂತ್ರಜ್ಞಾನ ಅಳವಡಿಕೆಯ ಕಾರಣದಿಂದ ಆಗಿವೆ. Customer Support, Data Processing, HR ಆಡಳಿತ ಕಾರ್ಯಗಳನ್ನು AI ವ್ಯವಸ್ಥೆಗಳು ನಿಭಾಯಿ ಸಲು ಶುರು ಮಾಡಿದ ಮೇಲೆ ಆ ಕೆಲಸ ಮಾಡುತ್ತಿದ್ದ ಮನುಷ್ಯರಿಗೆ ಏನಾಗಬೇಕು? ಅವರಿಗೆ ಗೇಟ್ ಪಾಸ್ ಕೊಡಲಾಯಿತು. World Economic Forum ಅಂದಾಜಿಸಿರುವ ಪ್ರಕಾರ, ಮುಂದಿನ ಮೂರು ವರ್ಷಗಳಲ್ಲಿ 80-85 ಮಿಲಿಯನ್ ಉದ್ಯೋಗಗಳು ಯಂತ್ರ ಮತ್ತು AI ಕಾರಣದಿಂದ ಹೋಗಬಹುದು. ಆದರೆ 170 ಮಿಲಿಯನ್ ಹೊಸ ಉದ್ಯೋಗಗಳು ಸೃಷ್ಟಿಯಾಗಬಹುದು ಎಂದೂ ಹೇಳಲಾಗಿದೆ. ಆದರೆ ಆ ಹೊಸ ಉದ್ಯೋಗಗಳಿಗೆ ಇಂದಿನ ಕೆಲಸಗಾರರು ಸಿದ್ಧರಾಗಿರುವರೇ ಎಂಬ ದೊಡ್ಡ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿದಿದೆ.

ಭಾರತದ ಸ್ಟಾರ್ಟಪ್‌ಗಳ ಪಾಲಿಗೆ 2021 ಅತ್ಯಂತ ಸಮೃದ್ಧ ವರ್ಷವಾಗಿತ್ತು. ದೇಶದ ಒಟ್ಟು ಸ್ಟಾರ್ಟಪ್‌ಗಳಿಗೆ ಸುಮಾರು 42 ಬಿಲಿಯ ಡಾಲರ್ ಹೂಡಿಕೆ ಹರಿದುಬಂದಿತ್ತು. ಆದರೆ 2022ರಲ್ಲಿ ಅದು ಸುಮಾರು ಶೇ. 40ರಷ್ಟು ಕಡಿಮೆಯಾಗಿ 25 ಬಿಲಿಯ ಡಾಲರ್‌ಗೆ ಇಳಿಯಿತು. 2023ರಲ್ಲಿ ಇದು ಮತ್ತಷ್ಟು ಕುಸಿಯಿತು. ಬೆಂಗಳೂರನ್ನು ಮಾತ್ರ ಗಣನೆಗೆ ತೆಗೆದುಕೊಂಡರೆ 2021ರಲ್ಲಿ 21.3 ಬಿಲಿಯ ಡಾಲರ್ ಹೂಡಿಕೆ ಬಂದಿದ್ದ ನಗರಕ್ಕೆ 2022ರಲ್ಲಿ ಕೇವಲ 11 ಬಿಲಿಯ ಡಾಲರ್ ಮಾತ್ರ ಬಂತು. ಅಂದರೆ ಶೇ 48ರಷ್ಟು ಕುಸಿತ. ಜಗತ್ತಿನ ಪ್ರಮುಖ ಸ್ಟಾರ್ಟಪ್ ಹಬ್‌ಗಳಲ್ಲಿ ಒಂದಾಗಿರುವ ಬೆಂಗಳೂರಿನ ಸ್ಥಿತಿ ಇದಾಗಿದ್ದರೆ, ಭಾರತದ ಉಳಿದ ಭಾಗಗಳ ಬಗ್ಗೆ ಇನ್ನೇನು ಹೇಳಬೇಕು?

2022-23ರ ಆರ್ಥಿಕ ಸಂಕಷ್ಟ ಕಾಲದಲ್ಲಿ ಭಾರತದ ಸ್ಟಾರ್ಟಪ್ ವಲಯದಿಂದ 20,000ಕ್ಕೂ ಹೆಚ್ಚು ಉದ್ಯೋಗಿ ಗಳು ಕೆಲಸ ಕಳೆದುಕೊಂಡರು. ಬೈಜೂಸ್, ಮೆಡಿಬಡ್ಡಿ, ಕಾರ್ಸ್24, ಓಲಾ, ಓಯೋ, ಮೀಶೋ, ಅನ್ ಅಕ್ಯಾಡಮಿ, ವೇದಾಂತು, ಎಂಪಿಎಲ್ ಸೇರಿ 67ಕ್ಕೂ ಹೆಚ್ಚು ಸ್ಟಾರ್ಟಪ್‌ಗಳು ದೊಡ್ಡ ಪ್ರಮಾಣದ ಉದ್ಯೋಗ ಕಡಿತ ನಡೆಸಿದವು. 2023ರಲ್ಲಿ ಸ್ಟಾರ್ಟಪ್‌ಗಳಿಂದ ಒಟ್ಟು 16,398 ಉದ್ಯೋಗಿಗಳು ಹೊರ ನೂಕಲ್ಪಟ್ಟರು. 2024ರಲ್ಲಿ ಓಲಾ ಎಲೆಕ್ಟ್ರಿಕ್, ಪೇಟಿಎಂ, ಫ್ಲಿಪ್‌ಕಾರ್ಟ್, ಸ್ವಿಗ್ಗಿ, ಅನ್ ಅಕ್ಯಾಡಮಿ ಸೇರಿ 44 ಕಂಪನಿಗಳು 9,000ಕ್ಕೂ ಹೆಚ್ಚು ಉದ್ಯೋಗಿಗಳನ್ನು ಮನೆಗೆ ಕಳಿಸಿದವು.

ಆದರೆ 2025ರ ವೇಳೆಗೆ ಒಳ್ಳೆಯ ಸುದ್ದಿಯೊಂದು ಬಂದಿದೆ. ಭಾರತದ ಸ್ಟಾರ್ಟಪ್‌ಗಳಲ್ಲಿ ಉದ್ಯೋಗ ಕಡಿತದ ಸಂಖ್ಯೆ 2024ಕ್ಕೆ ಹೋಲಿಸಿದರೆ ಶೇ 52ರಷ್ಟು ಕಡಿಮೆಯಾಗಿದೆ. ಅಂಕಿ-ಅಂಶಗಳ ಪ್ರಕಾರ, 2025ರ ಮೊದಲ ಭಾಗದಲ್ಲಿ ಕೇವಲ ಏಳು ಭಾರತೀಯ ಸ್ಟಾರ್ಟಪ್‌ಗಳು 1,602 ಉದ್ಯೋಗಿಗಳನ್ನು ವಜಾ ಮಾಡಿದ್ದು, 2024ರ ಅದೇ ಅವಧಿಗೆ ಹೋಲಿಸಿದರೆ ಇದು ಅರ್ಧಕ್ಕಿಂತ ಕಡಿಮೆ. 2025ರಲ್ಲಿ ಭಾರತೀಯ ಟೆಕ್ ಸ್ಟಾರ್ಟಪ್‌ಗಳು 2.5 ಬಿಲಿಯ ಡಾಲರ್ ಹೂಡಿಕೆ ಆಕರ್ಷಿಸಿದ್ದು, ಇದು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ 8.7ರಷ್ಟು ಹೆಚ್ಚಳ. ಭಾರತ ಈಗ ಅಮೆರಿಕ ಮತ್ತು ಇಂಗ್ಲೆಂಡ್ ನಂತರ ಜಗತ್ತಿನ ಮೂರನೇ ಅತ್ಯಂತ ದೊಡ್ಡ ಸ್ಟಾರ್ಟಪ್ ಹೂಡಿಕೆ ತಾಣವಾಗಿದ್ದು, ಈ ಒಂದು ಸಂಗತಿ ಆಶಾವಾದದ ಕಿಡಿ ಹೊತ್ತಿಸುತ್ತಿದೆ.

ಇಂದು ಇಡೀ ಜಗತ್ತಿನ ಆರ್ಥಿಕ ಮತ್ತು ತಂತ್ರಜ್ಞಾನ ವಲಯದ ಬಹು ಮುಖ್ಯ ಚರ್ಚೆ Artificial Intelligence (AI) ಸುತ್ತಲೇ ನಡೆಯುತ್ತಿದೆ. ಒಂದು ಕಡೆ ಕಂಪನಿಗಳು AI ಮೂಲಕ ದಕ್ಷತೆ ಹೆಚ್ಚಿಸಿಕೊಳ್ಳಲು ಮಾನವ ಉದ್ಯೋಗಿಗಳನ್ನು ತೆಗೆಯುತ್ತಿವೆ. ಮತ್ತೊಂದು ಕಡೆ, AI ಅಭಿವೃದ್ಧಿಯಲ್ಲೇ ಹೂಡಿಕೆ ಮಾಡಲು ಹಣ ಸಂಗ್ರಹಿಸಲು ಉದ್ಯೋಗ ಕಡಿತ ಮಾಡಲಾಗುತ್ತಿದೆ. ಮೈಕ್ರೋಸಾಫ್ಟ್ ಭಾರಿ ಉದ್ಯೋಗ ಕಡಿತ ಮಾಡಿ ರಿಕಾರ್ಡ್ 76.44 ಬಿಲಿಯ ಡಾಲರ್ ಆದಾಯ ಗಳಿಸಿದೆ. ಮೆಟಾ ಕಂಪನಿ ಕೆಲವು ಸಾವಿರ ಉದ್ಯೋಗ ಕಡಿತ ಮಾಡಿ ಶೇ.22 ಆದಾಯ ಏರಿಕೆ ದಾಖಲಿಸಿದೆ. ಇಲ್ಲಿ ಒಂದು ವಿಚಿತ್ರ ಸಂಗತಿ ಕಾಣಸಿಗುತ್ತದೆ; ಕಂಪನಿಗಳ ಲಾಭ ದಾಖಲೆ ಮಟ್ಟ ತಲುಪಿದೆ, ಆದರೆ ಉದ್ಯೋಗಿಗಳಿಗೆ ಕೆಲಸ ಇಲ್ಲ. ಇನ್ನುಂದೆ AI ಎಂಬ ತಂತ್ರಜ್ಞಾನದ ಜೊತೆ ಸ್ಪರ್ಧೆ ಮಾಡುತ್ತ ಬದುಕಬೇಕಾದ ಕಾಲ ಬಂದಿದೆ. ಡೇಟಾ ಅನಾಲಿಸಿಸ್, AI ಪ್ರಾಂಪ್ಟ್ ಇಂಜಿನಿಯರಿಂಗ್, ಸೈಬರ್ ಸೆಕ್ಯೂರಿಟಿ, ಕ್ಲೌಡ್ ಕಂಪ್ಯೂಟಿಂಗ್ ಮತ್ತು ಮಾನವ ಭಾವನೆ ಅರ್ಥ ಮಾಡಿಕೊಳ್ಳಬಲ್ಲ ಕೌಶಲ್ಯ... ಇವು AI ಮಾಡಲಾಗದ ಕೆಲಸಗಳು. ಈ ಕ್ಷೇತ್ರಗಳಲ್ಲಿ ಕೌಶಲ್ಯ ಬೆಳೆಸಿಕೊಂಡವರಿಗೆ ಮಾತ್ರ ಮುಂದಿನ ದಶಕ ಸ್ವಾಗತ ಹೇಳಲಿದೆ. ಆದ್ದರಿಂದ ಈಗಲೇ Reskilling ಮತ್ತು Upskilling ಮೇಲೆ ಗಮನ ಕೊಡಬೇಕಾದ ಅನಿವಾರ್ಯ ನಮ್ಮ ಮುಂದಿದೆ.

ಈ ಇಡೀ ಬಿಕ್ಕಟ್ಟಿನಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆಯ ಒಂದು ದೊಡ್ಡ ವೈಫಲ್ಯ ಇನ್ನಷ್ಟು ಎದ್ದು ಕಾಣುತ್ತಿದೆ. ನಮ್ಮ ದೇಶದ ಯಾವ ಶಾಲೆಯಲ್ಲೂ, ಯಾವ ಕಾಲೇಜಿನಲ್ಲೂ Personal Finance ಎಂಬ ವಿಷಯ ಕಲಿಸಲಾಗುವುದಿಲ್ಲ. ಹಣ ಹೇಗೆ ಸಂಪಾದಿಸಬೇಕು ಎಂದು ಜೀವನವಿಡೀ ಕಲಿಯಲ್ಪಡುತ್ತೇವೆ, ಆದರೆ ಸಂಪಾದಿಸಿದ ಹಣವನ್ನು ಹೇಗೆ ಉಳಿಸಬೇಕು, ಎಲ್ಲಿ ಹೂಡಿಕೆ ಮಾಡಬೇಕು, ತೆರಿಗೆ ಹೇಗೆ ಉಳಿಸಿಕೊಳ್ಳಬೇಕು, ತುರ್ತು ನಿಧಿ ಹೇಗೆ ನಿರ್ಮಿಸಬೇಕು ಎಂಬ ಕನಿಷ್ಠ ಜ್ಞಾನ ಯಾರೂ ಕಲಿಸಿಕೊಡುವುದಿಲ್ಲ. ಲಕ್ಷ ಲಕ್ಷ ಸಂಬಳ ಪಡೆಯುವ ಉದ್ಯೋಗಿ ಇದ್ದಕ್ಕಿದ್ದಂತೆ ಕೆಲಸ ಕಳೆದುಕೊಂಡಾಗ, ಅವನ ಹತ್ತಿರ ಒಂದು ತಿಂಗಳ ಖರ್ಚಿಗೆ ಕೂಡ ಉಳಿತಾಯ ಇಲ್ಲದ ಸ್ಥಿತಿ ನಿಜಕ್ಕೂ ಅಯ್ಯೋ ಅನ್ನಿಸುತ್ತದೆ. ಹಣಕಾಸು ತಜ್ಞರು ಹೇಳುವ ಪ್ರಕಾರ, ಕನಿಷ್ಠ 6 ತಿಂಗಳ ಜೀವನ ವೆಚ್ಚಕ್ಕೆ ತಕ್ಕ Emergency Fund ಇರಬೇಕು. SIP (Systematic Investment Plan), ಮ್ಯೂಚ್ಯುಯಲ್ ಫಂಡ್, ಇನ್ಶೂರೆನ್ಸ್ ಇವುಗಳ ಬಗ್ಗೆ ಮೂಲ ಅರಿವಿರಬೇಕು. Passive Income ಎಂದರೆ ಕೆಲಸ ಇಲ್ಲದಿದ್ದರೂ ಒಳಗೆ ಬರುವ ಆದಾಯ - ಬಾಡಿಗೆ, ಷೇರು ಲಾಭಾಂಶ, ಡಿಜಿಟಲ್ ಉತ್ಪನ್ನ - ಇವನ್ನು ಬೆಳೆಸಿಕೊಳ್ಳುವ ಅಗತ್ಯ ಈ ಅನಿಶ್ಚಿತ ಕಾಲದಲ್ಲಿ ಮತ್ತಷ್ಟು ತೀಕ್ಷ್ಣವಾಗಿ ಅನ್ನಿಸುತ್ತಿದೆ.

ಜಗತ್ತಿನ ಅನೇಕ ಕಂಪನಿಗಳು ಭಾರತೀಯ ಉದ್ಯೋಗಿ ಗಳನ್ನು ಆದರಿಸಲು ಮುಖ್ಯ ಕಾರಣ ಕೆಲಸದ ಬಗೆಗಿನ ಶ್ರದ್ಧೆ, ನಿಷ್ಠೆ ಮತ್ತು ತ್ಯಾಗ. ದಿನ-ರಾತ್ರಿ ಕೆಲಸ ಮಾಡಿ ಡೆಡ್‌ಲೈನ್ ಪೂರೈಸುವ ನಮ್ಮ ಮನೋಭಾವ ಜಗತ್ತಿನ ಹಲವು ದೇಶಗಳಲ್ಲಿ ಮೆಚ್ಚುಗೆ ಪಡೆದಿದೆ. ಆದರೆ ಅದೇ ಅತಿಯಾದ ಕೆಲಸದ ಪ್ರೀತಿ ಒಳ್ಳೆಯದಲ್ಲ ಎಂಬ ಸತ್ಯ ಕೂಡ ಅಷ್ಟೇ ಮಹತ್ವದ್ದು. ಆರೋಗ್ಯ, ಕುಟುಂಬ, ಖುಷಿ ಇವೆಲ್ಲ ಕೆಲಸಕ್ಕಿಂತ ಮೊದಲು ಎಂದು ನಾವು ಭಾರತೀಯರು ತಿಳಿದುಕೊಳ್ಳಬೇಕು. ಕಂಪನಿಗಳು ನಮಗೆ ಭಾವನಾತ್ಮಕ ಸಂಬಂಧ ತೋರಿಸುವ ರೀತಿಯಲ್ಲೇ ಲಾಭ-ನಷ್ಟ ನೋಡಿ ನಮ್ಮನ್ನು ಸ್ಪ್ರೆಡ್‌ಶೀಟ್‌ನ ಸಂಖ್ಯೆಯಂತೆ ತೆಗೆದುಬಿಡಬಹುದು ಎಂಬ ವಾಸ್ತವ ಅರ್ಥ ಮಾಡಿಕೊಳ್ಳಬೇಕಿದೆ. Work to Live, not Live to Work ಎಂಬ ತತ್ತ್ವ ನಮ್ಮ ಮೂಲ ಸೂತ್ರವಾಗಬೇಕಿದೆ.

ಆರ್ಥಿಕ ಹಿಂಜರಿತ, ಉದ್ಯೋಗ ನಷ್ಟ ಮತ್ತು AI ಎಂಬ ಮೂರು ಸವಾಲುಗಳನ್ನು ಎದುರಿಸಲು ನಾವು ಕೆಲವು ಮೂಲ ತಯಾರಿ ಮಾಡಿಕೊಳ್ಳಬೇಕಿದೆ: ಮೊದಲನೆಯದಾಗಿ, ಕೌಶಲ್ಯ ನವೀಕರಣ ಅಥವಾ Reskilling ಅಗತ್ಯ. ಇಂದಿನ ಕೆಲಸ ನಾಳೆ AI ಮಾಡಿದರೆ ಏನು ಮಾಡುವುದು ಎಂದು ಯೋಚಿಸಿ, ಆ ದಿನಕ್ಕೆ ಮೊದಲೇ ಹೊಸ ಕೌಶಲ್ಯ ಕಲಿಯಬೇಕು. ಎರಡನೆಯದಾಗಿ, ಹಣಕಾಸು ಶಿಕ್ಷಣ ತೆಗೆದುಕೊಳ್ಳಬೇಕು. ಉಳಿತಾಯ, ಹೂಡಿಕೆ, ವಿಮೆ, ತೆರಿಗೆ ನಿರ್ವಹಣೆ - ಇವನ್ನು ಅರ್ಥ ಮಾಡಿಕೊಳ್ಳಬೇಕು. ಮೂರನೆಯದಾಗಿ, Passive Income ಮೂಲ ನಿರ್ಮಿಸಿಕೊಳ್ಳಬೇಕು. ನಾಲ್ಕನೆಯದಾಗಿ, Emergency Fund ಸಿದ್ಧ ಮಾಡಿಕೊಳ್ಳಬೇಕು, ಕನಿಷ್ಠ 6 ತಿಂಗಳ ಜೀವನ ವೆಚ್ಚ ಕೈಯಲ್ಲಿ ಇಟ್ಟುಕೊಳ್ಳಬೇಕಾದ ಅನಿವಾರ್ಯತೆ ಈಗ ಇದೆ. ಐದನೆಯದಾಗಿ, ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಬೇಕು. ಕೆಲಸ ಹೋದರೆ ಮನಸ್ಸು ಹಾಳಾಗಬಹುದು.

ಲೇಮನ್ ಬ್ರದರ್ಸ್ ಹಗರಣದಿಂದ ಪಾಠ ಕಲಿಯಲಾಗಿಲ್ಲ, ಕೋವಿಡ್‌ನ ಸಂಕಟದಿಂದ ಕಲಿಯಲಾಗಿಲ್ಲ ಎಂದು ಕಾಣಿಸುತ್ತಿದೆ. ಆದರೆ AI ಎಂಬ ಈ ನೂತನ ಕ್ರಾಂತಿ ಮತ್ತು ಆರ್ಥಿಕ ಅನಿಶ್ಚಿತತೆ ಜೊತೆಯಾಗಿ ಬಂದಾಗ, ಇನ್ನಾದರೂ ನಾವು ಕಲಿಯಬೇಕಿದೆ. ಕೆಲಸವೇ ಜೀವನ ಎಂಬ ಭ್ರಮೆ ಬಿಟ್ಟು, ಬದುಕಲು ಕೆಲಸ ಮಾಡುವ ಪ್ರಜ್ಞೆ ಬರಬೇಕಿದೆ. ಒಂದೇ ಸಂಸ್ಥೆಯ ಸಂಬಳಕ್ಕೆ ಜೀವ ತೂರೆಯದೆ, ನಮ್ಮ ಹಣಕಾಸು ಸ್ವಾತಂತ್ರ್ಯ ಕಟ್ಟಿಕೊಳ್ಳಬೇಕಿದೆ.

ಹಿಮಾಲಯದ ಹೀರೋ ದೈತ್ಯ ಯಾಕ್

ಧರಣಿ ಮಂಡಲ
• ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com



ಯಾಕ್ ಎಂಬುದು ದೊಡ್ಡ ಗಾತ್ರದ ಸಸ್ಯಾಹಾರಿ ಪ್ರಾಣಿಯಾಗಿದ್ದು, ಹಿಮಾಲಯದ ತಪ್ಪಲಿನಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ವಿಪರ್ಯಾಸವೆಂದರೆ ಹಿಮಾಲಯದ ತಪ್ಪಲಿನಲ್ಲಿ ತನ್ನದೇ ಸಾಮ್ರಾಜ್ಯವನ್ನು ಕಟ್ಟಿಕೊಂಡು ಬದುಕುತ್ತಿದ್ದ ಈ ಪ್ರಾಣಿ ಇಂದು ಅವಸಾನದ ಅಂಚಿನಲ್ಲಿದೆ. ಪ್ರವಾಸಕ್ಕೇನಾದರೂ ಹಿಮಾಲಯದ ತಪ್ಪಲಿನ ಪ್ರದೇಶಗಳಿಗೆ ಹೋದಲ್ಲಿ ಈ ಅಪರೂಪದ ಪ್ರಾಣಿಯನ್ನು ಕಾಣಬಹುದು. ಅಲ್ಲಿನ ಹೆಚ್ಚಿನ ಪ್ರವಾಸಿ ತಾಣಗಳಲ್ಲಿ ಇವುಗಳ ಮೇಲೆ ಪ್ರವಾಸಿಗರನ್ನು ಸವಾರಿ ಮಾಡಿಸಲೆಂದೇ ಸಾಲಾಗಿ ಇವುಗಳನ್ನು ಕಟ್ಟಿ ಹಾಕಲಾಗುತ್ತದೆ. ಚಿಕ್ಕ ಮಕ್ಕಳಲ್ಲದೇ ದೊಡ್ಡವರಿಗೂ ಸಹ ಒಮ್ಮೆಲೆ ಇದರ ಬಳಿ ಹೋಗಲು ಹಿಂಜರಿಕೆಯಾಗುವಂತಿದೆ.. ಅಂತಹ ದೈತ್ಯ ದೇಹ ಈ ಪ್ರಾಣಿಯದ್ದು. ಭಾರತದಲ್ಲಿ ಲಡಾಖ್, ಸಿಕ್ಕಿಂ ಮತ್ತು ಅರುಣಾಚಲ ಪ್ರದೇಶದಲ್ಲಿ ಇವು ಹೆಚ್ಚಾಗಿ ಕಂಡುಬರುತ್ತವೆ. ಹಾಗೆಯೇ ಟಿಬೆಟ್, ನೇಪಾಳ, ಮಂಗೋಲಿಯಾ, ಸೈಬೀರಿಯಾ ಮತ್ತು ಚೀನಾದ ಹಿಮಾಲಯ ಪ್ರದೇಶಗಳಲ್ಲಿ ಇವು ಕಂಡುಬರುತ್ತವೆ. ವಿವಿಧ ಪ್ರದೇಶಗಳಲ್ಲಿ ಇವುಗಳನ್ನು ಹಲವು ಹೆಸರುಗಳಿಂದ ಕರೆಯಲಾಗುತತಿದ್ದು, ಭಾರತದಲ್ಲಿ ಒಂಟೆಕೋಲು ಪ್ರಾಣಿ ಎಂದೂ ಕರೆಯಲಾಗುತ್ತದೆ.

ಹಿಮಾಲಯ ಪರ್ವತಗಳ ಮಧ್ಯದಲ್ಲಿ ಮತ್ತು ಎತ್ತರದ ಹಿಮ ಮುಚ್ಚಿದ ಪ್ರದೇಶಗಳಲ್ಲಿ ಯಾಕ್ ಸಾಮಾನ್ಯವಾಗಿ ವಾಸಿಸುತ್ತದೆ. ಗಟ್ಟಿಯಾದ ದೇಹವನ್ನು ಹೊಂದಿರುವ ಇದು ಅತೀ ಶಕ್ತಿಶಾಲಿ ಮತ್ತು ಧೈರ್ಯಶಾಲಿ ಪ್ರಾಣಿ. ಇವುಗಳು ಸಸ್ತನಿ ಪ್ರಾಣಿಗಳಾಗಿದ್ದು, ಹುಲ್ಲು, ಗಿಡಗಳ ಕಾಂಡ, ಬಳ್ಳಿಗಳು ಮತ್ತು ಗಿಡದ ಬೇರುಗಳು ಹಾಗೂ ಹಿಮದ ಅಡಿಯಲ್ಲಿ ಬೆಳೆಯುವ ಗಿಡಗಳನ್ನು ಆಹಾರವಾಗಿ ಸೇವಿಸುತ್ತವೆ. ಇವುಗಳ ವಿಶೇಷತೆ ಎಂದರೆ ಚಳಿಗಾಲದಲ್ಲೂ ಹಿಮದಿಂದ ಆವೃತವಾದ ಪ್ರದೇಶದಲ್ಲೂ ಭೂಮಿಯನ್ನು ತೋಡಿ ಹುಲ್ಲನ್ನು ಹುಡುಕಿ ಮೇಯುತ್ತವೆ. ಇವುಗಳು ಒಂಟಿಯಾಗಿ ಇರದೇ ಗುಂಪುಗಳಲ್ಲೇ ಕಂಡುಬರುತ್ತವೆ. ದಟ್ಟ ಚಳಿ ಮತ್ತು ಹಿಮಮಯ ಪ್ರದೇಶ ಇವುಗಳ ವಾಸಸ್ಥಾನ. ಹಿಮದ ತೀಕ್ಷ್ಣ ಚಳಿಯಿಂದ ಇದನ್ನು ರಕ್ಷಿಸುವುದು ದಪ್ಪನಾದ ಮತ್ತು ಉದ್ದವಾದ ಇದರ ಕೂದಲುಗಳು. ಇದರೊಂದಿಗೆ ದಪ್ಪನಾದ ಚರ್ಮ ಮತ್ತು ಅದರಲ್ಲಿರುವ ದಪ್ಪನಾದ ಕೊಬ್ಬಿನಂಶದಿಂದ ಇದು ಚಳಿಯನ್ನು ಸಹಿಸಲು ಶಕ್ತವಾಗಿದೆ. ಹೀಗಾಗಿ ಇವುಗಳು ಶೂನ್ಯಕ್ಕೂ ಕಡಿಮೆ ತಾಪಮಾನದಲ್ಲೂ ಸಹ ಬದುಕಬಲ್ಲವಾಗಿದ್ದು, ಮೈನಸ್ ನಲವತ್ತು ಡಿಗ್ರಿ ತಾಪಮಾನವನ್ನು ಸಾಮಾನ್ಯವಾಗಿ ಸಹಿಸಿಕೊಳ್ಳಬಲ್ಲವಾಗಿವೆ. ಉಷ್ಣತೆ ಕಡಿಮೆ ಇರುವ ಪ್ರದೇಶಗಳಲ್ಲಿ ಇವು ಹೆಚ್ಚಾಗಿ ಕಂಡುಬರುತ್ತವೆ. ಸಮುದ್ರ ಮಟ್ಟಕ್ಕಿಂತ 9,800 ರಿಂದ 18,000 ಅಡಿ ಎತ್ತರದ ಪ್ರದೇಶಗಳಲ್ಲಿ ಇವುಗಳು ಕಂಡುಬರುತ್ತವೆ. ಇವುಗಳ ರಕ್ತದಲ್ಲಿ ಹೆಚ್ಚಿನ ಹಿಮೋಗ್ಲೋಬಿನ್ ಇರುವುದರಿಂದ ಆಮ್ಲಜನಕದ ಮಟ್ಟ ಕಡಿಮೆ ಇರುವ ಎತ್ತರದ ಪ್ರದೇಶಗಳಲ್ಲೂ ಇವುಗಳು ಸುಲಭವಾಗಿ ಉಸಿರಾಡಬಲ್ಲವು ಮತ್ತು ಬದುಕಬಲ್ಲವು. ಅಲ್ಲಿ ಸಿಗುವ ಅಲ್ಪ ಪ್ರಮಾಣದ ಆಮ್ಲಜನಕವನ್ನು ಸರಿಯಾಗಿ ಹೀರಿಕೊಳ್ಳಬಲ್ಲ ಶಕ್ತಿ ಇವುಗಳಿಗಿರುವುದೇ ಇದಕ್ಕೆ ಕಾರಣ.

ಇವುಗಳ ಬಾಲ ದೇಶಿ ಗೋತಳಿಗಳಂತೆ ಉದ್ದವಾಗಿರುತ್ತದೆ. ಎತ್ತರದ ಪರ್ವತಗಳನ್ನು ಸುಲಭವಾಗಿ ಏರಲು ಪಾದಗಳು ಸಹಾಯ ಮಾಡುವುದರಿಂದ ಇವು ಪರ್ವತ ಪ್ರದೇಶಗಳಲ್ಲಿ ಸುಲಭವಾಗಿ ಸಂಚರಿಸಬಲ್ಲವಾಗಿವೆ. ಇವುಗಳ ನಡಿಗೆ ಸ್ವಲ್ಪ ನಿಧಾನ. ಹೀಗಾಗಿ ಇವುಗಳು ಓಡುವುದನ್ನು ನೋಡಿದವರ ಸಂಖ್ಯೆ ಅತಿ ವಿರಳ ಎಂದೇ ಹೇಳಬಹುದು. ಇವುಗಳನ್ನು ಹೆಚ್ಚಾಗಿ ಭಾರವನ್ನು ಸಾಗಿಸಲು ಮತ್ತು ಪರ್ವತಗಳಲ್ಲಿ ಪ್ರಯಾಣಿಸಲು ಬಳಸಲಾಗುತ್ತದೆ. ಇವುಗಳಲ್ಲಿ ಗಂಡುಗಳು ಹೆಣ್ಣುಗಳಿಗಿಂತ ಹೆಚ್ಚು ತೂಕವನ್ನು ಹೊಂದಿರುತ್ತವೆ. ಹೆಣ್ಣುಗಳು 300 ರಿಂದ 500 ಕೆಜಿಯಷ್ಟು ತೂಕವನ್ನು ಹೊಂದಿದ್ದರೆ, ಗಂಡುಗಳು ಸುಮಾರು ಒಂದು ಟನ್‌ವರೆಗೂ ತೂಕವನ್ನು ಹೊಂದಿರುತ್ತವೆ.

ಬೋವಿಡೇ ಕುಟುಂಬಕ್ಕೆ ಸೇರಿದ ಇವುಗಳಲ್ಲಿ ಸಾಮಾನ್ಯವಾಗಿ ಎರಡು ಪ್ರಭೇದಗಳಿವೆ. ಮೊದಲನೆಯದು ಬಾಸ್ ಗ್ರೂನ್ನೀನ್ಸ್ ಮತ್ತು ಎರಡನೆಯದು ಬಾಸ್ ಮೂಟಸ್ ಎಂಬುದಾಗಿ. ಬಾಸ್ ಗ್ರೂನ್ನೀನ್ಸ್ ಎನ್ನುವುದನ್ನು ಹೆಚ್ಚಾಗಿ ಮನುಷ್ಯರು ತಮ್ಮ ದಿನಸಿತ್ಯದ ಸಂಪನ್ಮೂಲಗಳಿಗಾಗಿ ಸಾಕಿಕೊಂಡಿರುವುದು ಕಂಡುಬರುತ್ತದೆ. ಇದರ ಹಾಲು ಮತ್ತು ಮಾಂಸವನ್ನು ಆಹಾರವಾಗಿ ಬಳಸಲಾಗುತ್ತದೆ. ಇದನ್ನು ಸರಕು ಹಾಗೂ ಜನರ ಸಾಗಾಣಿಕೆಗೆ ಹೆಚ್ಚಾಗಿ ಬಳಸಲಾಗುತ್ತದೆ. ಮತ್ತೊಂದು ಪ್ರಭೇದವಾದ ಬಾಸ್ ಮೂಟಸ್ ಮನುಷ್ಯರಿಂದ ದೂರವಿದ್ದು, ಎತ್ತರದ ಪ್ರದೇಶಗಳಲ್ಲಿ ಸ್ವತಂತ್ರವಾಗಿ ವಾಸಿಸುತ್ತದೆ. ಇದನ್ನು ಕಾಡು ಯಾಕ್ ಎಂದು ಸಹ ಕರೆಯಲಾಗುತ್ತದೆ. ಈ ಎರಡು ಪ್ರಭೇದಗಳಲ್ಲೂ ಇವುಗಳ ಸಂತತಿ ಇಂದು ವಿನಾಶದ ಅಂಚಿನಲ್ಲಿದೆ. ಹೀಗಾಗಿ ಐ.ಯು.ಸಿ.ಎನ್.(ಇಂಟರ್ ನ್ಯಾಷನಲ್ ಯೂನಿಯನ್ ಫಾರ್ ಕನ್ಸರ್ವೇಶನ್ ಆಫ್ ನೇಚರ್) ಇದನ್ನು ಅಪಾಯದಲ್ಲಿರುವ ಪ್ರಾಣಿಗಳ ಪಟ್ಟಿಗೆ ಸೇರಿಸಿದೆ. ಇವುಗಳು ನಾಶವಾಗುತ್ತಿರುವುದಕ್ಕೆ ಸಾಕಷ್ಟು ಕಾರಣಗಳಿವೆ. ಇವುಗಳನ್ನು ಆಹಾರವಾಗಿ ಸೇವಿಸುತ್ತಿರುವುದು, ಇದೊಂದು ಹೆಚ್ಚಿನ ಮಾರಾಟದವಸ್ತುವಾಗಿರುವುದು, ಇವುಗಳು ವಾಸಿಸುವಸ್ಥಳ ನಗರೀಕರಣವಾಗುತ್ತಿರುವುದು, ವಾತಾವರಣದಲ್ಲಾಗುವ ಬದಲಾವಣೆಗಳು ಮತ್ತು ಇವುಗಳನ್ನು ಬೇಟೆಯಾಡುವ ಪ್ರವೃತ್ತಿ ಇವುಗಳನ್ನಿಂದು ಇನ್ನಿಲ್ಲದಂತೆ ಮಾಡುತ್ತಿವೆ. ಇದನ್ನು ಮನಗಂಡ ಚೀನಾ ಸರ್ಕಾರ ಮತ್ತು ಅಂತಾರಾಷ್ಟ್ರೀಯ ಜೀವಶಾಸ್ತ್ರ ಸಂಸ್ಥೆಗಳು ಇದರ ಸಂರಕ್ಷಣೆಗೆ ಇಂದು ಟೊಂಕ ಕಟ್ಟಿ ನಿಂತು ಕೆಲಸ ಮಾಡುತ್ತಿವೆ. ಚೀನಾ, ಟಿಬೆಟ್ ಮತ್ತು ನೇಪಾಳದಲ್ಲಿ ಇವುಗಳ ಉಳಿವಿಗಾಗಿ ಕಾನೂನು ರೂಪಿಸಲಾಗಿದ್ದು, ಇದರ ಜೊತೆಗೆ ನೈಸರ್ಗಿಕ ಅಭಯಾರಣ್ಯಗಳನ್ನು ನಿರ್ಮಿಸಲಾಗಿದೆ. ಹಾಗೆಯೇ ಜೀವವೈವಿಧ್ಯ ಸಂರಕ್ಷಣಾ ಯೋಜನೆಗಳನ್ನು ಸಹ ಇದರ ಅಸ್ತಿತ್ವಕ್ಕಾಗಿ ರೂಪಿಸಲಾಗಿದೆ.

ಇವು ಹಿಮಾಲಯ ತಪ್ಪಲಿನಲ್ಲಿ ವಾಸಿಸುವ ಜನರ ಜೀವನದ ಒಂದು ಭಾಗವಾಗಿದೆ. ಹಿಮಾಲಯದ ತಪ್ಪಲಿನಲ್ಲಿ ವಾಸಿಸುವ ಜನರು ತಮ್ಮ ಜೀವನೋಪಾಯಕ್ಕಾಗಿ ಇವನ್ನು ಸಾಕುತ್ತಾರೆ. ದಪ್ಪನಾದ ಮತ್ತು ಪೌಷ್ಟಿಕತೆಯಿಂದ ಕೂಡಿರುವ ಇದರ ಹಾಲನ್ನು ಪ್ರತಿನಿತ್ಯ ಸೇವಿಸುತ್ತಾರೆ. ಇದರ ಹಾಲಿನಿಂದ ಮಖಾನ್ ಹಾಗೂ ಚೀಸ್ ತಯಾರಿಸಿ ಆಹಾರದ ಒಂದು ಭಾಗವಾಗಿ ಸೇವಿಸುತ್ತಾರೆ. ಇದರ ಮಾಂಸವನ್ನು ಆಹಾರವಾಗಿ ಮತ್ತು ಇದರ ಚರ್ಮವನ್ನು ಚಳಿಯಿಂದ ರಕ್ಷಣೆ ಪಡೆಯಲು ಬಟ್ಟೆಯಾಗಿ ಬಳಸುತ್ತಾರೆ. ವಿಶೇಷವಾಗಿ ತಮಾಂಗ್ ಎಂಬ ಬುಡಕಟ್ಟು ಜನಾಂಗದ ಗೋರಖಿ ಜನರ ಹಿಂಡಿಗೆ ಈ ಪ್ರಾಣಿ ಸೇರಿದ್ದಾಗಿದೆ ಎನ್ನಲಾಗುತ್ತದೆ. ಇವರ ಬದುಕಿನಲ್ಲಿ ಯಾಕ್‌ಗಳು ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ. ಇವುಗಳು ಅವರಿಗೆ ಸಾಗಾಣಿಕೆಗೆ, ಹಾಲಿಗೆ, ಬೆಚ್ಚಗಿನ ಇದರ ಉಣ್ಣೆಗೆ ಮತ್ತು ಮಾಂಸಕ್ಕಾಗಿ ಅತ್ಯವಶ್ಯಕವಾಗಿದೆ. ಪ್ರತಿವರ್ಷ ಈ ಜನಾಂಗ ಚಳಿಗಾಲಕ್ಕೆ ಸೂಕ್ತ ಸ್ಥಳವನ್ನು ಹುಡುಕಿಕೊಂಡು ಪರ್ವತಗಳ ಮೂಲಕ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗುತ್ತವೆ. ಈ ಸಂದರ್ಭದಲ್ಲಿ ಯಾಕ್ ಇವರಿಗೆ ಅತ್ಯಂತ ಭರವಸೆಯ ಪ್ರಾಣಿಯಾಗಿದೆ. ಇದು ದೊಡ್ಡ ದೊಡ್ಡ ಸರಕುಗಳನ್ನು ಹೊತ್ತು ಸಾಗಿಸುತ್ತದೆ. ಸರಕು ಸರಂಜಾಮು ಸೇರಿದಂತೆ ನಡೆಯಲಾಗದ ಮಕ್ಕಳು ಮತ್ತು ವೃದ್ಧರನ್ನು ಸಹ ಇದು ಹೊತ್ತು ಸಾಗುತ್ತದೆ.

ಒಂದರ್ಥದಲ್ಲಿ ಇದು ಹಿಮಾಲಯ ಮತ್ತು ಟಿಬೆಟ್ ಪ್ರದೇಶದ ಜನರ ಜೀವನ ಶೈಲಿಗೆ ಅತಿ ಮಹತ್ವವಾದ ಪ್ರಾಣಿಯಾಗಿದೆ. ಇವುಗಳು ನೀಡುವ ಹಾಲು, ಚರ್ಮ ಮತ್ತು ಇವುಗಳ ಭಾರ ಹೊರುವ ಸಾಮರ್ಥ್ಯ ಹಾಗೂ ಆಹಾರದ ರೂಪದಲ್ಲಿ ಇವುಗಳು ಲಭ್ಯವಿರುವುದರಿಂದ ಈ ಭಾಗದ ಜನರ ಜೀವನದಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ. ಇದರ ಹಾಲಿನಿಂದ ತಯಾರಿಸಲಾಗುವ ಬಟರ್ ಟೀ ಟಿಬೇಟಿಯನ್ನರ ಅತ್ಯುತ್ತಮ ಪಾನಿಯಗಳಲ್ಲೊಂದು. ಟಿಬೇಟಿಯನ್ನರು ಯಾಕ್‌ನ್ನು ತಮ್ಮ ಸಾಂಪ್ರದಾಯಿಕ ಕ್ರೀಡೆಗಳಲ್ಲಿ ಬಳಸುತ್ತಾರೆ. ಇಲ್ಲಿ ಪ್ರತಿವರ್ಷ ಇವುಗಳ ರೇಸ್‌ಗಳು ನಡೆಯುತ್ತವೆ. ಈ ಕ್ರೀಡೆ ಇಲ್ಲಿಯ ಜನರ ನೆಚ್ಚಿನದಾಗಿದ್ದು, ಬಹು ಜನಪ್ರಿಯವಾದುದಾಗಿದೆ. ಟಿಬೇಟ್ ಮತ್ತು ಮಂಗೋಲಿಯಾದಲ್ಲಿ ಜನರು ಇದನ್ನು ಪವಿತ್ರ ಪ್ರಾಣಿಯನ್ನಾಗಿ ಪರಿಗಣಿಸುತ್ತಾರೆ. ಹೀಗಾಗಿ ಇದರ ಕೊಂಬಿಗೆ ಪವಿತ್ರತುಳಸಿ ಹೂವಿನ ಮಾಲೆ ಕಟ್ಟಿ ಪೂಜೆ ಮಾಡಿ ಪ್ರಾರ್ಥಿಸುತ್ತಾರೆ. ಭಾರತದಲ್ಲೂ ಇವುಗಳು ಹೆಚ್ಚಾಗಿ ಕಂಡುಬರುವ ಪ್ರದೇಶಗಳಲ್ಲಿ ಕೆಲವೊಂದು ಸಮುದಾಯ ಗಳು ಗೋವುಗಳಂತೆ ಇವುಗಳನ್ನು ಇಂದಿಗೂ ಪೂಜಿಸಿ ಆರಾಧಿಸುತ್ತವೆ.

ಈ ಜೀವಿಯನ್ನು ಸಂರಕ್ಷಿಸುವುದು ಪರಿಸರದ ಉಳಿವಿಗಾಗಿ ಅತಿ ಮುಖ್ಯ ಎಂಬುದು ವಿಶ್ವದ ಬಹುತೇಕ ಪರಿಸರ ಪ್ರೇಮಿಗಳ ಮತ್ತು ಪ್ರಾಣಿ ಪ್ರೇಮಿಗಳ ಬಹು ದಿನದ ಬೇಡಿಕೆಯಾಗಿದೆ. ನೇಪಥ್ಯಕ್ಕೆ ಸರಿಯುವ ಮುನ್ನ ಈ ಪ್ರಾಣಿಯನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಸ್ಥಳೀಯ ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರಗಳು ಮಾಡಬೇಕಿದೆ. ಇಲ್ಲವಾದಲ್ಲಿ ಮುಂದಿನ ಜನಾಂಗ ಈ ಅಪರೂಪದ ತಳಿಯನ್ನು ನೋಡಲು ಸಾಧ್ಯವಿಲ್ಲ.

ಶಿವರಾಜ್ ಸಿಂಗ್ ಚೌಹಾಣ್‌ರಿಂದ ಇಂದು ಚಾಲನೆ

ಭಾರತ್ ವಿಸ್ತಾರ್‌ನಿಂದ ಎಐ ರೈತ ಕ್ರಾಂತಿಯತ್ತ

• **ಜೈಪುರ:** ರೈತರಿಗೆ ಡಿಜಿಟಲ್ ಸಹಚರನಾಗಿ ರೂಪುಗೊಂಡಿರುವ ಎಐ ಆಧಾರಿತ ವೇದಿಕೆ ಭಾರತ್-ವಿಸ್ತಾರ್‌ಗೆ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ಮಂಗಳವಾರ ಇಲ್ಲಿ ಚಾಲನೆ ನೀಡಲಿದ್ದಾರೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮಾರ್ಗದರ್ಶನದಲ್ಲಿ ಅಭಿವೃದ್ಧಿಗೊಂಡಿರುವ ಈ ರೈತ ಕೇಂದ್ರಿತ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ, ಹವಾಮಾನ ಮುನ್ಸೂಚನೆ, ಮಾರುಕಟ್ಟೆ ದರ, ಕೀಟ-ರೋಗ ನಿರ್ವಹಣೆ, ಮಣ್ಣು ಆರೋಗ್ಯ, ಬೆಳೆ ಸಲಹೆ ಹಾಗೂ ಕೇಂದ್ರ ಸರ್ಕಾರದ ಪ್ರಮುಖ ಯೋಜನೆಗಳ ಮಾಹಿತಿಯನ್ನು ಒಂದೇ ವೇದಿಕೆಯಲ್ಲಿ ರೈತರಿಗೆ ಒದಗಿಸುವ ಉದ್ದೇಶ ಹೊಂದಿದೆ. ಇತ್ತೀಚೆಗಷ್ಟೇ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿದ್ದ ಬಜೆಟ್‌ನಲ್ಲಿ ಇದರ ಪ್ರಸ್ತಾಪವಾಗಿತ್ತು.

ವಾಯ್ಸ್-ಫಸ್ಟ್ ಎಐ ತತ್ವದಲ್ಲಿ ವಿನ್ಯಾಸಗೊಂಡಿರುವ ಭಾರತ್-ವಿಸ್ತಾರ್, ಸರಳ ಫೀಚರ್ ಫೋನ್ ಬಳಕೆದಾರರಿಗೂ ಲಭ್ಯವಾಗುವಂತೆ ರೂಪಿಸಲಾಗಿದೆ. ರೈತರು 155261 ಸಹಾಯವಾಣಿ ಗೆ ಕರೆಮಾಡುವ ಮೂಲಕ ಹವಾಮಾನ, ಮಾರುಕಟ್ಟೆ ದರ, ಯೋಜನೆಗಳ ವಿವರ, ಲಾಭ ಸ್ಥಿತಿ, ದೂರು ನೋಂದಣಿ ಸೇರಿದಂತೆ ವಿವಿಧ ಸೇವೆಗಳನ್ನು ಪಡೆಯಬಹುದು. ವೆಬ್‌ಸೈಟ್, ಮೊಬೈಲ್ ಸೈಟ್ ಚಾಟ್ ಬಾಟ್ ಹಾಗೂ ಆ್ಯಂಡ್ರಾಯ್ಡ್ ಆ್ಯಪ್ ಸೌಲಭ್ಯವೂ ಹಂತ ಹಂತವಾಗಿ ಲಭ್ಯವಾಗಲಿದೆ.

ಪ್ರಥಮ ಹಂತದಲ್ಲಿ ಐಎಂಡಿಯಿಂದ ಹವಾಮಾನ ಮಾಹಿತಿ, ಎಜಿಮಾರ್ಕೆಟ್‌ನಿಂದ ಮಾರುಕಟ್ಟೆ ದರ, ರಾಷ್ಟ್ರೀಯ ಕೀಟ ನಿಗಾವಳಿ ವ್ಯವಸ್ಥೆ (ಎನ್‌ಪಿಎಸ್‌ಎಸ್) ಮೂಲಕ ಕೀಟ-ರೋಗ ನಿರ್ವಹಣೆ, ಅಗ್ರಿ-ಸ್ಟೇಕ್ ಡೇಟಾ ಹಾಗೂ 10 ಪ್ರಮುಖ ಕೇಂದ್ರ ಯೋಜನೆಗಳ ವಿವರಗಳನ್ನು ಒಂದೆಡೆ ಸೇರಿಸಲಾಗಿದೆ. ಯೋಜನೆ ಅರ್ಜಿ ಸ್ಥಿತಿ, ಟ್ರ್ಯಾಕಿಂಗ್ ಮತ್ತು ದೂರು ಪರಿಹಾರ ವ್ಯವಸ್ಥೆಯೂ ವೇದಿಕೆಯಲ್ಲಿ ಒಳಗೊಂಡಿದೆ. ಈ ಸಂದರ್ಭದಲ್ಲಿ ಎಐ ಫಾರ್ ಅಗ್ರಿಕಲ್ಚರ್ ರೋಡ್‌ಮ್ಯಾಪ್ ಬಿಡುಗಡೆಗೊಳ್ಳಲಿದ್ದು, ಎಐ ಹ್ಯಾಕಥಾನ್ ಹಾಗೂ ಅಗ್ರಿಕೋಶ್ ಕುರಿತ ಘೋಷಣೆಗಳೂ ನಡೆಯಲಿವೆ.

ಕನ್ನಡದಲ್ಲೂ.....

ಭಾರತ್-ವಿಸ್ತಾರ್ ಮುಂದಿನ ತಿಂಗಳುಗಳಲ್ಲಿ ಕನ್ನಡ ಸೇರಿದಂತೆ ಹಲವು ಭಾರತೀಯ ಭಾಷೆಗಳಿಗೆ ವಿಸ್ತರಿಸಲಿದ್ದು, ದೇಶವ್ಯಾಪಿ ರೈತರಿಗೆ ಒಂದೇ ವಿಶ್ವಾಸಾರ್ಹ ಡಿಜಿಟಲ್ ದ್ವಾರವಾಗಿ ಕಾರ್ಯನಿರ್ವಹಿಸುವ ನಿರೀಕ್ಷೆಯಿದೆ.



ಭಾರತೀ ಎಐ ಸಹಾಯಕ

ವೇದಿಕೆಯೊಳಗಿನ ಭಾರತೀ ಎಂಬ ಎಐ ಸಹಾಯಕ ರೈತರೊಂದಿಗೆ ಸಂಭಾಷಣೆ ನಡೆಸಿ, ಸರಳ ಭಾಷೆಯಲ್ಲಿ ಉತ್ತರ ನೀಡಲಿದೆ.

ಸೇವೆಗೆ ಮೂರು ಮಾರ್ಗ

- ಮೊಬೈಲ್ ಆ್ಯಪ್
- ವೆಬ್ ಇಂಟರ್‌ಫೇಸ್
- 155261 ಕರೆ

ಅಧಿಕಾರ ಹಂಚಿಕೆಯ ಬೇಡಿಕೆ ತಿರಸ್ಕರಿಸಿದ ಸಿಎಂ ಸ್ಟಾಲಿನ್

ತ.ನಾಡು ಕೈನಲ್ಲಿ ಭಿನ್ನಮತ ಭುಗಿಲು

• **ಚೆನ್ನೈ:** ಅಧಿಕಾರ ಹಂಚಿಕೆಯ ಬೇಡಿಕೆಗಳನ್ನು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ಸೋಮವಾರ ತಿರಸ್ಕರಿಸಿದ ನಂತರ ತಮಿಳುನಾಡು ಕಾಂಗ್ರೆಸ್‌ನಲ್ಲಿ ವಿವಾದ ಭುಗಿಲೆದ್ದಿದ್ದು, ಪಕ್ಷದೊಳಗೆ ಮತ್ತು ಅದರ ಮಿತ್ರಪಕ್ಷವಾದ ಡಿಎಂಕೆಯೊಂದಿಗೆ ಘರ್ಷಣೆ ತೀವ್ರಗೊಂಡಿದೆ.

ಜಿಲ್ಲಾ ಸಭೆಯಲ್ಲಿ ಅಧಿಕಾರ ಹಂಚಿಕೆಯನ್ನು ಎತ್ತಿದ್ದಕ್ಕಾಗಿ ಪಕ್ಷದ ಹಿರಿಯ ಸಂಸದರೊಬ್ಬರನ್ನು ತಮಿಳುನಾಡು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು ನಿಂದಿಸಿದ್ದು, ಆಂತರಿಕ ಭಿನ್ನಾಭಿಪ್ರಾಯಕ್ಕೆ ತುಪ್ಪ ಸುರಿದಿದೆ. ಮೈತ್ರಿಕೂಟದ ಚರ್ಚೆಗಳು ಸೂಕ್ತ ರೀತಿಯಲ್ಲಿರಬೇಕು ಎಂದು ಹೇಳುವ ಮೂಲಕ ಭಿನ್ನಾಭಿಪ್ರಾಯ ಶಮನಕ್ಕೆ ರಾಜ್ಯ ನಾಯಕತ್ವ ಮುಂದಾಗಿದೆ.

2026ರ ಚುನಾವಣೆಗೆ ಮುಂಚಿತವಾಗಿ ಕಾಂಗ್ರೆಸ್-ಡಿಎಂಕೆ ಮೈತ್ರಿಯನ್ನು ದೃಢಪಡಿಸಿದ್ದರೂ, ಅಧಿಕಾರ ಹಂಚಿಕೊಳ್ಳಲು ಸಾಧ್ಯವಿಲ್ಲ ಎಂಬ ಸ್ಟಾಲಿನ್ ಅವರ ದೃಢ ನಿಲುವಿಗೆ ಖಂಡನೆ ವ್ಯಕ್ತವಾಗಿದೆ. ಮೈತ್ರಿಕೂಟದ ವಿಷಯಗಳನ್ನು ಸಾರ್ವಜನಿಕವಾಗಿ ಮಾತನಾಡಬಾರದು ಎಂದು ಕಾಂಗ್ರೆಸ್ ಹೈಕಮಾಂಡ್ ನಿರ್ದೇಶಿಸಿದೆ ಎನ್ನಲಾಗಿದೆ. ಆಂತರಿಕ ಸಂಘರ್ಷ ಡಿಎಂಕೆಗೆ ಲಾಭವಾಗುತ್ತಿರುವುದರಿಂದ, ಕಾಂಗ್ರೆಸ್ ಕಾರ್ಯಕರ್ತರಲ್ಲಿ ಹತಾಶೆ ಮೂಡಿದೆ. ಪಕ್ಷದ ಹಿರಿಯ ನಾಯಕರು ಮೈತ್ರಿಕೂಟಕ್ಕೆ ಬದ್ಧತೆಯನ್ನು ಪುನರುಚ್ಚರಿಸಿದ್ದಾರೆ. ಆಂತರಿಕ ಒಗ್ಗಟ್ಟಿನ ಮಾತುಗಳನ್ನಾಡಿದ್ದರೂ ಅಸಮಾಧಾನ ಹೊಗೆಯಾಡುತ್ತಲೇ ಇದೆ.

ರಾಜೀನಾಮೆ ಹಿಂಪಡೆದ ಅಸ್ಸಾಂ ಕೈ ಮುಖಂಡ: ಗುವಾಹಟಿ: ಪಕ್ಷದ ವರಿಷ್ಠರ ಮಧ್ಯಪ್ರವೇಶದ ನಂತರ ಅಸ್ಸಾಂ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ಭೂಪೆನ್ ಬೋರಾ ಅವರು ತಮ್ಮ ರಾಜೀನಾಮೆಯನ್ನು ಹಿಂಪಡೆದಿದ್ದಾರೆ ಎಂದು ಎಐಸಿಸಿ ರಾಜ್ಯ ಉಸ್ತುವಾರಿ ಜಿತೇಂದ್ರ ಸಿಂಗ್ ಸೋಮವಾರ ಹೇಳಿದ್ದಾರೆ. ಬೋರಾ ಅವರು ತಮ್ಮ ರಾಜೀನಾಮೆಯನ್ನು ಘೋಷಿಸಿ ಪಕ್ಷದ ಹೈ ಕಮಾಂಡ್‌ಗೆ ಪತ್ರವನ್ನು ಕಳುಹಿಸಿದ ಬೆನ್ನಲ್ಲೇ ಜಿತೇಂದ್ರ ಸಿಂಗ್ ಮತ್ತು ಅಸ್ಸಾಂ ಘಟಕದ ಮುಖ್ಯಸ್ಥ ಗೌರವ್ ಗೊಗೊಯ್ ಸೇರಿದಂತೆ ಹಿರಿಯ ಕಾಂಗ್ರೆಸ್ ನಾಯಕರು ಬೋರಾಹ್ ಅವರನ್ನು ಗುವಾಹಟಿಯಲ್ಲಿರುವ ಅವರ ನಿವಾಸದಲ್ಲಿ ಭೇಟಿಯಾಗಿ ಮನವೊಲಿಸಿದ್ದಾರೆ.

ಸನಾತನ ಬದುಕಲ್ಲಿ ಗೋವಿಗಿದೆ ತಾಯಿ ಸ್ಥಾನ

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ ನಿರ್ದೇಶ ಮೇರೆಗೆ ತಲೆಎತ್ತಲಿರುವ ಗೋ ಸಂಸ್ಕೃತಿ ಮ್ಯೂಸಿಯಂ, ಭಾರತೀಯ ಸಂಪ್ರದಾಯದಲ್ಲಿ ಗೋಮಾತೆಗೆ ಇರುವ ತಾಯಿಯ ಸ್ಥಾನ ಮತ್ತು ಸನಾತನ ಬದುಕಿನಲ್ಲಿ ಗೋವಿನ ಪಾತ್ರವನ್ನು ಎತ್ತಿಹಿಡಿಯಲಿದೆ. ಕೃಷಿ ಕಾರ್ಯಗಳು ಮತ್ತು ಆರ್ಥಿಕತೆ ಮಾತ್ರವಲ್ಲ, ಸಂಸ್ಕೃತಿ ಹಾಗೂ ಸಾಮಾಜಿಕ ಕಲ್ಯಾಣ ರಂಗದಲ್ಲೂ ಪ್ರಮುಖ ಪಾತ್ರ ವಹಿಸಿರುವ ಗೋಮಾತೆಯ ಸಂರಕ್ಷಣೆ ಅತ್ಯಗತ್ಯವೆಂಬ ಸಂದೇಶ ಸಾರೋದು ಮ್ಯೂಸಿಯಂನ ಧ್ಯೇಯವಾಗಿದೆ.



ಕೋಟ್ಯಂತರ ದೇವ ದೇವರುಗಳ ಆವಾಸ ಸ್ಥಾನ ಖ್ಯಾತಿಯ ಗೋಮಾತೆಗೆ ಭಾರತೀಯ ಸಂಸ್ಕೃತಿಯಲ್ಲಿ ಅತೀ ಪೂಜ್ಯ ಸ್ಥಾನವಿದೆ. ಹೆತ್ತ ತಾಯಿ ಸಮಾನ ಆರಾಧಿತಳು ಗೋಮಾತೆ. ಸಮಾಜ ವ್ಯವಸ್ಥೆ ಮತ್ತು ಗ್ರಾಮೀಣ ಆರ್ಥಿಕ ವ್ಯವಸ್ಥೆಯಲ್ಲಿ ಗೋವುಗಳ ಪಾತ್ರವನ್ನು ಎತ್ತಿಹಿಡಿಯುವ ಯತ್ನವಾಗಿ ಮತ್ತು ಸಂಪ್ರದಾಯ ಹಾಗೂ ವಿಜ್ಞಾನಗಳ ಸಂಯೋಜನೆ ರೂಪದಲ್ಲಿ, ಭಾರತದ ಪ್ರಪ್ರಥಮ ಅಪೂರ್ವ ರಾಷ್ಟ್ರೀಯ ಗೋ ಸಂಸ್ಕೃತಿ ಮ್ಯೂಸಿಯಂ ಉತ್ತರಪ್ರದೇಶದ ಮಥುರಾದಲ್ಲಿ ಮೈದಳೆಯಲಿದೆ. ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ನಿರ್ದೇಶನ ಮೇರೆಗೆ ಬ್ರಜ ತೀರ್ಥ ವಿಕಾಸ ಪರಿಷದ್ ಪ್ರಸ್ತಾವಿತ ಯೋಜನೆಯನ್ನು ಅನುಷ್ಠಾನಗೊಳ್ಳಲಿದೆ.

ಭಾರತದ ಪ್ರಪ್ರಥಮ ಗೋ ಸಂಗ್ರಹಾಲಯ

ಉತ್ತರಪ್ರದೇಶದ ಮಥುರಾದಲ್ಲಿ ರಾಷ್ಟ್ರೀಯ ಗೋ ಸಂಸ್ಕೃತಿ ಮ್ಯೂಸಿಯಂ ಸ್ಥಾಪನೆಗೆ ಸಿದ್ಧತೆ

ಗೋಮಾತೆಗೆ ಯಾಕಾಗಿ ವಿಶೇಷ ಸ್ಥಾನ?

ಭಾರತೀಯ ಜನಜೀವನದಲ್ಲಿ ಧರ್ಮ ಮತ್ತು ಸಂಪ್ರದಾಯಗಳ ನೆಲೆಯಿಂದ ಮಾತ್ರವಲ್ಲ, ಕೃಷಿ, ಆರೋಗ್ಯ ಹಾಗೂ ಗ್ರಾಮೀಣ ಆರ್ಥಿಕ ರಂಗದಲ್ಲೂ ಗೋವು ಮಹತ್ವದ ವಿಶೇಷವಾದ ಸ್ಥಾನ ಹೊಂದಿರುವುದು ಯಾಕಾಗಿ ಎಂಬುದನ್ನು ಜನರಿಗೆ ಸಾರಿ ಹೇಳುವುದು ಪ್ರಸ್ತಾವಿತ ಮ್ಯೂಸಿಯಂನ ಪ್ರಧಾನ ಧ್ಯೇಯವಾಗಿದೆ. ಮ್ಯೂಸಿಯಂಗಾಗಿ ಪಂಡಿತ್ ದೀನದಯಾಳ್ ಉಪಾಧ್ಯಾಯ ಪಶುಸಂಗೋಪನಾ ವಿಜ್ಞಾನ ವಿವಿ ಕ್ಯಾಂಪಸ್‌ನಲ್ಲಿ ಅಧಿಕಾರಿಗಳು ಜಮೀನು ಗುರುತಿಸಿದ್ದಾರೆ.

ಏನಿದರ ಹೆಸರು?

ನ್ಯಾಷನಲ್ ಕೌ ಕಲ್ಚರ್ ಮ್ಯೂಸಿಯಂ(ರಾಷ್ಟ್ರೀಯ ಗೋ ಸಂಸ್ಕೃತಿ ಸಂಗ್ರಹಾಲಯ)

ಸ್ಥಾಪನೆ ಎಲ್ಲಿ?

ಉತ್ತರ ಪ್ರದೇಶದ ಮಥುರಾದಲ್ಲಿನ ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಪಶುಸಂಗೋಪನಾ ವಿಜ್ಞಾನ ವಿವಿ ಕ್ಯಾಂಪಸ್

ಆಡಳಿತ ವ್ಯವಸ್ಥೆ?

ಉತ್ತರಪ್ರದೇಶದ ಬ್ರಜ್ ತೀರ್ಥ ವಿಕಾಸ ಪರಿಷದ್

ಸದ್ಯದ ಸ್ಥಿತಿಗತಿ?

ಜಮೀನು ಗುರುತಿಸಲಾಗಿದೆ ಮತ್ತು ಜಮೀನಿನ ಪರಿಶೀಲನೆ ನಡೆದಿದೆ (ಫೆ.2026)

ಆಶಯದ ಮೂಲ?

ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್

ಸಂವಾದಾತ್ಮಕ ವಿಶಿಷ್ಟ ಶಿಕ್ಷಣ ಕೇಂದ್ರ

ಮ್ಯೂಸಿಯಂ ಎನ್ನುವುದಕ್ಕಿಂತಲೂ, ಗೋಮಾತೆಯ ಮೌಲ್ಯಯುತ ಪರಂಪರೆಯ ಅಪೂರ್ವ ಮಾಹಿತಿ ನೀಡುವ ಸಂವಾದಾತ್ಮಕ ಶಿಕ್ಷಣ ಕೇಂದ್ರವಾಗಿ ರೂಪುಗೊಳ್ಳುತ್ತಿರುವ ಮ್ಯೂಸಿಯಂ, ಗೋಮಾತೆಯ ಆಧ್ಯಾತ್ಮಿಕ ಮೌಲ್ಯಗಳು ಹಾಗೂ ಗೋವಿನಿಂದ ಸಿಗುವ ಪ್ರಾಯೋಗಿಕ ಪ್ರಯೋಜನಗಳ ಮಾಹಿತಿಯನ್ನು ಜನರಿಗೆ ತಲುಪಿಸಲಿದೆ. ಗೋಮಾತೆಯ ಸಂರಕ್ಷಣೆ, ನಿತ್ಯ ಬದುಕಲ್ಲಿ ಗೋವಿನ ಉತ್ಪನ್ನಗಳ ಬಳಕೆ ಮತ್ತು ಸಮಾಜದಲ್ಲಿ ಗೋವಿನ ಮಹತ್ವದ ಪಾತ್ರ ಇತ್ಯಾದಿ ಮಾಹಿತಿಗಳು ಸಂದರ್ಶಕರು, ಪ್ರವಾಸಿಗರಿಗೆ ಮ್ಯೂಸಿಯಂ ನೀಡಲಿದೆ. ಧಾರ್ಮಿಕ ನೆಲೆಯಲ್ಲಿ ಗೋವಿಗಿರುವ ಪೂಜನೀಯ ಪಾತ್ರದ ಜತೆ ಜತೆ ಅವುಗಳ ವೈಜ್ಞಾನಿಕ ಮತ್ತು ಆರ್ಥಿಕ ಪ್ರಸ್ತುತತೆಯನ್ನು ಜನರಿಗೆ ತಿಳಿಹೇಳಲು ಪೂರಕ ಯೋಜನೆಯನ್ನು ವಿನ್ಯಾಸಗೊಳಿಸಲಾಗಿದೆ ಎಂದು ಆಗ್ರಾ ಡಿವಿಜನಲ್ ಕಮಿಷನರ್ ನಾಗೇಂದ್ರ ಪ್ರತಾಪ್ ಹೇಳಿದ್ದಾರೆ.



ಏನಿದರ ಮಹತ್ವ?

ಭಾರತೀಯ ಸಂಸ್ಕೃತಿಯಲ್ಲಿ ಮಾತೆ ಸ್ಥಾನ ಹೊಂದಿರುವ ಗೋಮಾತೆಯ ಧಾರ್ಮಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ ಮಹತ್ವದ ಜತೆ, ಗೋವು ಮತ್ತು ಗೋ ಉತ್ಪನ್ನಗಳಿಂದ ಸಿಗುವ ವೈಜ್ಞಾನಿಕ ಪ್ರಯೋಜನಗಳ ಮಾಹಿತಿಗಳನ್ನು ಮ್ಯೂಸಿಯಂ ಜನರಿಗೆ ನೀಡಲಿದೆ. ಸಂಪ್ರದಾಯ ಮತ್ತು ವಿಜ್ಞಾನಗಳ ವಿಶಿಷ್ಟ ಸಂಯೋಜನೆಯಿಂದ ಗೋಮಾತೆಯ ಸಂರಕ್ಷಣೆಯ ಮಹತ್ವ ಜನರಿಗೆ ಸ್ಪಷ್ಟ ವೇದ್ಯವಾಗಲಿದೆ. ಸನಾತನದ ಧರ್ಮದಲ್ಲಿ ಮಾತೆ ಸ್ಥಾನಮಾನ ಹೊಂದಿರುವ ಗೋಮಾತೆ ಸುಸ್ಥಿರ ಭವಿಷ್ಯಕ್ಕೂ ಕಾರಣಕರ್ತಳೆಂಬ ಸತ್ಯವನ್ನು ಜನರಿಗೆ ಪ್ರಸ್ತಾವಿತ ಮ್ಯೂಸಿಯಂ ಮನವರಿಕೆ ಮಾಡಲಿದೆ. ಆಯುರ್ವೇದ ಮತ್ತು ಆಧುನಿಕ ವಿಜ್ಞಾನದ ಸಮಗ್ರತೆ ಮುಖೇನ ಸಾತ್ವಿಕ ಜೀವನಶೈಲಿ ಮತ್ತು ಜನ ಕಲ್ಯಾಣವನ್ನು ಮ್ಯೂಸಿಯಂ ಉತ್ತೇಜಿಸಲಿದೆ.

ಅಧಿಕಾರಿ ತಂಡದಿಂದ ನಿವೇಶನ ಪರಿಶೀಲನೆ

ಗೋಮಾತೆಯ ಮ್ಯೂಸಿಯಂ ನಿರ್ಮಾಣಕ್ಕೆ ಗುರುತಿಸಲ್ಪಟ್ಟಿರುವ ಪ್ರಸ್ತಾವಿತ ಜಮೀನಿಗೆ ಅಧಿಕಾರಿಗಳ ತಂಡವೊಂದು ಭೇಟಿ ನೀಡಿ ಪರಿಶೀಲನೆ ನಡೆಸಿದೆ. ಬ್ರಜ ತೀರ್ಥ ವಿಕಾಸ್ ಪರಿಷತ್ ಉಪಾಧ್ಯಕ್ಷ ಶೈಲಜಕಾಂತ್ ಮಿಶ್ರಾ, ಜಿಲ್ಲಾ ಮ್ಯಾಜಿಸ್ಟ್ರೇಟ್ ಸಿ.ಪಿ.ಸಿಂಗ್, ಮಥುರಾ-ವೃಂದಾವನ ಅಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷರಾದ ಲಕ್ಷ್ಮಿ ಎನ್., ಸಿಇಒ ಸೂರಜ್ ಪಟೇಲ್, ಪರಿಸರಾತ್ಮಕ ಸಲಹೆಗಾರ ಮುಖೇಶ್ ಶರ್ಮಾ, ಪಶುಸಂಗೋಪನಾ ತಜ್ಞ ಅಮಿತ್ ಶುಕ್ಲಾ ತಂಡದಲ್ಲಿದ್ದರು.

ಮುಂದಿನ ಪೀಳಿಗೆಗೆ ಗೋ ಪರಂಪರೆ ಮಾಹಿತಿ

ಭಾರತದಾದ್ಯಂತ ಅಪಾಯದಂಚಲ್ಲಿರುವ ಗೋತಳಿಗಳ ಸಹಿತ ದೇಶದ ಹೈನುಗಾರರು ಪೋಷಿಸುತ್ತಿರುವ ಪ್ರಮುಖ ದೇಶೀ ಗೋ ತಳಿಗಳನ್ನು ಪರಿಚಯಿಸಲಿರುವ ನೂರು ಡಿಜಿಟಲ್ ಮತ್ತು ಭೌತಿಕ ಪ್ರದರ್ಶನಗಳನ್ನು ಮ್ಯೂಸಿಯಂ ಒಳಗೊಂಡಿರುತ್ತದೆ. ರಾಷ್ಟ್ರದ ಗೋ ಪರಂಪರೆ ಜತೆ ಸಂಪನ್ನ ಜೀವವೈವಿಧ್ಯಗಳು ಹಾಗೂ ಇವುಗಳ ಮಹತ್ವ ಕುರಿತು ಮಾಹಿತಿ ಪಡೆಯಲು ಮುಂದಿನ ಪೀಳಿಗೆಗೆ ಪ್ರಸ್ತಾವಿತ ಮ್ಯೂಸಿಯಂ ಪರಿಣಾಮಕಾರಿ ಮಾಧ್ಯಮವಾಗಲಿದೆ.

ಸಿಗಲಿವೆ ತಾಜಾ ಡೇರಿ ಉತ್ಪನ್ನಗಳು

ಹಾಲು, ಬೆಣ್ಣೆ, ಮೊಸರು, ತುಪ್ಪ ಇತ್ಯಾದಿ ಡೇರಿ ಉತ್ಪನ್ನಗಳ ಮಹತ್ವವನ್ನು ಮ್ಯೂಸಿಯಂನಲ್ಲಿ ತೆರೆಯಲಾಗುವ ಪ್ರತ್ಯೇಕ ವಿಭಾಗ ಸಾರಲಿದೆ. ಅತ್ಯಾಧುನಿಕ ಮಂಡನಾ ವಿಧಾನ ಮುಖೇನ ಈ ಡೇರಿ ಉತ್ಪನ್ನಗಳ ಪೌಷ್ಟಿಕ ಮಹತ್ವ ಮತ್ತು ಆಯುರ್ವೇದಿಕ್ ಮೌಲ್ಯಗಳನ್ನು ಸಂದರ್ಶಕರಿಗೆ ವಿವರಿಸಲಾಗುವುದು. ಕಾಂಪ್ಲೆಕ್ಸ್‌ನಲ್ಲಿ ತೆರೆಯಲು ಯೋಜಿಸಲಾಗಿರುವ ಡೇರಿ ಪಾರ್ಲರ್‌ನಿಂದ ಸಂದರ್ಶಕರು ಶುಚಿರುಚಿಕರ ಡೇರಿ ಉತ್ಪನ್ನಗಳನ್ನು ಸ್ಥಳದಲ್ಲೇ ವಿಕ್ರಯಿಸಲು ಅವಕಾಶವಿರುವುದು

ಗೋಪಾಲಕೃಷ್ಣನ ನಾಡಿನ ಅಸ್ಮಿತೆಯ ಬಲವರ್ಧನೆ

ಪ್ರಸ್ತಾವಿತ ಮ್ಯೂಸಿಯಂ ಪೊಡವಿಗೊಡೆಯ ಭಗವಾನ್ ಶ್ರೀಕೃಷ್ಣ ಮತ್ತಾತನ ಗೋಸಮೂಹ ನೆಲೆನಿಂತ ನಾಡಾಗಿರುವ ಬ್ರಜ ವಲಯದ ಅಸ್ಮಿತೆಯ ಬಲವರ್ಧಿಸಲಿದೆ. ಗೋ ಆಧಾರಿತ ಗ್ರಾಮೀಣ ಆರ್ಥಿಕತೆ ಮತ್ತು ಗೋಮಾತೆಯ ಪರಂಪರೆ- ಸಾಂಸ್ಕೃತಿಕ ಸಂರಕ್ಷಣೆ ಹಾಗೂ ವೈಜ್ಞಾನಿಕ ಶಿಕ್ಷಣದ ಜಾಗತಿಕ ಕೇಂದ್ರವಾಗಿ ಮಥುರಾ ಪ್ರಸಿದ್ಧಿ ಪಡೆಯಲಿದೆ. ವೈಜ್ಞಾನಿಕ ವಿಧಾನಗಳಿಂದ ಬೆಂಬಲಿತ ಗೋ ಆಧಾರಿತ ಗ್ರಾಮೀಣ ಆರ್ಥಿಕತೆ ಬಗ್ಗೆ ಜನಜಾಗೃತಿಯನ್ನು ಮ್ಯೂಸಿಯಂ ಉತ್ತೇಜಿಸಲಿದೆ ಎಂಬುದು ಅಧಿಕಾರಿಗಳ ವಿಶ್ವಾಸ. ಮ್ಯೂಸಿಯಂನಿಂದಾಗಿ ಮಥುರಾವು ಪ್ರಮುಖ ಶೈಕ್ಷಣಿಕ ಕೇಂದ್ರ ಹಾಗೂ ಪ್ರವಾಸಿಗರ ಆಕರ್ಷಣೆಯ ಕೇಂದ್ರವಾಗಿ ರೂಪುಗೊಳ್ಳುವ ನಿರೀಕ್ಷೆಗಳೂ ಬಲವಾಗಿವೆ.

ಕಿರುಸುದ್ದಿ

ಎಸ್‌ಐಆರ್: ಪ.ಬಂಗಾಳದ 7 ಅಧಿಕಾರಿಗಳ ಅಮಾನತು

• **ಹೊಸದಿಲ್ಲಿ :** ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ಪ್ರಕ್ರಿಯೆಗೆ ಸಂಬಂಧಿಸಿದ ದುರ್ನಡತೆ ಮತ್ತು ಕರ್ತವ್ಯ ಲೋಪದ ಆರೋಪಗಳ ಹಿನ್ನೆಲೆ, ಪಶ್ಚಿಮ ಬಂಗಾಳದ ಏಳು ಸಹಾಯಕ ಚುನಾವಣಾ ನೋಂದಣಿ ಅಧಿಕಾರಿಗಳನ್ನು(ಎಇಆರ್‌ಒ) ಚುನಾವಣಾ ಆಯೋಗ(ಇಸಿ) ತಕ್ಷಣದಿಂದಲೇ ಅಮಾನತು ಮಾಡಿದೆ. ಅಮಾನತುಗೊಂಡ ಅಧಿಕಾರಿಗಳು ರಾಜ್ಯ ಸರ್ಕಾರದ ನೌಕರರಾಗಿದ್ದು, ಚುನಾವಣಾ ಕರ್ತವ್ಯಕ್ಕಾಗಿ ಆಯೋಗಕ್ಕೆ ಡೆಪ್ಯುಟೇಶನ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಇವರ ವಿರುದ್ಧ ಶಿಸ್ತಿನ ಕ್ರಮಗಳನ್ನು ಯಾವುದೇ ವಿಳಂಬವಿಲ್ಲದೆ ಆರಂಭಿಸುವಂತೆ ರಾಜ್ಯದ ಮುಖ್ಯ ಕಾರ್ಯದರ್ಶಿಗೆ ಆಯೋಗ ನಿರ್ದೇಶಿಸಿದೆ. ಮತದಾರರ ಪಟ್ಟಿಯ ಪರಿಷ್ಕರಣೆ ವಿಚಾರದಲ್ಲಿ ಚುನಾವಣಾ ಆಯೋಗ ಮತ್ತು ತೃಣಮೂಲ ಕಾಂಗ್ರೆಸ್ ಸರ್ಕಾರ ನಡುವೆ ಉದ್ವಿಗ್ನತೆ ಮುಂದುವರಿದಿರುವ ಸಂದರ್ಭದಲ್ಲೇ ಈ ಕ್ರಮ ಕೈಗೊಳ್ಳಲಾಗಿದೆ.

ಪರೀಕ್ಷೆ 1ಕ್ಕೆ ಹಾಜರಾದರೆ 2ನೇ ಪರೀಕ್ಷೆಗೆ ಅವಕಾಶ

• **ಹೊಸದಿಲ್ಲಿ:** ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಶನ್(ಸಿಬಿಎಸ್‌ಇ) 10ನೇ ತರಗತಿಯ ವಿದ್ಯಾರ್ಥಿಗಳು ಮೊದಲ ಬೋರ್ಡ್ ಪರೀಕ್ಷೆಗೆ ಹಾಜರಾಗುವುದು ಕಡ್ಡಾಯವಾಗಿದೆ. ಮೊದಲ ಆವೃತ್ತಿಯಲ್ಲಿ ಕನಿಷ್ಠ ಮೂರು ಪರೀಕ್ಷೆ ಬರೆಯದವರು ಎಸ್ಸೆನ್ಷಿಯಲ್ ರಿಪೀಟ್ ವಿಭಾಗದಲ್ಲಿ ಇರಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ವರ್ಷದಿಂದ ಸಿಬಿಎಸ್‌ಇ 10ನೇ ತರಗತಿ ಮಕ್ಕಳಿಗೆ 2 ಪರೀಕ್ಷೆಯನ್ನು ಆಯೋಜಿಸುತ್ತಿದೆ. ಮೊದಲ ಪರೀಕ್ಷೆಗೆ ಹಾಜರಾಗದ ವಿದ್ಯಾರ್ಥಿಗಳಿಗೆ ಎರಡನೇ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡುವುದಿಲ್ಲ ಮಂಡಳಿ ಈ ಸ್ಪಷ್ಟೀಕರಣ ನೀಡಿದೆ. ಎಲ್ಲಾ ವಿದ್ಯಾರ್ಥಿಗಳು ಮೊದಲ ಪರೀಕ್ಷೆಗೆ ಹಾಜರಾಗುವುದು ಕಡ್ಡಾಯವಾಗಿದೆ. 10ನೇ ತರಗತಿಯಲ್ಲಿ ಎರಡನೇ ಪರೀಕ್ಷೆಯೇ ಸುಧಾರಣಾ ಪರೀಕ್ಷೆಯಾಗಿ ಪರಿಗಣಿಸಲಾಗುತ್ತದೆ.

ವ್ಯಾಪಾರ ಒಪ್ಪಂದಕ್ಕಾಗಿ ಅಮೆರಿಕಕ್ಕೆ ತಂಡ ಶೀಘ್ರ


• **ಹೊಸದಿಲ್ಲಿ:** ಮಧ್ಯಂತರ ವ್ಯಾಪಾರ ಒಪ್ಪಂದದ ಕಾನೂನಾತ್ಮಕ ಅಂಶಗಳನ್ನು ಅಂತಿಮಗೊಳಿಸಲು ಭಾರತೀಯ ನಿಯೋಗ ಮುಂದಿನ ವಾರ ಅಮೆರಿಕಕ್ಕೆ ಭೇಟಿ ನೀಡಲಿದೆ, ಎಂದು ವಾಣಿಜ್ಯ ಕಾರ್ಯದರ್ಶಿ ರಾಜೇಶ್ ಅಗ್ರವಾಲ್ ಸೋಮವಾರ ತಿಳಿಸಿದ್ದಾರೆ. ಈ ಭೇಟಿ ಫೆಬ್ರವರಿ 23ರಂದು ಪ್ರಾರಂಭವಾಗಲಿದ್ದು, ಮಾರ್ಚ್‌ನಲ್ಲಿ ಒಪ್ಪಂದಕ್ಕೆ ಸಹಿ ಹಾಕುವ ನಿರೀಕ್ಷೆಯಿದೆ. ಈ ತಿಂಗಳ ಆರಂಭದಲ್ಲಿ ಬಿಡುಗಡೆಯಾದ ಜಂಟಿ ಹೇಳಿಕೆಯಲ್ಲಿ ಒಪ್ಪಂದದ ಚೌಕಟ್ಟನ್ನು ಈಗಾಗಲೇ ರೂಪಿಸಲಾಗಿದೆ, ಎಂದು ಹೇಳಲಾಗಿದೆ.

ವಿವಾಹಪೂರ್ವ ಸಂಬಂಧ ಕುರಿತು ಸುಪ್ರೀಂ ಎಚ್ಚರಿಕೆ

• **ಹೊಸದಿಲ್ಲಿ:** ಮದುವೆಯಾಗುವುದಾಗಿ ಸುಳ್ಳು ಭರವಸೆ ನೀಡಿ ನಡೆದ ಅತ್ಯಾಚಾರ ಪ್ರಕರಣವೊಂದರ ಜಾಮೀನು ಅರ್ಜಿಯ ವಿಚಾರಣೆಯ ವೇಳೆ, ಸುಪ್ರೀಂ ಕೋರ್ಟ್ ವಿವಾಹಪೂರ್ವ ದೈಹಿಕ ಸಂಬಂಧಗಳ ಬಗ್ಗೆ ಎಚ್ಚರಿಕೆ ನೀಡಿದೆ. ಮದುವೆಗೆ ಮೊದಲು ಪುರುಷ ಮತ್ತು ಮಹಿಳೆಯನ್ನು ಅಪರಿಚಿತರು ಎಂದೇ ಪರಿಗಣಿಸಲಾಗುತ್ತದೆ, ಅವರೇ ಜಾಗರೂಕರಾಗಿರಬೇಕು ಎಂದಿದೆ. ವಿವಾಹವಾದರೂ ಮದುವೆಯಾಗುತ್ತೇನೆಂದು 30 ವರ್ಷದ ಮಹಿಳೆಯೊಂದಿಗೆ ದೈಹಿಕ ಸಂಬಂಧ ಬೆಳೆಸಿ ನಂತರ ಇನ್ನೊಬ್ಬ ಮಹಿಳೆಯನ್ನು ಮದುವೆಯಾದ ಆರೋಪ ಹೊತ್ತಿರುವ ವ್ಯಕ್ತಿಯೊಬ್ಬರ ಅರ್ಜಿಯ ವಿಚಾರಣೆಯ ವೇಳೆ, ನ್ಯಾಯಮೂರ್ತಿ ಬಿವಿ ನಾಗರತ್ನ ಮತ್ತು ನ್ಯಾಯಮೂರ್ತಿ ಉಜ್ಜಲ್ ಭುಯಾನ್ ಅವರನ್ನೊಳಗೊಂಡ ಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿತು. 2022ರಲ್ಲಿ ದೂರುದಾರರನ್ನು ವೈವಾಹಿಕ ವೆಬ್‌ಸೈಟ್ ಮೂಲಕ ಭೇಟಿಯಾದ ಮಹಿಳೆ, ಬಳಿಕ ಆತನೊಂದಿಗೆ ದಿಲ್ಲಿ ಮತ್ತು ದುಬೈಗೆ ಪ್ರವಾಸ ನಡೆಸಿದ್ದರು. ಆದರೆ ಅರ್ಜಿದಾರ, ಒಪ್ಪಿಗೆಯಿಲ್ಲದೆ ವೀಡಿಯೋಗಳನ್ನು ರೆಕಾರ್ಡ್ ಮಾಡಿ ಬೆದರಿಕೆ ಹಾಕಿದ್ದಾರೆ. ಅಲ್ಲದೆ ಪಂಜಾಬ್‌ನಲ್ಲಿ ಎರಡನೇ ವಿವಾಹ ಮಾಡಿಕೊಂಡಿದ್ದಾರೆ ಎಂದು ಹೇಳಲಾಗಿದೆ. "ನಾವು ಹಿಂದಿನ ಫ್ಯಾಷನ್‌ನವರಾಗಿರಬಹುದು. ಆದರೆ, ವಿವಾಹಕ್ಕೆ ಮೊದಲು ಪುರುಷ ಮತ್ತು ಮಹಿಳೆಯನ್ನು ಅಪರಿಚಿತರು ಎಂದೇ ಭಾವಿಸಲಾಗುತ್ತದೆ. ಅವರು, ಯಾವ ನಂಬಿಕೆಯ ಮೇಲೆ ದೈಹಿಕ ಸಂಬಂಧ ಬೆಳೆಸುತ್ತಾರೆ? ಎಂದು ಪ್ರಶ್ನಿಸಿದ್ದಾರೆ.

ಕ್ರಿಮಿನಲ್ ಕಾನೂನು ಪೂರ್ಣ ಜಾರಿ ಆದರೆ ಶಿಕ್ಷೆ ಹೆಚ್ಚಳ: ಶಾ

• **ಹೊಸದಿಲ್ಲಿ:** ದೇಶದಲ್ಲಿ ಮೂರು ಅಪರಾಧ ಕಾನೂನು ಸಂಪೂರ್ಣ ಜಾರಿಯಾದರೇ ಶಿಕ್ಷೆ ಪ್ರಮಾಣ ಕೂಡ ಶೇ.80ರಷ್ಟು ಹೆಚ್ಚಳವಾಗಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ದಿಲ್ಲಿ ಪೊಲೀಸರ 79ನೇ ಸಂಸ್ಥಾಪನಾ ದಿನದ ಪಥಸಂಚಲನ ಸಮಾರಂಭದಲ್ಲಿ ಮಾತನಾಡಿದ ಅವರು, ನ್ಯಾಯ ಆಧಾರಿತ ಮೂರು ಹೊಸ ಕ್ರಿಮಿನಲ್ ಕಾನೂನುಗಳು ಕಳೆದ 11 ವರ್ಷಗಳಲ್ಲಿ ದೇಶವು ಸಾಧಿಸಿದ ಮೈಲಿಗಲ್ಲುಗಳಲ್ಲಿ ಒಂದಾಗಿದೆ. ಇದು ಮುಂಬರುವ ಕೆಲವು ವರ್ಷಗಳಲ್ಲಿ ಸಂಪೂರ್ಣವಾಗಿ ಜಾರಿಗೆ ಬಂದ ನಂತರ ಪ್ರಕರಣಗಳ ವಿಲೇವಾರಿ ಮತ್ತು ಅಪರಾಧ ನಿರ್ಣಯದ ಪ್ರಮಾಣವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ ಎಂದು ಶಾ ಹೇಳಿದರು.



ಇದರ ಜತೆಗೆ ದೇಶದಲ್ಲಿ ಈಗಾಗಲೇ ನಕ್ಸಲ್‌ವಾದದ ವಿರುದ್ಧದ ಹೋರಾಟವು ಕೊನೆ ಹಂತದಲ್ಲಿದೆ. ಈ ಹಿಂದೆ ನಾವು ಹೇಳಿದಂತೆ ಮಾರ್ಚ್ ಅಂತ್ಯಕ್ಕೆ ನಕ್ಸಲ್‌ವಾದವು ಕೊನೆಗೊಳ್ಳಲಿದೆ ಎಂದಿದ್ದಾರೆ. ಕಳೆದ 12 ವರ್ಷಗಳು, 2014 ರಿಂದ ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ, ದೇಶದ ಆಂತರಿಕ ಭದ್ರತೆಯ ಇತಿಹಾಸದಲ್ಲಿ ಸುವರ್ಣ ಯುಗ ವಾಗಿದೆ. 2014ರ ಮೊದಲು ದೇಶವು ಜಮ್ಮು-ಕಾಶ್ಮೀರದಲ್ಲಿ ಭಯೋತ್ಪಾದನೆ, ಎಡಪಂಥೀಯ ಉಗ್ರವಾದ ಮತ್ತು ಈಶಾನ್ಯದಲ್ಲಿ ಹಿಂಸಾಚಾರ ಸೇರಿದಂತೆ ಮೂರು ಸಮಸ್ಯೆಗಳನ್ನು ಎದುರಿಸಿತ್ತು. 11 ರಾಜ್ಯಗಳಲ್ಲಿ ಹರಡಿರುವ ನಕ್ಸಲಿಸಂ ದೇಶದ ಆಂತರಿಕ ಭದ್ರತೆಗೆ ಯಾವಾಗಲೂ ದೊಡ್ಡ ಸವಾಲಾಗಿದೆ. ನಾವು ನಕ್ಸಲಿಸಂ ಅನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಬಹಳ ಹತ್ತಿರದಲ್ಲಿದ್ದೇವೆ ಎಂದು ಹೇಳಿದರು.

ಕಾರ್ಖಾನೆಯಲ್ಲಿ ಬೆಂಕಿ; 7 ಜನ ಸಜೀವ ದಹನ

• **ಜೈಪುರ:** ಅಕ್ರಮ ಪಟಾಕಿ ತಯಾರಿಕಾ ಕಾರ್ಖಾನೆಯಲ್ಲಿ ಅಗ್ನಿ ಅವಘಡ ಸಂಭವಿಸಿ 7 ಮಂದಿ ಸಜೀವ ದಹನಗೊಂಡಿರುವ ಘಟನೆ ರಾಜಸ್ಥಾನದ ಭಿವಾಡಿಯ ಕೈರ್ತಾಲ್ ತಿಜಾರದಲ್ಲಿ ಸಂಭವಿಸಿದೆ. ಇದು ಗಾರ್ಮೆಂಟ್ಸ್ ಕಾರ್ಖಾನೆಯಾಗಿದ್ದು, ಕಾರ್ಖಾನೆಯೊಳಗೆ ಅಕ್ರಮವಾಗಿ ಪಟಾಕಿ ತಯಾರಿಸಲಾಗುತ್ತಿತ್ತು ಎಂದು ಹೆಚ್ಚುವರಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಸುಮಿತ್ರಾ ಪರೀಕ್ ಮಾಹಿತಿ ನೀಡಿದ್ದಾರೆ. ಭಿವಾಡಿಯ ಖುಷ್ಖೇರಾ-ಕರೋಲಿ ಕೈಗಾರಿಕಾ ಪ್ರದೇಶದಲ್ಲಿ ಈ ಘಟನೆ ಸಂಭವಿಸಿದೆ. ಆವರಣವನ್ನು ಉಡುಪಿನ ಕಾರ್ಖಾನೆಯ ಹೆಸರಿನಲ್ಲಿ ಗುತ್ತಿಗೆಗೆ ನೀಡಲಾಗಿತ್ತು. ಆದರೆ ಪ್ರಾಥಮಿಕ ವರದಿಯ ಪ್ರಕಾರ, ಪಟಾಕಿಗಳನ್ನು ಅಕ್ರಮವಾಗಿ ತಯಾರಿಸಲಾಗುತ್ತಿತ್ತು ಎಂದು ಅವರು ಹೇಳಿದರು. ವಾಡಿಕೆಯ ಗಸ್ತು ಸಮಯದಲ್ಲಿ ಪೊಲೀಸರಿಗೆ ಈ ಘಟನೆಯ ಬಗ್ಗೆ ತಿಳಿಯಿತು, ಅದರ ನಂತರ ತಕ್ಷಣವೇ ರಕ್ಷಣಾ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಯಿತು ಎಂದು ಹೇಳಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಈಗಾಗಲೇ ಉನ್ನತ ಮಟ್ಟದ ತನಿಖೆಗೆ ಆದೇಶಿಸಲಾಗಿದೆ. ಪ್ರಾಥಮಿಕ ವರದಿ ಪ್ರಕಾರ, ಕಾರ್ಖಾನೆಯೊಳಗೆ 20 ಮಂದಿ ಒಳಗಿದ್ದರು. ಬೆಂಕಿ ತಗುಲಿದ ಕೂಡಲೇ ಅವರೆಲ್ಲಾ ಅಲ್ಲಿಂದ ಹೊರಬರುವಲ್ಲಿ ಯಶಸ್ವಿಯಾಗಿದ್ದಾರೆ. ಉಳಿದಂತೆ ಇಬ್ಬರೂ ಕಾರ್ಖಾನೆಯೊಳಗೆ ಸಿಲುಕಿದ್ದಾರೆಂದು ಶಂಕೆಯಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಪ್ರಧಾನಿ ಮೋದಿ ಸಂತಾಪ: ಮೃತರ ಕುಟುಂಬಕ್ಕೆ ಪ್ರಧಾನಿ ನರೇಂದ್ರ ಮೋದಿ ಮತ್ತು ಉಪರಾಷ್ಟ್ರಪತಿ ಸಿ.ಪಿ ರಾಧಾಕೃಷ್ಣನ್ ಅವರು ಸಂತಾಪ ಸೂಚಿಸಿದ್ದಾರೆ. ಗಾಯಾಳುಗಳು ಶೀಘ್ರ ಗುಣಮುಖರಾಗಲಿ ಎಂದು ಪ್ರಾರ್ಥಿಸಿದ್ದಾರೆ.

ಹವಾಲಾ ಜಾಲ; 8,000 ಬ್ಯಾಂಕ್ ಖಾತೆಗಳು ಸ್ಥಗಿತ

• **ಶ್ರೀನಗರ:** ಜಮ್ಮು ಮತ್ತು ಕಾಶ್ಮೀರದಲ್ಲಿ ದೊಡ್ಡ ಪ್ರಮಾಣದ ಹವಾಲಾ ದಂಧೆ ಬೆಳಕಿಗೆ ಬಂದಿದ್ದು, ಕಳೆದ ಮೂರು ವರ್ಷಗಳಲ್ಲಿ ಭಾರತ ವಿರೋಧಿ ಚಟುವಟಿಕೆ ನಡೆಸುತ್ತಿವೆ ಎಂದು ಶಂಕಿಸಿ, ಭದ್ರತಾ ಸಂಸ್ಥೆಗಳು 8,000ಕ್ಕೂ ಹೆಚ್ಚು ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಿವೆ. ಡಿಜಿಟಲ್ ಹವಾಲಾ ಜಾಲ, 2017ರಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆ ಅಕ್ರಮ ಹಣ ವರ್ಗಾವಣೆಯನ್ನು ಭೇದಿಸಿದ ನಂತರ ಬೆಳಕಿಗೆ ಬಂದಿದೆ ಎನ್ನಲಾಗಿದೆ. ಈ ಖಾತೆಗಳ ಮೂಲಕ ವರ್ಗಾವಣೆಯಾಗುವ ಹಣ, ಪ್ರತ್ಯೇಕತಾವಾದಿ ಮತ್ತು ರಾಷ್ಟ್ರ ವಿರೋಧಿ ಕಾರ್ಯಾಚರಣೆಗಳಿಗೆ ಬೆಂಬಲ ನೀಡುತ್ತಿದೆ ಎಂದು ಶಂಕಿಸಲಾಗಿದೆ, ಎಂದು ಸುದ್ದಿ ಸಂಸ್ಥೆಯೊಂದು ವರದಿ ಮಾಡಿದೆ. ಸುಲಭ ಹಣದ ಆಮಿಷಕ್ಕೊಳಗಾದ ವ್ಯಕ್ತಿಗಳು ಮ್ಯೂಲ್ ಖಾತೆಗಳನ್ನು ನಿರ್ವಹಿಸುತ್ತಾರೆ. ಖಾತೆದಾರರು ಸಂಪೂರ್ಣ ಬ್ಯಾಂಕಿಂಗ್ ದಾಖಲೆಗಳನ್ನು ಒಪ್ಪಿಸುತ್ತಾರೆ. ಇದು ಸ್ಕ್ಯಾಮರ್‌ಗಳಿಗೆ ಸೈಬರ್ ವಂಚನೆಯಿಂದ ಬಂದ ಹಣವನ್ನು ಅಕ್ರಮವಾಗಿ ವರ್ಗಾಯಿಸಲು ಅನುವು ಮಾಡಿಕೊಡುತ್ತದೆ. ಒಬ್ಬ ಆಪರೇಟರ್ ಸಾಮಾನ್ಯವಾಗಿ ಏಕಕಾಲದಲ್ಲಿ 10 ರಿಂದ 30 ಖಾತೆಗಳನ್ನು ನಿಯಂತ್ರಿಸುತ್ತಾನೆ, ಕೆಲವು ಶೆಲ್ ಕಂಪನಿ ಖಾತೆಗಳು ದಿನಕ್ಕೆ 40 ಲಕ್ಷ ರೂ.ಗಳವರೆಗೆ ಅಕ್ರಮ ವರ್ಗಾವಣೆಯನ್ನು ಸಾಧ್ಯವಾಗಿಸುತ್ತವೆ.

ಮಂಗಳೂರು ಉದ್ಯಮಿಯ ಯಶೋಗಾಥೆ | ಬರದ ನಷ್ಟದಿಂದ ತಂತ್ರಜ್ಞಾನ ಕ್ರಾಂತಿವರೆಗೆ ವಿವೇಕ್ ರಾಜ್ ಹೆಜ್ಜೆ

ಎಐ ಹೈಡ್ರೋಪೋನಿಕ್ ಕೃಷಿಗೆ 214 ಕೋಟಿ ರೂ. ಹೂಡಿಕೆ

• **ಹೊಸದಿಲ್ಲಿ:** ದಶಕದ ಹಿಂದೆ ಬರದಿಂದ ಸಂಪೂರ್ಣ ಬೆಳೆ ಕಳೆದುಕೊಂಡ ಅನುಭವವೇ ಮಂಗಳೂರು ಮೂಲದ ಉದ್ಯಮಿ ವಿವೇಕ್ ರಾಜ್ ಅವರನ್ನು ಎಐ ಆಧಾರಿತ ಹೈಡ್ರೋಪೋನಿಕ್ ಕೃಷಿಯತ್ತ ಕೊಂಡೊಯ್ದಿದೆ. ಕರ್ನಾಟಕದಲ್ಲಿ ಉನ್ನತ ಮೌಲ್ಯದ ಮಸಾಲೆ ಹಾಗೂ ಔಷಧೀಯ ಸಸ್ಯಗಳ ಬೆಳೆಗೆ ಅವರ ಪನಾಮಾ ಹೈಡ್ರೋ-ಎಕ್ಸ್ ಸಂಸ್ಥೆ 214 ಕೋಟಿ ರೂ. ಹೂಡಿಕೆ ಘೋಷಿಸಿದೆ.

ಇಲ್ಲಿ ನಡೆಯುತ್ತಿರುವ ಎಐ ಶೃಂಗದ ನಿಮಿತ್ತ ಸಂಸ್ಥಾಪಕ ಹಾಗೂ ಸಿಇಒ ವಿವೇಕ್ ರಾಜ್ ಮಾತನಾಡಿದ್ದು, ಹಲವು ವರ್ಷಗಳ ಸಂಶೋಧನೆ ಮತ್ತು ಅಭಿವೃದ್ಧಿಗೆ 146 ಕೋಟಿ ರೂ. ವೆಚ್ಚ ಮಾಡಿದ ಬಳಿಕ ಕಂಪನಿಯು ನಾಲ್ಕು ಪೇಟೆಂಟ್ ಪಡೆದ ಎಐ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಿದೆ ಎಂದು ತಿಳಿಸಿದ್ದಾರೆ.

ಬೆಳೆಗಳಿಗೆ ಲಕ್ಷಣಗಳು ಗೋಚರಿಸುವ ಮುನ್ನವೇ ರೋಗ ಪತ್ತೆ, ಫೋಟೋಸಿಂಥೆಸಿಸ್‌ಗೆ ಸೂಕ್ತ ಕೃತಕ ಬೆಳಕು ವ್ಯವಸ್ಥೆ ಸೇರಿದಂತೆ ಅತ್ಯಾಧುನಿಕ ಪರಿಹಾರಗಳು ಈ ತಂತ್ರಜ್ಞಾನಗಳ ಭಾಗವಾಗಿದೆ. ಪರೀಕ್ಷಾ ಹಂತದಲ್ಲಿ ಉತ್ತಮ ಫಲಿತಾಂಶ ಕಂಡಿದ್ದೇವೆ. ಇಂಗ್ಲೆಂಡ್, ಜರ್ಮನಿ,



ಆಸ್ಟ್ರೇಲಿಯಾ ದಿಂದ ಪೇಟೆಂಟ್‌ಗಳು ಲಭಿಸಿವೆ. ಈಗ ದೊಡ್ಡ ಪ್ರಮಾಣದ ಜಾರಿಗೆ ಸಿದ್ಧತೆ ನಡೆಸಿದ್ದೇವೆ ಎಂದು ರಾಜ್ ಹೇಳಿದ್ದಾರೆ.

ಕಂಪನಿಯು ಮೂಡಬಿದರೆಯಲ್ಲಿ 16 ಎಕರೆ ಜಮೀನು ಖರೀದಿಸಿದ್ದು, 2026ರ ಅಂತ್ಯದೊಳಗೆ ಹೈಡ್ರೋಪೋನಿಕ್ ಮೂಲಸೌಕರ್ಯ ನಿರ್ಮಾಣ ಗುರಿ ಇರಿಸಿಕೊಂಡಿದ್ದೇವೆ. ಮೊದಲ ವಾಣಿಜ್ಯ ಕೊಯ್ಲು 2027ರ ಜೂನ್‌ನಲ್ಲಿ ನಿರೀಕ್ಷೆ ಇದೆ ಎಂದು ತಿಳಿಸಿದ್ದಾರೆ.

ಯೋಜನೆಯಂತೆ ಐದು ಎಕರೆಗಳಲ್ಲಿ ಕೇಸರಿ, ಐದು ಎಕರೆಗಳಲ್ಲಿ ಶುಂಠಿ, ಉಳಿದ ಜಮೀನಿನಲ್ಲಿ ಅರಿಶಿನ, ಅಶ್ವಗಂಧ ಸೇರಿದಂತೆ ಔಷಧೀಯ ಸಸ್ಯಗಳ ಬೆಳೆಗೆ ಯೋಜನೆ ಹಾಕಿಕೊಂಡಿದ್ದೇವೆ. ಕೇಸರಿ ಹಾಗೂ ಶುಂಠಿಯನ್ನು ರಫ್ತು, ಔಷಧೀಯ ಬೆಳೆಗಳನ್ನು ದೇಶೀಯ ಮಾರುಕಟ್ಟೆಗೆ ಮಾರಾಟ ಮಾಡುವ ತಂತ್ರ ಇದೆ ಎಂದು ಹೇಳಿದ್ದಾರೆ.

ಉತ್ಪಾದನೆಯಲ್ಲಿ ಭಾರೀ ಏರಿಕೆ: ಪರೀಕ್ಷಾ ಹಂತದಲ್ಲಿ ಎಐ ಹೈಡ್ರೋಪೋನಿಕ್ ಕೃಷಿಯಿಂದ ಎಕರೆಗೆ 1,200 ಚೀಲಗಳಷ್ಟು ಶುಂಠಿ ಉತ್ಪಾದನೆ ಕಂಡುಬಂದಿದ್ದು, ಪರಂಪರಾತ್ಮಕ ಕೃಷಿಯಲ್ಲಿ ಇದು 400 ಚೀಲಗಳಷ್ಟೇ ಇತ್ತು. ವರ್ಷಕ್ಕೆ ಒಂದು ಬೆಳೆ ಚಕ್ರದ ಬದಲು ಮೂರು ಬೆಳೆ ಚಕ್ರ ಸಾಧ್ಯವಾಗಿರುವುದೂ ಗಮನಾರ್ಹವಾಗಿದೆ. ಕಂಪನಿಯ ಪೇಟೆಂಟ್‌ಗಳಲ್ಲಿ ಸ್ಮಾರ್ಟ್ ಕೃಷಿ ಮಾನಿಟರ್, ಕೇಸರಿ ರೋಗ ಪತ್ತೆ ವ್ಯವಸ್ಥೆ, ಎಲೆ ಬಣ್ಣ ಬದಲಾವಣೆ ಗುರುತಿಸುವ ಡಿಸಿಜಿಎನ್‌ಎನ್ ತಂತ್ರಜ್ಞಾನ, ಸ್ಮಾರ್ಟ್ ಎಲ್‌ಇಡಿ ಕೃಷಿ ವ್ಯವಸ್ಥೆ ಸೇರಿವೆ.

ಬೆಳೆ ಸಾಯದಂತೆ ಮಾಡುವುದೇ ನಮ್ಮ ತಂತ್ರಜ್ಞಾನದ ಬಲ ಎಂದು ರಾಜ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ವಾಣಿಜ್ಯ ಯಶಸ್ಸು ದೃಢಪಟ್ಟ ಬಳಿಕವೇ ತಂತ್ರಜ್ಞಾನ ಪರವಾನಗಿ ಕುರಿತು ಚಿಂತನೆ ಎಂದಿದ್ದಾರೆ.

ಎಐ ಪರಿವರ್ತನೆಯಲ್ಲಿ ಭಾರತ ಮುಂಚೂಣಿ: ಮೋದಿ

ಕೃತಕ ಬುದ್ಧಿಮತ್ತೆಯ ಪರಿವರ್ತನೆಯಲ್ಲಿ ಭಾರತ ಮುಂಚೂಣಿಯಲ್ಲಿದೆ. ಕೃತಕ ಬುದ್ಧಿಮತ್ತೆಯಲ್ಲಿ ಅದರ ದಾಪುಗಾಲು ಮಹತ್ವಾಕಾಂಕ್ಷೆ ಮತ್ತು ಜವಾಬ್ದಾರಿ ಎರಡನ್ನೂ ಪ್ರತಿಬಿಂಬಿಸುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಹೇಳಿದ್ದಾರೆ. ಅವರು ಇಲ್ಲಿನ ಭಾರತ್ ಮಂಟಪದಲ್ಲಿ ಇಂಡಿಯಾ ಎಐ ಇಂಪ್ಯಾಕ್ಟ್ ಎಕ್ಸ್‌ಪೋ ಉದ್ಘಾಟನಾ ಕಾರ್ಯಕ್ರಮ ಮುನ್ನ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಕೃತಕ ಬುದ್ಧಿಮತ್ತೆಯನ್ನು ಚರ್ಚಿಸಲು ಜಗತ್ತನ್ನು ಒಗ್ಗೂಡಿಸುವುದು. ಇಂದಿನಿಂದ, ಭಾರತವು ದಿಲ್ಲಿಯ ಭಾರತ್ ಮಂಟಪದಲ್ಲಿ ಎಐ ಇಂಪ್ಯಾಕ್ಟ್ ಶೃಂಗಸಭೆಯನ್ನು ಆಯೋಜಿಸುತ್ತಿದೆ. ಈ ಶೃಂಗಸಭೆಗೆ ವಿಶ್ವದಾದ್ಯಂತದ ವಿಶ್ವ ನಾಯಕರು, ಉದ್ಯಮದ ಮುಖ್ಯಸ್ಥರು, ನಾವೀನ್ಯಕಾರರು, ನೀತಿ ನಿರೂಪಕರು, ಸಂಶೋಧಕರು ಮತ್ತು ತಂತ್ರಜ್ಞಾನ ಉತ್ಸಾಹಿಗಳನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಶೃಂಗಸಭೆಯ ವಿಷಯವೆಂದರೆ ಸರ್ವಜನ ಹಿತಾಯ, ಸರ್ವಜನ ಸುಖಾಯ ಅಥವಾ ಎಲ್ಲರಿಗೂ ಕಲ್ಯಾಣ, ಎಲ್ಲರಿಗೂ ಸಂತೋಷ, ಇದು ಮಾನವ ಕೇಂದ್ರಿತ ಪ್ರಗತಿಗಾಗಿ ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಳ್ಳುವ ನಮ್ಮ ಹಂಚಿಕೆಯ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ ಎಂದು ಅವರು ತಮ್ಮ ಎಕ್ಸ್ ಪೋಸ್ಟ್‌ನಲ್ಲಿ ಹೇಳಿದರು.

ಫೆ.19: 'ಫಾರ್ಮಾ ಭವನ' ಲೋಕಾರ್ಪಣೆ

ಮಡಿಕೇರಿ: ಕೊಡಗು ಜಿಲ್ಲಾ ಔಷಧ ವ್ಯಾಪಾರಿಗಳ ಸಂಘದಿಂದ ನಿರ್ಮಿಸಲಾದ ಫಾರ್ಮಾ ಭವನದ ಉದ್ಘಾಟನಾ ಕಾರ್ಯಕ್ರಮ ಫೆ.19 ರಂದು ಬೆಳಗ್ಗೆ 9.30 ಗಂಟೆಗೆ ನಗರದ ಚೈನ್‌ಗೇಟ್ ಬಳಿ ನಡೆಯಲಿದೆ.

ಕರ್ನಾಟಕ ಔಷಧ ವ್ಯಾಪಾರಿಗಳ ಸಂಘದ ಅಧ್ಯಕ್ಷ ಆರ್. ರಘುನಾಥ ರೆಡ್ಡಿ ಅವರು ಫಾರ್ಮಾ ಭವನವನ್ನು ಉದ್ಘಾಟಿಸಲಿದ್ದು, ಕೊಡಗು ಜಿಲ್ಲಾ ಔಷಧ ವ್ಯಾಪಾರಿಗಳ ಸಂಘದ ಅಧ್ಯಕ್ಷ ಅಂಬೆಕಲ್ ಜೀವನ್ ಕುಶಾಲಪ್ಪ ಅಧ್ಯಕ್ಷತೆಯಲ್ಲಿ ಆಯೋಜಿತ ಸಮಾರಂಭದಲ್ಲಿ ಮೈಸೂರು ಪ್ರಾದೇಶಿಕ ಔಷಧ ನಿಯಂತ್ರಕರ ಕಚೇರಿಯ ಉಪ ಆಯುಕ್ತ ಬಿ.ಪಿ. ಅರುಣ್, ಕೊಡಗು ಜಿಲ್ಲಾ ಸಹಾಯಕ ಔಷಧ ನಿಯಂತ್ರಕ ಅಜಯ್ ರಾಜ್ ಷಾ ಮೊದಲಾದವರು ಪಾಲ್ಗೊಳ್ಳಲಿದ್ದಾರೆ.

ಫಾರ್ಮಾ ಭವನದ ಲೋಕಾರ್ಪಣೆ ಸಂದರ್ಭ ಕೊಡಗಿನ ಹಿರಿಯ ಔಷಧಿ ವ್ಯಾಪಾರಿಗಳನ್ನು ಸನ್ಮಾನಿಸಿ ಗೌರವಿಸಲಾಗುತ್ತದೆ ಎಂದು ಕೊಡಗು ಔಷಧಿ ವ್ಯಾಪಾರಸ್ಥರ ಸಂಘದ ಪ್ರಕಟಣೆ ತಿಳಿಸಿದೆ.

ಪುತ್ತೂರು ಮಾರುಕಟ್ಟೆ ಧಾರಣೆ

16-02-2026

ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	:	260 - 485
ಚೋಲ್ ಅಡಿಕೆ	:	520 - 550
ಡಬಲ್ ಚೋಲ್	:	520 - 550
ಹೊಸ ಪಟೋರ	:	365 - 415
ಹಳೆ ಪಟೋರ	:	400 - 430
ಹೊಸ ಉಳ್ಳಿ	:	115 - 280
ಹಳೆ ಉಳ್ಳಿ	:	105 - 290
ಹೊಸ ಕೋಕಾ	:	300 - 320
ಹಳೆ ಕೋಕಾ	:	350 - 370
ಹೊಸ ಕರಿಗೋಟು	:	235 - 265
ಹಳೆ ಕರಿಗೋಟು	:	235 - 265
ಹಸಿ ಕೊಕ್ಕೋ	:	80 - 110
ಒಣ ಕೊಕ್ಕೋ	:	380 - 380

ಕಾಳುಮೆಣಸು ಧಾರಣೆ

ಕಾಳುಮೆಣಸು	:	430 - 685

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	-	208.00
ಆರ್‌ಎಸ್‌ಎಸ್ 2	-	177.00
ಸ್ಕ್ರಾಪ್ 1	-	131.00
ಸ್ಕ್ರಾಪ್ 2	-	113.00

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಭಾಗ್ಯತಾರ (ನಂ.BT-41) ಡ್ರಾ ಫೆಬ್ರವರಿ 16ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
BD 540307 (ERNAKULAM)

Consolation Prize Rs.5,000/-
BA 540307 BB 540307 BC 540307 BE 540307
BF 540307 BG 540307 BH 540307 BJ 540307
BK 540307 BL 540307 BM 540307

2nd Prize Rs.30,00,000/- [30 Lakhs]
BD 995570 (PATHANAMTHITTA)

3rd Prize Rs.5,00,000/- [5 Lakhs]
BL 336803 (PUNALUR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0012 0077 1855 1909 2058 2596 2979 3857 5109 5255
6370 6581 6704 7430 8261 8536 8877 9196 9578

5th Prize Rs.2,000/-
3257 6768 6792 8381 9732 9969

6th Prize Rs.1,000/-
0372 0394 0444 0861 1371 1591 2068 2136 2416 3507
3620 3813 4201 4440 4877 5313 5505 6270 6377 6388
7601 8016 8303 8646 8988

7th Prize Rs.500/-
0055 0578 0599 0707 1013 1111 1167 1186 1214 1384
1541 1727 1736 2191 2436 2509 2608 2632 2633 2717
3077 3217 3286 3361 3617 3662 3845 3851 3868 4014
4056 4098 4230 4335 4553 4800 4878 4879 5070 5229
5365 5498 5761 5851 5853 6054 6228 6308 6573 6639
6748 6794 6808 7198 7290 7443 7751 7785 7938 7956
8024 8179 8349 8765 8767 9153 9191 9317 9472 9567
9597 9625 9674 9759 9866 9973

8th Prize Rs.200/-
0105 0117 0246 0297 0335 0357 0371 0391 0393 0516
0531 0927 1118 1161 1267 1424 1441 1596 1598 1653
1717 1929 1934 2169 2206 2253 2265 2269 2309 2587
2609 2764 2844 3078 3144 3147 3187 3252 3278 3337
3356 3418 3636 3714 3715 3882 4048 4191 4205 4368
4398 4726 4765 4813 5082 5397 5517 5603 5698 5798
5846 5862 5886 5956 6831 6874 6960 6963 7141 7209
7427 7460 7515 7609 7632 7810 8024 8031 8214 8665
8671 8737 8848 8873 8926 8937 9040 9074 9129 9187
9438 9491 9821 9858 9859

9th Prize Rs.100/-
0124 0150 0158 0163 0296 0336 0339 0353 0397 0608
0641 0716 0865 0928 0990 1015 1028 1189 1197 1325
1345 1404 1576 1708 1719 1811 2016 2154 2226 2357
2454 2506 2526 2551 2575 2581 2589 2590 2622 2665
2830 2928 2931 3015 3026 3182 3211 3306 3414 3637
3747 3755 3763 3966 4120 4148 4160 4163 4204 4367
4411 4492 4595 4634 4639 4776 4777 4920 4934 5000
5057 5163 5303 5386 5395 5401 5465 5542 5588 5635
5651 5843 5924 5985 6112 6169 6172 6185 6187 6295
6423 6430 6601 6623 6675 6707 6785 6899 6957 7100
7197 7315 7380 7397 7493 7583 7634 7873 7924 7968
8030 8084 8134 8193 8253 8290 8327 8456 8542 8603
8625 8648 8664 8782 8802 8813 8814 8825 8862 9021
9080 9089 9154 9239 9462 9511 9521 9547 9629 9637
9685 9706 9707 9983

‘ಚಿನ್ನು ಪಾಪು’ ಸಾವಿನ ಬೆನ್ನಲ್ಲೇ ಸ್ನೇಹಿತ ಆತ್ಮಹತ್ಯೆ

ಕಾಸರಗೋಡು: ಆದೂರು ಮೂಲದ ನಿವಾಸಿ, ಸೋಶ್ಯಲ್ ಮೀಡಿಯಾ ಇನ್‌ಫ್ಲುಮರ್ ಚಿನ್ನು ಪಾಪು ಯಾನೆ ರೇಷ್ಮಾ (24) ಆತ್ಮಹತ್ಯೆ ಮಾಡಿಕೊಂಡ ಕೆಲವೇ ದಿನಗಳ ನಂತರ ರೇಷ್ಮಾ ಅವರ ಪ್ರಿಯಕರ ಸಂದೇಶ್ (28) ಕೂಡ್ಲು ಮನ್ನಿಪ್ಪಾಡಿಯಲ್ಲಿರುವ ತನ್ನ ಮನೆಯಲ್ಲಿ ನೇಣುಬಿಗಿದು ಮೃತಪಟ್ಟ ಸ್ಥಿತಿಯಲ್ಲಿ ಭಾನುವಾರ ಪತ್ತೆಯಾಗಿದ್ದಾರೆ.

ಚಿನ್ನು ಪಾಪು ಯಾನೆ ರೇಷ್ಮಾ ಮತ್ತು ಸಂದೇಶ್ ಒಟ್ಟಿಗೆ ವಾಸಿಸುತ್ತಿದ್ದರು. ಫೆ.9ರಂದು ಕೂಡ್ಲು ಆಜಾದ್‌ನಗರದಲ್ಲಿರುವ ಬಾಡಿಗೆ ಕ್ವಾರ್ಟರ್ಸ್‌ನಲ್ಲಿ ರೇಷ್ಮಾ ಫ್ಯಾನ್‌ಗೆ ನೇಣು ಬಿಗಿದು ಸಾವಿಗೀಡಾದ ಸ್ಥಿತಿಯಲ್ಲಿ ಪತ್ತೆಯಾಗಿದ್ದರು. ಈ ಪ್ರಕರಣದ ತನಿಖೆಯ ಅಂಗವಾಗಿ ಸಂದೇಶ್‌ನನ್ನು ಕಾಸರಗೋಡು ನಗರ ಠಾಣೆಯ ಪೊಲೀಸರು ಕಸ್ಟಡಿಗೆ ತೆಗೆದು ಹೇಳಿಕೆ ದಾಖಲಿಸಿ ಬಿಡುಗಡೆಗೊಳಿಸಿದ್ದರು. ಇದರ ಬೆನ್ನಲ್ಲೇ ಸಂದೇಶ್ ವಿರುದ್ಧ ಭಾರೀ ಸೈಬರ್ ದಾಳಿ ನಡೆದಿರುವುದಾಗಿ ಹೇಳಲಾಗುತ್ತಿತ್ತು. ಇದರಿಂದ ಮನನೊಂದು ಸಂದೇಶ್ ನೇಣು ಬಿಗಿದು ಸಾವಿಗೀಡಾಗಿರುವುದಾಗಿ ಶಂಕಿಸಲಾಗಿದೆ. ಈ ಬಗ್ಗೆ ಪೊಲೀಸರು ಹೆಚ್ಚಿನ ತನಿಖೆ ನಡೆಸುತ್ತಿದ್ದಾರೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕಗಾನ ಮೇಳ

1. ಅಶ್ವತ್ಥ್, ಪಣಪಿಲ, ಸೇನರಬೆಟ್ಟು ಮನೆ, ವಾಲ್ಪಾಡಿ ವಯಾ ಮೂಡುಬಿದ್ರಿ.
2. ಶ್ರೀಶಾ ಆಚಾರ್ಯ, ಅಲೆವೂರು, "ಶ್ರೀನಿವಾಸ", ಡಯಾನ ಥಿಯೇಟರ್ ರಸ್ತೆ, ಚಿಟ್ಪಾಡಿ, ಉಡುಪಿ (ತಾ).
3. ಸದಾನಂದ ನಾಯಕ್, ನಡಿಬೆಟ್ಟು ಹೌಸ್, ಅಜೆಕಾರು, ಕಾರ್ಕಳ (ತಾ).
4. ಜಯಂತ ಜಯಲಕ್ಷ್ಮೀ, ‘ಅಕ್ಷಯ’, ವಿದ್ಯಾನಗರ, ಕುಳಾಯಿ – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
5. ಶ್ರೀ ದೇವಿ ಭಕ್ತ ವೃಂದ, ನೂಚಿಲ, ಸುಬ್ರಹ್ಮಣ್ಯ, ಸುಳ್ಯ (ತಾ).
6. ರಮೇಶ್ ಶೆಟ್ಟಿ, ‘ಶ್ರೀ ಚಾಮುಂಡೇಶ್ವರೀ ಪ್ರಸಾದ್’, ಬಡಗ ಎಕ್ಕಾರು, ಎಕ್ಕಾರು ಗುಡ್ಡೆ ಸಾನದ ಬಳಿ.
7. ಶ್ರೀ ದೇವಿ ಭಕ್ತ ಸಂಘ, ಕೆಂಜಾರು, ಕಾನ, ಜೋಗಟ್ಟೆ.

ಶ್ರೀ ಧರ್ಮಸ್ಥಳ ಮೇಳ
ನಾರೇಗದ್ದೆ-ಬಾವಿಕೈಸರುನಲ್ಲಿ
ಶ್ರೀಮತಿ ಇಂದಿರಾ, W/o. ದಿ। ರತ್ನಾಕರ ಜೆ.ಪಿ., ನಾರೇಗದ್ದೆಮನೆ

ಶ್ರೀ ಸಾಲಿಗ್ರಾಮ ಮೇಳ
ನಿಟ್ಟೂರು ರಾಮೇಶ್ವರ ದೇವಸ್ಥಾನ ಬಯಲಾಟ
ಗದಾಯುದ್ಧ-ಕನಕಾಂಗಿ

ಶ್ರೀ ಪೆರ್ಡೂರು ಮೇಳ
ಯಲ್ಲಾಪುರದಲ್ಲಿ-
ಬ್ರಹ್ಮಕಪಾಲ-ಕೃಷ್ಣಾರ್ಜುನ-ರಾಜಾಭದ್ರಸೇನ

ಶ್ರೀ ಹನುಮಗಿರಿ ಮೇಳ
ಶಕ್ತಿನಗರದಲ್ಲಿ

ಶ್ರೀ ಪಾವಂಜೆ ಮೇಳ
ಶ್ರೀ ದುರ್ಗಾಪರಮೇಶ್ವರೀ ಭಜನಾ ಮಂದಿರ, ಪೆರಯಡ್ಕ,
ರ ದುಂದುಭಿ-ಲೀಲಾಮೂರ್ತಿ ಶ್ರೀಕೃಷ್ಣ

ಮಹಿಳಾ ಸಾಧಕಿಯರಿಗೆ ವೀರರಾಣಿ ಅಬ್ಬಕ್ಕ ಗೌರವ ಪುರಸ್ಕಾರ



ಪುತ್ತೂರು: ನಗರದ ವಿವೇಕಾನಂದ ಕಲಾ, ವಿಜ್ಞಾನ, ವಾಣಿಜ್ಯ ಕಾಲೇಜಿನ(ಸ್ವಾಯತ್ತ) ಇತಿಹಾಸ ವಿಭಾಗ ಹಾಗೂ ಐಕ್ಯೂಎಸಿ, ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ್ ಮಹಾಸಂಘ ಹಾಗೂ ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘದ ಸಹಯೋಗದೊಂದಿಗೆ ನಡೆದ ಅಬ್ಬಕ್ಕ- 500 ರಾಷ್ಟ್ರೀಯ ವಿಚಾರ ಸಂಕಿರಣದ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಮಾಜದ ಮಹಿಳಾ ಸಾಧಕಿಯರಿಗೆ ವೀರರಾಣಿ ಅಬ್ಬಕ್ಕ ಗೌರವ ಪುರಸ್ಕಾರ ನೀಡಿ ಗೌರವಿಸಲಾಯಿತು.

ಮಹಿಳಾ ಸಬಲೀಕರಣ- ಸುರೇಖಾ ಶೆಟ್ಟಿ, ಜಾನಪದ- ಸುಂದರಿ ನಲಿಕೆ, ಸಮಾಜ ಸೇವೆ ಹಾಗೂ ಸಂಘಟನೆ- ಡಾ. ಆಶಾ ಜ್ಯೋತಿ ರೈ, ರುದ್ರಭೂಮಿ ಸೇವೆ- ವನಜಾ ಪೂಜಾರ್ತಿ, ಪ್ರಕೃತಿ ಚಿಕಿತ್ಸೆ- ಡಾ. ಗ್ರೀಷ್ಮಾ ವಿವೇಕ್ ಆಳ್ವ, ಬಾಲ ಸಂಸ್ಕಾರ–ಸಂಘಟನೆ– ಗೀತಾ ಲಕ್ಮೀಶ್, ಭಾರತೀಯ ಕಲೆಗಳು–ವಿದುಷಿ ಸುಮಂಗಲ ರತ್ನಾಕರ್ ರಾವ್, ಯಕ್ಷಗಾನ- ಪೂರ್ಣಿಮಾ ಯತೀಶ್ ರೈ, ನಾಟಿ ವೈದ್ಯೆ- ಕೆ.ಬಿ. ಅಮ್ಮಣ್ಣಿ ಉದ್ಯಮ ಶೀಲತೆ- ಮಹಾಲಕ್ಷ್ಮಿ, ಆಂಬ್ಯುಲೆನ್ಸ್ ಚಾಲನೆ- ಸಿ.ಎಸ್. ರಾಧಿಕಾ, ತುಳು ಸಾಹಿತ್ಯ- ಯಶೋಧಾ ಕೇಶವ್, ಪರಿಸರ- ಸಂಧ್ಯಾ, ಯಕ್ಷಗಾನ ಪ್ರಸಂಗ ಸಾಹಿತ್ಯ- ಶುಭಾಶಯ ಜೈನ್, ಉದಯೋನ್ಮುಖ ಕಲಾವಿದೆ- ಸುಶ್ರಾವ್ಯ ಯು., ಸಮುದಾಯ ಅಭಿವೃದ್ಧಿ- ಭವ್ಯಾ ರಾಣಿ, ಆಯುರ್ವೇದ- ರೂಪಲೇಖಾ, ಭರತನಾಟ್ಯ–ವಿದುಷಿ ಶಾಲಿನಿ ಆತ್ಮಭೂಷಣ್, ತಾಳಮದ್ದಳೆ- ಶುಭಾ ಅಡಿಗ, ಪತ್ರಿಕೋದ್ಯಮ- ಶಹನಾ ಮುಮ್ತಾಜ್ ನೆಲ್ಯಡ್ಕ, ಯೋಗ- ಕೆ.ಎನ್. ದೀಪಿಕಾ ಅವರಿಗೆ ವೀರರಾಣಿ ಅಬ್ಬಕ್ಕ ಗೌರವ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

ಸಮಾರೋಪ ಸಮಾರಂಭ

ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿದ್ದ ದಿಲ್ಲಿಯ ಅಖಿಲ ಭಾರತೀಯ ಶೈಕ್ಷಿಕ್ ಮಹಾಸಂಘದ ರಾಷ್ಟ್ರೀಯ ಸಹಸಂಘಟನಾ ಕಾರ್ಯದರ್ಶಿ ಲಕ್ಷ್ಮಣ ಗುಂಟ ಮಾತನಾಡಿ, ಇಂತಹ ಕಾರ್ಯಕ್ರಮಗಳಿಂದ ನಾವುಗಳು ಹಲವಾರು ವಿಷಯಗಳನ್ನು ತಿಳಿದುಕೊಳ್ಳಬಹುದು. ಕೇವಲ ಶಿಕ್ಷಣಕ್ಕೆ ಮಾತ್ರ ನಮ್ಮನ್ನು ಸೀಮಿತವಾಗಿರಿಸದೆ ಹೊರಗಿನ ಶೈಕ್ಷಣಿಕೇತರ ಕಾರ್ಯಗಳಲ್ಲಿ ನಾವು ತೊಡಗಿಸಿಕೊಳ್ಳಬೇಕಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ವಿವೇಕಾನಂದ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಡಾ.ಕೆ.ಎಂ. ಕೃಷ್ಣ ಭಟ್, ಇತಿಹಾಸದ ಪುಟದಿಂದ ವಿಸ್ಮೃತಿಗೊಂಡ ಅಬ್ಬಕ್ಕನನ್ನು ನೆನಪಿಸಿಕೊಳ್ಳುವಂತಹ ಈ ಕಾರ್ಯಕ್ರಮ ವಿಶೇಷವಾದದ್ದು ಎಂದು ಹೇಳಿದರು.

ಈ ಸಂದರ್ಭ ಯೋಗ ಮತ್ತು ಧ್ಯಾನ ಇದರಲ್ಲಿ ಸಾಧನೆಗೈದ ಮಂಗಳೂರಿನ ಆರ್ಟ್ ಆಫ್ ಲಿವಿಂಗ್‌ನ ಶಿಕ್ಷಕಿ ಕೆ.ಎನ್. ದೀಪಿಕಾ, ಕರ್ನಾಟಕ ಶಿಕ್ಷಕ ಸಂಘದ ಪ್ರತಿನಿಧಿ ಮತ್ತು ಜಂಟಿ ಕಾರ್ಯದರ್ಶಿ ಮಾಧವ ಕೆ. ಅವರನ್ನು ಸನ್ಮಾನಿಸಲಾಯಿತು. ಕರ್ನಾಟಕ ಎಬಿಆರ್‌ಎಸ್‌ಎಂ ಸಂಚಾಲಕ ಶಿವಪೂಜಿ ಕೋಟಿ, ಬೆಂಗಳೂರಿನ ಕೆಆರ್‌ಎಂಎಸ್‌ಎಸ್ ಪ್ರಧಾನ ಕಾರ್ಯದರ್ಶಿ ಪ್ರೊ. ರೋಹಿಣಿ ಕುಮಾರ್ ಹಿಲ್ಲಿ, ಸಂಘಟನಾ ಕಾರ್ಯದರ್ಶಿ ಡಾ.ಸಿ.ವಿ. ಮರಿದೇವರ ಮಠ, ಕೆಆರ್‌ಎಂಎಸ್‌ಎಸ್ ಉಡುಪಿ ಅಧ್ಯಕ್ಷ ಪ್ರೊ. ಸುರೇಂದ್ರ ಶೆಟ್ಟಿ, ಮಂಗಳೂರು ಅಧ್ಯಕ್ಷೆ ಪ್ರೊ. ವಾಣಿ, ಕಾರ್ಯಕ್ರಮ ಸಂಯೋಜಕಿ ಡಾ. ಆಶಾಲತಾ ಉಪಸ್ಥಿತರಿದ್ದರು

ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘದ ರಾಜೇಶ್ ವಂದಿಸಿದರು. ಮಂಗಳ ಗಂಗೋತ್ರಿ ವಿಶ್ವವಿದ್ಯಾಲಯದ ಕನ್ನಡ ವಿಭಾಗ ಶಿಕ್ಷಕಿ ಕಾಜಲ್ ಕಾರ್ಯಕ್ರಮ ನಿರ್ವಹಿಸಿದರು.

ಶ್ರೀಕೃಷ್ಣ ಮಠದಲ್ಲಿ ಶಿವರಾತ್ರಿ ಜಾಗರಣೆ



ಉಡುಪಿ: ಪರ್ಯಾಯ ಶೀರೂರು ಶ್ರೀ ವೇದವರ್ಧನ ತೀರ್ಥ ಶ್ರೀಪಾದರ ನೇತೃತ್ವದಲ್ಲಿ ಶ್ರೀಕೃಷ್ಣ ಮಠದ ರಾಜಾಂಗಣದಲ್ಲಿ ಶಿವರಾತ್ರಿ ಜಾಗರಣೆ ನಡೆಯಿತು. ಶ್ರೀಪಾದರು ಎಳ್ಳು ಗಂಟು ದೀಪವನ್ನು ಉರಿಸಿ ದೇಶದ ಸಮಸ್ತ ಲೋಕಕ್ಕೆ ಬರುವ ಕಂಟಕಗಳು ನಾಶವಾಗಲಿ ಎಂದು ಪ್ರಾರ್ಥಿಸಿದರು. ಅಶ್ವಥ್ ಭಾರದ್ವಾಜ್ ಸಹಕರಿಸಿದರು.

ಹೆರ್ಗ ರವೀಂದ್ರ ಭಟ್ ಹಾಗೂ ಕಲ್ಯ ಅಶೋಕ ಆಚಾರ್ಯ ಶಿವರಾತ್ರಿಯ ಮಹಿಮೆ ಹಾಗೂ ಶಿವರಾತ್ರಿಯ ಆಚರಣೆಯ ಮಹತ್ವಗಳ ಬಗ್ಗೆ ಪ್ರವಚನ ನೀಡಿದರು. ಸಾಂಸ್ಕೃತಿಕ ಕಾರ್ಯಕ್ರಮಗಳ ಅಂಗವಾಗಿ ಕ್ಷಿತಿಜ ಬೆಂಗಳೂರು ಹಾಗೂ ಬಳಗದವರಿಂದ ಯಕ್ಷಗಾನ ಭರತನಾಟ್ಯ, ಮಧೂರು ಬಾಲಸುಬ್ರಮಣ್ಯಂ ಹಾಗೂ ಬಳಗದವರಿಂದ ಸಂಗೀತ ಕಾರ್ಯಕ್ರಮ ಶ್ರೀಕಾಂತ್ ನಾಯಕ್ ಹಾಗೂ ತಂಡದಿಂದ ಭಜನಾ ಕಾರ್ಯಕ್ರಮ ನಡೆಯಿತು . ಹಾಗೂ ಸಂಘ ಸಂಸ್ಥೆಗಳ ಸದಸ್ಯರಿಂದ ರುದ್ರ ಪಾರಾಯಣ ವಿಷ್ಣುಸಹಸ್ರನಾಮ ಪಾರಾಯಣ ನಡೆಯಿತು. ಈ ಸಂದರ್ಭದಲ್ಲಿ ಶೀರೂರು ಮಠದ ದಿವಾನ ಉದಯ ಕುಮಾರ್ ಸರಳತ್ತಾಯ, ಬ್ರಾಹ್ಮಣ ಮಹಾ ಸಭಾ ಅಧ್ಯಕ್ಷ ಸಂದೀಪ್ ಮಂಜ, ಯುವ ಬ್ರಾಹ್ಮಣ ಪರಿಷತ್ತಿನ ಅಧ್ಯಕ್ಷ ರಘುಪತಿ ರಾಯರು, ಮಾಜೀ ಅಧ್ಯಕ್ಷ ವಿಷ್ಣು ಪಾಡಿಗಾರ್ ಹಾಗೂ ಉಡುಪಿ ಜಿಲ್ಲಾ ಯುವ ಬ್ರಾಹ್ಮಣ ಪರಿಷತ್ತಿನ ಸದಸ್ಯರು ಮತ್ತು ಸದಸ್ಯೆಯರು, ತುಳಿಮಾದ ಅಧ್ಯಕ್ಷ ಜಯರಾಮ ಆಚಾರ್ಯ ಮುಂತಾದವರು ಉಪಸ್ಥಿತರಿದ್ದರು.

ಶೀರೂರು ಮಠದ ವಿದ್ವಾಂಸರಾದ ಸುದರ್ಶನ್ ಆಚಾರ್ಯ ಹಾಗೂ ಸಗ್ರಿ ಆನಂದತೀರ್ಥ ಆಚಾರ್ಯ ಕಾರ್ಯಕ್ರಮವನ್ನು ನಿರೂಪಿಸಿದರು.

ಪರಿಶುದ್ಧ ನೀರನ್ನು ಮಲಿನಗೊಳಿಸುತ್ತಿರುವ ಆರೋಪ

ಕಣ್ವತೀರ್ಥದಲ್ಲಿ ಮೀನು ಕಾರ್ಖಾನೆ ವಿರುದ್ಧ ಸ್ಥಳೀಯರಿಂದ ಪ್ರತಿಭಟನೆ

ಮಂಜೇಶ್ವರ: ತೀರ್ಥ ಸಮಾನವಾದ ಹಾಗೂ ಪರಿಶುದ್ಧವಾದ ನೀರನ್ನು ಕಲುಷಿತಗೊಳಿಸಿ ಜನರಿಗೆ ಕುಡಿಯಲು ಕೂಡಾ ಸಾಧ್ಯವಾಗದ ಸ್ಥಿತಿಗೆ ತಲುಪಲು ಕಾರಣವಾದ ಕಣ್ವತೀರ್ಥ ಪ್ರದೇಶದ ಕಂಪೆನಿಯೊಂದರ ವಿರುದ್ಧ ನಾಗರಿಕರು ಭಾರೀ ಪ್ರತಿಭಟನೆ ನಡೆಸಿದ್ದಾರೆ.

ಕಳೆದ 8 ವರ್ಷಗಳಿಂದ ಕಣ್ವತೀರ್ಥ ಭಾಗದಲ್ಲಿ ಕಾರ್ಯಾಚರಿಸುತ್ತಿರುವ ಯುನೈಟೆಡ್ ಸೀ ಫುಡ್ ಕಾರ್ಖಾನೆ ವಿರುದ್ಧ ಸ್ಥಳೀಯ ನಿವಾಸಿಗಳು ಪ್ರತಿಭಟನಾ ಧರಣಿ ಆಯೋಜಿಸಿದ್ದು, ಅಲ್ಲದೆ ಬೃಹತ್ ಆಂದೋಲನಕ್ಕೆ ಯೋಜನೆ ರೂಪಿಸಿದ್ದಾರೆ. ನಿರಂತರ ವಾಯು, ಜಲ ಮಾಲಿನ್ಯಕ್ಕೆ ಕಾರಣವಾಗುತ್ತಿರುವ ಈ ಕಾರ್ಖಾನೆಯು ಜನವಾಸವಿರುವ ಈ ಪ್ರದೇಶದಲ್ಲಿ ಅಪಾಯಕಾರಿಯಾಗಿ ಬದಲಾಗುತ್ತಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸೂಕ್ತ ಕಾನೂನು ಕ್ರಮಗಳನ್ನು ಪಾಲಿಸದೆ ಮೀನಿನ ತ್ಯಾಜ್ಯಗಳನ್ನು ಹಾಗೂ ಮಲಿನ ಜಲವನ್ನು ಬಹಿರಂಗವಾಗಿ ಸಾರ್ವಜನಿಕ ಪ್ರದೇಶಗಳಿಗೆ ಉಪೇಕ್ಷಿಸುತ್ತಿರುವುದು ಕಣ್ವತೀರ್ಥ ಭಾಗದ ನೀರು ಮತ್ತು ವಾಯು ಮಾಲಿನ್ಯಕ್ಕೆ ದಾರಿಮಾಡಿಕೊಡುತ್ತಿದೆ. ಮಾತ್ರವಲ್ಲದೆ ಈ ಪ್ರದೇಶದ ಜನರಲ್ಲಿ ಆರೋಗ್ಯ ಸಮಸ್ಯೆಯೂ ಕಾಡುತ್ತಿದ್ದು, ಅನೇಕ ಮಂದಿ ತೊಂದರೆಗೊಳಗಾಗಿ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದ್ದಾರೆಂಬ ಮಾಹಿತಿಯಿದೆ.



ದುರ್ವಾಸನೆ ಸಹಿಸಲು ಸಾಧ್ಯವಾಗದೆ ಫ್ಯಾಕ್ಟರಿಯ ಆಸುಪಾಸಿನ ನಿವಾಸಿಗಳಲ್ಲಿ ಕೆಲವರು ಮನೆ ತೊರೆದು ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದಾರೆಂದು ತಿಳಿಸಲಾಗಿದೆ. ಈ ಪರಿಸರ ವಿರೋಧಿ ಕಾರ್ಖಾನೆಯನ್ನು ಮುಚ್ಚುಗಡೆಗೊಳಿಸುವಂತೆ ಆಗ್ರಹಿಸಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಾಗಿದೆ.

ಈ ಕಾರ್ಖಾನೆ ವಿರುದ್ಧ ಮಂಜೇಶ್ವರ ಗ್ರಾಮ ಪಂಚಾಯತ್ ನೇತೃತ್ವದಲ್ಲಿ ಸಮರ್ಥ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಲಾಗಿದೆ. ಕಮಾಂಡರ್ ವಿಜಯಕುಮಾರ್ ರಾಮಾಡಿ ಮತ್ತು ಗ್ರಾಮ ಪಂಚಾಯತ್ ಸದಸ್ಯ ಭವೇಶ್ ಬೆಂಗರೆ ಪ್ರತಿಭಟನೆಗೆ ಮುಂದಾಳುತ್ವ ವಹಿಸಿದ್ದಾರೆ. ಕಣ್ವತೀರ್ಥ ನಾಗರಿಕರ ಹಿತರಕ್ಷಣಾ ಸಮಿತಿಯ ನೇತೃತ್ವದಲ್ಲಿ ಮುಂಬರುವ ದಿನಗಳಲ್ಲಿ ತೀವ್ರ ಹೋರಾಟ ಹಮ್ಮಿಕೊಳ್ಳುವುದಾಗಿ ಸ್ಥಳೀಯರು ಮುನ್ನೆಚ್ಚರಿಕೆ ನೀಡಿದ್ದಾರೆ. ಇದರ ಪ್ರಥಮ ಹಂತವಾಗಿ ಪ್ರತಿಭಟನಾ ಧರಣಿಯನ್ನು ನಡೆಸಲಾಯಿತು.

2027ರಲ್ಲಿ ನಡೆಯಲಿರುವ ಕಾರ್ಕಳ ಮಹಾಮಸ್ತಕಾಭಿಷೇಕ

ಕಾರ್ಯಕ್ರಮದ ಪೂರ್ವಸಿದ್ಧತಾ ಸಭೆ



ಕಾರ್ಕಳ : ಕಾರ್ಕಳದಲ್ಲಿ ಮುಂದಿನ ವರ್ಷ 2027 ರಲ್ಲಿ ಐತಿಹಾಸಿಕ ಶ್ರೀ ಬಾಹುಬಲಿ ಮಹಾ ಮಸ್ತಕಾಭಿಷೇಕ ನಡೆಯಲಿದ್ದು, ಪ್ರತಿ 12 ವರ್ಷಗಳಿಗೊಮ್ಮೆ ನಡೆಯುವ ಮಹಾ ಮಸ್ತಕಾಭಿಷೇಕಕ್ಕೆ ದೇಶ ವಿದೇಶಗಳಿಂದ ಸಹಸ್ರಾರು ಯಾತ್ರಾತ್ರಿಗಳು, ಪ್ರವಾಸಿಗರು ಕಾರ್ಕಳ ಕ್ಷೇತ್ರಕ್ಕೆ ಆಗಮಿಸುತ್ತಾರೆ.

ಈ ಹಿನ್ನೆಲೆಯಲ್ಲಿ ಐತಿಹಾಸಿಕ ಕಾರ್ಯಕ್ರಮದ ಪೂರ್ವಭಾವಿಯಾಗಿ ಶ್ರೀ ಬಾಹುಬಲಿ ಸ್ವಾಮಿಯ ಮಹಾಮಸ್ತಕಾಭಿಷೇಕ ಸಮಿತಿಯ ಕಾರ್ಯಾಧ್ಯಕ್ಷ ಮತ್ತು ಡಿಸಿಸಿ ಬ್ಯಾಂಕಿನ ಅಧ್ಯಕ್ಷ ಹಾಗೂ ಶ್ರೀ ಜೈನಧರ್ಮ ಜೀರ್ಣೋದ್ದಾರಕ ಸಂಘದ ಕಾರ್ಯಾಧ್ಯಕ್ಷರಾದ ಡಾ. ಎಂ. ಎನ್. ರಾಜೇಂದ್ರ ಕುಮಾರ್ ಹಾಗೂ ಮಹಾವೀರ್ ಹೆಗ್ಡೆಯವರ ನೇತೃತ್ವದಲ್ಲಿ ಮಾಜಿ ಸಚಿವರು, ಕಾರ್ಕಳ ಕ್ಷೇತ್ರದ ಶಾಸಕರು ಆದ ವಿ. ಸುನೀಲ್ ಕುಮಾರ್‌ರವರೊಂದಿಗೆ ಜೈನ ಸಮುದಾಯದ ಪ್ರಮುಖರೊಂದಿಗೆ ಸಭೆ ನಡೆಸಲಾಯಿತು.

ಈ ಹಿನ್ನೆಲೆಯಲ್ಲಿ ಕಾರ್ಕಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಅನೇಕ ಜೈನ ಬಸದಿಗಳು, ಕೆರೆಗಳು, ದೇವಸ್ಥಾನಗಳು, ಯಾತ್ರಿ ನಿವಾಸಗಳ ಜೊತೆಗೆ ಅನೇಕ ಪ್ರವಾಸಿತಾಣಗಳನ್ನು ಅಭಿವೃದ್ಧಿಪಡಿಸುವುದರೊಂದಿಗೆ ಸಾರ್ವಜನಿಕ ವಿವಿಧ ಕಾಮಗಾರಿಗಳು ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಪಡಿಸುವ ದೃಷ್ಟಿಯಲ್ಲಿ ಜೊತೆಗೆ ಕಾರ್ಯಕ್ರಮದ ಯಶಸ್ವಿ ಮಾಡುವ ಉದ್ದೇಶದಿಂದ ಜೈನ ಸಮಾಜದ ವತಿಯಿಂದ ಶಾಸಕರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಹಿರಿಯರಾದ ಅನಂತರಾಜ ಪೂವಣಿ, ಮೋಹನ್ ಪಡಿವಾಳ್ , ಸಿಎ ಪ್ರಭಾತ್ ಕುಮಾರ್, ಎಂ ಕೆ ಸುವ್ರತ್ ಕುಮಾರ್, ಸುನಿಲ್ ಕುಮಾರ್ ಬಜಗೋಳಿ, ಭರತ್ ಕುಮಾರ್ ಜೈನ್ ಇರ್ವತ್ತೂರು , ಶೀತಲ್ ಜೈನ್ ಶಿರ್ಲಾಲು, ಜೊತೆಗೆ ಸಮಾಜದ ಪ್ರಮುಖರು ಉಪಸ್ಥಿತರಿದ್ದರು.



ಮಂಗಳೂರಿನ ಮಾತೃಭೂಮಿ ಸೌಹಾರ್ದ ಸಹಕಾರಿ ಸಂಘದ 2026-2031ರವರೆಗಿನ 5 ಸಹಕಾರಿ ವರ್ಷಗಳ ಅವಧಿಗೆ ಅಧ್ಯಕ್ಷ ಭಾಸ್ಕರ್ ದೇವಸ್ಯ ಉಪಾಧ್ಯಕ್ಷರಾಗಿ ಭಾಸ್ಕರ್ ವಿ ಶೆಟ್ಟಿ ಹಾಗೂ ನಿರ್ದೇಶಕರಾಗಿ ಪಿ. ವೆಂಕಟೇಶ ನಾವಡ, ನವೀನ್ ಕುಂದರ್, ಕೆ. ಶ್ರೀಧರ ರಾವ್, ಪಿ. ಪದ್ಮನಾಭ ರಾವ್, ಜ್ಯೋತಿ, ರಮಣಿ, ಮನೋಜ್ ಕುಮಾರ್ ಎ. ಡಿ., ವಿದ್ಯಾ ನ್ಯಾಕ್, ಹೇಮಚಂದ್ರ, ಸಂದೀಪ್ ಕುಮಾರ್ ಶೆಟ್ಟಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಹಿಟ್ ಆಂಡ್ ರನ್: ಕಾರ್ಮಿಕ ಬಲಿ

ಕೊಣಾಜೆ: ಕಂಬಳಪದವು ಬಳಿ ಸ್ಕೂಟರೊಂದು ಪಾದಚಾರಿಗೆ ಡಿಕ್ಕಿ ಹೊಡೆದು ಪರಾರಿಯಾದ ಘಟನೆ ಭಾನುವಾರ ಸಂಭವಿಸಿದ್ದು, ಗಂಭೀರ ಗಾಯಗೊಂಡಿದ್ದ ಚತ್ತೀಸ್ ಗಡ ನಿವಾಸಿ ಪರಶುರಾಮ (39) ಎಂಬವರು ಮೃತಪಟ್ಟಿದ್ದಾರೆ. ಕಂಬಳಪದವು ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಪರಶುರಾಮ ಭಾನುವಾರ ರಾತ್ರಿ ಕೆಲಸ ಮುಗಿಸಿ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದು ಈ ವೇಳೆ ಅತೀ ವೇಗವಾಗಿ ಬಂದ ಸ್ಕೂಟರ್ ಡಿಕ್ಕಿ ಹೊಡೆದು ಪರಾರಿಯಾಗಿದೆ. ಇದರಿಂದ ರಸ್ತೆಗೆ ಎಸೆಯಲ್ಪಟ್ಟ ಅವರು ಗಂಭೀರ ಗಾಯಗೊಂಡು ದೇರಳಕಟ್ಟೆ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಅವರು ಚಿಕಿತ್ಸೆ ಫಲಕಾರಿಯಾಗದೆ ಸೋಮವಾರ ಮೃತಪಟ್ಟಿದ್ದಾರೆ.

ಕಾಪು ಶ್ರೀ ಹೊಸ ಮಾರಿಗುಡಿ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು

ಫೆ.28-ಮಾ.2: ಪ್ರಥಮ ವರ್ಷದ ಪ್ರತಿಷ್ಠಾ ವರ್ಧಂತಿ

ಕಾಪು : ಕಾಪು ಶ್ರೀ ಹೊಸ ಮಾರಿಗುಡಿ ದೇವಸ್ಥಾನದ ಉಚ್ಚಂಗಿ ಸಹಿತ ಶ್ರೀ ಮಾರಿಯಮ್ಮ ದೇವಿಯ ದಿವ್ಯ ಸಾನಿಧ್ಯದಲ್ಲಿ ಫೆ. 28ರಿಂದ ಮಾರ್ಚ್ 2 ತನಕ ಪ್ರಥಮ ವರ್ಷದ ಪ್ರತಿಷ್ಠಾ ವರ್ಧಂತಿ ಮಹೋತ್ಸವವು ಕ್ಷೇತ್ರದ ಪ್ರಧಾನ ತಂತ್ರಿಗಳಾದ ಕೊರಂಗ್ರಪಾಡಿ ವಿದ್ವಾನ್ ಕೆ. ಪಿ. ಕುಮಾರಗುರು ತಂತ್ರಿಗಳ ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ಹಾಗೂ ಪ್ರಧಾನ ಅರ್ಚಕ ವೇ. ಮೂ. ಶ್ರೀನಿವಾಸ ತಂತ್ರಿಗಳ ಸಹಭಾಗಿತ್ವದಲ್ಲಿ, ಸಹಸ್ರ ಸಹಸ್ರ ಸಂಖ್ಯೆಯ ಭಕ್ತಾದಿಗಳ ಕ್ಷೇತ್ರ ಸಂದರ್ಶನದ ನಿರೀಕ್ಷೆಯಲ್ಲಿ, ಮಾತೃ ವೈಭವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಅಭಿವೃದ್ಧಿ ಸಮಿತಿ ಹಾಗೂ ಮಾತೃ ವೈಭವ ಸೇವಾ ಸಮಿತಿ ಅಧ್ಯಕ್ಷ ರಾಜರ್ಷಿ ಕೆ. ವಾಸುದೇವ ಶೆಟ್ಟಿ ತಿಳಿಸಿದರು.

ಅವರು ಸೋಮವಾರ ಆಮಂತ್ರಣ ಪತ್ರಿಕೆ ಬಿಡುಗಡೆ ಗೊಳಿಸಿ ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾಹಿತಿಯನ್ನು ನೀಡಿದರು.

ಧಾರ್ಮಿಕ ಕಾರ್ಯಕ್ರಮದ ಅಂಗವಾಗಿ ಫೆ. 28ರಂದು ಬೆಳಿಗ್ಗೆ ಗಂಟೆ 8.30 ರಿಂದ ಸಾಮೂಹಿಕ ಪ್ರಾರ್ಥನೆ, ಸ್ವಸ್ತಿ ಪುಣ್ಯಾಹವಾಚನ, ಅರಣಿಮಥನ, 6 ಕಾಯಿ ಗಣಯಾಗ, ನವಗ್ರಹ ಹೋಮ, ಮೃತ್ಯುಪಂಚಕ ಪೂಜೆ ‘ಶ್ರೀಚಂಡೀ ಪುರಶ್ಚರಣಮ್’, ಸಂಜೆ ಗಂಟೆ 6 ರಿಂದ ವಾಸ್ತುಹೋಮ, ವಾಸ್ತು ಪೂಜಾ. ಸುದರ್ಶನ ರಕ್ಷಾಪಕ್ರಿಯೆ ಪೂಜೆಗಳು ನಡೆಯಲಿದೆ.



ಮಾ. 1ರಂದು ಬೆಳಿಗ್ಗೆ ಗಂಟೆ 8 ರಿಂದ ಶ್ರೀಸಪ್ತಮಾತೃಕಾ ಕಲ್ಪಮಹಾಯಾಗದೊಂದಿಗೆ ಸಪ್ತಮಾತೃಕಾ ಬಲಿದಾನಮ್ ಹಾಗೂ ಮಹಾಪೂರ್ಣಾಹುತಿ, ಪ್ರಸಾದ ವಿತರಣೆ ನಡೆಯಲಿದೆ. ಸಾಯಂಕಾಲ ಗಂಟೆ 6 ರಿಂದ ವನದುರ್ಗಾಮಂತ್ರಹೋಮ ಮತ್ತು ಯೋಗಿನೀಬಲಿ ಪೂಜಾದಿಗಳು ನಡೆಯಲಿದೆ.

ಮಾ. 2ರಂದು ಬೆಳಿಗ್ಗೆ ಗಂಟೆ 6.15 ರಿಂದ ಗದ್ದಿಗೆಯ ಶ್ರೀಚಕ್ರ ಯಂತ್ರೋದ್ದಾರದೊಂದಿಗೆ ಶ್ರೀವಿದ್ಯಾ ಶ್ರೀಚಕ್ರಯಂತ್ರಪೂಜಾ ಮತ್ತು ದಿವ್ಯ ಶ್ರೀಚಕ್ರ ಯಂತ್ರದರ್ಶನ, ಖಡ್ಗಮಾಲಾಮಂತ್ರ ಹೋಮ, ಬೆಳಿಗ್ಗೆ ಗಂಟೆ 11 ರಿಂದ ಶ್ರೀಯಂತ್ರಪ್ರಸನ್ನಪೂಜಾ ನಡೆಯಲಿದೆ. ಸಾಯಂಕಾಲ ಗಂಟೆ 5 ರಿಂದ ಚತುಷ್ಷಷ್ಠಿ, ಉಪಚಾರಪೂಜಾ, ಅಷ್ಟಾವಧಾನಸೇವಾ ಮಹಾಪೂಜೆ, ಗದ್ದಿಗೆಯಲ್ಲಿ ಶ್ರೀ ಚಕ್ರ ಯಂತ್ರದ ಮರುಸ್ಥಾಪನೆ ಹಾಗೂ ಪ್ರಸಾದವಿತರಣೆ ನಡೆಯಲಿದೆ. ಪ್ರತಿಷ್ಠಾ ವರ್ಧಂತಿ ‘ಈ ಪರ್ವಕಾಲದಲ್ಲಿ ವರ್ಷದ ಒಂದು ದಿನ ಮಾತ್ರ ಅಮ್ಮನ ಶ್ರೀಚಕ್ರ ಯಂತ್ರದ ದರುಶನಕ್ಕೆ ಭಕ್ತಾದಿಗಳಿಗೆ ಅವಕಾಶ ಮಾಡಿಕೊಡಲಾಗುವುದು.

ಈ ಮೂರು ದಿನಗಳಲ್ಲಿ ಮಧ್ಯಾಹ್ನ ಗಂಟೆ 12 ರಿಂದ 3 ರವರೆಗೆ ಹಾಗೂ ರಾತ್ರಿ ಗಂಟೆ 7 ರಿಂದ 9 ರವರೆಗೆ ಮಹಾ ಅನ್ನಪ್ರಸಾದ ಸಂತರ್ಪಣೆ ವ್ಯವಸ್ಥಿತ ರೀತಿಯಲ್ಲಿ ನಡೆಯಲಿದೆ.

ಈ ಮೂರು ದಿನಗಳಲ್ಲಿ ಸಂಜೆ ಧಾರ್ಮಿಕ ಸಭಾ ಕಾರ್ಯಕ್ರಮ, ಸ್ಥಳೀಯ ಪ್ರತಿಭೆಗಳ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನ, ಆಯ್ದ ತಂಡಗಳಿಂದ ಭಜನಾ ಕಾರ್ಯಕ್ರಮ, ಫೆ. 28ರಂದು ರಾತ್ರಿ ಗಂಟೆ 8 ರಿಂದ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಹೋಲ್ಡರ್ ಝೀ ಕನ್ನಡ ಸರಿಗಮಪ ಖ್ಯಾತಿಯ ವಿದ್ವಾನ್ ಯಶವಂತ್ ಎಂ.ಜಿ. ಮತ್ತು ಬಳಗದವರಿಂದ ‘ಗಾನ ವೈಭವ’, ಮಾ. 1 ರಂದು ರಾತ್ರಿ ಗಂಟೆ 8ರಿಂದ ಕಾಪು ಅಮ್ಮನ ಮಕ್ಕಳ ತಂಡ ಪುಣೆ ಘಟಕದಿಂದ ‘ಸಿಂಧೂರ’ ವಿಶೇಷ ನೃತ್ಯ ರೂಪಕ, ಗಂಟೆ 8.30 ರಿಂದ ಶ್ರೀ ಶಿರಡಿ ಸಾಯಿಬಾಬಾ ಮಂದಿರ ಆಶ್ರಿತ ಸಾಯಿಶಕ್ತಿ ಕಲಾ ಬಳಗದವರಿಂದ ಜೋಡು ಜೀಟಿಗೆ ಭಕ್ತಿ ಪ್ರಧಾನ ತುಳು ನಾಟಕ, ಮಾ. 2ರಂದು ರಾತ್ರಿ ಗಂಟೆ 8ರಿಂದ ಚೈತನ್ಯ ಕಲಾವಿದರು ಬೈಲೂರು ಚೈತನ್ಯ ಕಲಾವಿದರಿಂದ ತುಳು ಹಾಸ್ಯಮಯ ನಾಟಕ ‘ರಾಘು ಮಾಸ್ಟ್ರು’ ಮೊದಲಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಫೆ. 26ರಂದು ಅಪರಾಹ್ನ 4 ಗಂಟೆಗೆ ಶ್ರೀಕ್ಷೇತ್ರ ದಂಡತೀರ್ಥ ಮಠದಿಂದ ವಿಜೃಂಭಣೆಯ ಹಸಿರುವಾಣಿ ಹೊರೆಕಾಣಿಕೆ ಶೋಭಯಾತ್ರೆ ಹೊರಡಲಿರುವುದು.

ಫೆಬ್ರವರಿ 28ರಿಂದ ಮಾರ್ಚ್ 4ರ ವರೆಗೆ ಬೆಳಿಗ್ಗೆ 10 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ ಬೃಹತ್ ವಸ್ತು ಪ್ರದರ್ಶನ ಮತ್ತು ಕೈಮಗ್ಗ ಸೀರೆ – ಖಾದಿ ಕೃಷಿ – ಕೌಶಲ – ಆಹಾರ ಮಾರಾಟಮೇಳವನ್ನು ಕ್ಷೇತ್ರದಲ್ಲಿ ವ್ಯವಸ್ಥೆ ಮಾಡಲಾಗಿದೆ.

ಶ್ರೀ ಹೊಸ ಮಾರಿಗುಡಿ ದೇವಸ್ಥಾನ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ನಡಿಕೆರೆ ರತ್ನಾಕರ ಶೆಟ್ಟಿ, ಕಾರ್ಯನಿರ್ವಹಣಾಧಿಕಾರಿ ರವಿಕಿರಣ್, ಅಭಿವೃದ್ಧಿ ಸಮಿತಿ ಪ್ರಧಾನ ಕಾರ್ಯದರ್ಶಿ ರಮೇಶ್ ಹೆಗ್ಡೆ ಕಲ್ಯ, ಉಪಾಧ್ಯಕ್ಷ ಮಾಧವ ಆರ್. ಪಾಲನ್, ಮಾತೃ ವೈಭವ ಸೇವಾ ಸಮಿತಿ ಕಾರ್ಯಾಧ್ಯಕ್ಷ ಪ್ರಭಾಕರ್ ಪೂಜಾರಿ, ಪ್ರಧಾನ ಕಾರ್ಯದರ್ಶಿ ಯೋಗೀಶ್ ವಿ. ಶೆಟ್ಟಿ ಬಾಲಾಜಿ, ಕಾರ್ಯದರ್ಶಿ ಜಯರಾಮ ಆಚಾರ್ಯ, ಗೌರವ ಸಲಹೆಗಾರ ರಘುರಾಮ ಶೆಟ್ಟಿ ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಶೇಖರ್ ಸಾಲ್ಯಾನ್, ಜಯಲಕ್ಷ್ಮೀ ಎಸ್. ಶೆಟ್ಟಿ, ಚರಿತಾ ದೇವಾಡಿಗ, ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಐತಿಹಾಸಿಕ ಪ್ರವಾಸೋದ್ಯಮ ತಾಣ ಚಂದ್ರಗಿರಿ ಕೋಟೆಗೆ ಎದುರಾಗಿದೆ ಸಂಕಷ್ಟ

ಪ್ರಸಿದ್ಧ ಸ್ಮಾರಕ ಸುತ್ತಲೂ ಅವ್ಯಾಹತ ಮಣ್ಣು ಅಗೆತ: ಜಮೀನು ಮಾಲಕರಿಗೆ ನೋಟೀಸ್


ಕಾಸರಗೋಡು: ಜಿಲ್ಲೆಯ ಐತಿಹಾಸಿಕ ಸ್ಮಾರಕವಾದ ಹಾಗೂ ಪ್ರವಾಸೋದ್ಯಮ ಕೇಂದ್ರವಾದ ಚಂದ್ರಗಿರಿ ಕೋಟೆಯ ಸುತ್ತಲೂ ಗುಡ್ಡ ಅಗೆದು ಮಣ್ಣು ತೆಗೆಯಲಾಗುತ್ತಿದ್ದು, ಇದರಿಂದಾಗಿ ಪ್ರಸಿದ್ಧ ಕೋಟೆಗೆ ಬಹುದೊಡ್ಡ ಅಪಾಯ ಎದುರಾಗಿದೆ. ಚಂದ್ರಗಿರಿ ಕೋಟೆಗೆ ಹಲವಾರು ವರ್ಷಗಳ ಇತಿಹಾಸವಿದ್ದು, ಜೊತೆಗೆ ಪ್ರಕೃತಿ ರಮಣೀಯ ತಾಣವಾಗಿರುವ ಈ ಕೋಟೆ ಪ್ರದೇಶವು ಆಕರ್ಷಣೀಯವಾಗಿದೆ.

ಈ ಮಧ್ಯೆ ಅವ್ಯಾಹತವಾಗಿ ಮಣ್ಣು ತೆರವುಗೊಳಿಸುತ್ತಿರುವುದರಿಂದ ಚಂದ್ರಗಿರಿ ಕೋಟೆಯ ಭೂಭಾಗಕ್ಕೆ ಆತಂಕವಿದೆ ಎಂದು ಕಂದಾಯ ಅಧಿಕಾರಿಗಳು ಸಂಬಂಧಪಟ್ಟ ಮೇಲಧಿಕಾರಿಗಳಿಗೆ ವರದಿ ಮಾಡಿದ್ದು, ಈ ಹಿನ್ನೆಲೆಯಲ್ಲಿ ಗುಡ್ಡ ಕೊರೆದು ಮಣ್ಣು ಸಂಗ್ರಹಿಸದಂತೆ ಕಂದಾಯ ಇಲಾಖೆಯು ಆಸುಪಾಸಿನ ಜಮೀನು ಮಾಲಕರಿಗೆ ನೋಟೀಸ್ ಜಾರಿಗೊಳಿಸಿದೆ.

ಕಳೆದ ಕೆಲವು ತಿಂಗಳುಗಳಿಂದ ಮಣ್ಣು ಸಾಗಾಟ ಮಾಫಿಯಾಗಳು ಚಂದ್ರಗಿರಿ ಕೋಟೆಯ ಭಾಗದಲ್ಲಿ 4–5 ಮೀಟರ್ ವ್ಯಾಪ್ತಿಯ ಬೃಹದಾಕಾರದ ಗುಡ್ಡ ಅಗೆದು ಲೋಡ್‌ಗಟ್ಟಲೆ ಮಣ್ಣು ಸಾಗಿಸುತ್ತಿವೆ. ಆದರೆ ಕಾನೂನು ಉಲ್ಲಂಘನೆಯನ್ನು ಸಮರ್ಥವಾಗಿ ತಡೆಗಟ್ಟಲು ಅಧಿಕಾರಿಗಳಿಗೂ ಸಾಧ್ಯವಾಗದಿರುವುದು ದುರಂತವಾಗಿದೆ.

ಪುರಾತತ್ವ ಮತ್ತು ಐತಿಹಾಸಿಕ ಸ್ಮಾರಕಗಳ 100 ಮೀಟರ್ ವ್ಯಾಪ್ತಿಯು ನಿಷೇಧಿತ ಪ್ರದೇಶವಾಗಿದೆ. ಆದ್ದರಿಂದ 100 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ಹೊಸ ನಿರ್ಮಾಣ ಕಾಮಗಾರಿ, ಉತ್ಖನನ ಹಾಗೂ ಭೂಪ್ರದೇಶದ ಬದಲಾವಣೆಗೆ ಅವಕಾಶವಿಲ್ಲ. ಕೋಟೆ ಬಳಿಯ 200 ಮೀಟರ್ ವ್ಯಾಪ್ತಿಯೂ ನಿರ್ಬಂಧಿತ ವಲಯವಾಗಿದೆ. ಈ ಪ್ರದೇಶದಲ್ಲಿ ಯಾವುದೇ ರೀತಿಯ ನಿರ್ಮಾಣ ಚಟುವಟಿಕೆಗಳಿಗೆ ಸಂಬಂಧಿಸಿ ಕಂದಾಯ ಇಲಾಖೆಯ ಅನುಮತಿಯನ್ನು ಕಡ್ಡಾಯವಾಗಿ ಪಡೆಯಬೇಕಾಗಿದೆ.

ಚಂದ್ರಗಿರಿ ಕೋಟೆಯನ್ನು ಸಂರಕ್ಷಿಸಿ ಪ್ರವಾಸಿ ತಾಣವಾಗಿ ಬದಲಾಯಿಸಲಾಗುವುದು ಎಂದು ಪುರಾತತ್ವ ಇಲಾಖೆ ಮತ್ತು ಡಿಟಿಪಿಸಿ ಸಂಸ್ಥೆಯು ಹೇಳಿಕೊಳ್ಳುತ್ತಿದ್ದರೂ ಕೋಟೆ ಸಂರಕ್ಷಣೆಗೆ ಸಂಬಂಧಪಟ್ಟವರು ಮುಂದಾಗುತ್ತಿಲ್ಲ ಎಂದು ಪರಿಸರ ನಿವಾಸಿಗಳು ಆರೋಪಿಸಿದ್ದಾರೆ. ಕೇರಳ ಸರಕಾರ ಮತ್ತು ಕಾಸರಗೋಡು ಜಿಲ್ಲಾಡಳಿತಕ್ಕೂ ಚಂದ್ರಗಿರಿ ಕೋಟೆಯ ಸಂರಕ್ಷಣೆ ಹಾಗೂ ಅಭಿವೃದ್ಧಿ ಬೇಡವಾಗಿದೆ. ಈ ನಿಟ್ಟಿನಲ್ಲಿ ಪ್ರಸ್ತುತ ಕೋಟೆಗೆ ಅನಾಥ ಪ್ರಜ್ಞೆ ಕಾಡುತ್ತಿದೆ.



ಚಂದ್ರಗಿರಿ ಕೋಟೆಯ ಸಮಗ್ರ ಅಭಿವೃದ್ಧಿ ಯೋಜನೆ

ಕೇರಳ ರಾಜ್ಯ ಪುರಾತತ್ವ ಇಲಾಖೆಯ ಅಧೀನದಲ್ಲಿರುವ ಚಂದ್ರಗಿರಿ ಕೋಟೆಯನ್ನು ಡಿಟಿಪಿಸಿ ಸಂಸ್ಥೆಗೆ ಹಸ್ತಾಂತರಿಸಲಾಗಿದೆ. ಈ ಕೋಟೆಯನ್ನು ಪ್ರವಾಸೋದ್ಯಮ ಅಭಿವೃದ್ಧಿ ಕೇಂದ್ರ ಮತ್ತು ವಿಹಾರ ತಾಣವನ್ನಾಗಿ ಪರಿವರ್ತಿಸುವುದು ಡಿಟಿಪಿಸಿಯ ಗುರಿಯಾಗಿದ್ದು, ಅದರಂತೆ ವಿವಿಧ ಮನೋರಂಜನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಪ್ರವಾಸಿಗರಿಗೆ ಬೆಳಗ್ಗೆ 9ರಿಂದ ಸಂಜೆ 6ರ ವರೆಗೆ ಕೋಟೆಗೆ ಭೇಟಿ ನೀಡಲು 20 ರೂಪಾಯಿ ಟಿಕೆಟ್ ಶುಲ್ಕ ವಿಧಿಸುವುದು ಇತ್ಯಾದಿ ಯೋಜನೆಗಳಲ್ಲಿ ಒಳಗೊಂಡಿದೆ. ಚಂದ್ರಗಿರಿ ಕೋಟೆ ಮತ್ತು ಸುತ್ತಮುತ್ತಲ ಪ್ರದೇಶಗಳನ್ನು ಪ್ರವಾಸಿ ತಾಣವನ್ನಾಗಿ ರೂಪಾಂತರಗೊಳಿಸಲು ಡಿಟಿಪಿಸಿ ಸಂಸ್ಥೆಯು ಮಹತ್ತರ ಕಾರ್ಯ ಯೋಜನೆ ತಯಾರಿಸಿದ್ದು, ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಅನುಷ್ಠಾನಕ್ಕೆ ಬರಲಿದೆ.

ಪ್ರವಾಸೋದ್ಯಮ ಕೇಂದ್ರದ ಅವನತಿಗೆ ಷಡ್ಯಂತ್ರ

ಅತ್ಯಂತ ಪುರಾತನವಾದ ಚಂದ್ರಗಿರಿ ಕೋಟೆಯ ಅವನತಿಗೆ ಮಣ್ಣು ಮಾಫಿಯಾಗಳು ಷಡ್ಯಂತ್ರ ನಡೆಸಿರುವುದಾಗಿ ಆರೋಪಿಸಲಾಗಿದೆ. ಕೋಟೆಯ ಆಸುಪಾಸಿನ ಪ್ರದೇಶಗಳಿಂದ ಮಾಫಿಯಾದವರು ದಿನಂಪ್ರತಿ ಹಗಲು ರಾತ್ರಿ ಎನ್ನದೆ ಲೋಡ್‌ಗಳಷ್ಟು ಮಣ್ಣು ಸಾಗಿಸಿ ಪ್ರಾಕೃತಿಕ ಅಸಮತೋಲನಕ್ಕೂ ಕಾರಣರಾಗಿದ್ದಾರೆ. ಕೋಟೆಗೆ ಸೇರಿದ ಭೂಮಿಯನ್ನು ಖಾಸಗಿ ವ್ಯಕ್ತಿಗಳು ತಮ್ಮ ವಶಕ್ಕೆ ಪಡೆದಿರುವುದಾಗಿಯೂ ಆರೋಪವೆದ್ದಿದ್ದು, ಈ ನಿಟ್ಟಿನಲ್ಲಿ ಸಮಗ್ರ ತನಿಖೆ ನಡೆಯಬೇಕಾಗಿದೆ. ಮಾತ್ರವಲ್ಲದೆ ಇತಿಹಾಸದಲ್ಲಿ ಕೋಟೆಯ ಅಧೀನದಲ್ಲಿದ್ದ ಭೂ ಪ್ರದೇಶವನ್ನು ಮತ್ತೆ ದೊರಕುವಂತೆ ಕ್ರಮ ಕೈಗೊಳ್ಳಬೇಕಾಗಿದೆ. ಇಲ್ಲದಿದ್ದಲ್ಲಿ ಮುಂದಿನ ದಿನಗಳಲ್ಲಿ ಕೋಟೆಯ ಸುತ್ತಲಿನ ಇನ್ನಷ್ಟು ಜಮೀನು ಖಾಸಗಿ ವ್ಯಕ್ತಿಗಳ ಪಾಲಾಗುವುದರಲ್ಲಿ ಸಂಶಯವಿಲ್ಲ. ಈ ವಿಷಯದಲ್ಲಿ ಕಂದಾಯ ಇಲಾಖೆಯು ಅತೀ ಶೀಘ್ರದಲ್ಲಿ ಸೂಕ್ತ ಯೋಜನೆ ರೂಪಿಸಬೇಕಾಗಿದೆ.

ಕಾಪು ವಿದ್ಯಾನಿಕೇತನ ಸಮೂಹ ಸಂಸ್ಥೆಗಳ ಸ್ಥಾಪಕ

ಕೆ.ಪಿ. ಆಚಾರ್ಯ ಇನ್ನಿಲ್ಲ

ಕಾಪು: ಕಾಪು ವಿದ್ಯಾನಿಕೇತನ ಸಮೂಹ ಸಂಸ್ಥೆಗಳ ಸ್ಥಾಪಕರಾದ ಕೆ. ಪಿ. ಆಚಾರ್ಯ (78) ಅವರು ಸೋಮವಾರ ಮುಂಜಾನೆ ನಿಧನ ಹೊಂದಿದರು.

ಮಗಳು ಕಾಪು ವಿದ್ಯಾನಿಕೇತನ ಶಿಕ್ಷಣ ಸಂಸ್ಥೆಯ ಸಹ ಸಂಚಾಲಕಿ ಶ್ವೇತಾ ಆಚಾರ್ಯ ಮತ್ತು ಇಬ್ಬರು ಮೊಮ್ಮಕ್ಕಳನ್ನು ಅಗಲಿದ್ದಾರೆ.

ಕರ್ನಾಟಕ ಸರ್ಕಾರದ ಮಾಜಿ ಮುಖ್ಯ ಸಚೇತಕ ದಿವಂಗತ ಭಾಸ್ಕರ ಶೆಟ್ಟಿಯವರ ಆಪ್ತರಾಗಿದ್ದ ಕೆ. ಪಿ. ಆಚಾರ್ಯ ಅವರು 30 ವರ್ಷಗಳ ಹಿಂದೆ ವರ್ಷಗಳ ಹಿಂದೆ ಅನಂತರಾಜ ಚಾರಿಟೇಬಲ್ ಟ್ರಸ್ಟ್‌ನ ಮೂಲಕವಾಗಿ ಕಾಪು ವಿದ್ಯಾನಿಕೇತನ ಪಬ್ಲಿಕ್ ಸ್ಕೂಲ್ ಅನ್ನು ಸ್ಥಾಪಿಸಿದ್ದರು. ಕಾಪು ತಾಲೂಕಿನಲ್ಲಿ ಐಸಿಐಸಿಐ ಶಿಕ್ಷಣ ವ್ಯವಸ್ಥೆಯ ಪ್ರಥಮ ವಿದ್ಯಾಸಂಸ್ಥೆಯಾಗಿ ಸ್ಥಾಪನೆಗೊಂಡಿದ್ದ ವಿದ್ಯಾನಿಕೇತನ ಪಬ್ಲಿಕ್ ಸ್ಕೂಲ್ ಸಹಸ್ರಾರು ಮಂದಿ ವಿದ್ಯಾರ್ಥಿಗಳಿಗೆ ಬೆಳಕಾಗಿತ್ತು. ಶೇಕಡ 80ಕ್ಕಿಂತ ಅಧಿಕ ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಿಗೆ, ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ನಿರಂತರಾಗಿದ್ದ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣವನ್ನು ಒದಗಿಸುವ ಮೂಲಕ ಅವರು ಹೆಸರುವಾಸಿಯಾಗಿದ್ದರು.

ಕಾಪು ಶ್ರೀ ಲಕ್ಷ್ಮಿ ಜನಾರ್ದನ ದೇವರ ಪರಮ ಭಕ್ತರಾಗಿದ್ದ ಅವರು, ಕಾಪು ಶ್ರೀ ಲಕ್ಷ್ಮಿ ಜನಾರ್ದನ ದೇವಸ್ಥಾನ, ಶ್ರೀ ಹೊಸ ಮಾರಿಗುಡಿ ದೇವಸ್ಥಾನ ಕೊಪ್ಪಲಂಗಡಿ ಶ್ರೀ ವಾಸುದೇವ ಸ್ವಾಮಿ ದೇವಸ್ಥಾನ, ಕಲ್ಯಾ ಶ್ರೀ ಮೂರನೇ ಮಾರಿಯಮ್ಮ ದೇವಸ್ಥಾನ, ಶ್ರೀ ಕಲ್ಕುಡ ದೈವಸ್ಥಾನ ಹೀಗೆ ಕಾಪು ಸಾವಿರ ಸೀಮೆಯ ಎಲ್ಲಾ ದೇವಸ್ಥಾನಗಳ ಜೀರ್ಣೋದ್ಧಾರ ಕಾರ್ಯಗಳಿಗೆ ಪ್ರಧಾನ ಮಾರ್ಗದರ್ಶಕರಾಗಿದ್ದ ಅವರು ಸಮಾಜಸೇವೆಯಲ್ಲಿಯೂ ತನ್ನ ಛಾಪನ್ನು ಮೂಡಿಸಿದ್ದರು.




ಕಾಪು ಗ್ರಾಮೋದ್ಧರ ಸಂಘ ಕಾಪುವಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ, ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕ್ರೀಡಾಕೂಟಗಳು, ರಾಜ್ಯ ಮಟ್ಟದ ಪ್ರತಿಭಾ ಸ್ಪರ್ಧೆ ಹೀಗೆ ಹತ್ತಾರು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಸಂಘಟಿಸಿ ಪ್ರತಿಭೆಗಳನ್ನು ಮುಖ್ಯ ವಾಹಿನಿಗೆ ತರಲು ನಿರಂತರವಾಗಿ ಶ್ರಮಿಸಿದ್ದರು.

ಕೆ.ಪಿ. ಆಚಾರ್ಯ ಅವರ ನಿಧನಕ್ಕೆ ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ, ಯಶ್‌ಪಾಲ್ ಸುವರ್ಣ, ಮಾಜಿ ಸಚಿವರಾದ ವಿನಯ್ ಕುಮಾರ್ ಸೊರಕೆ, ಪ್ರಮೋದ್ ಮಧ್ವರಾಜ್, ಮಾಜಿ ಶಾಸಕ ಲಾಲಾಜಿ ಆರ್. ಮೆಂಡನ್, ಕೆ. ವಾಸುದೇವ ಶೆಟ್ಟಿ, ಮನೋಹರ ಎಸ್. ಶೆಟ್ಟಿ, ರತ್ನಾಕರ್ ಶೆಟ್ಟಿ ನಡಿಕೆರೆ, ಮಟ್ಟಾರು ರತ್ನಾಕರ ಹೆಗ್ಡೆ, ದೇವಿಪ್ರಸಾದ್ ಶೆಟ್ಟಿ ಬೆಳಪು, ಸಹಿತ ಸಮಾಜದ ನೂರಾರು ಮಂದಿ ಗಣ್ಯರು ತೀವ್ರ ಸಂತಾಪ ಸೂಚಿಸಿದ್ದಾರೆ.

ಪಾಂಗಾಳ್ ರಮೇಶ್ ನಾಯಕ್ ನಿಧನ

ಮಂಗಳೂರು: ಕಟಪಾಡಿ ಪಾಂಗಳ್ ನಾಯಕ್ ಮನೆತನದ ಪಾಂಗಾಳ್ ರಮೇಶ್ ನಾಯಕ್ (84) ಅವರು ಅಲ್ಪ ಕಾಲದ ಅಸೌಖ್ಯದಿಂದ ನಗರದ ಮಣ್ಣಗುಡ್ಡೆಯ ಕುಶೆ ಕುಂಜ್ ಅಪಾರ್ಟ್‌ಮೆಂಟ್‌ನಲ್ಲಿರುವ ಸ್ವಗೃಹದಲ್ಲಿ ಫೆ.14ರಂದು ನಿಧನ ಹೊಂದಿದರು.



ನಗರದ ಎಲೋಶಿಯಸ್ ಕಾಲೇಜ್‌ನಲ್ಲಿ ಬಿ.ಎಸ್ ಸಿ ಪದವಿ ಮುಗಿಸಿ ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಬಿ.ಇ. ಪದವಿ, ಐಐಟಿ ದೆಹಲಿಯಲ್ಲಿ ಎಮ್ ಟೆಕ್ ಪದವಿ ಆ ಬಳಿಕ ಅಮೇರಿಕಾದಲ್ಲಿ ಮಾರ್ಕ್ವೆಟ್ ವಿಶ್ವ ವಿದ್ಯಾಲಯದಿಂದ ಪಿ.ಎಚ್.ಡಿ ಪದವಿ ಪಡೆದು ಅಲ್ಲೇ ಅನೇಕ ವರ್ಷಗಳ ಕಾಲ ನೆಲೆಸಿ 2011 ರಲ್ಲಿ ಮಂಗಳೂರಿಗೆ ಬಂದು ಅನೇಕ ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ತಮ್ಮನ್ನು ತೊಡಗಿಸಿಕೊಂಡ ಇವರು ಕೊಡುಗೈ ದಾನಿಯಾಗಿ ಅತ್ಯಂತ ಜನಾನುರಾಗಿಯಾಗಿದ್ದರು. ಮೃತರು ಪತ್ನಿ, ಹಾಗೂ ಪುತ್ರಿಯನ್ನು ಅಗಲಿದ್ದಾರೆ.

ದಿನೇಶ್ ಕುಮಾರ್ ನಿಧನ

ಬೈಂದೂರು: ಶಿರೂರು ಗ್ರಾಪಂ ಮಾಜಿ ಸದಸ್ಯ ಹಾಗೂ ಭಾರತೀಯ ಜನತಾ ಪಕ್ಷದ ಯುವ ಮುಂದಾಳು ದಿನೇಶ್ ಕುಮಾರ್ ಶಿರೂರು (46) ಸೋಮವಾರ ನಿಧನರಾದರು.



ಅವಿವಾಹಿತರಾಗಿರುವ ಇವರು ತಾಯಿ ಹಾಗೂ ಇಬ್ಬರು ಸಹೋದರಿಯರನ್ನು ಅಗಲಿದ್ದಾರೆ. ಅಕ್ರಮ ಸಕ್ರಮ ಸಮಿತಿ ಮಾಜಿ ಸದಸ್ಯರಾಗಿ, ಶಿರೂರು ಸ.ಪ.ಪೂ ಕಾಲೇಜಿನ ಶಾಲಾಭಿವೃದ್ಧಿ ಸಮಿತಿ ಮಾಜಿ ಸದಸ್ಯರಾಗಿ, ಮೇಲ್ಪಂಕ್ತಿ ಎರಗೇಶ್ವರ ದೇವಸ್ಥಾನದ ಮಾಜಿ ವ್ಯವಸ್ಥಾಪನಾ ಸಮಿತಿ ಸದಸ್ಯರಾಗಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯಕರ್ತರಾಗಿ ಹಾಗೂ ವಿವಿಧ ಸಂಘ ಸಂಸ್ಥೆಯಲ್ಲಿ ತೊಡಗಿಸಿಕೊಂಡಿದ್ದು, ಸ್ನೇಹಮಯ ವ್ಯಕ್ತಿತ್ವದಿಂದ ಜನಾನುರಾಗಿಯಾಗಿದ್ದರು.

ವಿವೇಕಾನಂದ ಕಾಲೇಜಿನಲ್ಲಿ ವೀರ ರಾಣಿ ಅಬ್ಬಕ್ಕ ರಾಷ್ಟ್ರೀಯ ವಿಚಾರ ಸಂಕಿರಣ

ವೀರರಾಣಿ ಅಬ್ಬಕ್ಕನ ಸ್ಮರಣೆಯೇ ನಮಗೆ ಪ್ರೇರಣೆ

ಪುತ್ತೂರು: ನಾವು ಅಗತ್ಯವಾಗಿ ತಿಳಿಯಬೇಕಿದ್ದ ಹಾಗೂ ಯುವ ಜನಾಂಗ ಅರಿಯಬೇಕಾದ ಚರಿತ್ರೆಯನ್ನು ಮರೆಯಾಗಿಸಿದ್ದು ವಿಪರ್ಯಾಸ. ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೂ ಮೊದಲೇ ಪರಕೀಯರ ವಿರುದ್ಧ ಕೆಚ್ಚೆದೆಯ ಹೋರಾಟ ಪ್ರಾರಂಭಿಸಿದವಳು ಅಬ್ಬಕ್ಕ. ತಾನು ಒಬ್ಬನೇ ನಿಂತು ಬ್ರಿಟೀಷರಿಗೆ ಸವಾಲೆಸೆದ ಕಿತ್ತೂರು ಚೆನ್ನಮ್ಮನಂತಹ ಉದಾಹರಣೆಯನ್ನು ನಾವು ಗಮನಿಸಬಹುದು. ನಮ್ಮ ಬದುಕಿಗೆ ಪ್ರೇರಣೆಯಾಗಬಲ್ಲ ನಮ್ಮ ಚರಿತ್ರೆಯನ್ನು ನಾವು ಅಗತ್ಯವಾಗಿ ತಿಳಿಯಬೇಕು ಎಂದು ಕೇಂದ್ರ ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಉದ್ಯಮಗಳ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.



ನಗರದ ವಿವೇಕಾನಂದ ಕಲಾ, ವಿಜ್ಞಾನ, ವಾಣಿಜ್ಯ ಕಾಲೇಜಿನ (ಸ್ವಾಯತ್ತ) ಇತಿಹಾಸ ವಿಭಾಗ ಹಾಗೂ ಐಕ್ಯೂಎಸಿ, ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ್ ಮಹಾಸಂಘ ಹಾಗೂ ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘದ ಸಹಯೋಗದೊಂದಿಗೆ ನಡೆದ 'ಅಬ್ಬಕ್ಕ–500' ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೆಹಲಿಯ ಅಖಿಲ ಭಾರತೀಯ ಶೈಕ್ಷಿಕ್ ಮಹಾಸಂಘದ ರಾಷ್ಟ್ರೀಯ ಸಹಸಂಘಟನಾ ಕಾರ್ಯದರ್ಶಿ ಗುಂಟ ಲಕ್ಷ್ಮಣ್ ಮಾತನಾಡಿ, ದೇಶದಲ್ಲಿ ಮಹಿಳಾ ಸಾಧಕರು ದೊಡ್ಡ ಸಂಖ್ಯೆಯಲ್ಲಿ ಇದ್ದಾರೆ. ನಮ್ಮ ದೇಶ ಸರ್ವತೋಮುಖ ಅಭಿವೃದ್ಧಿ ನಮ್ಮ ಆದ್ಯತೆಯಾಗಿರಬೇಕು. ಇತಿಹಾಸದಿಂದ ಕಲಿಯುವ ಪಾಠಗಳು ನಮ್ಮ ಭವಿಷ್ಯವನ್ನು ರೂಪಿಸಬಲ್ಲದು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಕಲ್ಲಡ್ಕ ಪ್ರಭಾಕರ ಭಟ್, ಭಾರತದಲ್ಲಿ ಮಹಿಳೆಯರಿಗೆ ದೇವತೆಯ ಸ್ಥಾನ ನೀಡಿ ಮಹತ್ವವನ್ನು ಕಲ್ಪಿಸಿದ್ದೇವೆ. ದೇಶಕ್ಕಾಗಿ ಮಹಿಳೆಯರು ಹೋರಾಡಿದ ನಿದರ್ಶನ ನಮ್ಮ ದೇಶದಲ್ಲಿದೆ. ನಮ್ಮ ದೇಶದಲ್ಲಿ ನೆಲೆ ಕಂಡುಕೊಂಡು ಸಕಲ ಸೌಲಭ್ಯಗಳನ್ನು ಪಡೆದಾಗ ದೇಶಕ್ಕಾಗಿ ಏನಾದರೂ ಸಲ್ಲಿಸುವ ಮನ ಮಾಡಬೇಕು ಎಂದರು.

ದೆಹಲಿಯ ಯು.ಜಿ.ಸಿ.ಯ ಸಹ ಕಾರ್ಯದರ್ಶಿ ಅಸೀಮಾ ಮಂಗಳ, ಮೂಡುಬಿದಿರೆಯ ಚೌಟರ ಅರಮನೆಯ ಕುಲದೀಪ್ ಎಂ. ಚೌಟ ಶುಭಾಶಂಸನೆಗೈದರು. ಕಾಲೇಜಿನ ಸಂಚಾಲಕ ಮುರಳಿಕೃಷ್ಣ ಕೆ.ಎನ್. ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಕೆಆರ್‌ಎಂಎಸ್‌ಎಸ್ ಅಧ್ಯಕ್ಷ ಪ್ರೊ. ಗುರುನಾಥ್ ಬಡಿಗೇರ, ಸಂಚಾಲಕಿ ಡಾ. ಆಶಾಲತಾ, ಕಾಲೇಜಿನ ಪ್ರಾಂಶುಪಾಲ ಪ್ರೊ. ಶ್ರೀಕೃಷ್ಣ ಗಣರಾಜ ಭಟ್, ಇತಿಹಾಸ ವಿಭಾಗದ ಮುಖ್ಯಸ್ಥ ಡಾ. ಪ್ರಮೋದ್ ಎಂ.ಜಿ. ಉಪಸ್ಥಿತರಿದ್ದರು.

ಈ ಸಂದರ್ಭ ಕಾಲೇಜಿನ ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿಗಳು ರೂಪಿಸಿದ 'ವಿಕಸನ' ಪತ್ರಿಕೆಯನ್ನು ಬಿಡುಗಡೆಗೊಳಿಸಲಾಯಿತು. ಕೆಆರ್‌ಎಂಎಸ್‌ಎಸ್ ಜಂಟಿ ಕಾರ್ಯದರ್ಶಿ ಡಾ. ಮಾಧವ ಎಂ.ಕೆ. ಸ್ವಾಗತಿಸಿ, ಕೆಆರ್‌ಎಂಎಸ್‌ಎಸ್ ಮಂಗಳೂರು ಘಟಕದ ಅಧ್ಯಕ್ಷೆ ವಾಣಿ ಯು. ವಂದಿಸಿದರು. ಮಾಧ್ಯಮ ಪ್ರಮುಖ್ ಮಮತಾ ಶೆಟ್ಟಿ ಕಾರ್ಯಕ್ರಮ ನಿರ್ವಹಿಸಿದರು.

ವಿಚಾರ ಗೋಷ್ಠಿಗಳು

ಈ ಸಂದರ್ಭ ಸಮಕಾಲೀನ ಸಂದರ್ಭದಲ್ಲಿ ರಾಣಿ ಅಬ್ಬಕ್ಕಳ ಪ್ರಸ್ತುತತೆ ಕುರಿತು ವಾಗ್ಮಿ ಶ್ರೀಕಾಂತ್ ಶೆಟ್ಟಿ ಕಾರ್ಕಳ ಹಾಗೂ ಭಾರತದ ಇತಿಹಾಸ–ರಾಣಿ ಅಬ್ಬಕ್ಕಳ ಕೊಡುಗೆ ಕುರಿತು ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರ ಸಂಚಯ ಗಿರಿ ಇದರ ಅಧ್ಯಕ್ಷ ಡಾ. ತುಕರಾಂ ಪೂಜಾರಿ ಗೋಷ್ಠಿಯನ್ನು ನಡೆಸಿಕೊಟ್ಟರು. ಕಲಾ ಸಾರಥಿ ತೋನ್ಸೆ ಪುಷ್ಕಳ ಕುಮಾರ್ ಅವರಿಂದ ವೀರ ರಾಣಿ ಅಬ್ಬಕ್ಕ ಕಥಾ ಕೀರ್ತನೆ ನಡೆಯಿತು.

ಇಂದಿನ ಪಂದ್ಯಗಳು

ಕೆನಡಾ VS ನ್ಯೂಜಿಲ್ಯಾಂಡ್
ಬೆಳಗ್ಗೆ 11 (ಚೆನ್ನೈ)

ಐರ್ಲೆಂಡ್ VS ಜಿಂಬಾಬ್ವೆ
ಮಧ್ಯಾಹ್ನ 3 (ಪಲ್ಲಿಕೆಲೆ)

ನೇಪಾಳ VS ಸ್ಕಾಟ್ಲೆಂಡ್
ಸಂಜೆ 7 (ವಾಂಖೇಡೆ)

ಕಿರುಸುದ್ದಿ

ಇಂಗ್ಲೆಂಡ್ ವಿರುದ್ಧ ಇಟಲಿಗೆ 24 ರನ್ ವೀರೋಚಿತ ಸೋಲು

• **ಕೋಲ್ಕತ:** ಈಡನ್ ಗಾರ್ಡನ್‌ನಲ್ಲಿ ನಡೆದ ಇನ್ನೊಂದು ವಿಶ್ವಕಪ್ ಪಂದ್ಯದಲ್ಲಿ ವಿಲ್ ಜ್ಯಾಕ್ಸ್ ಸ್ಫೋಟಕ ಬ್ಯಾಟಿಂಗ್ ಪ್ರದರ್ಶನದಿಂದಾಗಿ ಇಂಗ್ಲೆಂಡ್ ತಂಡ ಇಟಲಿಯನ್ನು 24 ರನ್‌ಗಳಿಂದ ಸೋಲಿಸಿದೆ.



ಆದರೆ ಇಟಲಿ ತಂಡವು ವಿರೋಚಿತ ಸೋಲುಂಡಿತ್ತು. ಇಂಗ್ಲೆಂಡ್ ನೀಡಿದ 203 ರನ್ ಸವಾಲನ್ನು ಬೆನ್ನತ್ತಿ ತನ್ನೆಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡು 178 ರನ್ ಪೇರಿಸಿ ಸೋಲುಂಡಿತು. ಇಂಗ್ಲೆಂಡ್ ಪರ ಜ್ಯಾಕ್ಸ್ 22 ಎಸೆತಗಳಿಂದ ಔಟಾಗದೆ 53 ರನ್ ಗಳಿಸಿದರು. ಜ್ಯಾಕ್ಸ್ ಇನ್ನಿಂಗ್ಸ್‌ನಲ್ಲಿ 3 ಬೌಂಡರಿ ಮತ್ತು 4 ಸಿಕ್ಸರ್‌ಗಳು ಒಳಗೊಂಡಿದ್ದವು. 203 ರನ್ ಸವಾಲು ಬೆನ್ನತ್ತಿದ ಇಟಲಿ ಪರ ಬೆನ್ ಮಾನೆಂಟಿ ಸ್ಫೋಟಕ ಬ್ಯಾಟಿಂಗ್‌ನಿಂದ ಗಮನಸೆಳೆದಿದ್ದು, ಕೇವಲ 25 ಎಸೆತಗಳಿಂದ 60 ರನ್ ಚಚ್ಚಿದ್ದರು. ಅವರ ಇನ್ನಿಂಗ್ಸ್‌ನಲ್ಲಿ 4 ಬೌಂಡರಿಗಳು ಮತ್ತು 6 ಭರ್ಜರಿ ಸಿಕ್ಸರ್‌ಗಳಿದ್ದವು.

ಲಂಕೆಗೆ 8 ವಿಕೆಟ್ ಜಯ

• **ಪಲ್ಲಿಕೆಲೆ:** ಆಸ್ಟ್ರೇಲಿಯಾ ವಿರುದ್ಧ ವಿಶ್ವಕಪ್ ಪಂದ್ಯದಲ್ಲಿ ಸೋಮವಾರ ಆರಂಭಿಕ ಬ್ಯಾಟ್ಸ್‌ಮನ್ ಪಥುಮ್ ನಿಸ್ಸಾಂಕ ಅಜೇಯ ಶತಕದ ಸಹಾಯದಿಂದ ಆತಿಥೇಯ ಶ್ರೀಲಂಕಾ 8 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಆಸೀಸ್ ನೀಡಿದ



182 ರನ್ ಸವಾಲು ಬೆನ್ನತ್ತಿದ ಶ್ರೀಲಂಕಾ ಪರ ಭರ್ತಿ 100 ರನ್ ಮಾಡಿ ಅಜೇಯರಾಗುಳಿದ ನಿಸ್ಸಾಂಕ 52 ಎಸೆತಗಳನ್ನಷ್ಟೇ ಎದುರಿಸಿದ್ದರು. ಕುಸಲ್ ಮೆಂಡಿಸ್ ಅರ್ಧಶತಕ (51) ದಾಖಲಿಸಿದರು. ಮೊದಲು ಬ್ಯಾಟ್ ಮಾಡಿದ್ದ ಆಸ್ಟ್ರೇಲಿಯಾ ನಿಗದಿತ 20 ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡು 181 ರನ್ ಕಲೆಹಾಕಿತು. ಶ್ರೀಲಂಕಾ 18 ಓವರ್‌ಗಳಲ್ಲೇ 2 ವಿಕೆಟ್ ನಷ್ಟಕ್ಕೆ 184 ರನ್ ಪೇರಿಸಿ ಗೆದ್ದಿತು.ಆಸ್ಟ್ರೇಲಿಯಾ ಪರ ಆರಂಭಿಕ ಬ್ಯಾಟ್ಸ್‌ಮನ್‌ಗಳಾದ ನಾಯಕ ಮಿಚೆಲ್ ಮಾರ್ಷ್ (54) ಮತ್ತು ಟ್ರಾವಿಸ್ ಹೆಡ್ (56) ಅದ್ಭುತ ಆರಂಭವನ್ನು ಒದಗಿಸಿಕೊಟ್ಟರೂ ಅದನ್ನು ಮುಂದುವರಿಸಿ 200ರ ಗಡಿ ದಾಟುವಲ್ಲಿ ಆಸೀಸ್ ವಿಫಲವಾಯಿತು. ಶ್ರೀಲಂಕಾ ಪರ ಲೆಗ್‌ಸ್ಪಿನ್ನರ್ ದೂಶನ್ ಹೇಮಂತ 37 ರನ್‌ಗಳಿಗೆ 3 ವಿಕೆಟ್ ಕಿತ್ತರು. ವೇಗಿಗಳಾದ ಚಾಮೀರ 2 ವಿಕೆಟ್ ಕಿತ್ತರು.

ಫುಟ್ಬಾಲ್ ಲೀಗ್; ಬೆಂಗಳೂರು ಶುಭಾರಂಭ

• **ಬೆಂಗಳೂರು:** ಶಿವಶಕ್ತಿ ಮತ್ತು ಸುನೀಲ್ ಚೆಟ್ರಿ ಅವರ ಗೋಲ್‌ಗಳ ಸಹಾಯದಿಂದ ಬೆಂಗಳೂರು ಎಫ್‌ಸಿ ಇಂಡಿಯನ್ ಸೂಪರ್ ಲೀಗ್ ಪಂದ್ಯಾವಳಿಯಲ್ಲಿ ಶುಭಾರಂಭ ಮಾಡಿದೆ. ಭಾನುವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಬೆಂಗಳೂರಿನ ಕಂಠೀರವ ಸ್ಟೇಡಿಯಂನಲ್ಲಿ ದಿಲ್ಲಿ ವಿರುದ್ಧ 2–0 ಗೋಲ್‌ಗಳಿಂದ ಬಿಎಫ್‌ಸಿ ಜಯ ಸಾಧಿಸಿದೆ. ಪಂದ್ಯದ 46ನೇ ನಿಮಿಷದಲ್ಲಿ ಶಿವಶಕ್ತಿ ನಾರಾಯಣನ್ ಗೋಲ್ ದಾಖಲಿಸಿದ್ದು, 94ನೇ ನಿಮಿಷದಲ್ಲಿ ಸುನೀಲ್ ಚೆಟ್ರಿ ಗೋಲ್ ಹೊಡೆದಿದ್ದರು.

ಪಾಕ್ ಇನ್ನಿಂಗ್ಸ್ ಮುನ್ನ ಭಾರತ ತಂಡಕ್ಕೆ ಪೆಪ್ ಟಾಕ್ ಸಲಹೆ ನೀಡಿದ್ದ ನಾಯಕ ಸೂರ್ಯ

ಸ್ಲೆಜ್ ಮಾಡದೆ, ಶ್ರೇಷ್ಠ ಕ್ರಿಕೆಟ್‌ನಿಂದ ಗೆಲ್ಲೋಣ

• **ಕೊಲಂಬೋ:** ಟಿ20 ವಿಶ್ವಕಪ್‌ನಲ್ಲಿ ಪಾಕಿಸ್ತಾನದ ಬ್ಯಾಟರ್‌ಗಳಿಗೆ ಸ್ಲೆಜ್ ಮಾಡದೆ, ಉತ್ತಮ ಕ್ರಿಕೆಟ್ ಆಡಿ ಪಂದ್ಯ ಗೆಲ್ಲೋಣ ಎಂದು ನಾಯಕ ಸೂರ್ಯಕುಮಾರ್ ಯಾದವ್ ಭಾರತ ತಂಡಕ್ಕೆ ಪೆಪ್ ಟಾಕ್ ಸಲಹೆ ನೀಡಿದ್ದರು. ನಾಯಕ ಸೂರ್ಯ ಅವರ ಪೆಪ್ ಟಾಕ್ ವಿಡಿಯೋವನ್ನು ಬಿಸಿಸಿಐ ಬಿಡುಗಡೆಗೊಳಿಸಿದೆ.

ಓವರ್‌ಗಳ ಮಧ್ಯೆ ಮೈದಾನದಲ್ಲಿ ಓಡಾಡುತ್ತಾ (ಸಕ್ರಿಯವಾಗಿ) ಇರಬೇಕು. ಯಾರಿಗೂ ಏನೂ ಹೇಳಬೇಡಿ (ಸ್ಲೆಜ್ ಮಾಡಬೇಡಿ). ನಾವು ಉತ್ತಮ ಕ್ರಿಕೆಟ್ ಆಡೋಣ. ಈ ಪಂದ್ಯವನ್ನು ಉತ್ತಮ ಕೌಶಲದಿಂದ ಗೆಲ್ಲೋಣ ಎಂದು ಟೀಮ್ ಇಂಡಿಯಾ ನಾಯಕ ಸೂರ್ಯಕುಮಾರ್ ಯಾದವ್ ನೀಡಿದ ಪೆಪ್ ಟಾಕ್ ಸಲಹೆಯನ್ನು ಬಿಸಿಸಿಐ ಫೆ.16ರಂದು ಬಿಡುಗಡೆಗೊಳಿಸಿದೆ.

ಭಾರತದಲ್ಲಿ ಆಡುವುದಿಲ್ಲವೆಂದು ವಿಶ್ವಕಪ್‌ನಿಂದ ಹೊರಗುಳಿದ ಬಾಂಗ್ಲಾದೇಶಕ್ಕೆ ಬೆಂಬಲಿಸಿ ಭಾರತ ವಿರುದ್ಧದ ಗುಂಪಿನ ಪಂದ್ಯವನ್ನು ಬಹಿಷ್ಕರಿಸಿ ಯೂಟರ್ನ್ ಹೊಡೆದಿದ್ದರಿಂದ ಪಂದ್ಯವನ್ನು ಗೆಲ್ಲಲೇಬೇಕಾದ ಅಗತ್ಯವಿತ್ತು. ಆದರೆ ಪಾಕಿಸ್ತಾನ ಕ್ರಿಕೆಟ್ ತಂಡ ಕಳಪೆ ಪ್ರದರ್ಶನ ನೀಡಿ ಸೋಲೊಪ್ಪಿಕೊಂಡಿತು. ಕೊಲಂಬೋದ ಪ್ರೇಮದಾಸ ಮೈದಾನದಲ್ಲಿ ಆರಂಭವಾದ ಹೈವೋಲ್ಟೇಜ್ ಪಂದ್ಯದಲ್ಲಿ ಇಶಾನ್ ಕಿಶನ್ ಸ್ಫೋಟಕ ಅರ್ಧ ಶತಕದ (77) ನೆರವಿನಿಂದ ಭಾರತ, ಪಾಕ್ ಗೆಲುವಿಗೆ 175 ರನ್ ಸವಾಲೊಡ್ಡಿತು. ಗುರಿ ಬೆನ್ನತ್ತಿದ ಪಾಕ್ 18 ಓವರ್‌ಗಳಲ್ಲೇ 114 ರನ್‌ಗಳಿಗೆ ಆಲೌಟಾಗಿ, 61 ರನ್‌ಗಳ ಹೀನಾಯ ಸೋಲೊಪ್ಪಿತು. ನಾಯಕನ ಸಲಹೆಯನ್ನು ಅನುಸರಿಸಿದ ಭಾರತ ತಂಡ ಯಾವುದೇ ಸ್ಲೆಜಿಂಗ್‌ನಲ್ಲಿ ಭಾಗಿಯಾಗದೆ, ಪೂರ್ಣ ಕೌಶಲದಿಂದ ಉತ್ತಮ ಕ್ರಿಕೆಟ್ ಮೂಲಕವೇ ಪಾಕಿಸ್ತಾನಿಗಳಿಗೆ ಗೆಲುವಿನ ಮೂಲಕ ಉತ್ತರ ನೀಡಿದ್ದಾರೆ.

ಸ್ಪಿನ್ ಪಿಚ್‌ನಲ್ಲಿ ಎಡವಿದ ಪಾಕ್: ಸ್ಪಿನ್ ಸ್ನೇಹಿ ಪಿಚ್‌ನಲ್ಲಿ ದೊಡ್ಡ ಸ್ಕೋರ್ ಬೆನ್ನತ್ತುವ ಒತ್ತಡದಲ್ಲಿ ಪಾಕ್ ಬ್ಯಾಟಿಂಗ್ ಕ್ರಮಾಂಕ ಬೇಗನೆ ಪತನ ಕಂಡಿತು. ಪವರ್‌ಪ್ಲೇ ಓವರ್‌ಗಳಲ್ಲಿ 34 ರನ್‌ಗಳಿಗೆ 4 ವಿಕೆಟ್‌ಗಳನ್ನು ಕಳೆದುಕೊಂಡು ಪಾಕ್ ಭಾರೀ ಸೋಲಿನ ಮುನ್ಸೂಚನೆ ನೀಡಿತ್ತು. ಎಲ್ಲೂ ಪಂದ್ಯದಲ್ಲಿ ಪಾಕ್ ಹೋರಾಟ ಪ್ರದರ್ಶಿಸಲಿಲ್ಲ. 61 ರನ್‌ಗಳಿಂದ ಪಾಕ್ ಸೋತಿದ್ದು, ಭಾರತದ ವಿರುದ್ಧ ಅದರ ಅತಿ ದೊಡ್ಡ ಟಿ20 ಸೋಲು ಇದಾಗಿದೆ. ಟಿ20 ವಿಶ್ವಕಪ್‌ನಲ್ಲಿ ಇದು ಪಾಕಿಸ್ತಾನದ 2ನೇ ಅತಿ ದೊಡ್ಡ ಸೋಲಾಗಿದೆ.



ಕಿಶನ್ ಹೊಗಳಿದ ಸೂರ್ಯ: ಕಠಿಣ ಸ್ಪಿನ್ ಪಿಚ್‌ನಲ್ಲಿ ಸ್ಫೋಟಕ ಅರ್ಧಶತಕ ಚಚ್ಚಿ ಪಾಕಿಸ್ತಾನದ ಮೇಲೆ ಮೇಲುಗೈ ಸಾಧಿಸಲು ನೆರವಾದ ಇಶಾನ್ ಕಿಶನ್ ಪರಾಕ್ರಮವನ್ನು ನಾಯಕ ಸೂರ್ಯಕುಮಾರ್ ಯಾದವ್ ಹೊಗಳಿದರು. ಪಾಕ್ ನಾಯಕ ಸಲ್ಮಾನ್ ಆಘಾ ಟಾಸ್ ಗೆದ್ದು ಕ್ಷೇತ್ರರಕ್ಷಣೆ ಆಯ್ದುಕೊಂಡಾಗ, ತಂಡದ ಬ್ಯಾಟರ್‌ಗಳಿಂದ ಇದೇ ರೀತಿಯ ಬ್ಯಾಟಿಂಗ್ ಅನ್ನು ಸೂರ್ಯ ನಿರೀಕ್ಷಿಸಿದ್ದರು.

ಈ ವಿಕೆಟ್‌ನಲ್ಲಿ ಮೊದಲು ಬ್ಯಾಟ್ ಮಾಡುವುದು ಉತ್ತಮ ಆಯ್ಕೆಯಾಗಿತ್ತು. ದೇಶೀಯ ಕ್ರಿಕೆಟ್‌ನ ಕಳೆದ ಕೆಲವು ಪಂದ್ಯಗಳಲ್ಲಿ ಇಶಾನ್ ಉತ್ತಮ ಪ್ರದರ್ಶನ ನೀಡಿದ್ದರು. ಅದೇ ರೀತಿ ಇಶಾನ್ ತಮ್ಮ ಬ್ಯಾಟಿಂಗ್ ಮೂಲಕ ಪಾಕ್ ವಿರುದ್ಧ ಪ್ರಾಬಲ್ಯ ಸಾಧಿಸಲು ನೆರವಾದರು ಎಂದು ಸೂರ್ಯ ಹೇಳಿದ್ದಾರೆ.

ಸೂಪರ್-8 ಎದುರಾಳಿ?

ಮೂರು ಪಂದ್ಯಗಳನ್ನು ಗೆದ್ದ ಭಾರತ ತಂಡ ಈಗಾಗಲೇ ಸೂಪರ್-8 ಹಂತವನ್ನು ಪ್ರವೇಶಿಸಿದೆ. ಫೆ.18ರ ಬುಧವಾರ ಅಹಮದಾಬಾದ್‌ನಲ್ಲಿ ನಡೆಯಲಿರುವ ತನ್ನ ಕೊನೆಯ ಲೀಗ್ ಪಂದ್ಯದಲ್ಲಿ ಭಾರತ ತಂಡ ನೆದರ್‌ಲೆಂಡ್ಸ್ ಅನ್ನು ಎದುರಿಸಲಿದೆ. ಸೂಪರ್-8ನಲ್ಲಿ ದಕ್ಷಿಣ ಆಫ್ರಿಕಾ ಮತ್ತು ವೆಸ್ಟ್ ಇಂಡೀಸ್ ತಂಡಗಳನ್ನು ಭಾರತ ಎದುರಿಸುವ ಸಾಧ್ಯತೆಯಿದೆ. ಸೂಪರ್-8 ಪ್ರವೇಶಿಸಲು ಆಸ್ಟ್ರೇಲಿಯಾ ಮತ್ತು ಜಿಂಬಾಬ್ವೆ ತಂಡಗಳ ಮಧ್ಯೆ ಪೈಪೋಟಿ ಇದೆ. ಇನ್ನೊಂದೆಡೆ ಅಫ್ಘಾನಿಸ್ತಾನವೂ ರೇಸ್‌ನಲ್ಲಿ ಉಳಿದಿದೆ.

ಚೇಸಿಂಗ್ ಅರ್ಧದಲ್ಲೇ ಕಾಲ್ಕಿತ್ತ ಪಿಸಿಬಿ ಅಧ್ಯಕ್ಷ

ಭಾನುವಾರದ ಹೈವೋಲ್ಟೇಜ್ ಪಂದ್ಯದಲ್ಲಿ ಪಾಕ್ ಬ್ಯಾಟಿಂಗ್ ಕ್ರಮಾಂಕ ನೀಡಿದ ಲೋವೋಲ್ಟೇಜ್ ಪ್ರದರ್ಶನ ನೋಡಿ ಇನ್ನೇನು ಸೋಲುವುದು ಖಚಿತವಾದಾಗ, ಸೋಲನ್ನು ಜೀರ್ಣಿಸಲಾಗದೆ ಪಿಸಿಬಿ ಅಧ್ಯಕ್ಷ ಮೊಹ್ಸಿನ್ ನಖ್ವಿ ಪಾಕ್ ಇನ್ನಿಂಗ್ಸ್ ಅನ್ನು ಪೂರ್ತಿ ವೀಕ್ಷಿಸದೆ ಮೈದಾನದಿಂದ ಕಾಲ್ಕಿತ್ತರು. 176 ರನ್ ಕಠಿಣ ಸವಾಲು ಬೆನ್ನತ್ತಿದ ಪಾಕ್ 78 ರನ್‌ಗಳಿಗೆ 6 ವಿಕೆಟ್ ಕಳೆದುಕೊಂಡಿದ್ದಾಗ, ನಖ್ವಿ ಪ್ರೇಮದಾಸ ಸ್ಟೇಡಿಯಂನಿಂದ ಹೊರನಡೆದರು. ಪಾಕ್ ಸೋಲಿನ ಮುಖಭಂಗ ಆಗುವುದನ್ನು ಮೊದಲೇ ನಿರೀಕ್ಷಿಸಿದ ನಖ್ವಿ ಅಲ್ಲಿಂದ ನಾಚಿಕೆಯಿಂದ ಹೊರನಡೆದಿದ್ದು, ಕಪ್ಪು ಬಣ್ಣದ ಕಾರಿನಲ್ಲಿ ನಖ್ವಿ ಸ್ಟೇಡಿಯಂನಿಂದ ತೆರಳಿದ್ದರು.

ಪಡಿಕ್ಕಲ್ ಚೊಚ್ಚಲ ದ್ವಿಶತಕ

• **ಲಖನೌ:** ರಣಜಿ ಸೆಮಿಫೈನಲ್‌ನಲ್ಲಿ ನಾಯಕ ದೇವದತ್ ಪಡಿಕ್ಕಲ್ ಅವರ ಚೊಚ್ಚಲ ದ್ವಿಶತಕ ಮತ್ತು ಆರ್.ಸ್ಮರಣ್ ಅವರ 5ನೇ ಶತಕದ ನೆರವಿನಿಂದ ಕರ್ನಾಟಕ ರನ್ ಶಿಖರವನ್ನೇರಿದೆ. ಉತ್ತರಾಖಂಡ್ ವಿರುದ್ಧದ ಮೊದಲ ಸೆಮಿಫೈನಲ್‌ನಲ್ಲಿ ಕರ್ನಾಟಕ 6 ವಿಕೆಟ್ ಕಳೆದುಕೊಂಡು 689 ರನ್‌ಗಳ ಬೃಹತ್ ಮೊತ್ತ ಕಲೆಹಾಕಿದೆ.

ಇಲ್ಲಿನ ಏಕಾನ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ 2025–26ರ ಮೊದಲ ಸೆಮಿಫೈನಲ್‌ನ ಎರಡನೇ ದಿನದಾಟದಲ್ಲಿ ಚೊಚ್ಚಲ ದ್ವಿಶತಕ ದಾಖಲಿಸಿದ ಪಡಿಕ್ಕಲ್, ರಾಷ್ಟ್ರೀಯ ತಂಡದ ಮ್ಯಾನೇಜ್‌ಮೆಂಟ್‌ಗೆ ಬಲವಾದ ಸಂದೇಶ ರವಾನಿಸಿದ್ದಾರೆ. 2024ರ ನವೆಂಬರ್‌ನಿಂದ ಈವರೆಗೂ ಪಡಿಕ್ಕಲ್ ಭಾರತ ಟೆಸ್ಟ್ ತಂಡದಲ್ಲಿ ಸ್ಥಾನ ಪಡೆದಿಲ್ಲ.

ಪ್ರಸಕ್ತ ರಣಜಿ ಋತುವಿನಲ್ಲಿ ಪ್ರಾಬಲ್ಯ ಮೆರೆಯುತ್ತಲೇ ಬಂದಿರುವ ಉತ್ತರಾಖಂಡ್ ಅನ್ನು ಕರ್ನಾಟಕ ಅಗ್ನಿಪರೀಕ್ಷೆಗೆ ಒಳಪಡಿಸಿದೆ. ಮೊದಲ ದಿನದಾಟದಲ್ಲಿ ಕೆಎಲ್ ರಾಹುಲ್ ಮತ್ತು ಪಡಿಕ್ಕಲ್ ಶತಕದ ನೆರವಿನಿಂದ ಕರ್ನಾಟಕ 2 ವಿಕೆಟ್ ನಷ್ಟಕ್ಕೆ 355 ರನ್ ಪೇರಿಸಿತ್ತು. ಅಲ್ಲಿಂದ ಬ್ಯಾಟಿಂಗ್ ಮುಂದುವರಿಸಿದ ಕರ್ನಾಟಕ ಎರಡನೇ ದಿನದಾಟದ ಅಂತ್ಯಕ್ಕೆ 6 ವಿಕೆಟ್ ಕಳೆದುಕೊಂಡು 689 ರನ್ ಪೇರಿಸಿದೆ.

ಪಡಿಕ್ಕಲ್-ಕರುಣ್ 129 ರನ್ ಜತೆಯಾಟ: ಮೊದಲ ದಿನದಾಟದಲ್ಲಿ 148 ರನ್ ಗಳಿಸಿ ಕ್ರೀಸ್ ಕಾಯ್ದುಕೊಂಡಿದ್ದ ಪಡಿಕ್ಕಲ್ 330 ಎಸೆತಗಳನ್ನು ಎದುರಿಸಿ 29 ಬೌಂಡರಿಗಳನ್ನು ಮತ್ತು 3 ಸಿಕ್ಸರ್‌ಗಳನ್ನು ಒಳಗೊಂಡಿದ್ದ 232 ರನ್‌ಗಳನ್ನು ಕಲೆಹಾಕಿದರು. ಪಡಿಕ್ಕಲ್ ಮತ್ತು ಆರ್.ಸ್ಮರಣ್ 59 ರನ್‌ಗಳ ಜತೆಯಾಟ ಆಡಿದರು. ಅದಕ್ಕೂ ಮುನ್ನ ಪಡಿಕ್ಕಲ್ ಮತ್ತು ಕರುಣ್ ನಾಯರ್ 3ನೇ ವಿಕೆಟ್‌ಗೆ ಜತೆಗೂಡಿ 129 ರನ್ ಕಲೆಹಾಕಿದ್ದರು. 105 ಎಸೆತಗಳನ್ನು ಎದುರಿಸಿ 8 ಬೌಂಡರಿ ಮತ್ತು ಸಿಕ್ಸರ್ ಸಿಡಿಸಿದ ಕರುಣ್ 60 ರನ್ ಗಳಿಸಿದ್ದರು.



ಸ್ಮರಣ್-ಕೃತಿಕ್ 123 ರನ್ ಜತೆಯಾಟ: ಐದನೇ ಪ್ರಥಮದರ್ಜೆ ಶತಕ ದಾಖಲಿಸಿದ ರವಿಚಂದ್ರನ್ ಸ್ಮರಣ್ 191 ಎಸೆತಗಳಿಂದ 11 ಬೌಂಡರಿ ಒಳಗೊಂಡ ಅಜೇಯ 121 ರನ್ ಕಲೆಹಾಕಿದರು. ಸ್ಮರಣ್ ಮೂರನೇ ದಿನದಾಟಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ. ಪಡಿಕ್ಕಲ್ ಪೆವಿಲಿಯನ್ ಸೇರಿದ ಬಳಿಕ ಕರ್ನಾಟಕ ತಂಡದ ರನ್ ಮಳೆಯನ್ನು ಮುಂದುವರಿಸಿದ ಸ್ಮರಣ್, ವಿಕೆಟ್ ಕೀಪರ್ ಬ್ಯಾಟರ್ ಕೃತಿಕ್ ಕೃಷ್ಣ (60) ಅವರ ಜತೆಗೂಡಿ 6ನೇ ವಿಕೆಟ್‌ಗೆ 123 ರನ್‌ಗಳ ಮಹತ್ವದ ಜತೆಯಾಟವಾಡಿದರು. ಈ ವೇಳೆ ತಮ್ಮ ಚೊಚ್ಚಲ ರಣಜಿ ಅರ್ಧ ಶತಕ ದಾಖಲಿಸಿದ ಕೃಷ್ಣ 103 ಎಸೆತಗಳಿಂದ 6 ಬೌಂಡರಿ ಮತ್ತು 1 ಸಿಕ್ಸರ್ ಒಳಗೊಂಡ 60 ರನ್ ಗಳಿಸಿದರು. ಆಕರ್ಷಕ ಹೊಡೆತಗಳಿಂದ ಕೃತಿಕ್ ಗಮನಸೆಳೆದರು. ಕೃತಿಕ್ ಔಟಾದ ಬಳಿಕ ಕ್ರೀಸ್‌ಗಿಳಿದ ವಿದ್ಯಾಧರ್ ಪಾಟೀಲ್ ತಾಳ್ಮೆಯಿಂದ ಬ್ಯಾಟ್ ಮಾಡಿದ್ದು, 107 ಎಸೆತಗಳನ್ನು ಎದುರಿಸಿ 1 ಬೌಂಡರಿ ಮತ್ತು 1 ಸಿಕ್ಸರ್ ಒಳಗೊಂಡ 35 ರನ್ ಮಾಡಿ ಸ್ಮರಣ್ ಜತೆ ಮೂರನೇ ದಿನದಾಟಕ್ಕೆ ಕ್ರೀಸ್ ಕಾಯ್ದುಕೊಂಡಿದ್ದಾರೆ.

ಸ್ಕೋರ್ ಬೋರ್ಡ್

ರಣಜಿ ಮೊದಲ ಸೆಮಿಫೈನಲ್
ಕರ್ನಾಟಕ689/6(180)

ಪಡಿಕ್ಕಲ್ ಸಿ ರಾವತ್ ಬಿ ರೈ ಚಂದಾನಿ	232
ಕರುಣ್ ಸಿ ರಾವತ್ ಬಿ ನೇಗಿ	60
ಸ್ಮರಣ್ ಅಜೇಯ	121
ಗೋಪಾಲ್ ಬಿ ಎಡಿ ರಾವತ್	0
ಕೃತಿಕ್ ಬಿ ಅವನೀಶ್	60
ವಿದ್ಯಾಧರ್ ಅಜೇಯ	35
ಇತರೆ	35

ಬೌಲಿಂಗ್ ವಿವರ

ಅಭಯ್ ನೇಗಿ	29–4–99–1
ಜನಮೇಜಯ್ ಜೋಷಿ	29–5–94–0
ಆದಿತ್ಯ ರಾವತ್	29–3–132–3
ಮಯಾಂಕ್ ಮಿಶ್ರಾ	38–1–167–0
ಜಗದೀಶ ಸುಚಿತ್	10–0–43–0
ಅವನೀಶ್ ಸುಧಾ	35–2–107–1
ಲಕ್ಷ್ಯ ರೈಚಂದಾನಿ	10–1–25–1

ಜಮ್ಮು ಕಾಶ್ಮೀರಕ್ಕೆ 130 ರನ್ ಹಿನ್ನಡೆ

ಎರಡನೇ ಸೆಮಿಫೈನಲ್‌ನಲ್ಲಿ ಆತಿಥೇಯ ಪಶ್ಚಿಮ ಬಂಗಾಳ ವಿರುದ್ಧ ಜಮ್ಮು ಕಾಶ್ಮೀರ 130 ರನ್ ಹಿನ್ನಡೆ ಅನುಭವಿಸಿದೆ. ಮೊದಲ ಇನ್ನಿಂಗ್ಸ್‌ನಲ್ಲಿ ತನ್ನೆಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡು ಬಂಗಾಳ 328 ರನ್ ಕಲೆಹಾಕಿತ್ತು. ಎರಡನೇ ದಿನದಾಟದ ಅಂತ್ಯಕ್ಕೆ ಜಮ್ಮು ಕಾಶ್ಮೀರ 5 ವಿಕೆಟ್ ನಷ್ಟಕ್ಕೆ 198 ರನ್ ಗಳಿಸಿದೆ. ಇದರಿಂದ ಇನ್ನೂ 130 ರನ್‌ಗಳ ಹಿನ್ನಡೆ ಅನುಭವಿಸಿದೆ.

ರಣಜಿ ಸೆಮಿಫೈನಲ್; ಉತ್ತರಾಖಂಡ್ ವಿರುದ್ಧ ಕರ್ನಾಟಕ ಬೃಹತ್ ಮೊತ್ತ

ಪಾಕ್ ಹಾಕಿ ಸಂಸ್ಥೆಗೆ ಭಾರೀ ಮುಖಭಂಗ!

• **ಹೊಸದಿಲ್ಲಿ:** ವಿಶ್ವದಲ್ಲಿ ಮುಖಭಂಗಕ್ಕೆಂದೇ ಒಂದು ರಾಷ್ಟ್ರವಿದ್ದರೆ ಅದು ಬಹುಶಃ ಪಾಕಿಸ್ತಾನ ಎನ್ನಬಹುದು. ಮುಖಭಂಗ ಎಂದಾಕ್ಷಣ ಪಾಕಿಸ್ತಾನ ನೆನಪಾಗುತ್ತದೆ. ಟಿ20 ವಿಶ್ವಕಪ್‌ನಲ್ಲಿ ಭಾರತ ವಿರುದ್ಧ ಹೀನಾಯ ಪರಾಭವಗೊಂಡ ಪಾಕ್, ಸೋಲುವುದಕ್ಕಾಗಿಯೇ ಪಂದ್ಯ ಬಹಿಷ್ಕಾರದ ಬೆದರಿಕೆಯೊಡ್ಡಿದಂತಾಗಿದೆ. ಇದೀಗ ಪಾಕಿಸ್ತಾನ ಕ್ರೀಡಾ ಮಂಡಳಿ(ಪಿಎಸ್‌ಬಿ) 10.5 ದಶಲಕ್ಷ ರೂ. ಪಾವತಿಸಿರುವುದನ್ನು ದೃಢೀಕರಿಸಿದ್ದು, ಬೇಕಾದಷ್ಟು ಹಣಕಾಸಿನ ನೆರವು ಪಡೆದೂ ಹೋಟೆಲ್‌ನಲ್ಲಿ ಮುಂಗಡ ಬುಕ್ಕಿಂಗ್ ಮಾಡದೆ ಪಾಕಿಸ್ತಾನ ಹಾಕಿ ಸಂಸ್ಥೆ (ಪಿಎಚ್‌ಎಫ್) ಭಾರೀ ಮುಖಭಂಗ ಅನುಭವಿಸಿದೆ. ಆಸ್ಟ್ರೇಲಿಯಾದ ಕ್ಯಾನ್‌ಬೆರಾದಲ್ಲಿ ಪಾಕಿಸ್ತಾನ ರಾಷ್ಟ್ರೀಯ ಹಾಕಿ ತಂಡ ಬಿಲ್ ಪಾವತಿಸದ ಕಾರಣ ಹೋಟೆಲ್‌ನವರು ಬುಕ್ಕಿಂಗ್ ರದ್ದುಗೊಳಿಸಿದ ಅಚ್ಚರಿಯ ಘಟನೆ ಇತ್ತೀಚೆಗೆ ನಡೆದಿತ್ತು. ಈ ವಿಚಾರ ಸಂಬಂಧ ಪಾಕಿಸ್ತಾನ ಕ್ರೀಡಾ ಮಂಡಳಿ ಮತ್ತು ಹಾಕಿ ಸಂಸ್ಥೆ ಮುಂಗಡ ಪಾವತಿ ಮಾಡಿದ್ದಾಗಿ ಆಟಗಾರರಿಗೆ ಭರವಸೆ ನೀಡಿದ್ದರು. ಈ ಘಟನೆಯಿಂದ ಪಾಕ್ ರಾಷ್ಟ್ರೀಯ ಹಾಕಿ ತಂಡದ ಆಟಗಾರರು ಗಂಟೆಗಟ್ಟಲೆ ಬೀದಿಯಲ್ಲಿ ಅಸಹಾಯಕರಾಗಿ ನಿಂತಿದ್ದರು. ಎಫ್‌ಐಎಚ್ ಪ್ರೊ ಲೀಗ್‌ನ ದ್ವಿತೀಯ ಸುತ್ತಿನ ಪಂದ್ಯಗಳನ್ನಾಡಲು ಪಾಕಿಸ್ತಾನ ಭೇಟಿ ನೀಡಿದ್ದಾಗ ಘಟನೆ ನಡೆದಿದೆ. ಮರುದಿನ ನಡೆದ ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ ಪಾಕ್ 2–3 ಗೋಲ್‌ಗಳ ಅಂತರದಿಂದ ಹೀನಾಯ ಸೋಲುಂಡಿತ್ತು.



10.5 ದಶಲಕ್ಷ ರೂ. ಅನುದಾನ ದೃಢೀಕರಿಸಿದ ಕ್ರೀಡಾ ಮಂಡಳಿ

ಪಾವತಿ ದಾಖಲೆ ನೀಡಿದ ಪಿಎಸ್‌ಬಿ

ಆಸ್ಟ್ರೇಲಿಯಾದಲ್ಲಿ ರಾಷ್ಟ್ರೀಯ ಹಾಕಿ ತಂಡದ ಹೋಟೆಲ್ ಬುಕ್ಕಿಂಗ್ ಸೇರಿದಂತೆ ಉಳಿದುಕೊಳ್ಳುವ ವ್ಯವಸ್ಥೆಗಾಗಿ 10.5 ದಶಲಕ್ಷ ರೂ. ಅನ್ನು ಹಾಕಿ ಸಂಸ್ಥೆಗೆ (ಪಿಎಚ್ಎಫ್) ಪಾವತಿಸಿರುವುದನ್ನು ಕ್ರೀಡಾ ಮಂಡಳಿ ದೃಢೀಕರಿಸಿದೆ. ಜ.28ರಂದೇ ಹೋಟೆಲ್ ವಸತಿಗಾಗಿ ಹಾಕಿ ಸಂಸ್ಥೆಗೆ 10.5 ದಶಲಕ್ಷ ರೂ. ಪಾವತಿ ಮಾಡಿರುವ ದಾಖಲೆಯನ್ನು ಕ್ರೀಡಾ ಮಂಡಳಿ ಬಿಡುಗಡೆಗೊಳಿಸಿದೆ. ತಂಡದ ವಿಮಾನ ಟಿಕೆಟ್‌ಗಳು, ಹೋಟೆಲ್ ಬುಕ್ಕಿಂಗ್ ಮತ್ತು ದಿನನಿತ್ಯದ ಖರ್ಚಿಗಾಗಿ ಮುಂಗಡವಾಗಿ 10.5 ದಶಲಕ್ಷ ರೂ. ಪಾವತಿಸಿದ್ದು, ತನ್ನ ಜವಾಬ್ದಾರಿ ನಿಭಾಯಿಸಿದ್ದಾಗಿ ಕ್ರೀಡಾ ಮಂಡಳಿ ತಿಳಿಸಿದೆ. ಇದಲ್ಲದೆ ಪ್ರೊ ಲೀಗ್‌ನಲ್ಲಿನ ವೆಚ್ಚಗಳಿಗಾಗಿ ಪಾಕ್ ಸರ್ಕಾರದಿಂದ 30 ದಶಲಕ್ಷ ರೂ. ಅನುದಾನ ಪಡೆದಿದ್ದ ಹಾಕಿ ಸಂಸ್ಥೆ, ಆಸ್ಟ್ರೇಲಿಯಾದಲ್ಲಿ ಮುಂಗಡ ಬುಕ್ಕಿಂಗ್ ಮಾಡದೆ ಆಟಗಾರರು ಬೀದಿಯಲ್ಲಿ ಗಂಟೆಗಟ್ಟಲು ನಿಲ್ಲುವಂತೆ ಮಾಡಿದೆ.

ಟಿ20 ವಿಶ್ವಕಪ್: ಖಾತೆ ತೆರೆದ ಅಫ್ಘಾನಿಸ್ತಾನ

• **ಹೊಸದಿಲ್ಲಿ:** ಟಿ20 ವಿಶ್ವಕಪ್‌ನಲ್ಲಿ ಅಜ್ಮತುಲ್ಲಾ ಓಮರ್‌ಝೂಯ್ ಆಲ್‌ರೌಂಡ್ ಪ್ರದರ್ಶನದ ನೆರವಿನಿಂದ ಅಫ್ಘಾನಿಸ್ತಾನ ತಂಡ ಯುಎಇ ವಿರುದ್ಧ ಸೋಮವಾರ 5 ವಿಕೆಟ್‌ಗಳ ಜಯ ಸಾಧಿಸಿದೆ. ಅಫ್ಘಾನಿಸ್ತಾನದ ಗೆಲುವಿನಿಂದಾಗಿ ದಕ್ಷಿಣ ಆಫ್ರಿಕಾ ಸೂಪರ್-8 ಹಂತವನ್ನು ಪ್ರವೇಶಿಸಿದೆ.

ಮಾಡು ಇಲ್ಲವೇ ಮಡಿ ಪಂದ್ಯವನ್ನು ಗೆದ್ದಿರುವ ಅಫ್ಘಾನಿಸ್ತಾನ, ಡಿ ಗುಂಪಿನಿಂದ ಸೂಪರ್-8 ಅರ್ಹತೆ ಸಂಪಾದಿಸುವ ಆಸೆ ಜೀವಂತವಾಗಿರಿಸಿದೆ. ಬೌಲಿಂಗ್‌ನಲ್ಲಿ 15 ರನ್ ನೀಡಿ 4 ಪ್ರಮುಖ ವಿಕೆಟ್‌ಗಳನ್ನು ಕಬಳಿಸಿದ್ದ ಓಮರ್‌ಝೂಯ್, ಚೇಸಿಂಗ್ ವೇಳೆ 21 ಎಸೆತಗಳಿಂದ 40 ರನ್ ಹೊಡೆದು ತಂಡವನ್ನು ಗೆಲುವಿನ ದಡ ಸೇರಿಸಿದರು. ಡಿ ಗುಂಪಿನಲ್ಲಿ 6 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿರುವ ದಕ್ಷಿಣ ಆಫ್ರಿಕಾ ಸೂಪರ್-8 ಹಂತವನ್ನು ಪ್ರವೇಶಿಸಿದೆ. ನ್ಯೂಜಿಲ್ಯಾಂಡ್ ದ್ವಿತೀಯ ಸ್ಥಾನದಲ್ಲಿದ್ದು, ಈ ಗೆಲುವಿನೊಂದಿಗೆ ಅಫ್ಘಾನಿಸ್ತಾನ ತೃತೀಯ ಸ್ಥಾನ ಪಡೆದುಕೊಂಡಿದೆ. ಯುಎಇ ನಾಲ್ಕನೇ ಸ್ಥಾನಕ್ಕೆ ಕುಸಿದಿದೆ. ಟಾಸ್ ಗೆದ್ದ ಅಫ್ಘಾನಿಸ್ತಾನ ಕ್ಷೇತ್ರರಕ್ಷಣೆ ಆಯ್ದುಕೊಂಡಿದ್ದು, ಓಮರ್‌ಝೂಯ್ ದಾಳಿ ಪರಿಣಾಮವಾಗಿ ಯುಎಇ 20 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 160 ರನ್‌ಗಳ ಸ್ಪರ್ಧಾತ್ಮಕ ಮೊತ್ತವನ್ನು ಪೇರಿಸಿತು. ಯುಎಇ ಪರ ಸೊಹೈಬ್ ಖಾನ್ 48 ಎಸೆತಗಳಿಂದ 68 ರನ್ ಹೊಡೆದಿದ್ದರಿಂದ ಅದು ಗೌರವದ ಮೊತ್ತ ಕಲೆಹಾಕಲು ಸಾಧ್ಯವಾಯಿತು. 161 ರನ್ ಸವಾಲನ್ನು ಬೆನ್ನತ್ತಿದ ಅಫ್ಘಾನಿಸ್ತಾನ ಆರಂಭಿಕ ಆಘಾತವನ್ನು ಅನುಭವಿಸಿತು. ಪವರ್‌ಪ್ಲೇ ಓವರ್‌ಗಳ ಮುಕ್ತಾಯದ ವೇಳೆಗೆ ಅಫ್ಘಾನಿಸ್ತಾನ ರಹ್ಮಾನುಲ್ಲಾ ಗುರ್ಬಾಜ್ (0) ಮತ್ತು ಗುಲ್ಬದಿನ್ ನೈಬ್ (13) ವಿಕೆಟ್‌ಗಳನ್ನು ಕಳೆದುಕೊಂಡು 41 ರನ್ ಗಳಿಸಿತ್ತು. ಆದರೆ ಇಬ್ರಾಹಿಂ ಜಾಡ್ರಾನ್ 41 ಎಸೆತಗಳ 53 ರನ್ ಕಲೆಹಾಕಿ ತಂಡಕ್ಕೆ ಆಧಾರವಾಗಿದ್ದರಿಂದ ಅಫ್ಘಾನಿಸ್ತಾನ ಗೆಲುವಿನತ್ತ ಮುಖ ಮಾಡಿತು. ಒಂದು ಹಂತದಲ್ಲಿ 6 ಓವರ್‌ಗಳಲ್ಲಿ 61 ರನ್ ಬೇಕಿದ್ದ ಸ್ಥಿತಿಯಿತ್ತು. ಆದರೆ ರಸೂಲಿ ಮತ್ತು ಓಮರ್‌ಝೂಯ್ ಅವರ ಬಿರುಸಿನ ಇನ್ನಿಂಗ್ಸ್‌ನಿಂದ ಅಫ್ಘಾನಿಸ್ತಾನ 19.2 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 162 ರನ್ ಪೇರಿಸುವ ಮೂಲಕ ಗೆಲುವಿನ ಕೇಕೆ ಹಾಕಿತು. (ಜುನೈದ್ 23ಕ್ಕೆ 2)



» ಓಮರ್‌ಝೂಯ್ ಆಲ್‌ರೌಂಡರ್ ಆಟ
» ಯುಎಇ ವಿರುದ್ಧ 5 ವಿಕೆಟ್ ಜಯ

ಸಂಕ್ಷಿಪ್ತ ಸ್ಕೋರ್
ಯುಎಇ 160/9(20)
ಸೊಹೈಬ್ ಖಾನ್ 68
(ಅಜ್ಮತುಲ್ಲಾ 15ಕ್ಕೆ 4),
ಅಫ್ಘಾನಿಸ್ತಾನ 162/5(19.2)
ಜಾಡ್ರಾನ್ 53, ಅಜ್ಮತುಲ್ಲಾ ಅಜೇಯ 40, ರಸೂಲಿ 33

ಐಟಿಎಫ್ ಓಪನ್; ಪ್ರಮುಖ ಹಂತ ಪ್ರವೇಶಿಸಿದ ವೈದೇಹಿ

• **ಬೆಂಗಳೂರು:** ನಗರದಲ್ಲಿ ನಡೆಯುತ್ತಿರುವ ಐಟಿಎಫ್ ಮಹಿಳೆಯರ ಓಪನ್ ಡಬ್ಲ್ಯು100 ಟೆನಿಸ್ ಪಂದ್ಯಾವಳಿಯಲ್ಲಿ ಭಾರತದ ಭವಿಷ್ಯದ ಭರವಸೆಯ ತಾರೆ ವೈದೇಹಿ ಚೌಧರಿ ಬಲವಾದ ಪ್ರದರ್ಶನದೊಂದಿಗೆ ಪ್ರಮುಖ ಹಂತವನ್ನು ಪ್ರವೇಶಿಸಿದ್ದಾರೆ. ಅರ್ಹತಾ ಸುತ್ತಿನ ಪಂದ್ಯಗಳ ಕೊನೆಯ ಸುತ್ತಿನಲ್ಲಿ ಆತ್ಮವಿಶ್ವಾಸದಿಂದ ನೇರ ಸೆಟ್‌ಗಳ ಅಂತರದಲ್ಲಿ ವೈದೇಹಿ ಜಯ ಸಾಧಿಸಿದ್ದಾರೆ. ಇವ್ಜೆನಿಯಾ ಬರ್ಡಿನಾ ಅವರನ್ನು 6–2, 7–5 ನೇರ ಸೆಟ್‌ಗಳಿಂದ ಸೋಲಿಸಿದ ವೈದೇಹಿ ಪ್ರಮುಖ ಹಂತವನ್ನು ಪ್ರವೇಶಿಸಿದ್ದಾರೆ. ಭಾರತೀಯ ಆಟಗಾರ್ತಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಪ್ರಶಸ್ತಿ ಪ್ರಾಯೋಜಕ ಕೆಪಿಬಿ ಟ್ರಸ್ಟ್ ವೈದೇಹಿ ಅವರಿಗೆ 10 ಲಕ್ಷ ರೂ. ವಿಶೇಷ ಬಹುಮಾನವನ್ನು ಘೋಷಿಸಿದೆ.



ಕಿಚ್ಚಾಸ್ ಕಿಂಗ್ಸ್ ಪೋಡಿಯಂ ಫಿನಿಶ್

• **ಬೆಂಗಳೂರು:** ಭಾರತೀಯ ರೇಸಿಂಗ್ ಉತ್ಸವದ 4ನೇ ಸುತ್ತು ರೋಮಾಂಚಕ ಬೀದಿ ರೇಸಿಂಗ್ ಆಕ್ಷನ್ ಮೂಲಕ ನಗರವನ್ನು ಬೆಳಗಿಸಿದ್ದರಿಂದ ಗೋವಾ ಹೈ-ಎನರ್ಜಿ ಮೋಟಾರ್ ಸ್ಪೋರ್ಟ್ ಅಖಾಡವಾಗಿ ಮಾರ್ಪಟ್ಟಿದೆ.

ಅಪಾರ ಜನಸಂದಣಿ, ಹೆಚ್ಚುತ್ತಿರುವ ಸ್ಥಳೀಯ ಅಭಿಮಾನಿಗಳು ಮತ್ತು ರೋಮಾಂಚಕ ರೇಸ್ ವಾತಾವರಣದೊಂದಿಗೆ ಗೋವಾ ಸ್ಟ್ರೀಟ್ ಸರ್ಕ್ಯೂಟ್ ಮತ್ತೊಮ್ಮೆ ಭಾರತದಲ್ಲಿ ಮೋಟಾರ್ ಸ್ಪೋರ್ಟ್‌ನ ಹೆಚ್ಚುತ್ತಿರುವ ಆಕರ್ಷಣೆಯನ್ನು ಪ್ರದರ್ಶಿಸಿತು. ಟ್ರ್ಯಾಕ್‌ನ ಆಕರ್ಷಣೆಯೆಂದರೆ ರೌಲ್ ಹೈಮನ್ ಮತ್ತು ಫ್ಯಾಬಿಯೆನ್ ವೊಲ್ವೆಂಡ್ ಅವರು ಗೋವಾ ಏಸಸ್ ಜೆಎ ರೇಸಿಂಗ್‌ಗೆ 42:11.779 ಸಂಯೋಜಿತ ಸಮಯದೊಂದಿಗೆ ಸ್ಮರಣೀಯ ರಿಲೇ-ಫಾರ್ಮ್ಯಾಟ್ ಗೆಲುವಿಗೆ ಮಾರ್ಗದರ್ಶನ ನೀಡಿದರು. ಕಿಚ್ಚಾಸ್ ಕಿಂಗ್ಸ್ ಬೆಂಗಳೂರು ಮಾಲೀಕ ಕಿಚ್ಚ ಸುದೀಪ್ ಮಾತನಾಡಿ, ನಾವೆಲ್ಲರೂ ಟಿವಿಯಲ್ಲಿ ರೇಸಿಂಗ್ ಮಾಡುವುದನ್ನು ನೋಡಿದ್ದೇವೆ, ಆದರೆ ಅದನ್ನು ನೇರವಾಗಿ ಅನುಭವಿಸುವುದು, ಎಂಜಿನ್ ಶಬ್ದವನ್ನು ಹತ್ತಿರದಿಂದ ಕೇಳುವುದು ಮತ್ತು ಸರ್ಕ್ಯೂಟ್‌ನಲ್ಲಿನ ಚಿತ್ರಣ ಸಂಪೂರ್ಣವಾಗಿ ವಿಭಿನ್ನವಾಗಿದೆ ಎಂದು ಭಾವಿಸುತ್ತೇವೆ. ಗೋವಾ ಸ್ಟ್ರೀಟ್ ರೇಸ್‌ನಲ್ಲಿರುವುದು ನಂಬಲಾಗದ ಅನುಭವವಾಗಿದೆ. ಈ ವಾತಾವರಣವನ್ನು ಭಾರತಕ್ಕೆ ತಂದ ಮತ್ತು ಮೋಟಾರ್ ಸ್ಪೋರ್ಟ್ ಮೂಲಕ ನಮ್ಮೆಲ್ಲರನ್ನೂ ಒಟ್ಟುಗೂಡಿಸಿದ್ದಕ್ಕಾಗಿ ಕೀರ್ತಿ ಭಾರತೀಯ ರೇಸಿಂಗ್ ಫೆಸ್ಟಿವಲ್ ಗೆ ಸಲ್ಲುತ್ತದೆ. ರೇಸಿಂಗ್ ಪ್ರಬಲ ಶಕ್ತಿಯನ್ನು ಹೊಂದಿದೆ ಮತ್ತು ನಾವು ನೋಡುತ್ತಿರುವ ಉತ್ಸಾಹ ಮತ್ತು ಬೆಂಬಲದೊಂದಿಗೆ ಮುಂಬರುವ ವರ್ಷಗಳಲ್ಲಿ ಭಾರತದಲ್ಲಿ ಕ್ರೀಡೆಯು ದೊಡ್ಡದಾಗಿ ಬೆಳೆಯುತ್ತದೆ ಎಂದು ನಾನು ನಿಜವಾಗಿಯೂ ನಂಬುತ್ತೇನೆ. ತಂಡದ ಮಾಲೀಕರಾದ ಜಾನ್ ಅಬ್ರಹಾಂ (ಗೋವಾ ಏಸಸ್ ಜೆಎ ರೇಸಿಂಗ್), ಕಿಚ್ಚ ಸುದೀಪ್ (ಕಿಚ್ಚಾಸ್ ಕಿಂಗ್ಸ್ ಬೆಂಗಳೂರು), ನಾಗಚೈತನ್ಯ (ಹೈದರಾಬಾದ್ ಬ್ಲ್ಯಾಕ್ ಬರ್ಡ್ಸ್) ಮತ್ತು ಸೌರವ್ ಗಂಗೂಲಿ (ಕೋಲ್ಕತಾ ರಾಯಲ್ ಟೈಗರ್ಸ್) ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ಹೈ-ಆಕ್ಟೇನ್ ಗೋವಾ ಸ್ಟ್ರೀಟ್ ರೇಸ್‌ನಲ್ಲಿ ಸುದೀಪ್


ಪ್ರಮುಖ ಫಲಿತಾಂಶಗಳು

» ಪ್ರಥಮ: ಗೋವಾ ಏಸಸ್ ಜೆಎ ರೇಸಿಂಗ್ (ರೌಲ್ ಹೈಮನ್ ಮತ್ತು ಫ್ಯಾಬಿಯೆನ್ ವೊಲ್ವೆಂಡ್) - 42:11.779
» ದ್ವಿತೀಯ: ಕಿಚ್ಚಾಸ್ ಕಿಂಗ್ಸ್ ಬೆಂಗಳೂರು (ಸ್ಯಾಚೆಲ್ ರೋಟ್ ಮತ್ತು ರುಹಾನ್ ಆಳ್ವಾ)- 42:12.759
» ತೃತೀಯ: ಸ್ಪೀಡ್ ಡೆಮನ್ಸ್ ಡೆಲ್ಲಿ (ಅಲಿಸ್ಟರ್ ಯೂಂಗ್ ಮತ್ತು ಕೈಟ್ಲಿನ್ ವುಡ್)- 42:16.601

ಪದಬಂಧ

5898

» ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
2.ಕೊಳದಲ್ಲಿ ಹುಟ್ಟಿದ್ದು–ತಾವರೆ (4)
5.ಒಂದು ಶಬ್ದದಷ್ಟಾದರೂ ಮಾತು (3)
6.ಗ್ರಾಮೀಣ ಲಗ್ಗೆ ಚೆಂಡಾಟವಿದು (3)
7.ಪಟ್ಟು ಇದರ ನಡುವೆ ಅಡಗಿದ ಮಾದರಿ (4)
9.ಹಲ್ಲಿನಿಂದ ಹಿಡಿಯುವಿಕೆ ತಿರುಗಿದೆ (2)
11.ಮಂಗಳಕರವಾದುದು–ಒಳ್ಳೆಯದು (2)
14.ಸಜಾ ಪಡೆದ ಒಡಹುಟ್ಟಿದವನು (4)
16.ಗೋಳಿನಿಂದ ಕೂಡಿದ ಅಳು (3)
17.ಕೋಗಿಲೆಯಿಲ್ಲಿ ತಿರುಗಿದೆ (3)
18.ಪರ್ವತರಾಜನ ಮಗಳು–ಗಿರಿಜೆ (4)

ಮೇಲಿನಿಂದ ಕೆಳಕ್ಕೆ
1.ಒಳ್ಳೆಯ ನಡತೆಯಿಂದ ಕೂಡಿದ್ದು (4)
2.ಮಾಲೆ–ಹಾರ ಎಂಬರ್ಥದ ಶಬ್ದ (2)
3.ಗಡಿ ಕಡೆಯಲ್ಲಿರುವ ಮೀನಿನ ಒಂದು ಬಗೆ (3)
4.ಕಿತಾಪತಿ ಮಾಡು ಎಂಬರ್ಥದ ನುಡಿಗಟ್ಟು (4)
8.ನಾಯಿಯಿಲ್ಲಿ ತಲೆಕೆಳಗಾಗಿ ಕಾಣುತ್ತಿದೆ (3)
10.ಸಲಹೆ ಕೇಳದೇ ಮಾಡಿದ ಜಗಳ (3)
12.ಈತ ನಾಟ್ಯಶಾಸ್ತ್ರ ತಿಳಿದವನು (4)
13.ಚರ್ಮದ ಹೆಣಿಕೆಯುಳ್ಳ ಚಾವಟಿ (4)
15.ಇದು ತೂತುಗಳಿರುವ ಸೌಟು (3)
17.ಲಲಿತೆಯು ಬೆಳೆಸುತ್ತಿರುವ ಬಳ್ಳಿ (2)

5897 ಉತ್ತರ

ಎಡದಿಂದ ಬಲಕ್ಕೆ:
2.ಕರಾಳದಿನ
5.ಹಲಾಯುಧ 7.ನಗದು
8.ವರಾಹ 10.ನೇರ
12.ಕಾಸು 13.ದದ್ದರ
14.ಬವರ 16.ಸಮಾಹಿತ
17.ಹೈನುಗಾರಿಕೆ

ಮೇಲಿನಿಂದ ಕೆಳಕ್ಕೆ :
1.ಸಹಜೀವನ 3.ರಾಕೆಂದು
4.ದಿವಾಕರ 6.ಧನ
7.ಹರಸು 10.ನೇಸರ
11.ತದನಂತರ
12.ಕಾಮಧೇನು
14.ಬಜಾರಿ 15.ರಸ

ಕಿರುಸುದ್ದಿ

ಫೆ.22: ಕಾಸರಗೋಡು ಜಿಲ್ಲಾ ಫಾರಂ ಕಚೇರಿ ಸಿಎಂ ಉದ್ಘಾಟನೆ

ಕಾಸರಗೋಡು: ಮುದ್ರಣ ಇಲಾಖೆಯಡಿ ಕಾಸರಗೋಡು ಜಿಲ್ಲಾ ಫಾರಂ ಕಚೇರಿಯನ್ನು ಫೆ.22 ರಂದು ಬೆಳಗ್ಗೆ 10 ಗಂಟೆಗೆ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಆನ್‌ಲೈನ್‌ನಲ್ಲಿ ಉದ್ಘಾಟಿಸಲಿದ್ದಾರೆ. ಕಾಸರಗೋಡು ಕಲೆಕ್ಟರೇಟ್ ಮಿನಿ ಸಮ್ಮೇಳನ ಸಭಾಂಗಣದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ, ಅರಣ್ಯ ಮತ್ತು ವನ್ಯಜೀವಿ ಇಲಾಖೆ ಸಚಿವ ಎ.ಕೆ.ಶಶೀಂದ್ರನ್ ಅಧ್ಯಕ್ಷತೆ ವಹಿಸಲಿದ್ದಾರೆ. ಕಾಸರಗೋಡು ಶಾಸಕ ಎನ್.ಎ.ನೆಲ್ಲಿಕುನ್ನು ವಿಶೇಷ ಆತಿಥಿಯಾಗಿ ಭಾಗವಹಿಸುವರು.



ಜಿಲ್ಲಾಧಿಕಾರಿ ಕೆ.ಇನ್ಬಶೇಖರ್, ಮುದ್ರಣ ಇಲಾಖೆಯ ನಿರ್ದೇಶಕ ಆಮೀರ್ ಸಿ.ಎ., ಸರಕಾರಿ ಮುದ್ರಣಾಲಯಗಳ ಸೂಪರಿಂಟೆಂಡೆಂಟ್ ಟಿ.ವೀರನ್, ಫಾರಂ ಕಂಟ್ರೋಲರ್ ಪ್ರಶಾಂತ್‌ಕುಮಾರ್, ವಿವಿಧ ಕಾರ್ಮಿಕ ಸಂಘಗಳ ಮುಖಂಡರು ಮತ್ತು ಸೇವಾ ಸಂಘಟನೆಗಳ ಪ್ರಮುಖರು ಪಾಲ್ಗೊಳ್ಳುವರು. ಜಿಲ್ಲಾ ಫಾರಂ ಕಚೇರಿಯು ಕಾಸರಗೋಡು ಕಲೆಕ್ಟರೇಟ್‌ನ ಸಿ ಮತ್ತು ಡಿ ಬ್ಲಾಕ್‌ನ ಎರಡನೇ ಮಹಡಿಯಲ್ಲಿದೆ.

ವ್ಯಾಪಾರಿ ಮನೆಯಿಂದ ನಗ ನಗದು ಕಳವು: ತನಿಖೆ ಆರಂಭ

ಕುಂಬಳೆ: ಕಳತ್ತೂರಿನಲ್ಲಿ ವ್ಯಾಪಾರಿಯ ಮನೆಯಿಂದ ಚಿನ್ನಾಭರಣ ಮತ್ತು ಹಣ ಕಳವಿಗೀಡಾದ ಪ್ರಕರಣದಲ್ಲಿ ಪೊಲೀಸರು ತನಿಖೆ ತೀವ್ರಗೊಳಿಸಿದ್ದಾರೆ. ಬೆಂಗಳೂರಿನಲ್ಲಿ ವ್ಯಾಪಾರಿಯಾಗಿರುವ ಕಳತ್ತೂರು ಪಂಜಿಲ್ಲಿನ ಯು.ಕೆ.ಯೂಸಫ್‌ರ ಮನೆಯಿಂದ ಕಳವು ನಡೆದಿದೆ. ಎರಡಂತಸ್ತಿನ ಮನೆಯ ಬಾಗಿಲು ಮುರಿದು ಒಳನುಗ್ಗಿದ ಕಳ್ಳರು ಬೆಡ್ ರೂಮ್‌ನ ಕಪಾಟುಗಳನ್ನು ತೆರೆದು 9 ಪವನ್ ಚಿನ್ನಾಭರಣ ಹಾಗೂ ಒಂದು ಲಕ್ಷ ರೂ. ಕಳವು ನಡೆಸಿದ್ದಾರೆ. ಮಾಹಿತಿ ತಿಳಿದು ಕುಂಬಳೆ ಪೊಲೀಸರು ಸ್ಥಳಕ್ಕಾಗಮಿಸಿ ತನಿಖೆ ಆರಂಭಿಸಿದ್ದಾರೆ. ಬೆರಳಚ್ಚು ತಜ್ಞರು ಹಾಗೂ ಶ್ವಾನದಳ ತಲುಪಿ ಪರಿಶೀಲನೆ ನಡೆಸಿತು. ಬೆರಳಚ್ಚು ತಜ್ಞರು ನಡೆಸಿದ ಪರಿಶೀಲನೆಯಲ್ಲಿ 7 ಬೆರಳಚ್ಚುಗಳು ಪತ್ತೆಯಾಗಿದೆ. ಯೂಸಫ್‌ರ ಪತ್ನಿ ಮತ್ತು ಮಕ್ಕಳು ಮನೆಯಲ್ಲಿ ವಾಸಿಸುತ್ತಿದ್ದರು. ಶನಿವಾರ ರಾತ್ರಿ ಪತಿಯ ಸಹೋದರನ ಮನೆಗೆ ತೆರಳಿದ್ದರು. ಭಾನುವಾರ ಬೆಳಗ್ಗೆ ಬಂದು ನೋಡಿದಾಗ ಬಾಗಿಲು ಮುರಿದ ಸ್ಥಿತಿಯಲ್ಲಿತ್ತು. ಒಳಗೆ ಹೋಗಿ ನೋಡಿದಾಗ ಕಪಾಟುಗಳನ್ನು ತೆರೆದು ಚೆಲ್ಲಾಪಿಲ್ಲಿಗೊಳಿಸಿ ನಗ ನಗದನ್ನು ದೋಚಿದ್ದಾರೆ.

ವಿಷಪದಾರ್ಥ ಸೇವಿಸಿದ್ದ ವ್ಯಕ್ತಿ ಮೃತ್ಯು

ಉಪ್ಪಿನಂಗಡಿ: ವಿಷ ಪದಾರ್ಥ ಸೇವಿಸಿ ಅಸ್ವಸ್ಥರಾಗಿ ಆಸ್ಪತ್ರೆಗೆ ದಾಖಲಾಗಿದ್ದ ವ್ಯಕ್ತಿಯೋರ್ವರು ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟ ಘಟನೆ ಕಡಬ ತಾಲೂಕಿನ ನೆಲ್ಯಾಡಿ ಗ್ರಾಮದಲ್ಲಿ ನಡೆದಿದೆ. ನೆಲ್ಯಾಡಿ ಗ್ರಾಮದ ಮರವೂಡಿ ನಿವಾಸಿ ಮೋನಪ್ಪ ಗೌಡ (64) ಮೃತಪಟ್ಟವರು. ಇವರು ಫೆ.12ರಂದು ಮನೆಯಲ್ಲಿ ಹುಲ್ಲಿಗೆ ಸಿಂಪಡಿಸುವ ವಿಷ ಪದಾರ್ಥ ಸೇವಿಸಿ ಅಸ್ವಸ್ಥಗೊಂಡಿದ್ದರು. ಅವರನ್ನು ಚಿಕಿತ್ಸೆಗಾಗಿ ಮಂಗಳೂರು ವೆನ್ಲಾಕ್ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿಸಿ ಚಿಕಿತ್ಸೆಯಲ್ಲಿದ್ದವರು ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ. ಮೋನಪ್ಪ ಗೌಡರು ಕಾಯಿಲೆಯಿಂದ ಬಳಲುತ್ತಿದ್ದು ಇದೇ ವಿಚಾರಕ್ಕೆ ಮನನೊಂದು ಜೀವನದಲ್ಲಿ ಜಿಗುಪ್ಸೆ ಹೊಂದಿ ಹುಲ್ಲಿಗೆ ಸಿಂಪಡಿಸುವ ವಿಷ ಪದಾರ್ಥವನ್ನು ಸೇವಿಸಿದ್ದರು ಎಂದು ಅವರ ಪತ್ನಿ ಪುಷ್ಪಾವತಿ ನೀಡಿರುವ ದೂರಿನಂತೆ ಉಪ್ಪಿನಂಗಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

---

400 ಕೆವಿ ವಿದ್ಯುತ್ ಲೈನ್ ಕಾಮಗಾರಿಗೆ ತೀವ್ರ ವಿರೋಧ | ಪ್ರತಿಭಟನೆ ನಿರತ ಕೃಷಿಕ ಪೊಲೀಸ್ ವಶ

ಅನ್ನದಾತನ ಕೈಯಲ್ಲಿ ವಿಷದ ಬಾಟಲಿ

ಮೂಡುಬಿದಿರೆ: ಸಮರ್ಪಕ ಪರಿಹಾರ ನೀಡದ ಕಾರಣ ವಿದ್ಯುತ್ ಲೈನ್ ಕಾಮಗಾರಿ ನಡೆಸಲು ತಡೆಯೊಡ್ಡಿದ ರೈತ ಮುಖಂಡರನ್ನು ಪೊಲೀಸರು ಸೋಮವಾರ ವಶಕ್ಕೆ ಪಡೆದುಕೊಂಡಿದ್ದಾರೆ. ಸರಕಾರಿ ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿ ಉಂಟುಮಾಡುವ ಆರೋಪ ಹಾಗೂ ಆತ್ಮಹತ್ಯೆಗೆ ಯತ್ನ ಪ್ರಕರಣದ ದಾಖಲಿಸಿ, ಮೂಡುಬಿದಿರೆ ಪೊಲೀಸ್ ನಿರೀಕ್ಷಕ ಸಂದೇಶ್ ಪಿ.ಜಿ. ಪರಿಸ್ಥಿತಿ ನಿಯಂತ್ರಣದ ಹಿನ್ನಲೆಯಲ್ಲಿ ಆಲ್ಫೋನ್ಸ್ ಡಿ'ಸೋಜ ಅವರನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಬಹು ನಿರೀಕ್ಷಿತ ಉಡುಪಿ ಕಾಸರಗೋಡು 400 ಕೆವಿ ವಿದ್ಯುತ್ ತಂತಿ ಕಾಮಗಾರಿಗಾಗಿ ಮಂಜನಬೈಲು ಆಲ್ಫೋನ್ಸ್ ಡಿ'ಸೋಜ ಎಂಬವರ ಫಲವತ್ತಾದ ಭತ್ತದ ಗದ್ದೆಯಲ್ಲಿ ವಿದ್ಯುತ್ ತಂತಿಗಳನ್ನು ಯುಕೆಟಿಎಲ್ ಕಂಪೆನಿಯ ಕಾರ್ಮಿಕರು ಹಾಕಿದ್ದರು. ಇದರಿಂದಾಗಿ ಸುಮಾರು ಒಂದೂವರೆ ಎಕರೆಗಳಷ್ಟು ಭತ್ತದ ಕೃಷಿಗೆ ಹಾನಿಯಾಗಿದ್ದು, ತೆನೆ ಮೂಡುತ್ತಿರುವ ತನ್ನ ಭತ್ತದ ಕೃಷಿ ನಾಶವಾಗಿದ್ದಕ್ಕೆ ಆಲ್ಫೋನ್ಸ್ ಡಿ'ಸೋಜ ತೀವ್ರ ಆಕ್ರೋಶ ವ್ಯಕ್ತಪಡಿಸಿ, ವಿಷ ಸೇವಿಸಲು ಮುಂದಾಗಿದ್ದರು. 'ಮುಂದಿನ ಒಂದು ತಿಂಗಳ ಒಳಗಾಗಿ ಕಟಾವು ನಡೆಯಲಿದ್ದು, ಅದಾದ ನಂತರ ಕಾಮಗಾರಿ ನಡೆಸುವಂತೆ ವಿನಂತಿಸಿದರೂ, ಕಂಪೆನಿಯ ಅಧಿಕಾರಿಗಳು ಸ್ಪಂದಿಸಿಲ್ಲ' ಎಂದು ಆರೋಪಿಸಿದ ಆಲ್ಫೋನ್ಸ್ ಡಿ'ಸೋಜ ಅವರು, ಈ ಕುರಿತು ಠಾಣಾಧಿಕಾರಿಗಳಿಗೆ, ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿರುವುದಾಗಿ ಹೇಳಿದ್ದಾರೆ.





ನಿರಂತರ ಹೋರಾಟ

ಯೋಜನೆಯ ವಿರುದ್ಧ ಆಲ್ಫೋನ್ಸ್ ಡಿ'ಸೋಜ ಕಳೆದ ನಾಲ್ಕಾರು ವರುಷಗಳಿಂದ ನಿರಂತರ ಹೋರಾಟ ಕೈಗೊಂಡಿದ್ದರು. ಮಾತೃಭೂಮಿ ಸಂಘಟನೆಯ ಮೂಲಕ, ರೈತ ಸಂಘಟನೆಯ ಮೂಲಕ ಹೋರಾಟ ಕೈಗೊಂಡು ಕೃಷಿಕರ ಪರ ಧ್ವನಿ ಎತ್ತಿದ್ದರು. ಇದೀಗ ಸ್ವಂತ ಕೃಷಿಭೂಮಿಯಲ್ಲಿಯೇ ಯೋಜನೆಯ ತಂತಿಗಳು ಹಾದುಹೋಗುತ್ತಿರುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದ ಅವರು, ಸೂಕ್ತ ಪರಿಹಾರವನ್ನು ನೀಡುವಂತೆಯೂ ಆಗ್ರಹಿಸಿದ್ದರು. ಆದರೆ ಕನಿಷ್ಠ ಪರಿಹಾರವನ್ನಷ್ಟೇ ನೀಡಲು ಕಂಪೆನಿಯ ಅಧಿಕಾರಿಗಳು ಮುಂದಾಗಿದ್ದಾರೆ ಎಂದು ಆಲ್ಫೋನ್ಸ್ ದೂರಿದ್ದಾರೆ.

ಸಾಕುನಾಯಿಯ ಸಾಥ್

ಪ್ರತಿಭಟನೆಯ ಉದ್ದಕ್ಕೂ ಆಲ್ಫೋನ್ಸ್ ಅವರ ಸಾಕು ನಾಯಿ ಅವರೊಂದಿಗೆಯೇ ಸಾಥ್ ನೀಡಿದ್ದು ವಿಶೇಷವಾಗಿತ್ತು. ಅವರನ್ನು ಬಿಟ್ಟು ಹೋಗದ ನಾಯಿ ಸ್ಥಳದಲ್ಲಿಯೇ ಇದ್ದು ತನ್ನ ನಿಷ್ಠೆಯನ್ನು ಪ್ರದರ್ಶಿಸಿತ್ತು.

ಸೋಮವಾರ ಏಕಾಏಕಿ ಕಂಪೆನಿಯ ಕಾರ್ಮಿಕರು ಬೆಳ್ಳಂಬೆಳಗ್ಗೆ ಭತ್ತದ ಗದ್ದೆಗೆನುಗ್ಗಿ ಕಾಮಗಾರಿ ನಡೆಸಲು ಬೃಹತ್ ತಂತಿಗಳನ್ನು ಗದ್ದೆಯ ಮೂಲಕ ಎಳೆದಿದ್ದು, ಅಪಾರ ಭತ್ತದ ಗಿಡಗಳು ಹಾನಿಗೊಳಗಾಗಿವೆ. ಇದೇ ಸಂದರ್ಭದಲ್ಲಿ ಸೂಕ್ತ ಪರಿಹಾರವನ್ನಾದರೂ ನೀಡಿ ಕಾಮಗಾರಿ ಮುಂದುವರಿಸುವಂತೆ ಆಲ್ಫೋನ್ಸ್ ಡಿ'ಸೋಜ ವಿನಂತಿಸಿ, ಒತ್ತಾಯಿಸಿ, ಪ್ರತಿಭಟನೆ ನಡೆಸಿದ್ದಾರೆ. ಸ್ಥಳೀಯ ಸುಮಾರು 22 ಕೃಷಿಕರು ಇದಕ್ಕೆ ಸಾಥ್ ನೀಡಿದ್ದರು.

ವಿಷದ ಬಾಟಲಿ ಹಿಡಿದು ಪ್ರತಿಭಟನೆ

ಆಲ್ಫೋನ್ಸ್ ಡಿ'ಸೋಜ ಅವರು ಬೆಳಗ್ಗಿನಿಂದಲೇ ತನ್ನ ಗದ್ದೆಯ ಸಮೀಪ ವಿಷದ ಬಾಟಲಿಯನ್ನು ಹಿಡಿದು 'ಸೂಕ್ತ ಪರಿಹಾರ ನೀಡದೆ ಕಾಮಗಾರಿ ನಡೆಸಿದ್ದೇ ಆದಲ್ಲಿ, ತಾನೂ, ಪತ್ನಿಯೂ ಜೊತೆಗೆ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ' ಹೇಳಿದ್ದಾರೆ. ತನ್ನ ನೆರೆಹೊರೆಯ ಸುಮಾರು 50 ಮನೆಗಳಿಗೆ ತೆರಳಿ ಕಂಪೆನಿಯ ಧೋರಣೆಯನ್ನು ತಿಳಿಸಿ, ಆತ್ಮಹತ್ಯೆ ಮಾಡುವುದಾಗಿ ಹೇಳಿಕೊಂಡಿದ್ದಾರೆ ಎಂದು ಸ್ಥಳೀಯರು ಪತ್ರಿಕೆಗೆ ಮಾಹಿತಿ ನೀಡಿದ್ದಾರೆ.

ಹತ್ತು ಗಂಟೆಯ ಸುಮಾರಿಗೆ ಸ್ಥಳೀಯ ರೈತರು ಸ್ಥಳದಲ್ಲಿ ಜಮಾಯಿಸಿ, ಕಂಪೆನಿಯ ಧೋರಣೆಯ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿ, ಪ್ರತಿಭಟನೆ ಕೈಗೊಂಡಿದ್ದಾರೆ. ಭತ್ತದ ಗದ್ದೆಯಲ್ಲಿ ವಿದ್ಯುತ್ ಲೈನ್ ಕಾಮಗಾರಿ ನಡೆಸದಂತೆ ಪ್ರತಿಭಟನೆ ನಡೆಸಿದ್ದಾರೆ.

ಸ್ಥಳಕ್ಕೆ ಮೂಡುಬಿದಿರೆ ಕಂದಾಯ ಅಧಿಕಾರಿಗಳು, ಪೊಲೀಸ್ ಸಿಬ್ಬಂದಿಗಳು, ಸ್ಥಳೀಯ ಗ್ರಾಮ ಪಂಚಾಯತ್ ಅಧಿಕಾರಿಗಳು ಬಂದು ರೈತರ ಮನವೊಲಿಸುವ ಪ್ರಯತ್ನ ಮಾಡಿದ್ದರು. ಸಂಜೆಯ ತನಕವೂ ಗದ್ದೆಯಲ್ಲಿಯೇ ಬಾಟಲಿ ಹಿಡಿದು ಪ್ರತಿಭಟನೆ ಮುಂದುವರಿದಿದ್ದು, ಸಂಜೆಯಾಗುತ್ತಿದ್ದಂತೆಯೇ ಮೂಡುಬಿದಿರೆ ಪೊಲೀಸ್ ನಿರೀಕ್ಷಕ ನೇತೃತ್ವದ ಹೆಚ್ಚುವರಿ ಪೊಲೀಸ್ ನಿಯೋಗ ಸ್ಥಳಕ್ಕೆ ಆಗಮಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುವಲ್ಲಿ ಯಶಸ್ವಿಯಾಯಿತು.

ಮಂಗಳೂರು, ಮಡಿಕೇರಿಯಲ್ಲಿ ಮನೆ ಮಾಡಿದ ಆತಂಕ

ಬಾಂಬ್ ಬೆದರಿಕೆ ಕರೆಯಿಂದ ಬೆಚ್ಚಿ ಬಿದ್ದ ನಗರದ ಜನತೆ!

ಮಂಗಳೂರು: ರಾಜ್ಯದ ಹಲವೆಡೆ ಸೋಮವಾರ ಜಿಲ್ಲಾ ನ್ಯಾಯಾಲಯಗಳಿಗೆ ಬಾಂಬ್ ಬೆದರಿಕೆಯ ಇ-ಮೇಲ್ ಸಂದೇಶ, ಬೆದರಿಕೆ ಕರೆಗಳ ಮೂಲಕ ನ್ಯಾಯಾಲಯದ ವಾತಾವರಣ ಆತಂಕಕ್ಕೆ ಸಿಲುಕುವಂತೆ ಮಾಡಿತ್ತು. ಮಡಿಕೇರಿ ಮತ್ತು ಮಂಗಳೂರಿನ ಜಿಲ್ಲಾ ನ್ಯಾಯಾಲಯಕ್ಕೂ ಬೆದರಿಕೆ ಬಂದಿದ್ದು, ನ್ಯಾಯಾಲಯದ ಆವರಣದಲ್ಲಿ ಭಯಾತಂಕ ಮನೆ ಮಾಡಿತ್ತು. ಈ ಸುದ್ದಿ ನಗರಕ್ಕೆ ವ್ಯಾಪಿಸಿ ನಗರದ ಜನತೆಯನ್ನು ಬೇಸ್ತು ಬೀಳುವಂತೆ ಮಾಡಿತ್ತು. ಆದರೆ ಕೊನೆಗೆ ಈ ಬೆದರಿಕೆಗಳು ಹುಸಿ ಎಂದು ಗೊತ್ತಾದ ಬಳಿಕ ಜನತೆ ಸಹಜ ಸ್ಥಿತಿಗೆ ಮರಳಿದ್ದರು.

ಮಂಗಳೂರಿನಲ್ಲಿ ಬೆದರಿಕೆ ಕರೆ!

ಮಂಗಳೂರಿನಲ್ಲಿರುವ ಜಿಲ್ಲಾ ನ್ಯಾಯಾಲಯಕ್ಕೆ ಅನಾಮಿಕ ವ್ಯಕ್ತಿಯಿಂದ ಬೆದರಿಕೆ ಕರೆ ಬಂದಿದ್ದು, ಈ ಕುರಿತಂತೆ ಮಂಗಳೂರು ಉತ್ತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

'ಬೆದರಿಕೆ ಕರೆ ಕುರಿತಂತೆ ಪರಿಶೀಲನೆ ನಡೆಸಲಾಗುತ್ತಿದೆ. ಇದುವರೆಗೆ ಯಾವುದೇ ಮಾಹಿತಿ ಲಭ್ಯವಾಗಿಲ್ಲ' ಎಂದು ಮಂಗಳೂರು ನಗರ ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ.

ಮಂಗಳೂರಿನಲ್ಲಿ ಈ ಹಿಂದೆ ಕೂಡ ಜಿಲ್ಲಾ ನ್ಯಾಯಾಲಯ, ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ರೈಲ್ವೇ ನಿಲ್ದಾಣ ಮುಂತಾದೆಡೆ ಬಾಂಬ್ ಇಟ್ಟಿರುವ ಬೆದರಿಕೆ ಕರೆ ಇ-ಮೇಲ್‌ಗಳು ಬಂದಿದ್ದವು. ಆದರೆ ಪರಿಶೀಲನೆ ವೇಳೆ ಇವೆಲ್ಲವೂ ಹುಸಿ ಬಾಂಬ್ ಬೆದರಿಕೆ ಎಂಬುದು ದೃಢಪಟ್ಟಿತ್ತು.

ಮಡಿಕೇರಿಯಲ್ಲಿ ಬಾಂಬ್ ಬೆದರಿಕೆ ಇಮೇಲ್ ಸಂದೇಶ!



ಮಡಿಕೇರಿಯ ಜಿಲ್ಲಾ ನ್ಯಾಯಾಲಯಕ್ಕೆ ಬಾಂಬ್ ಬೆದರಿಕೆ ಸಂದೇಶ ಬಂದಿದ್ದರಿಂದ ನ್ಯಾಯಾಲಯದ ಆವರಣದಲ್ಲಿ ಆತಂಕ ಸೃಷ್ಟಿಯಾಗಿತ್ತು. ಇಮೇಲ್ ಮೂಲಕ ಬಾಂಬ್ ಬೆದರಿಕೆ ಸಂದೇಶ ಬಂದಿದೆ. ಇಲ್ಲಿನ ವಿದ್ಯಾನಗರದಲ್ಲಿರುವ 'ಕೋರ್ಟ್' ನಲ್ಲಿ ಬಾಂಬ್ ಇಡಲಾಗಿದೆ. ಮಧ್ಯಾಹ್ನದ ವೇಳೆಗೆ ಸ್ಫೋಟಗೊಳ್ಳಲಿದೆ ಎಂದು ಉಲ್ಲೇಖಿಸಿ ಕಿಡಿಗೇಡಿಗಳು ಇ-ಮೇಲ್ ಮೂಲಕ ಸಂದೇಶ ಕಳುಹಿಸಿದ್ದರೆನ್ನಲಾಗಿದೆ. ವಿಷಯ ತಿಳಿಯುತ್ತಿದ್ದಂತೆ ಕೋರ್ಟ್ ಕಲಾಪ ಸ್ಥಗಿತಗೊಳಿಸಿ ನ್ಯಾಯಾಧೀಶರು, ವಕೀಲರು ಮತ್ತು ಸಿಬ್ಬಂದಿ ಹೊರ ಬಂದಿದ್ದು, ನ್ಯಾಯಾಲಯವನ್ನು ಖಾಲಿ ಮಾಡಿಸಿ, ಸ್ಫೋಟಕಪತ್ತೆ ದಳ ಹಾಗೂ ಪೊಲೀಸರ ತಂಡ ತೀವ್ರ ಶೋಧ ನಡೆಸಿತು. ಪ್ರಾಥಮಿಕ ತನಿಖೆಯಲ್ಲಿ ಇದೊಂದು ಸುಳ್ಳು ಬೆದರಿಕೆ ಸಂದೇಶ ಎಂದು ಕಂಡು ಬಂದಿದೆ.

ಉಡುಗೊರೆ ಸ್ವೀಕರಿಸಿ 'ಧನ್ಯವಾದ್' ಎಂದ ಮೋದಿ!

ಉಡುಪಿ: ಪ್ರಧಾನಿ ನರೇಂದ್ರ ಮೋದಿ ಅವರಿಗೆ ಉದ್ಯಮಿ ಒಬ್ಬರು ಕಳುಹಿಸಿದ್ದ ಉಡುಗೊರೆಯನ್ನು ಸ್ವೀಕರಿಸಿದ ಅವರು, ಪ್ರತಿಯಾಗಿ ಪತ್ರ ಬರೆದು ಧನ್ಯವಾದ ಸಮರ್ಪಿಸಿದ್ದಾರೆ.



ಉದ್ಯಮಿ ರೇಣು ಜಯರಾಮ್ ಅವರು, ಪ್ರಧಾನಿ ಮೋದಿ ಅವರ ಮಹಿಳೆಯರ ಸ್ವಾವಲಂಬನೆ ಕುರಿತ ಯೋಜನೆಗಳ ಸದುಪಯೋಗಪಡಿಸಿಕೊಂಡು, ಮೇವ ಕ್ರಾಫ್ಟ್ ಮಂತ್ರ ಎಂಬ ಉದ್ಯಮವನ್ನು ಮಣಿಪಾಲದಲ್ಲಿ ನಡೆಸುತ್ತಿದ್ದಾರೆ. ಶ್ರೀಕೃಷ್ಣ ಮಠಕ್ಕೆ ಪ್ರಧಾನಿಗಳು ಭೇಟಿ ನೀಡಿದ್ದ ಸಂದರ್ಭದಲ್ಲಿ ಈ ವಿಶೇಷ ಕ್ರಾಫ್ಟ್ ಅನ್ನು ನೀಡಲು ರೇಣು ಅವರು ಸಿದ್ಧತೆ ನಡೆಸಿದ್ದರು. ಆದರೆ ಜನಸಂದಣಿ ಹೆಚ್ಚಿದ್ದ ಕಾರಣ ಅದು ಸಾಕಾರವಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಅವರು ಪ್ರಧಾನಿ ಕಚೇರಿಗೆ ಕ್ರಾಫ್ಟ್ ಹಾಗೂ ಮೋದಿ ಅವರ ಯೋಜನೆ ಕುರಿತು ಶ್ಲಾಘನೆ ವ್ಯಕ್ತಪಡಿಸಿ ಕೈಬರಹದ ಪತ್ರವನ್ನು ಅಂಚೆ ಮೂಲಕ ಕಳುಹಿಸಿದ್ದರು. ಅದನ್ನು ಸ್ವೀಕರಿಸಿದ ಮೋದಿ ಅವರು ಪ್ರತಿಕ್ರಿಯೆ ನೀಡಿ ಮರು ಪತ್ರ ಬರೆದಿದ್ದಾರೆ.

ಮೋದಿ ಪತ್ರದಲ್ಲೇನಿದೆ?

ರೇಣು ಜಯರಾಮ್ ಜೀ, ನಿಮ್ಮ ಪತ್ರವನ್ನು ಸ್ವೀಕರಿಸಲು ಸಂತೋಷವಾಯಿತು. ಮೆಚ್ಚುಗೆಯ ಮಾತುಗಳಿಗೆ ಧನ್ಯವಾದಗಳು. ಸ್ಮರಣಿಕೆಯನ್ನು ಕಳುಹಿಸುವ ಪ್ರಯತ್ನಗಳನ್ನು ನಾನು ತುಂಬಾ ಪ್ರಶಂಸಿಸುತ್ತೇನೆ. ನಿಮ್ಮ ಉದ್ಯಮವು ನವ ಭಾರತದ ಪ್ರಗತಿಗೆ ಕೊಡುಗೆ ನೀಡುತ್ತದೆ ಹಾಗೂ ನಾರಿ ಶಕ್ತಿಗೆ ಉಜ್ವಲ ಭವಿಷ್ಯವನ್ನು ನಿರ್ಮಿಸುವ ನನ್ನ ಬದ್ಧತೆಯನ್ನು ಬಲಪಡಿಸುತ್ತವೆ. ಉಡುಪಿ ತನ್ನ ಶ್ರೀಮಂತ ಸಂಪ್ರದಾಯಗಳು, ಕಲಿಕೆ ಮತ್ತು ಭಕ್ತಿಗೆ ಹೆಸರುವಾಸಿಯಾದ ನಗರ. ನಿಮಗೆ ಅಭಿನಂದನೆಗಳು ಎಂದೆಲ್ಲಾ ಪತ್ರದಲ್ಲಿ ಬರೆದಿದ್ದಾರೆ.

> **ನಾನು ಪ್ರೀತಿ ಹಾಗೂ ಅಭಿಮಾನದಿಂದ ಉಡುಗೊರೆ ಕಳುಹಿಸಿದ್ದೆ. ಅದಕ್ಕೆ ಮೋದಿ ಅವರು ಪ್ರತಿಕ್ರಿಯೆ ನೀಡಿ ಪತ್ರ ಬರೆಯುತ್ತಾರೆ ಎಂದು ಭಾವಿಸಿರಲಿಲ್ಲ. ನಮ್ಮಂತಹವರ ಪ್ರಯತ್ನಗಳಿಗೆ ಅವರು ಕೊಡುವ ಬೆಂಬಲಕ್ಕೆ ಚಿರಋಣಿ.**
> ■ ರೇಣು ಜಯರಾಮ್, ಉದ್ಯಮಿ

ಕಾಪಿಕಾಡ್‌ನಲ್ಲಿ ಖಾಸಗಿ ಶಾಲಾ ಬಸ್ಸಿನ ಹಿಂಬದಿಗೆ ಮೀನಿನ ಕ್ಯಾಂಟರ್ ಡಿಕ್ಕಿ

ವಿದ್ಯಾರ್ಥಿಗಳು ಪವಾಡ ಸದೃಶ ಪಾರು





ಉಳ್ಳಾಲ: ಖಾಸಗಿ ಶಾಲಾ ಬಸ್ಸಿನ ಹಿಂಬದಿಗೆ ಮೀನು ಸಾಗಾಟ ನಡೆಸುತ್ತಿದ್ದ ಕ್ಯಾಂಟರ್ ಒಂದು ಬಲವಾಗಿ ಡಿಕ್ಕಿ ಹೊಡೆದ ಘಟನೆ ರಾ.ಹೆ.66 ರ ಕಾಪಿಕಾಡು ಎಂಬಲ್ಲಿ ಸೋಮವಾರ ಬೆಳಿಗ್ಗೆ ಸಂಭವಿಸಿದ್ದು, ಭೀಕರ ಅಪಘಾತದಲ್ಲಿ ಮೂರು ಮಂದಿ ವಿದ್ಯಾರ್ಥಿಗಳು ಸಣ್ಣ ಪುಟ್ಟ ಗಾಯಗಳೊಂದಿಗೆ ಪವಾಡ ಸದೃಶರಾಗಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ತಲಪಾಡಿಯ ಖಾಸಗಿ ಶಾಲೆಯೊಂದರ ಬಸ್ಸು ಸೋಮವಾರ ಬೆಳಿಗ್ಗೆ ಕಾಪಿಕಾಡುವಿನ ಹೆದ್ದಾರಿ ಅಂಚಿನಲ್ಲಿ ವಿದ್ಯಾರ್ಥಿಗಳನ್ನು ಬಸ್ಸಿಗೆ ಹತ್ತಿಸಿ ತಲಪಾಡಿ ಕಡೆಗೆ ಹೊರಟಾಗ ಹಿಂದಿನಿಂದ ಧಾವಿಸಿ ಬಂದ ಮೀನಿನ ಕ್ಯಾಂಟರ್ ಬಲವಾಗಿ ಡಿಕ್ಕಿ ಹೊಡೆದಿದೆ. ಕ್ಯಾಂಟರ್ ಡಿಕ್ಕಿಯ ರಭಸಕ್ಕೆ ಶಾಲಾ ಬಸ್ಸಿನ ಹಿಂಭಾಗದ ಸೀಟುಗಳೇ ಕಿತ್ತು ಹೋಗಿವೆ.

ಗೋವಾದಿಂದ ಕೇರಳದ ಕಡೆಗೆ ಕ್ಯಾಂಟರ್‌ನಲ್ಲಿ ಮೀನು ಸಾಗಿಸುತ್ತಿದ್ದ ಕುಂದಾಪುರ ಮೂಲದ ಚಾಲಕ ಸಂಜೀವ ಎಂಬವರು ನಿದ್ದೆಯ ಮಂಪರಿನಲ್ಲಿದ್ದ ಪರಿಣಾಮ ಅಪಘಾತ ನಡೆದಿರುವುದಾಗಿ ತಿಳಿದು ಬಂದಿದೆ.

ಘಟನೆಯಿಂದ ಬಸ್ಸಿನೊಳಗಿದ್ದ ಹೈಸ್ಕೂಲ್‌ನ ಮೂವರು ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ. ಇಬ್ಬರು ವಿದ್ಯಾರ್ಥಿಗಳು ತೊಕ್ಕೊಟ್ಟಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರೆ, ಮತ್ತೋರ್ವ ವಿದ್ಯಾರ್ಥಿ ದೇರಳಕಟ್ಟೆಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಬಿಡುಗಡೆ ಹೊಂದಿದ್ದಾನೆ.

ಶಾಲೆಯಲ್ಲಿ ಪರೀಕ್ಷೆ ನಡೆಯುತ್ತಿದ್ದುದರಿಂದ ಬಸ್ಸಿನಲ್ಲಿ ಕೇವಲ 24 ರಷ್ಟು ವಿದ್ಯಾರ್ಥಿಗಳಿದ್ದರು. ಘಟನೆಯಿಂದ ಕ್ಯಾಂಟರ್ ಚಾಲಕ ಸಂಜೀವ ಎಂಬವರು ಕೂಡ ಸಣ್ಣ ಪುಟ್ಟ ಗಾಯಗೊಂಡಿದ್ದು ತೊಕ್ಕೊಟ್ಟಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ.

ಸರ್ವಿಸ್ ರಸ್ತೆ ಇಲ್ಲದೆ ನಿತ್ಯವೂ ಅವಾಂತರ

ನಂತೂರು - ತಲಪಾಡಿಯ ಹೆದ್ದಾರಿಯು ಅಗಲೀಕರಣಗೊಂಡು ದಶಕಗಳೇ ಕಳೆದರೂ ಸಹ ಈ ಹೆದ್ದಾರಿಯಲ್ಲಿ ಸಮರ್ಪಕ ಸರ್ವಿಸ್ ರಸ್ತೆಗಳೇ ಇಲ್ಲದೆ ಶಾಲಾ ವಾಹನಗಳು, ಖಾಸಗಿ ಬಸ್ಸುಗಳು ಮುಖ್ಯ ಹೆದ್ದಾರಿ ಅಂಚಿನಲ್ಲೇ ನಿಲ್ಲಿಸಿ ಶಾಲಾ ಮಕ್ಕಳು ಮತ್ತು ಪ್ರಯಾಣಿಕರನ್ನು ಪಿಕ್ ಅಪ್ ಮಾಡುತ್ತಿದ್ದಾರೆ. ಹೆದ್ದಾರಿಯಲ್ಲಿ ಅಪರಿಮಿತ ವೇಗದಲ್ಲಿ ಸಾಗುವ ಸರಕು ವಾಹನಗಳ ಚಾಲಕರಿಗೆ ಇದರ ಅರಿವಿಲ್ಲದ ಕಾರಣ ನಿರಂತರ ಅಪಘಾತಗಳು ನಡೆಯುತ್ತಲೇ ಇವೆಯೆಂದು ಸ್ಥಳೀಯರು ಹೆದ್ದಾರಿ ಪ್ರಾಧಿಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

> **ಈ ಭಾಗದ ಹೆದ್ದಾರಿಯ ಬಾಕಿ ಉಳಿದಿರುವ ಸರ್ವಿಸ್ ರಸ್ತೆಗಳ ನಿರ್ಮಾಣದ ಬಗ್ಗೆ ವಸ್ತು ಸ್ಥಿತಿಯ ವರದಿ ಹಾಗೂ ಸರ್ವಿಸ್ ರಸ್ತೆ ಪೂರ್ಣಗೊಳ್ಳಲು ಇನ್ನೂ ಎಷ್ಟು ವರ್ಷ ಬೇಕಾಗಬಹುದು ಎಂಬುದನ್ನು ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಸಾರ್ವಜನಿಕರಿಗೆ ತಿಳಿಸಲಿ. ಸರ್ವಿಸ್ ರಸ್ತೆ ಇಲ್ಲದ ಪರಿಣಾಮ ಹೆದ್ದಾರಿಯಲ್ಲೇ ವಿರುದ್ಧ ದಿಕ್ಕಿನಲ್ಲಿ ವಾಹನಗಳು ಚಲಿಸುತ್ತಿವೆ. ನಗರ ಸಾರಿಗೆ ಬಸ್ಸು ಹಾಗೂ ಶಾಲಾ ವಾಹನಗಳು ಹೆದ್ದಾರಿಯಿಂದ ಸರಿದು ಬದಿಗೆ ನಿಲ್ಲಲು ಸ್ಥಳಾವಕಾಶವೇ ಇಲ್ಲದಿರುವುದರಿಂದ ಇಲ್ಲಿ ಪದೇ ಪದೇ ಅಪಘಾತಗಳು ಸಂಭವಿಸುತ್ತಿರುತ್ತವೆ.**
> ■ ತಾರಾನಾಥ ಗಟ್ಟಿ ಕಾಪಿಕಾಡು, ಅಧ್ಯಕ್ಷರು, ತುಳು ಸಾಹಿತ್ಯ ಅಕಾಡೆಮಿ.

ಅಪಘಾತದ ಸುದ್ದಿ ತಿಳಿದು ವಿದ್ಯಾರ್ಥಿಗಳ ಪೋಷಕರು ಗಾಬರಿಗೊಂಡು ಆಸ್ಪತ್ರೆಯಲ್ಲಿ ಜಮಾಯಿಸಿದ್ದರು. ಮಂಗಳೂರು ದಕ್ಷಿಣ ಸಂಚಾರಿ ಠಾಣಾ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಆದರೆ ಘಟನೆಯ ಬಗ್ಗೆ ಸೋಮವಾರ ಸಂಜೆಯವರೆಗೂ ಯಾರೂ ಪೊಲೀಸ್ ದೂರು ನೀಡಿಲ್ಲ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 34° 22° | ಉಡುಪಿ 31° 23°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಮಂಗಳವಾರ 17, ಫೆಬ್ರವರಿ 2026 e-mail diganthamlr@gmail.com | Website www.hosadigantha.com

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ನಾಳೆ ಮಂಗಳೂರಿಗೆ ವಂದೇ ಮಾತರಂ ಕೋಸ್ಟಲ್ ಸೈಕ್ಲೋಥಾನ್ 2026

ಸಾಹಸಿಗಳ ಭವ್ಯ ಸ್ವಾಗತಕ್ಕೆ ಕುಡ್ಲ ರೆಡಿ!

ಸಿಐಎಸ್‌ಎಫ್ ಸಾರಥ್ಯದ ಐತಿಹಾಸಿಕ ಸಿಐಎಸ್‌ಎಫ್ ವಂದೇ ಮಾತರಂ ಕೋಸ್ಟಲ್ ಸೈಕ್ಲೋಥಾನ್-2026 ನಾಳೆ ಮಂಗಳೂರಿಗೆ ಆಗಮಿಸಲಿದ್ದು, ಇದರ ಸ್ವಾಗತಕ್ಕಾಗಿ ಕಡಲತಡಿ ಮಂಗಳೂರು ಸರ್ವ ರೀತಿಯಲ್ಲಿ ಸಜ್ಜಾಗಿದೆ. ಸಂಜೆ 7 ಗಂಟೆಗೆ ಪಣಂಬೂರು ಬೀಚ್‌ನಲ್ಲಿ ತಂಡವನ್ನು ಸ್ವಾಗತಿಸಲಾಗುತ್ತಿದ್ದು, ರಾಷ್ಟ್ರೀಯ ಮಹತ್ವದ ಕಾರ್ಯಕ್ರಮವನ್ನು ಇದೇ ಸಂದರ್ಭದಲ್ಲಿ ಆಯೋಜಿಸಲಾಗಿದೆ.

ಸಿಐಎಸ್‌ಎಫ್ ಹಮ್ಮಿಕೊಂಡಿರುವ 'ಸಿಐಎಸ್ ಎಫ್ ವಂದೇ ಮಾತರಂ ಕೋಸ್ಟಲ್ ಸೈಕ್ಲೋಥಾನ್ -2026' ನಾಳೆ ಬಂದರು ನಗರಿ ಮಂಗಳೂರಿಗೆ ಆಗಮಿಸುತ್ತಿದೆ. ಇದರ ಸ್ವಾಗತಕ್ಕಾಗಿ ಸರ್ವ ಸಿದ್ಧತೆ ನಡೆಯುತ್ತಿದೆ.

ಇದು ಯಶಸ್ವಿನ ಮುಂದುವರಿಕೆ

ಇದು ಕಳೆದ 2025ರಲ್ಲಿ ಆಯೋಜಿಸಲಾದ ಕೋಸ್ಟಲ್ ಸೈಕ್ಲೋಥಾನ್‌ನ ಯಶಸ್ವಿನ ಬಳಿಕದ ಮುಂದುವರಿಕೆಯಾಗಿದ್ದು, ಈ ಹಿಂದೆ ದೇಶದ ಕರಾವಳಿಯ ಸುಮಾರು 6,553 ಕಿ.ಮೀ. ದೂರವನ್ನು ಕ್ರಮಿಸಿ, ಸುಮಾರು 30 ಲಕ್ಷ ನಾಗರಿಕರೊಂದಿಗೆ ನೇರ ಸಂಪರ್ಕ ಸಾಧಿಸಿ ಹಾಗೂ 2.5 ರಿಂದ 2.9 ಕೋಟಿ ಜನರಿಗೆ ಡಿಜಿಟಲ್ ಮೂಲಕ ತಲುಪಿದ ಅನುಭವ ಈಗ ಸಿಐಎಸ್‌ಎಫ್‌ಗಿದೆ.

ಬೆಸೆಯಲಿದೆ ಬಾಂಧವ್ಯ ಬೆಸುಗೆ

2026ರ ಆವೃತ್ತಿ ಕರಾವಳಿ ಸಮುದಾಯಗಳೊಂದಿಗೆ ಇನ್ನಷ್ಟು ಆಳವಾದ ಸಂಪರ್ಕವನ್ನು ಬೆಳೆಸಿ, ಅವರನ್ನು ಸಮುದ್ರ ಹಿತಾಸಕ್ತಿಗಳ ರಕ್ಷಣೆಯಲ್ಲಿ 'ತಟ್ ಪಹರಿ' (ಕರಾವಳಿ ಕಾವಲುಗಾರ)ರನ್ನಾಗಿ ಸಬಲೀಕರಿಸುವ ಉದ್ದೇಶವನ್ನು ಈ 'ಸಿಐಎಸ್‌ಎಫ್ ವಂದೇ ಮಾತರಂ ಕೋಸ್ಟಲ್ ಸೈಕ್ಲೋಥಾನ್-2026' ಹೊಂದಿದೆ

ಏನೇನು ಇರಲಿದೆ?

ಅಂದು ಪಣಂಬೂರಿನಲ್ಲಿ ಕರಾವಳಿ ಭದ್ರತೆ, ಕೌಶಲ್ಯಾಭಿವೃದ್ಧಿ, ಮಹಿಳಾ ಸಬಲೀಕರಣ, ಯುವಕರನ್ನು ಸಶಸ್ತ್ರ ಪಡೆಗಳಿಗೆ ಸೇರಲು ಪ್ರೇರೇಪಣೆ, ಕ್ರೀಡಾ ಸ್ಪರ್ಧೆಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮ, ಪರಿಸರ ಸಂರಕ್ಷಣೆಗೆ ಉತ್ತೇಜನ ಮತ್ತಿತರ ಜನಜಾಗೃತಿ ಕಾರ್ಯಕ್ರಮ ಇರಲಿದೆ.

0130 ಭಾವಹಿಸುವ ಸಿಐಎಸ್ ಎಫ್ ಸಿಬ್ಬಂದಿ ಸಂಖ್ಯೆ

0065 ಮಹಿಳಾ ಸೈಕ್ಲಿಸ್ಟ್‌ಗಳ ಸಂಖ್ಯೆ

6600 ಸೈಕ್ಲೋಥಾನ್ ಕ್ರಮಿಸುವ ಒಟ್ಟು ದೂರ

ಸಮಾನಾಂತರ ಮಾರ್ಗಗಳಲ್ಲಿ ಸಂಚಾರ

ಈ ಸೈಕ್ಲೋಥಾನ್ ದೇಶದ ಕರಾವಳಿಯನ್ನು ಎರಡು ಸಮಾಂತರ ಮಾರ್ಗಗಳ ಮೂಲಕ ಕ್ರಮಿಸಲಿದೆ. ಪೂರ್ವ ಮಾರ್ಗದಲ್ಲಿ ಪಶ್ಚಿಮ ಬಂಗಾಳದ ಬಖಾಲಿ ಗ್ರಾಮದಿಂದ ಪ್ರಾರಂಭಗೊಂಡಿದ್ದು, ಪಶ್ಚಿಮಗುಜರಾತಿನ ಲಖ್‌ಪತ್ ಬಂದರಿನಿಂದ ಆರಂಭವಾಗಿದೆ.

ಏನಿದರ ಉದ್ದೇಶ?

ವಂದೇ ಮಾತರಂ 150ನೇ ವಾರ್ಷಿಕೋತ್ಸವದ ಅಂಗವಾಗಿ ಈ ಸೈಕ್ಲೋಥಾನ್ 2026 ಹಮ್ಮಿಕೊಳ್ಳಲಾಗಿದೆ. ಇದು ರಾಷ್ಟ್ರೀಯ ಏಕತೆ, ಕರಾವಳಿ ಭದ್ರತೆ ಹಾಗೂ ಕರಾವಳಿ ಪ್ರದೇಶಗಳ ಸದೃಢ, ಸತತ ಅಭಿವೃದ್ಧಿಯತ್ತ ಸಮೂಹ ಬದ್ಧತೆಯನ್ನು ಪ್ರದರ್ಶಿಸಲಿದೆ.

ವರ್ಷ ಪೂರ್ತಿ ಜನಜಾಗೃತಿ

ವರ್ಷಪೂರ್ತಿ ನಡೆಯುವ ಈ ಜನಜಾಗೃತಿ ಕಾರ್ಯಕ್ರಮದಲ್ಲಿ ದೈಹಿಕ ಸಾಮರ್ಥ್ಯ ಜೊತೆಗೆ ಸಾಮಾಜಿಕ ಜಾಗೃತಿ, ಪರಿಸರ ಸಂರಕ್ಷಣೆ, ಕರಾವಳಿಯ ಸಮುದಾಯಗಳ ಸಕ್ರಿಯ ಭಾಗವಹಿಸುವಿಕೆಗೆ ಉತ್ತೇಜನ ನೀಡುವ ಉದ್ದೇಶ ಹೊಂದಿದೆ.



ಕಾಮಗಾರಿ ಪ್ರಗತಿಯಲ್ಲಿದೆ... ಸಂಚಾರ ನಿಷೇಧಿಸಲಾಗಿದೆ...



ಕಂಕನಾಡಿಯಿಂದ ಪಂಪ್‌ವೆಲ್‌ವರೆಗಿನ ರಸ್ತೆ ಅಭಿವೃದ್ಧಿ ಕಾಮಗಾರಿ ಸೋಮವಾರದಿಂದ ಆರಂಭವಾಗಿದ್ದು, ಈ ಕಾಮಗಾರಿ ಪೂರ್ಣಗೊಂಡಲ್ಲಿ ಈ ಭಾಗದಲ್ಲಿ ಟ್ರಾಫಿಕ್ ದಟ್ಟಣೆಗೆ ಕಡಿವಾಣ ಬೀಳಲಿದೆ. ಸದ್ಯ ಒಂದು ರಸ್ತೆಯನ್ನು ಬಂದ್ ಮಾಡಿ ಕಾಮಗಾರಿ ಆರಂಭಿಸಲಾಗಿದ್ದು, ಏಕಮುಖ ಸಂಚಾರಕ್ಕೆ ಮಾತ್ರ ಅವಕಾಶ ನೀಡಲಾಗಿದೆ. ಚಿತ್ರ: ರಾಜೇಶ್ ಶೆಟ್ಟಿ ಬಳ್ಳಾಲ್‌ಬಾಗ್

ಸುತ್ತಮುತ್ತ

ನಿಗಿನಿಗಿ ಕೆಂಡವಾದ ಖಾರಾವಳಿ: ತಾಪಕ್ಕೆ ನಾಗರಿಕರು ಕಂಗಾಲು

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆ ಸಹಿತ ಕರಾವಳಿ ಭಾಗದಲ್ಲಿ ತಾಪಮಾನ ಏರಿಕೆಯಾಗುತ್ತಲೇ ಇದ್ದು, ಸೋಮವಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗರಿಷ್ಠ 36 ಡಿಗ್ರಿ, ಉಡುಪಿಯಲ್ಲಿ ಗರಿಷ್ಠ 32 ಡಿಗ್ರಿ ಹಾಗೂ ಕಾಸರಗೋಡಿನಲ್ಲಿ ಗರಿಷ್ಠ 31 ಡಿಗ್ರಿ ಸೆಲ್ಸಿಯೆಸ್ ತಾಪಮಾನ ದಾಖಲಾಗಿದೆ. ಈ ನಡುವೆ ರಾತ್ರಿಯ ಬಳಿಕ ತಾಪಮಾನ ಏಕಾಏಕಿ ಇಳಿಕೆಯಾಗುತ್ತಿದ್ದು, ಗ್ರಾಮೀಣ ಭಾಗಗಳಲ್ಲಿ ಚಳಿ ಹಾಗೂ ಮುಂಜಾನೆಯ ವೇಳೆಗೆ ಮಂಜು ಕಂಡುಬರುತ್ತಿದೆ.

ಕೃಷಿ ಭೂಮಿಗಳಿಗೆ ಕಾಡಾನೆಗಳ ಹಾವಳಿ: ಗಡಿಯ ಕೃಷಿಕ ಗಡಗಡ

ಸುಳ್ಯ: ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪೆರ್ನಾಜೆ ಪರಿಸರದಲ್ಲಿ ಕೃಷಿ ಭೂಮಿಗಳಿಗೆ ಕಾಡಾನೆಗಳ ಹಾವಳಿ ಮತ್ತೆ ಮುಂದುವರಿದಿದೆ. ಈ ಬೆಳವಣಿಗೆ ಸ್ಥಳೀಯ ಕೃಷಿಕರನ್ನು ನಿದ್ದೆಗೆಡಿಸಿದ್ದು, ಬೆವರು ಸುರಿಸಿ ಬೆಳೆದ ಕಣ್ಣೆದುರೇ ಧ್ವಂಸವಾಗುತ್ತಿರುವುದು ಕಂಡು ಕಂಗಾಲಾಗಿದ್ದಾರೆ. ಸುಳ್ಯ ಪುತ್ತೂರಿನ ಗಡಿ ಪ್ರದೇಶಗಳಲ್ಲಿ ಕಾಡಾನೆ ಹಾವಳಿಗೆ ಶಾಶ್ವತ ಪರಿಹಾರ ಒದಗಿಸುವಂತೆ ಅವರು ಇಲಾಖೆಯನ್ನು ಆಗ್ರಹಿಸಿದ್ದಾರೆ.

ತುಂಬಿಕೊಂಡೇ ಇದೆ ತುಂಬೆ: ಸದ್ಯಕ್ಕಿಲ್ಲ ನಗರ ಪ್ರದೇಶಕ್ಕೆ ಜಲಾತಂಕ

ಬಂಟ್ವಾಳ: ಮಂಗಳೂರು ನಗರಕ್ಕೆ ಕುಡಿಯುವ ನೀರು ಪೂರೈಸುವ ತುಂಬೆ ಅಣೆಕಟ್ಟಿನಲ್ಲಿ ನೀರಿನ ಸಂಗ್ರಹ ಯಥಾಸ್ಥಿತಿಯಲ್ಲಿದ್ದು, ನಾಗರಿಕರು ಆತಂಕ ಪಡುವ ಅಗತ್ಯವಿಲ್ಲ ಎಂದು ಆಡಳಿತ ತಿಳಿಸಿದೆ. ಸತತವಾಗಿ ಏರಿಕೆಯಾಗುತ್ತಿರುವ ಬಿಸಿಲಿನ ತಾಪದಿಂದಾಗಿ ನೀರಿನ ಮಟ್ಟ ತುಸು ಕುಸಿತಬಾಗಿದ್ದರೂ ಅಗತ್ಯ ಪ್ರಮಾಣದ ನೀರಿನ ಸಂಗ್ರಹ ಅಣೆಕಟ್ಟೆಯಲ್ಲಿದೆ. ಬೇಸಗೆ ಮಳೆ ಬಿದ್ದಲ್ಲಿ ಈ ಬಾರಿ ಯಾವುದೇ ನೀರಿನ ಅಭಾವ ನಗರಕ್ಕೆ ಬಾಽಸದು ಎಂಬ ವಿಶ್ವಾಸ ಆಡಳಿತಕ್ಕಿದೆ.

ಇನ್ನೂ ಪತ್ತೆಯಾಗಿಲ್ಲ ಲ್ಯಾಲ, ನಡ ಗಡಿಭಾಗಕ್ಕೆ ಭೇಟಿ ನೀಡಿದ ಚಿರತೆ

ಬೆಳ್ತಂಗಡಿ: ತಾಲೂಕಿನ ಲ್ಯಾಲ ಹಾಗೂ ನಡ ಗ್ರಾಮದ ಗಡಿಯಲ್ಲಿ ಓಡಾಟ ನಡೆಸಿದೆ ಎನ್ನಲಾದ ಚಿರತೆ ಇನ್ನೂ ಸೆರೆ ಸಿಕ್ಕಿಲ್ಲ, ಹೀಗಾಗಿ ಈ ಭಾಗದ ನಾಗರಿಕರು ಆತಂಕದಲ್ಲಿಯೇ ದಿನಕಳೆಯಬೇಕಾಗಿ ಬಂದಿದೆ.

ಸಂಕಷ್ಟದ ಸುಳಿಯಲ್ಲಿ ಕಾಸರಗೋಡು ಕೃಷಿಕ

ರಬ್ಬರ್‌ಗೆ ಚುಕ್ಕಿ ಬಾಧೆ

ಪಾತಾಳದ ಕಡೆಗೆ ಮುಖಮಾಡಿದೆ ಫಸಲು

ಕಾಸರಗೋಡು: ಜಿಲ್ಲೆಯಲ್ಲಿ ರಬ್ಬರ್ ಬೆಳೆಗೆ ಎಲೆಚುಕ್ಕಿ ರೋಗ ವ್ಯಾಪಿಸುತ್ತಿದ್ದು ಕೃಷಿಕರು ಅಕ್ಷರಶಃ ಕಂಗಾಲಾಗಿದ್ದಾರೆ. ಹೆಚ್ಚುತ್ತಿರುವ ರೋಗದ ಬಾಧೆಯಿಂದ ರಬ್ಬರ್ ಉತ್ಪಾದನೆಯಲ್ಲಿ ಕೂಡಾ ಭಾರೀ ಇಳಿಮುಖ ಕಂಡುಬಂದಿದೆ.

ಬೆಟ್ಟಗುಡ್ಡಗಳೇ ಟಾರ್ಗೆಟ್

ನಾಡಿನ ಬೆಟ್ಟಗುಡ್ಡಗಳ ಮೇಲಿನ ರಬ್ಬರ್ ತೋಟಗಳಲ್ಲಿ ರೋಗಬಾಧೆ ಹೆಚ್ಚಾಗಿ ಗೋಚರಿಸುತ್ತಿದೆ. ಈಗ ಸಾಮಾನ್ಯವಾಗಿ ರಬ್ಬರ್ ಗಿಡಗಳಲ್ಲಿ ಡಿಸೆಂಬರ್‌ನಲ್ಲಿ ಎಲೆ ಉದುರಿ ಜನವರಿಯಲ್ಲಿ ಚಿಗುರುತ್ತವೆ. ಆದರೆ ಜನವರಿಯಲ್ಲೇ ಚಿಗುರಿದ್ದ ಎಲೆ ಫೆಬ್ರವರಿಯಲ್ಲಿ ಒಣಗಿ ಉದುರಿ ಬೀಳುತ್ತಿರುವುದು ಕೃಷಿಕರಿಗೆ ಶಾಕ್ ನೀಡಿದೆ.

ದೀರ್ಘಕಾಲದ ಯೋಜನೆ?

ಈ ಮಧ್ಯೆ ರಬ್ಬರ್ ಮರಗಳ ಎಲೆಗಳಿಗೆ ಔಷಧಿ ಸಿಂಪಡಿಸಿದರೂ ಎಲೆಚುಕ್ಕಿ ರೋಗ ನಿಯಂತ್ರಣಕ್ಕೆ ಬರಲು ದೀರ್ಘಕಾಲದ ಯೋಜನೆ ಬೇಕು ಎಂದು ಈ ಭಾಗದ ಕೃಷಿ ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.



ಔಷಧಿ ಸಿಂಪಡಿಸಿದರೂ ಪ್ರಯೋಜನವಾಗುತ್ತಿಲ್ಲ

ರಬ್ಬರ್ ಕೃಷಿ ವಲಯದಲ್ಲಿ ಇತ್ತೀಚೆಗಿನ ವರ್ಷಗಳಲ್ಲಿ ಉತ್ಪಾದನೆ ಕುಸಿತಕ್ಕೆ ಎಲೆಚುಕ್ಕಿ ರೋಗ ಪ್ರಧಾನ ಕಾರಣವೆಂದು ಕೃಷಿ ವಿಜ್ಞಾನಿಗಳು ಮತ್ತು ಕೃಷಿ ವಿಶ್ವವಿದ್ಯಾನಿಲಯಗಳ ತಜ್ಞರು ಹೇಳುತ್ತಿದ್ದಾರೆ. ಫಂಗಸ್ ಮತ್ತು ಕೀಟಗಳನ್ನು ನಿಯಂತ್ರಿಸಲು ಪ್ರತಿರೋಧಕ ಔಷಧಿಗಳನ್ನು ಸಿಂಪಡಿಸಿದರೂ ಯಾವುದೇ ಪ್ರಯೋಜನವಾಗುತ್ತಿಲ್ಲ ಎಂಬ ದೂರುಗಳು ಕೃಷಿಕರದ್ದು.

ಇನ್ನೊಂದೆಡೆ ಇತ್ತೀಚಿನ ದಿನಗಳಲ್ಲಿ ಕೃಷಿಕರು ರಬ್ಬರ್ ಕೃಷಿಯತ್ತ ಆಸಕ್ತಿ ವಹಿಸಿದ ಪರಿಣಾಮ ಜಿಲ್ಲೆಯ ರಬ್ಬರ್ ಕೃಷಿ ಪ್ರದೇಶಗಳಲ್ಲಿ ಏರಿಕೆಯಾಗುತ್ತಿದೆ. ಆದರೆ ಎಲೆಚುಕ್ಕಿ ರೋಗಬಾಧೆ ಕೃಷಿಕರನ್ನು ವಿಮುಖರನ್ನಾಗಿಸುವಂತೆ ಮಾಡಿದೆ.

ಔಷಧಿ ಸಿಂಪಡೆಗೆ ಕಾರ್ಮಿಕರೇ ಇಲ್ಲ!

ರಬ್ಬರ್ ಬೆಳೆಗೆ ಕಾಡುತ್ತಿರುವ ರೋಗಬಾಧೆ ತಡೆಗಟ್ಟಲು ರಬ್ಬರ್ ಕೃಷಿಗೆ ವ್ಯಾಪಕ ಪ್ರಮಾಣದಲ್ಲಿ



ಹಾಗೂ ಸಂಪೂರ್ಣವಾಗಿ ಔಷಧಿ ಸಿಂಪಡಿಸಬೇಕು ಎಂದು ಕೃಷಿ ವಿಜ್ಞಾನಿಗಳು ನಿರ್ದೇಶಿಸಿ ದ್ದಾರೆ. ಔಷಧಿ ಸರಿಯಾದ ಸಂದರ್ಭ ಸಿಂಪಡಿಸದಿದ್ದರೆ ವರ್ಷ ಕಳೆದಂತೆ ರೋಗ ಏರಿಕೆಯಾಗಬಹುದು ಎಂದು ಕೂಡಾ ಎಚ್ಚರಿಸಲಾಗಿದೆ. ಆದರೆ ಔಷಧಿ ಸಿಂಪಡಣೆ ಮಾಡೋಣವೆಂದರೆ ಕಾರ್ಮಿಕರು ಲಭಿಸುತ್ತಿಲ್ಲ ಎಂದು ಕೃಷಿಕರು ಅಳಲು ತೋಡಿಕೊಂಡಿದ್ದಾರೆ.

ಕುಕ್ಕೇಶಗೆ ಆಶ್ಲೇಷ ಬಲಿ, ಕಾರ್ತಿಕ ಪೂಜೆ, ಶೇಷ ಸೇವೆ, ಮಹಾಭಿಷೇಕ ಸೇವೆ

ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಹರಿದುಬಂತು ಭಕ್ತ ಪ್ರವಾಹ

ಸುಬ್ರಹ್ಮಣ್ಯ: ನಾಗಾರಾಧನೆಯ ಪುಣ್ಯ ಕ್ಷೇತ್ರ ಕುಕ್ಕೆ ಸುಬ್ರಹ್ಮಣ್ಯದಲ್ಲಿ ಸೋಮವಾರ ಭಾರೀ ಸಂಖ್ಯೆಯಲ್ಲಿ ಭಕ್ತರ ಪ್ರವಾಹ ಕಂಡುಬಂತು.

ಕುಮಾರಧಾರಾದಲ್ಲಿ ಪುಣ್ಯ ಸ್ನಾನ ಪೂರೈಸಿದ ಭಕ್ತರು ಕಾಲ್ನಡಿಗೆಯಲ್ಲಿ ಆಗಮಿಸಿ ಶ್ರೀ ಸುಬ್ರಹ್ಮಣ್ಯನ ದರುಶನ ಪಡೆದು ಪ್ರಸಾದ ಸ್ವೀಕರಿಸಿದರು. ರಥ ಬೀದಿ, ಪೇಟೆ ಹಾಗೂ ಸ್ನಾನಘಟ್ಟದಲ್ಲೂ ಭಾರೀ ಸಂಖ್ಯೆ ಯಾತ್ರಾರ್ಥಿಗಳ ದೃಶ್ಯ ಕಂಡು ಬಂದಿತು. ಶ್ರೀ ದೇವಳದಲ್ಲಿನ ಹೊರಾಂಗಣ, ಒಳಾಂಗಣ, ಧರ್ಮ ಸಮ್ಮೇಳನ ಮಂಟಪ, ಆದಿ ಸುಬ್ರಹ್ಮಣ್ಯ, ಕುಮಾರಧಾರಾ ನದಿಯ ಸ್ನಾನ ಘಟ್ಟದಲ್ಲಿ ಭಕ್ತ ಸಂದಣಿಯೇ ಕಂಡು ಬಂದಿತ್ತು.



ಅತ್ಯಧಿಕ ಸಂಖ್ಯೆಯಲ್ಲಿ ಸೇವೆಗಳು

ಭಕ್ತರು ಅಧಿಕ ಸಂಖ್ಯೆಯಲ್ಲಿ ಆಶ್ಲೇಷ ಬಲಿ, ಕಾರ್ತಿಕ ಪೂಜೆ, ಶೇಷ ಸೇವೆ, ನಾಗ ಪ್ರತಿಷ್ಠೆ ಮಹಾಪೂಜೆ, ಮಹಾಭಿಷೇಕ, ತುಲಾ ಭಾರ ಸೇರಿದಂತೆ ಇತರ ಸೇವೆಗಳನ್ನು ನೆರವೇರಿಸಿದರು. ಭಕ್ತರ ಸುಗಮ ದರುಶನ, ಪ್ರಸಾದ ವ್ಯವಸ್ಥೆಗೆ ಸಕಲ ಸಿದ್ಧತೆ ದೇವಳದಿಂದ ಮಾಡಲಾಗಿತ್ತು. ದೇವಳದ ಹೊರಗೆ ರಥಬೀದಿಯಲ್ಲಿ ನೆರಳಿಗೆ ಶಾಮಿಯಾನ ವ್ಯವಸ್ಥೆ ಮಾಡಲಾಗಿತ್ತು.

ಭಕ್ತರಿಗೆ ವ್ಯವಸ್ಥಿತ ಪ್ರಸಾದ ಭೋಜನ

ಸಂಜೆ 4 ಗಂಟೆಯ ತನಕವೂ ವ್ಯವಸ್ಥಿತವಾಗಿ ಭಕ್ತರಿಗೆ ಪ್ರಸಾದ ಭೋಜನ ವಿತರಿಸಲಾಯಿತು. ಶ್ರೀ ದೇವಳದ ಆಡಳಿತ ಮಂಡಳಿ ಭಕ್ತರ ಅನುಕೂಲತೆಗೆ ವ್ಯವಸ್ಥಿತ ಅನುಕೂಲತೆ ಮಾಡಿಕೊಟ್ಟಿತ್ತು.

ಹೊರಗಡೆ ಪಾರ್ಕಿಂಗ್‌ನ ಎಲ್ಲಾ ಪ್ರದೇಶಗಳು ವಾಹನಗಳಿಂದ ತುಂಬಿದ್ದು, ಸರಕಾರಿ ಬಸ್‌ಗಳು ನಿರಂತರವಾಗಿ ಭಕ್ತರ ಪ್ರಯಾಣಕ್ಕೆ ಹೊರಡಲು ಸಜ್ಜಾಗಿ ಬಸ್ ನಿಲ್ದಾಣದಲ್ಲಿ ನಿಂತಿದ್ದವು.

ಹಾರಂಗಿಯಿಂದ ನದಿಗೆ ನೀರು: ರೈತರ ಆಕ್ರೋಶ

ಕುಶಾಲನಗರ: ಹಾರಂಗಿ ಜಲಾಶಯದಲ್ಲಿ ನೀರಿನ ಸಂಗ್ರಹ ಕಡಿಮೆ ಇರುವ ನಡುವೆಯೇ 250 ಕ್ಯುಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ.



ಕಾವೇರಿ ನೀರಾವರಿ ನಿಗಮ ಸೂಚನೆಯ ಮೇರೆಗೆ ಹಾರಂಗಿ ನೀರಾವರಿ ಇಲಾಖೆ ಇಂಜಿನಿಯರ್ ಅವರು, ಅಣೆಕಟ್ಟೆಯ ತಳ ಭಾಗದ ಕ್ರೆಸ್ಟ್ ಗೇಟ್ ಮೂಲಕ ಶನಿವಾರದಿಂದ 250 ಕ್ಯುಸೆಕ್ಸ್ ನೀರನ್ನು ನದಿಗೆ ಹರಿಸುತ್ತಿದ್ದು, ಇದು ಇಲ್ಲಿನ ಅಚ್ಚುಕಟ್ಟು ಪ್ರದೇಶದ ರೈತರ ಆಕ್ರೋಶಕ್ಕೆ ಕಾರಣವಾಗಿದೆ. ಬೇಸಿಗೆ ಈಗಷ್ಟೇ ಪ್ರಾರಂಭವಾಗಿದೆ ಅಣೆಕಟ್ಟೆಯಲ್ಲಿ ನೀರು ತುಂಬಾ ಕುಸಿತ ಕಂಡಿದ್ದು ಕೇವಲ 3 ಟಿ.ಎಂ.ಸಿ ನೀರು ಮಾತ್ರ ಬಾಕಿ ಉಳಿದಿದೆ. ಅದರಲ್ಲಿಯೂ ಶನಿವಾರದಿಂದ ನದಿಗೆ ಸುಮಾರು 250 ಕ್ಯುಸೆಕ್ಸ್ ನೀರನ್ನು ಹರಿಸುತ್ತಿರುವುದರಿಂದ ಅಣೆಕಟ್ಟೆಯ ನೀರಿನ ಮಟ್ಟ ಮತ್ತಷ್ಟು ಕುಂಠಿತವಾಗಲಿದೆ. ಈ ಹಿನ್ನೆಲೆಯಲ್ಲಿ ಕೂಡಲೇ ನೀರನ್ನು ಸ್ಥಗಿತಗೊಳಿಸಬೇಕು ಎಂದು ಇಲ್ಲಿನ ಕೂಡುಮಂಗಳೂರು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಭಾಸ್ಕರ್ ನಾಯಕ್ ಒತ್ತಾಯಿಸಿದ್ದಾರೆ. »ಪುಟ 6

ಪಠ್ಯಕ್ರಮ ಪೂರ್ಣಗೊಳಿಸುವುದೇ ಸವಾಲು | ವಿದ್ಯಾರ್ಥಿಗಳ ಭವಿಷ್ಯಕ್ಕೂ ಆಪತ್ತು

ಅತ್ತ ದರಿ ಇತ್ತ ಪುಲಿ ಸ್ಥಿತಿಯಲ್ಲಿ ಬಿಎಲ್‌ಒ ಶಿಕ್ಷಕರು!

ಉಡುಪಿ: ರಾಜ್ಯವ್ಯಾಪಿ ನಡೆಯುತ್ತಿರುವ ಮತದಾರರ ಪಟ್ಟಿ ಪರಿಷ್ಕರಣೆಯ ಭಾಗವಾಗಿ ಉಡುಪಿಯಲ್ಲಿ ಶೇ.85 ರಷ್ಟು ಮತದಾರರ ಪಟ್ಟಿ ಪರಿಷ್ಕರಣೆ ಮುಕ್ತಾಯಗೊಂಡಿದೆ. ಆದರೆ ಈ ಕೆಲಸಕ್ಕೆ ಸರ್ಕಾರ ಹೆಚ್ಚಾಗಿ ಶಿಕ್ಷಕರನ್ನೇ ಹೆಚ್ಚು ನೆಚ್ಚಿಕೊಂಡಿರುವ ಹಿನ್ನೆಲೆಯಲ್ಲಿ ಇದು ಇಲ್ಲಿನ ಶಿಕ್ಷಕರನ್ನು ಕಾರ್ಯದ ಒತ್ತಡಗಳಿಂದ ಕಂಗಾಲಾಗುವಂತೆ ಮಾಡಿದೆ.

ಸಿಲೇಬಸ್ ಪೂರ್ಣಗೊಂಡೀತೇ?

ಪ್ರೌಢ ಶಾಲೆ, ಪ್ರಾಥಮಿಕ ಶಾಲಾ ಶಿಕ್ಷಕರನ್ನು ಬಿಎಲ್‌ಒ ಮ್ಯಾಪಿಂಗ್ ಕಾರ್ಯಕ್ಕೆ ನೇಮಿಸಲಾಗಿದೆ. ಒಂದೆಡೆ ಅದರ ಒತ್ತಡದ ನಡುವೆ ಸಿಲೇಬಸ್ ಪೂರ್ಣಗೊಳಿಸುವುದೇ ಈಗ ಸವಾಲಾಗಿ ಪರಿಣಮಿಸಿದೆ ಎಂದು ಶಿಕ್ಷಕರು ಅಳಲು ತೋಡಿಕೊಳ್ಳುತ್ತಿದ್ದಾರೆ. ಮಾರ್ಚ್ ತಿಂಗಳಲ್ಲಿ ನಡೆಯುವ ಪರೀಕ್ಷೆಯಲ್ಲಿ ಇವೆಲ್ಲವುಗಳು ವಿದ್ಯಾರ್ಥಿಗಳ ಮೇಲೆ ಕೂಡಾ ವ್ಯತಿರಿಕ್ತ ಪರಿಣಾಮ ಬೀರುವಂತೆ ಮಾಡಿದೆ.



ಊರು ಸಮಸ್ಯೆಗಳು ನೂರು

- ಮ್ಯಾಪಿಂಗ್ ಕಾರ್ಯಗಳ ಒತ್ತಡದ ನಡುವೆ ಸಿಲೇಬಸ್ ಪೂರ್ಣಗೊಳಿಸುವುದೇ ಚಿಂತೆ
- ಮಾರ್ಚ್ ತಿಂಗಳಲ್ಲಿ ನಡೆಯುವ ಪರೀಕ್ಷೆಗೆ ಸಿದ್ಧತೆಗಳ ಟೆನ್ಶನ್
- ವಿದ್ಯಾರ್ಥಿಗಳ ಭವಿಷ್ಯದ ಮೇಲೆ ಕೂಡಾ ಪರಿಣಾಮ ಆತಂಕ

ಉಡುಪಿ ಜಿಲ್ಲೆಯಲ್ಲಿ 610 ಬಿಎಲ್‌ಒ

ಜಿಲ್ಲೆಯಾದ್ಯಂತ ಒಟ್ಟು 610 ಬಿಎಲ್‌ಒಗಳನ್ನು ನೇಮಿಸಲಾಗಿದೆ. ಇದರಲ್ಲಿ ಶೆ. 85ಕ್ಕಿಂತ ಅಧಿಕ ಶಿಕ್ಷಕರು ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಇದ್ದಾರೆ. »ಪುಟ 6

ಉಡುಪಿಯಲ್ಲಿ 85% ಮ್ಯಾಪಿಂಗ್ ಪೂರ್ಣ

ಉಡುಪಿ ಜಿಲ್ಲೆಯಾದ್ಯಂತ 85 ರಷ್ಟು ಮ್ಯಾಪಿಂಗ್ ಪೂರ್ಣಗೊಂಡಿದ್ದು, ಮತದಾರರ ಪಟ್ಟಿಯಲ್ಲಿ ಹೆಸರು ತೆಗೆಸುವವರು ಹಾಗೂ ಮತದಾನದ ಕ್ಷೇತ್ರ ಬದಲಾವಣೆಯನ್ನು ಸಂಬಂಧಪಟ್ಟ ಬಿಎಲ್ ಒ ಅಧಿಕಾರಿಯನ್ನು ಭೇಟಿಯಾಗಿ ಪರಿಶೀಲಿಸಬಹುದು.

● ನಾಗರಾಜ್, ಉಡುಪಿ ಜಿಲ್ಲಾ ಮತದಾರ ಪಟ್ಟಿ ಪರಿಷ್ಕರಣೆ ಅಧಿಕಾರಿ

ಆಟೋ ರಿಕ್ಷಾ ಉರುಳಿಬಿದ್ದ ಸ್ಥಳದಲ್ಲೇ ಸಂಕದಿಂದ ಕೆಳಗೆ ಉರುಳಿ ಬಿತ್ತು ಸ್ಕೂಟಿ

ಅರಂತೋಡು ಕುಕ್ಕುಂಬಳ ಸೇತುವೆಯಲ್ಲಿ ಮತ್ತೆ ಅವಘಡ

ಸುಳ್ಯ: ಅರಂತೋಡು ಕುಕ್ಕುಂಬಳ ಸೇತುವೆ ಮೇಲಿನಿಂದ ನದಿಯ ತಟಕ್ಕೆ ಬಿದ್ದು ಸ್ಕೂಟಿ ಜಖಂಗೊಂಡು ಸವಾರ ಸಣ್ಣ ಪುಟ್ಟ ಗಾಯಗೊಂಡು ಅಪಾಯದಿಂದ ಪಾರಾದ ಘಟನೆ ಶನಿವಾರ ವರದಿಯಾಗಿದೆ.

ಗಾಯಗೊಂಡ ವ್ಯಕ್ತಿ ಅಂಜಿಕ್ಕಾರ್ ರವಿಚಂದ್ರ ನಾಯ್ಕ ಎಂದು ಗುರುತಿಸಿದ್ದು ಅವರು ರಾತ್ರಿ ಸುಮಾರು 8 ಗಂಟೆಗೆ ಸುಳ್ಯದಿಂದ ಮನೆಕಡೆ ಹೋಗುತ್ತಿದ್ದ ವೇಳೆ ಈ ಅವಘಡ ಸಂಭವಿಸಿದ್ದು, ಈ ಮೊದಲು ಇದೇ ಜಾಗದಲ್ಲಿ ಆಟೋ ರಿಕ್ಷಾವೊಂದು



ಚಾಲಕನ ನಿಯಂತ್ರಣ ತಪ್ಪಿ ಸೇತುವೆ ಮೇಲಿಂದ ಕೆಳಗೆ ಬಿದ್ದಿತ್ತು.

ಈ ಬಗ್ಗೆ ಸಂಬಂಧಪಟ್ಟವರು ಕೂಡಲೇ ಕ್ರಮ ಕೈಗೊಂಡು ಮುಂದೆ ಉಂಟಾಗಬಹುದಾದ ಹೆಚ್ಚಿನ ಅನಾಹುತವನ್ನು ತಪ್ಪಿಸಬೇಕು ಎಂದು ಆಗ್ರಹಿಸಿದ್ದಾರೆ.

ತಡೆ ಬೇಲಿ ಇಲ್ಲದೇ ಇರುವುದು ಕಾರಣ?

ಈ ಎಲ್ಲಾ ಘಟನೆಗೆ ಸೇತುವೆಗೆ ತಡೆ ಬೇಲಿ ಇಲ್ಲದೇ ಇರುವುದು ಕಾರಣ ಎಂದು ಸ್ಥಳೀಯರು ಹೇಳುತ್ತಿದ್ದು, ಸೂಕ್ತ ರಕ್ಷಣಾ ಕ್ರಮಕ್ಕೆ ಆಗ್ರಹಿಸಿದ್ದಾರೆ

ಸುತ್ತಮುತ್ತ


ಕುಂಪಲ ಶಿವಪುರದ ಶ್ರೀ ದುರ್ಗಾಪರಮೇಶ್ವರ ಕ್ಷೇತ್ರದಲ್ಲಿ ಮಹಾಶಿವರಾತ್ರಿ ಪೂಜೆಯು ನಡೆಯಿತು.

ನೆಟ್ಲಮುಡ್ನೂರು: ಗ್ರಾ.ಪಂ. ಸದಸ್ಯರಿಗೆ ಗೌರವಾರ್ಪಣೆ

ಬಂಟ್ವಾಳ: ನೆಟ್ಲಮುಡ್ನೂರು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಸಿಬ್ಬಂದಿ ವತಿಯಿಂದ ಸದಸ್ಯರಿಗೆ ಗೌರವಾರ್ಪಣೆ ಕಾರ್ಯಕ್ರಮ ಪಂಚಾಯತ್ ಸಭಾಂಗಣದಲ್ಲಿ ನಡೆಯಿತು. ಪಂಚಾಯತ್ ಅಭಿವೃದ್ಧಿ ಅಧಿಕಾರಿ ಅನುಷಾ ಮಾತನಾಡಿದರು. ಗೌರವಾರ್ಪಣೆ ಸ್ವೀಕರಿಸಿದ ಪಂಚಾಯತ್ ಅಧ್ಯಕ್ಷೆ ಸಮಿತಾ ಡಿ. ಪೂಜಾರಿ, ಉಪಾಧ್ಯಕ್ಷ ಸಚ್ಚಿದಾನಂದ ಪೂಜಾರಿ, ಸದಸ್ಯರಾದ ಅಬ್ದುಲ್ ಲತೀಫ್, ಶ್ರೀಧರ ರೈ, ಆಶೋಕ್ ರೈ ಅವರುಬತಮ್ಮ ಅನಿಸಿಕೆ ವ್ಯಕ್ತ ಪಡಿಸಿದರು. ಸದಸ್ಯರಾದ ಧನುಂಜಯ ಗೌಡ, ಪ್ರೇಮಾ, ಲಕ್ಷ್ಮೀ, ಶಕೀಲಾ ಕೆ.ಪೂಜಾರಿ, ಶಾಲಿನಿ, ಸುಜಾತಾ ಗೌರವ ಅಭಿನಂದನೆ ಸ್ವೀಕರಿಸಿದರು. ಇದೇ ವೇಳೆ ಗ್ರಾ.ಪಂ. ಶೇ. 25 ಮತ್ತು ಶೇಕಡಾ 5 ರ ಫಲಾನುಭವಿಗಳಿಗೆ ಪಂಚಾಯತ್ ಅಧ್ಯಕ್ಷೆ ಸಮಿತಾ ಡಿ ಪೂಜಾರಿ ಅಧ್ಯಕ್ಷತೆಯಲ್ಲಿ ಸೋಲಾರ್ ಲೈಟ್ ಹಾಗೂ ಚೆಕ್ ವಿತರಣೆ ನಡೆಯಿತು. ದೀಪ್ತಿ ಸ್ವಾಗತಿಸಿ, ಸೌಮ್ಯ ವಂದಿಸಿದರು. ಶಶಿಧರ, ಉಪೇಂದ್ರ ನಿರೂಪಿಸಿದರು.

ಗುತ್ತಿಗಾರು: ಇಂದು ವಿದ್ಯುತ್ ವ್ಯತ್ಯಯ

ಸುಳ್ಯ: ಗುತ್ತಿಗಾರು ಉಪವಿಭಾಗದಲ್ಲಿ ಮಂಗಳವಾರ ಬೆಳ್ಳಾರೆ–ಗುತ್ತಿಗಾರು–ಸುಬ್ರಹ್ಮಣ್ಯ ಮಾರ್ಗದಲ್ಲಿ ತುರ್ತು ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವುದರಿಂದ ಪೂರ್ವಾಹ್ನ 11 ಗಂಟೆಯಿಂದ ಸಂಜೆ 3 ಗಂಟೆಯವರೆಗೆ ಸುಬ್ರಹ್ಮಣ್ಯ ಮತ್ತು ಗುತ್ತಿಗಾರು ವಿದ್ಯುತ್ ಉಪಕೇಂದ್ರದಿಂದ ವಿದ್ಯುತ್ ನಿಲುಗಡೆ ಮಾಡಲಾಗುವುದು ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಕುದ್ರೋಳಿ: ಇಂದು ವಿದ್ಯುತ್ ವ್ಯತ್ಯಯ

ಮಂಗಳೂರು: ಕುದ್ರೋಳಿ ಉಪಕೇಂದ್ರದಿಂದ ಹೊರಡುವ ಗೋಕರ್ಣನಾಥ ಫೀಡರ್‌ನಲ್ಲಿ ಲೈನ್ ನಿರ್ವಹಣೆ ಕಾಮಗಾರಿ ಹಾಗೂ ತುರ್ತು ನಿರ್ವಹಣೆ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ, ಕುದ್ರೋಳಿ, ಜಾಮಿಯಾ ಮಸ್ಜಿದ್, ಕುದ್ರೋಳಿ ಓಲ್ಡ್ ಗೇಟ್, ನಡುಪಳ್ಳಿ, ಮೊಯಿದ್ದೀನ್ ಮಸೀದಿ, ಟಿಪ್ಪು ಸುಲ್ತಾನ್ ನಗರ, ಕೆನರಾ ಐಸ್ ಪ್ಲಾಂಟ್, ಕುದ್ರೋಳಿ ಮಂಡಿ, ಅನ್ಸಾರಿ ರೋಡ್, ಅಜೀಜುದ್ದೀನ್ ರೋಡ್, ಜೆ.ಎಂ ರೋಡ್, ಬಸವನ ಗುಡಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಫೆ. 17ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 1 ಗಂಟೆಯವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಬಂಟ್ವಾಳ: ಗ್ರಾ.ಪಂ.ಗಳಿಗೆ ಆಡಳಿತಾಧಿಕಾರಿ ನೇಮಕ

ಬಂಟ್ವಾಳ: ತಾಲೂಕಿನ ಗ್ರಾ.ಪಂ.ಗಳ ಹಾಲಿ ಚುನಾಯಿತ ಪ್ರತಿನಿಧಿಗಳ ಅಧಿಕಾರಾವಧಿ ಪೂರ್ಣಗೊಂಡಿರುವುದರಿಂದ ದ.ಕ. ಜಿಲ್ಲಾಧಿಕಾ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಆಡಳಿತಾಧಿಕಾರಿಗಳನ್ನಾಗಿ ನೇಮಿಸಿ ಆದೇಶಿಸಿದ್ದಾರೆ. ಚೆನ್ನೈತ್ತೋಡಿ, ನರಿಕೊಂಬು ತುಂಬೆ ಗ್ರಾ.ಪಂ.ಗೆ ತಾ.ಪಂ. ಇಒ ಸಚಿನ್ ಕುಮಾರ್, ಇರ್ವತ್ತೂರು, ಪಿಲಾತಬೆಟ್ಟು ಕಾವಳಮೂಡೂರಿಗೆ ಮೆಸ್ಕಾಂ ಎಇಇ ನಾರಾಯಣ ಭಟ್, ಪರ್ನೆ, ಪೆರಾಜೆ, ಕೆದಿಲಕ್ಕೆ ಮೆಸ್ಕಾಂ ಇಎ ಸುಬ್ರಹ್ಮಣ್ಯ ಪ್ರಸಾದ್, ಬಾಳ್ತಿಲ, ಸಾಲೆತ್ತೂರು, ಗೋಳ್ತಮಜಲಿಗೆ ಬಂಟ್ವಾಳ ಬಿಇಒ ಮಾಲತಿ, ಕನ್ಯಾನ, ಕೊಳ್ನಾಡು,ಮೇರಮಜಲಿಗೆ ಪಿಆರ್ ಇಡಿ ಎಇಇ ತಾರಾನಾಥ ಸಾಲ್ಯಾನ್, ಕರೋಪಾಡಿ, ಪುಣಚಕ್ಕೆ ಸಿಡಿಪಿಒ ಮಮ್ತಾಜ್ ಎಚ್. ಜೆ, ಮಾಣಿಲ, ಪೆರುವಾಯಿ, ಕೇಪುವಿಗೆ ಸಮಾಜ ಕಲ್ಯಾಣ ಇಲಾಖೆ ಎಡಿ ವಿನಯಕುಮಾರಿ, ಕಳ್ಳಿಗೆ, ಅಮ್ಟಾಡಿ, ಪಂಜಿಕಲ್ಲಿಗೆ ಕೃಷಿ ಇಲಾಖೆ ಎಡಿ ವೀಣಾ ಕೆ.ಆರ್. ಕುಕ್ಕಿಪಾಡಿ, ಕಡೇಶಿವಾಲಯ, ಬರಿಮಾರಿಗೆ ಪಶುವೈದ್ಯಾಧಿಕಾರಿ ಡಾ. ಉಮೇಶ್ ಕಿರಣ್ ಬಿ.ಎನ್., ಕರಿಯಂಗಳ, ಅಮ್ಮುಂಜೆ, ಬಡಬೆಳ್ಳೂರಿಗೆ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕ ಜೋ ಪ್ರದೀಪ್ ಡಿ'ಸೋಜಾ, ಸಜೀಪಮೂಡ, ಸಜೀಪಮುನ್ನೂರು, ಮಂಚಿಗೆ ಲೋಕೋಪಯೋಗಿ ಇಲಾಖೆ ಎಇಇ ಅವಿನಾಶ್ ಬಿ., ವಿಟ್ಲಮುಡ್ನೂರು, ವಿಟ್ಲಪಡ್ನೂರು, ಇಡ್ಕಿದ್ ಗೆ ಓಬಿಸಿಯ ಕಲ್ಯಾಣಾಧಿಕಾರಿ ಶೇಷಗಿರಿ ಆರ್.ನಾಯ್ ನಾವೂರು, ಮಣಿನಾಲ್ಕೂರು, ಸರಪಾಡಿಗೆ ಕೃಷಿ ಅಧಿಕಾರಿ ನಂದನ್ ಮಲ್ಯ, ಅನಂತಾಡಿ, ಮಾಣಿ, ನೆಟ್ಲಮುಡ್ನೂರಿಗೆ ಮೆಸ್ಕಾಂ ಎಇಇ ಗೋವಿಂದರಾಜ್ ಎ.ವಿ. ಕಾವಳಪಡೂರು, ಉಳಿ, ಬಡಗಕಜೆಕಾರಿಗೆ ಗ್ರಾಮೀಣ ಕುಡಿಯುವ ನೀರು–ನೈರ್ಮಲ್ಯ ಇಲಾಖೆಯ ಎಇಇ ನಟೇಶ್ ಕುಮಾರ್, ವೀರಕಂಭ, ಬೋಳಂತೂರಿಗೆ ಸಾಮಾಜಿಕ ವಲಯ ಅರಣ್ಯಾಧಿಕಾರಿ ಸತೀಶ್, ಸಂಗಬೆಟ್ಟು ರಾಯಿ, ಆರಳಕ್ಕೆ ತಾಲೂಕು ಆರೋಗ್ಯಾಧಿಕಾರಿ ಡಾ. ಅಶೋಕ್ ಕುಮಾರ್ ರೈ ಆಡಳಿತಾಧಿಕಾರಿಗಳಾಗಿದ್ದಾರೆ. ಓರ್ವ ಅಧಿಕಾರಿಗೆ ಮೂರು, ಕೆಲ ಅಧಿಕಾರಿಗಳಿಗೆ ಎರಡು ಗ್ರಾ.ಪಂ.ಗಳ ಹೊಣೆ ವಹಿಸಲಾಗಿದೆ.

ಆರೋಗ್ಯ ಇಲಾಖೆ ಕಟ್ಟಡದಲ್ಲಿ ಕಾರ್ಯಾಚರಿಸುತ್ತಿರುವ ಮಹಿಳಾ ಸರಕಾರಿ ಪ್ರಥಮ ದರ್ಜೆ ಕಾಲೇಜ್
ಧೂಳಿನ ಸಮಸ್ಯೆಯ ವಿರುದ್ಧ ಬೀದಿಗಿಳಿದ ವಿದ್ಯಾರ್ಥಿನಿಯರು

ಪುತ್ತೂರು: ಹಾಲಿ ಪುತ್ತೂರು ಮಹಿಳಾ ಸರಕಾರಿ ಪ್ರಥಮ ದರ್ಜೆ ಕಾಲೇಜ್ ಕಾರ್ಯ ನಿರ್ವಹಿಸುತ್ತಿರುವ ಆರೋಗ್ಯ ಇಲಾಖೆಯ ಕಟ್ಟಡದಲ್ಲಿ ಕಾಮಗಾರಿ ನಡೆಸುತ್ತಿರುವುದರಿಂದ ಬರುತ್ತಿರುವ ಧೂಳಿನ ಸಮಸ್ಯೆ, ಅವ್ಯವಸ್ಥೆ ವಿರುದ್ಧ ವಿದ್ಯಾರ್ಥಿನಿಯರು ತರಗತಿ ತೊರೆದು ರಸ್ತೆಯಲ್ಲಿ ಕುಳಿತು ಪ್ರತಿಭಟಿಸಿದ ಘಟನೆ ಸೋಮವಾರ ನಡೆದಿದೆ.

ಕಾಲೇಜ್ ಸಂಪರ್ಕ ರಸ್ತೆಯಲ್ಲಿ ನೂರಾರು ವಿದ್ಯಾರ್ಥಿನಿಯರು ಧರಣಿ ಕುಳಿತು ತಮಗಾಗುತ್ತಿರುವ ಅನ್ಯಾಯದ ವಿರುದ್ಧ ಘೋಷಣೆ ಕೂಗಿದರು. ನ್ಯಾಯ ಸಿಗದಿದ್ದರೆ ರಸ್ತೆ ಬಿಟ್ಟು ತೆರಳುವುದಿಲ್ಲ ಎಂದು ಪಟ್ಟು ಹಿಡಿದರು. ಸಮಸ್ಯೆಯ ಬಗ್ಗೆ ವಿದ್ಯಾರ್ಥಿನಿಯರಾದ ಚೈತನ್ಯ, ಭೂಮಿಕಾ, ಅರ್ಚನ ಮತ್ತಿತರರು ಮಾತನಾಡಿದರು.

ವಿದ್ಯಾರ್ಥಿನಿಯರ ಬಳಿ ಶಾಸಕ ಆಶೋಕ್ ಕುಮಾರ್ ರೈ ಆಗಮಿಸಿ ನೀವು ಪ್ರತಿಭಟನೆ ಮಾಡುವುದು ಸರಿ ಅಲ್ಲ, ನಿಮಗೆ ಹೊಸ ಕಟ್ಟಡಕ್ಕೆ ಅನುದಾನ ಕೊಡಿಸಿರುವುದು ನಾನೇ. ತರಗತಿಗೆ ಹೋಗಿ ಎಂದರು. ಸಮಸ್ಯೆಯನ್ನು ನನ್ನ ಗಮನಕ್ಕೆ ಏಕೆ ತಂದಿಲ್ಲ ಎಂದು ಪ್ರಾಂಶುಪಾಲರು, ಉಪನ್ಯಾಸಕರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿ ಐವನ್ ಫ್ರಾನ್ಸಿಸ್ ಲೋಬೋ ಅವರು ಶಾಸಕರಿಗೆ ಧೂಳಿನಿಂದ ವಿದ್ಯಾರ್ಥಿನಿಯರು ಆಸ್ಪತ್ರೆಗೆ ಸೇರಬೇಕಾದ ಪರಿಸ್ಥಿತಿ ಬಗ್ಗೆ ವಿವರಿಸಲು ಮುಂದಾದಾಗ ಶಾಸಕರು ಆಕ್ರೋಶ ವ್ಯಕ್ತಪಡಿಸಿದಲ್ಲದೇ, ಅವರ ವಿರುದ್ಧವೇ ಹರಿಹಾಯ್ದ ಘಟನೆ ನಡೆಯಿತು.



ಮಹಿಳಾ ಕಾಲೇಜಿಗೆ ಇರುವ ಕಟ್ಟಡದ ಒಂದು ಭಾಗದಲ್ಲಿ ಆಸ್ಪತ್ರೆಗೆ ಸಂಬಂಧಿಸಿದಂತೆ ಡಯಾಲಿಸಿಸ್ ಸೆಂಟರ್ ಸ್ಥಾಪನೆಗೆ ಕಟ್ಟಡ ನಿರ್ಮಾಣ ಕಾಮಗಾರಿ ನಡೆಯುತ್ತಿದೆ. ಕಳೆದ ಕೆಲ ತಿಂಗಳಿನಿಂದ ಈ ಕೆಲಸ ಪ್ರಗತಿಯಲ್ಲಿದ್ದು ಕಾಮಗಾರಿಯಿಂದ ಧೂಳು ತರಗತಿ ಕೊಠಡಿಯೊಳಗೆ ಬರುತ್ತಿದ್ದು ಇದರಿಂದ ವಿದ್ಯಾರ್ಥಿನಿಯರು ನಿರಂತರ ಆಸ್ಪತ್ರೆಗೆ ಹೋಗುತ್ತಿದ್ದಾರೆ. ನಮಗೆ ಉಸಿರಾಟ ಸಮಸ್ಯೆ ಉಂಟಾಗಿದೆ ಎಂದು ಪ್ರತಿಭಟನ ನಿರತ ವಿದ್ಯಾರ್ಥಿನಿಯರು ಶಾಸಕರ ಗಮನಕ್ಕೆ ತಂದರು.

ಈ ಬಗ್ಗೆ ನನ್ನ ಗಮನಕ್ಕೆ ನೀವು ತರಬೇಕಿತ್ತು, ಕಾಲೇಜಿನವರು ತಂದಿಲ್ಲ ಎಂದು ಶಾಸಕರು ಹೇಳಿದಾಗ ನಾವು ಮನವಿ ಕೊಟ್ಟಿದ್ದೇವೆ ಎಂದು ವಿದ್ಯಾರ್ಥಿನಿಯರು ಉತ್ತರಿಸಿದರು.

ಸತ್ಯವೇ ಹೇಳಿ ಸರ್...

2014ರಲ್ಲಿ ಕಾಲೇಜ್ ಪ್ರಾರಂಭವಾಗಿದ್ದು ವಿದ್ಯಾರ್ಥಿನಿಯರ ಸಂಖ್ಯೆ 500ಕ್ಕಿಂತ ಹೆಚ್ಚು ಇದೆ. ಇನ್ನೂ ಸಹ ಕಾಲೇಜಿಗೆ ನೂತನ ಕಟ್ಟಡ ನಿರ್ಮಾಣವಾಗಿಲ್ಲ. ನೂತನ ಕಟ್ಟಡವು ಆಗುತ್ತದೆ ಎಂದು ವರ್ಷಗಳಿಂದ ಕಾಯುತ್ತಲೇ ಇದ್ದೇವೆ ಎಂದು ವಿದ್ಯಾರ್ಥಿನಿಯರು ಆಕ್ರೋಶ ವ್ಯಕ್ತಪಡಿಸಿದರು. ಇದಕ್ಕೆ ಉತ್ತರಿಸಿದ ಶಾಸಕ ಆಶೋಕ್ ಕುಮಾರ್ ರೈ, ಮುಂದಿನ 45 ದಿನಗಳಲ್ಲಿ ಹೊಸ ಕಟ್ಟಡ ಉದ್ಘಾಟನೆ ಆಗಲಿದೆ. ಈಗ ಇರುವ ಧೂಳಿನ ಸಮಸ್ಯೆಯನ್ನು ಪರಿಹರಿಸುತ್ತೇವೆ ಎಂದರು. ಹೊಸ ಕಟ್ಟಡ ಉದ್ಘಾಟನೆ ಆಗುವುದು ಸತ್ಯವೇ, ಹೇಳಿ ಸರ್... ಎಂದು ಶಾಸಕರನ್ನೇ ವಿದ್ಯಾರ್ಥಿನಿಯರು ಮರು ಪ್ರಶ್ನಿಸಿದ ಘಟನೆ ನಡೆಯಿತು. ವಿದ್ಯಾರ್ಥಿನಿಯರ ಆಗ್ರಹದ ಮೇರೆಗೆ ತರಗತಿ ಕೊಠಡಿ ವೀಕ್ಷಿಸಿದ ಶಾಸಕರು ಗುತ್ತಿಗೆದಾರರಿಗೆ ಧೂಳಿನ ಸಮಸ್ಯೆ ಪರಿಹಾರಕ್ಕೆ ಕ್ರಮ ಕೈಗೊಳ್ಳುವಂತೆ ಸೂಚಿಸುತ್ತಿದ್ದ ನಡುವೆ ಶಾಸಕ ಅಶೋಕ್ ಕುಮಾರ್ ರೈ ಅವರು ಪ್ರಾಂಶುಪಾಲೆ ವೇದಶ್ರೀ ನಿಡ್ಯ ಅವರನ್ನು ಸಮಸ್ಯೆ ಬಂದಾಗ ನನ್ನ ಗಮನಕ್ಕೆ ತರಬೇಕು. ನೀವು ಇಲ್ಲಿ ಬಂದು ಸುಮ್ಮನೇ ಟೈಮ್ ವೇಸ್ಟ್ ಮಾಡುವುದು ಬೇಡ ಎಂದರು.

ಶಾಸಕರ ಆಪಾದನೆಗೆ ಮರು ಉತ್ತರ!

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಶಾಸಕ ಅಶೋಕ್ ಕುಮಾರ್ ರೈ, ವಿದ್ಯಾರ್ಥಿನಿಯರು ಪ್ರತಿಭಟನೆ ಮಾಡಿರುವುದರ ಬಗ್ಗೆ ಪ್ರಾಂಶುಪಾಲರಲ್ಲಿ ವಾಗ್ವಾದ ನಡೆಸಿದರು. ಈ ವೇಳೆ ಕಾಲೇಜ್ ಪ್ರಾಂಶುಪಾಲರು, ವಿಷಯದ ಗಂಭೀರತೆ ಅರಿಯದೆ ಆಪಾದನೆ ಮಾಡಿದ ಶಾಸಕರ ವಿರುದ್ಧ ಪ್ರತ್ಯುತ್ತರ ನೀಡಿ, ನೀವು ನೋಡಿ, ಅರಿತು ಮಾತನಾಡಬೇಕು. ಕಾಮಗಾರಿ ನಡೆಯುತ್ತಿರುವಾಗ ಧೂಳು ಬರುತ್ತದೆ ಅನ್ನುವ ಕಾಮನ್ ಸೆನ್ಸ್ ಬೇಕು. ಹಲವು ಬಾರಿ ನಿಮ್ಮಲ್ಲಿಗೆ ಬಂದು ಮನವಿ ನೀಡಿದ್ದೇವೆ. ಇಲ್ಲಿವರೆಗೂ ಮಹಿಳಾ ಕಾಲೇಜಿನ ಹೊಸ ಕಟ್ಟಡಕ್ಕೆ ಸ್ಥಳಾಂತರ ಮಾಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬೀದಿಯಲ್ಲಿ ಪ್ರತಿಭಟಿಸುವ ಸ್ಥಿತಿ

ಆರಂಭದಲ್ಲಿ ಪ್ರತಿಭಟನ ಸ್ಥಳಕ್ಕೆ ಮಾಜಿ ಶಾಸಕ ಸಂಜೀವ ಮಠಂದೂರು ಸಹಿತ ಬಿಜೆಪಿ ನಾಯಕರು ಆಗಮಿಸಿ ವಿದ್ಯಾರ್ಥಿನಿಯರ ಅಳಲು ಆಲಿಸಿದರು. ಸಂಜೀವ ಮಠಂದೂರು ಮಾತನಾಡಿ, ವಿದ್ಯಾರ್ಥಿನಿಯರು ಬೀದಿಯಲ್ಲಿ ಕುಳಿತುಕೊಳ್ಳಬೇಕಾದ ಸ್ಥಿತಿ ಪುತ್ತೂರಿನಲ್ಲಿ ಸೃಷ್ಟಿಯಾದದು ಇದೇ ಪ್ರಥಮ. ಐದು ಕೋಟಿ ದುಡ್ಡು ಬಂದು 5ನೇ ವರ್ಷ ಸಮೀಪಿಸಿದರೂ ಕಟ್ಟಡ ಇನ್ನೂ ಆಗಿಲ್ಲ, ರಾಜ್ಯ ಸರಕಾರದ ನಿರ್ಲಕ್ಷದಿಂದ ಈ ಪರಿಸ್ಥಿತಿ ಬಂದಿದೆ. ಶಾಸಕರು ಈ ಬಗ್ಗೆ ಏಕೆ ಗಮನ ಹರಿಸಿಲ್ಲ ಎಂದರಲ್ಲದೆ ವಿದ್ಯಾರ್ಥಿನಿಯರ ಹೋರಾಟಕ್ಕೆ ನಾವು ಪೂರ್ಣ ಬೆಂಬಲ ನೀಡುತ್ತೇವೆ ಎಂದರು.

ಪ್ರತಿಭಟನೆ ಹಿಂಪಡೆತ

ಮುಂದಿನ 45 ದಿನಗಳಲ್ಲಿ ಬೊಳುವಾರಿನ ಹೊಸ ಕಟ್ಟಡಕ್ಕೆ ಕಾಲೇಜ್ ಸ್ಥಳಾಂತರಕ್ಕೆ ಕ್ರಮ ಕೈಗೊಳ್ಳಲಾಗುವುದು. ಧೂಳಿನ ಸಮಸ್ಯೆ ಪರಿಹರಿಸಲು ಗುತ್ತಿಗೆದಾರರಿಗೆ ಸೂಚನೆ ನೀಡುತ್ತೇನೆ ಎಂದು ಶಾಸಕರು ಭರವಸೆ ನೀಡಿದ ಹಿನ್ನೆಲೆಯಲ್ಲಿ ಪ್ರತಿಭಟನೆಯನ್ನು ಹಿಂಪಡೆಯಲಾಯಿತು. ತಹಶೀಲ್ದಾರ್ ಎಸ್.ಬಿ. ಕೂಡಲಗಿ, ಡಿವೈಎಸ್ಪಿ ಪ್ರಮೋದ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಆವಳಿ ದೇವರು ಒಂದೇ ರಥದಲ್ಲಿ| ಶಿವರಾತ್ರಿ ಮರುದಿನ ರಥೋತ್ಸವ ವಿಶೇಷ
ಕುಕ್ಕೆ ದೇಗುಲದಲ್ಲಿ ಶಿವರಾತ್ರಿ ಚಿಕ್ಕರಥೋತ್ಸವ

ಸುಬ್ರಹ್ಮಣ್ಯ: ಕುಕ್ಕೆ ಸುಬ್ರಹ್ಮಣ್ಯದ ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಪೂರ್ವಶಿಷ್ಟ ಸಂಪ್ರದಾಯದ ಪ್ರಕಾರ ಕುಕ್ಕೆ ಸುಬ್ರಹ್ಮಣ್ಯ ದೇವರಿಗೆ ಮತ್ತು ಉಮಾಮಹೇಶ್ವರನಿಗೆ ಶಿವರಾತ್ರಿ ರಥೋತ್ಸವವು ಸೋಮವಾರ ಸಂಜೆ ನೆರವೇರಿತು. ಕುಕ್ಕೆಯಲ್ಲಿ ಶಿವರಾತ್ರಿ ರಥೋತ್ಸವವು ಶಿವರಾತ್ರಿಯ ಮರುದಿನ ನಡೆಯುವುದು ವಿಶೇಷ.



ಶಿವರಾತ್ರಿ ಮರುದಿನ ರಥೋತ್ಸವ

ಪ್ರಥಮವಾಗಿ ಒಂದೇ ಪಲ್ಲಕ್ಕಿಯಲ್ಲಿ ಕುಕ್ಕೆ ಸುಬ್ರಹ್ಮಣ್ಯ ಮತ್ತು ಉಮಾಮಹೇಶ್ವರ ದೇವರು ರಥಬೀದಿಗೆ ಬಂದು ರಥಾರೋಹಣರಾದರು. ಬಳಿಕ ತಳಿರು ತೋರಣಗಳಿಂದ ಅಲಂಕೃತವಾದ ಚಿಕ್ಕ ರಥದಲ್ಲಿ ಶಿವರಾತ್ರಿ ಉತ್ಸವವು ನೆರವೇರಿತು. ಎಲ್ಲಾ ದೇವಳಗಳಲ್ಲಿ ಶಿವರಾತ್ರಿ ದಿನ ಉತ್ಸವ ನೆರವೇರಿದರೆ ಕುಕ್ಕೆಯಲ್ಲಿ ಕುಕ್ಕೆ ಸುಬ್ರಹ್ಮಣ್ಯ ಮತ್ತು ಉಮಾಮಹೇಶ್ವರನಿಗೆ ಮರುದಿನ ರಥೋತ್ಸವ ನೆರವೇರುವುದು ವಿಶಿಷ್ಟವಾಗಿದೆ.

ಆವಳಿ ದೇವರಿಗೆ ಕಟ್ಟೆಪೂಜೆ

ಆವಳಿ ದೇವರುಗಳ ರಥಾರೋಹಣರಾದ ಬಳಿಕ ಭಕ್ತಾದಿಗಳ ಪರಾಕಿನೊಂದಿಗೆ ಆನೆ, ಬಿರುದಾವಳಿ, ಬ್ಯಾಂಡ್, ನಾದಸ್ವರ, ತವಿಲ್ ನಿನಾದಗಳೊಂದಿಗೆ ಶಿವರಾತ್ರಿ ರಥೋತ್ಸವ ನೆರವೇರಿತು. ಬಳಿಕ ವಾಸುಕಿ ಛತ್ರದ ಶಿವರಾತ್ರಿ ಕಟ್ಟೆಯಲ್ಲಿ ಕಟ್ಟೆಪೂಜೆ ನಡೆಯಿತು. ಏಕಕಾಲದಲ್ಲಿ ಕುಕ್ಕೆಸುಬ್ರಹ್ಮಣ್ಯ ದೇವರಿಗೆ ಮತ್ತು ಉಮಾಮಹೇಶ್ವರನಿಗೆ ಪೂಜೆ ನೆರವೇರಿತು. ರಥೋತ್ಸವದ ಬಳಿಕ ದೇವಳದಲ್ಲಿ ಡೋಲೋತ್ಸವ ಹಾಗೂ ಉಚ್ಚಾಲಪೂಜೆ ನೆರವೇರಿತು.

ಈ ಸಂದರ್ಭ ಶ್ರೀ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಎಸ್. ಇಂಜಾಡಿ, ಕಾರ್ಯ ನಿರ್ವಹಣಾಧಿಕಾರಿ ಅರವಿಂದ ಅಯ್ಯಪ್ಪ ಸುತಗುಂಡಿ, ಎಇಒ ಎಸ್. ಜೆ.ವೈ. ರಾಜ್, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಅಶೋಕ್ ನೆಕ್ರಾಜೆ, ಡಾ. ರಘು, ಅಜಿತ್ ಕುಮಾರ್, ಸೌಮ್ಯಾ ಭರತ್, ಲೀಲಾ ಮನಮೋಹನ್, ಪ್ರವೀಣ ರೈ ಮರುವಂಜ, ಅೀಕ್ಷಕ ಕೆ.ಎಂ. ಗೋಪಿನಾಥ್, ದೇವಳದ ಹೆಬ್ಬಾರ್ ಪ್ರಸನ್ನ ಭಟ್, ಪಾಟಾಳಿ ಲೋಕೇಶ್ ಎ.ಆರ್. ಮತ್ತಿತರರು ಉಪಸ್ಥಿತರಿದ್ದರು.

ಆವಳಿ ದೇವರಿಗೆ ಉತ್ಸವ

ಕುಕ್ಕೆ ದೇವಳದಲ್ಲಿ ಪೂರ್ವಶಿಷ್ಟ ಸಂಪ್ರದಾಯದ ಪ್ರಕಾರ ಭಾನುವಾರ ರಾತ್ರಿ ಶಿವರಾತ್ರಿ ಪ್ರಯುಕ್ತ ಕುಕ್ಕೆಸುಬ್ರಹ್ಮಣ್ಯ ದೇವರಿಗೆ ಮತ್ತು ಉಮಾಮಹೇಶ್ವರನಿಗೆ ಜೊತೆಯಾಗಿ ಪಾಲಕಿ ಮತ್ತು ಬಂಡಿ ಉತ್ಸವ ನೆರವೇರಿತು. ಹೊರಾಂಗಣ ಉತ್ಸವದ ಬಳಿಕ ಶ್ರೀ ದೇವಳದ ಒಳಾಂಗಣದಲ್ಲಿ ಒಂದೇ ತೊಟ್ಟಿಲಲ್ಲಿ ಅವಳಿ ದೇವರಿಗೆ ವಸಂತ ಪೂಜೆ ನಡೆದ ಬಳಿಕ ಪ್ರಸಾದ ವಿತರಣೆ ನೆರವೇರಿತು. ಶ್ರೀ ದೇವಳದ ಪ್ರಧಾನ ಅರ್ಚಕ ವೇದಮೂರ್ತಿ ಸೀತಾರಾಮ ಎಡಪಡಿತ್ತಾಯರು ವೈದಿಕ ವಿಧಿವಿಧಾನ ನೆರವೇರಿಸಿದರು. ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ಉಮಾಮಹೇಶ್ವರ ಸನ್ನಿಧಿಯಲ್ಲಿ ಮಹಾಶಿವರಾತ್ರಿಯಂದು ಹಗಲು ಏಕದಶರುದ್ರಾಭಿಷೇಕ ನಡೆಯಿತು.

ಎಸ್‌ಡಿಪಿಐ ವಿರೋಧ, ಸವಾಲುಗಳ ನಡುವೆ ಹಿಂದೂ ರಾಷ್ಟ್ರ ಜಾಗೃತಿ ಸಭೆ ಯಶಸ್ವಿ
ರಾಷ್ಟ್ರ, ಧರ್ಮ ರಕ್ಷಣೆಗೆ ಸಂಘಟಿತರಾಗಿ



ಪುತ್ತೂರು: ಲವ್ ಜಿಹಾದ್, ಮತಾಂತರ, ವಕ್ಫ್ ಕಾಯ್ದೆ ಮತ್ತು ದೇವಸ್ಥಾನಗಳ ಸರ್ಕಾರೀಕರಣದಂತಹ ಭೀಕರ ಆಪತ್ತುಗಳಿಂದ ಹಿಂದು ಸಮಾಜವನ್ನು ರಕ್ಷಿಸಲು ಭಾರತವನ್ನು ಸಂವಿಧಾನಬದ್ಧ 'ಹಿಂದೂ ರಾಷ್ಟ್ರ'ವನ್ನಾಗಿ ಘೋಷಿಸುವುದೇ ಏಕೈಕಪರ್ಯಾಯವಾಗಿದೆಎಂದು ಹಿಂದೂ ಜನಜಾಗೃತಿ ಸಮಿತಿಯ ಸಮನ್ವಯಕ ವಿಜಯ ಕುಮಾರ್ ಹೇಳಿದರು.

ಪುತ್ತೂರಿನ ಕುಂಬ್ರದ ಶ್ರೀ ರಾಮ ಭಜನಾ ಮಂದಿರದಲ್ಲಿ ಆಯೋಜಿಸಲಾಗಿದ್ದ 'ಹಿಂದೂ ರಾಷ್ಟ್ರ ಜಾಗೃತಿ ಸಭೆ'ಯನ್ನು ಉದ್ದೇಶಿಸಿ ಅವರು ಮಾತನಾಡಿದರು. ಹಿಂದೂ ರಾಷ್ಟ್ರ ಎಂದರೆ ಸತ್ವಗುಣಿ ಸಾತ್ತ್ವಿಕ ಜನರ ರಾಷ್ಟ್ರವಾಗಿದೆ. ಇದನ್ನು ವಿರೋಧಿಸುವುದು ಮತಾಂಧರ ನಿತ್ಯದ ಕೆಲಸವಾಗಿದೆ. ಕಳೆದ 20 ವರ್ಷಗಳಿಂದ ಸಮಿತಿಯು 2000ಕ್ಕೂ ಹೆಚ್ಚು ಸಭೆಗಳ ಮೂಲಕ ಲಕ್ಷಾಂತರ ಜನರಲ್ಲಿ ಧರ್ಮ ಜಾಗೃತಿ ಮೂಡಿಸುತ್ತಿದ್ದು, ಛತ್ರಪತಿ ಶಿವಾಜಿ ಮಹಾರಾಜರ 'ಹಿಂದವಿ ಸ್ವರಾಜ್ಯ'ದ ಸಂಕಲ್ಪದೊಂದಿಗೆ ಪ್ರತಿಯೊಬ್ಬ ಹಿಂದು ಪ್ರತಿದಿನ ಒಂದು ಗಂಟೆ ಧರ್ಮ ಕಾರ್ಯಕ್ಕಾಗಿ ಸಮಯ ಮೀಸಲಿಡಬೇಕು ಎಂದು ಕರೆ ನೀಡಿದರು.

ಸನಾತನ ಸಂಸ್ಥೆಯ ಡಾ. ವಿನಯ್ ಮಾರ್ಗದರ್ಶನ ನೀಡಿ, 'ಯತೋ ಧರ್ಮಸ್ತತೋ ಜಯಃ' ಎಂಬಂತೆ ಎಲ್ಲಿ ಧರ್ಮವಿರುತ್ತದೆಯೋ ಅಲ್ಲಿ ಜಯ ನಿಶ್ಚಿತ. ಕೇವಲ ಜನ್ಮತಃ ಹಿಂದು ಎಂದು ಕರೆಸಿಕೊಳ್ಳುವುದಕ್ಕಿಂತ ನಮ್ಮ ಪ್ರತಿಯೊಂದು ಕೃತಿ ಮತ್ತು ಆಚರಣೆಗಳಲ್ಲಿ ಹಿಂದುತ್ವ ಪ್ರತಿಫಲಿಸಬೇಕು. ಪಾಶ್ಚಾತ್ಯ ಅಂಧಾನುಕರಣೆ ಬಿಟ್ಟು ಶಾಸ್ತ್ರಬದ್ಧವಾಗಿ ಧರ್ಮಾಚರಣೆ ಮಾಡಿದಾಗ ಮಾತ್ರ ಆತ್ಮಬಲ ವೃದ್ಧಿಯಾಗಿ ಸಂಸ್ಕೃತಿ ಉಳಿಯಲು ಸಾಧ್ಯ. ಸಂಸ್ಕೃತಿಯನ್ನು ಮರೆತ ಸಮಾಜಕ್ಕೆ ಭವಿಷ್ಯವಿಲ್ಲ. ಆದ್ದರಿಂದ ಪ್ರತಿಯೊಂದು ಹಬ್ಬ ಮತ್ತು ಸಂಪ್ರದಾಯಗಳ ಹಿಂದಿರುವ ವೈಜ್ಞಾನಿಕ ಧರ್ಮಶಾಸ್ತ್ರವನ್ನು ಅರಿತು ಶ್ರದ್ಧೆಯಿಂದ ಆಚರಿಸುವ ಮೂಲಕ ಕರ್ಮನಿಷ್ಠ ಹಿಂದುಗಳಾಗೋಣ ಎಂದರು.

ಪುತ್ತೂರಿನ ಖ್ಯಾತ ವಕೀಲ ಗಿರೀಶ್ ಮಾತನಾಡಿ, ಹಿಂದೂಗಳ ಹಿತ ಕಾಪಾಡುವ ಹಿಂದು ರಾಷ್ಟ್ರ ಸ್ಥಾಪನೆಯೇ ಅಂತಿಮ ಪರಿಹಾರ. ನಾವು ಸ್ವತಃ ಧರ್ಮಾಚರಣೆ ಮಾಡಿ ಆತ್ಮಬಲ ಗಳಿಸಿದರೆ ಮಾತ್ರ ಸಮಾಜಕ್ಕೆ ಮಾರ್ಗದರ್ಶನ ನೀಡಲು ಸಾಧ್ಯ ಎಂದರು. ಡಾ. ಪ್ರಕಾಶ್ ಪಾಟೀಲ್ ಪ್ರಸ್ತಾವನೆಗೈದರು. ಲಾವಣ್ಯ ನಿರ್ವಹಿಸಿದರು.

ಅಡೆತಡೆ ಮೆಟ್ಟಿ ನಿಂತ ಸಭೆ

ಹಿಂದೂ ರಾಷ್ಟ್ರ ಜಾಗೃತಿ ಸಭೆ ನಿಲ್ಲಿಸಲು ಎಸ್‌ಡಿಪಿಐ ಸಂಘಟನೆ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ ತೀವ್ರ ವಿರೋಧ ವ್ಯಕ್ತಪಡಿಸಿತ್ತು. ಮತಾಂಧರ ಇಂತಹ ಸತತ ಅಡೆತಡೆ ಮತ್ತು ಸವಾಲಿನ ನಡುವೆಯೂ, ಪೊಲೀಸರ ಬಿಗಿ ಬಂದೋಬಸ್ತ್‌ನಲ್ಲಿ ಧರ್ಮಪ್ರೇಮಿಗಳು ಸಂಘಟಿತರಾಗುವ ಮೂಲಕ ಸಭೆ ಯಶಸ್ವಿಯಾಗಿ ಸಂಪನ್ನಗೊಂಡಿತು.

ಉಪ್ಪಿನಂಗಡಿ: 1ನೇ ಮಖೆ ಕೂಟ, ರಥೋತ್ಸವ

ಉಪ್ಪಿನಂಗಡಿ: ಪುರಾಣ ಪ್ರಸಿದ್ಧ ಇಲ್ಲಿನ ಸಹಸ್ರಲಿಂಗೇಶ್ವರ ಮಹಾಕಾಳಿ ದೇವಾಲಯದಲ್ಲಿ 1ನೇ ಮಖೆ ಜಾತ್ರೆಯಾಗಿ ಮಹಾಶಿವರಾತ್ರಿ ಮಖೆ ಜಾತ್ರೆಯು ಭಕ್ತಿ ಸಡಗರದೊಂದಿಗೆ ಫೆ.15ರಂದು ರಾತ್ರಿ ನಡೆಯಿತು.

ವೇದಮೂರ್ತಿ ಕೆಮ್ಮಿಂಜೆ ನಾಗೇಶ್ ತಂತ್ರಿಗಳ ನೇತೃತ್ವದಲ್ಲಿ ದೇವಳದಲ್ಲಿ ರುದ್ರಪಾರಾಯಣ, ಬಲಿ ಹೊರಟು ಉತ್ಸವ, ಮಹಾಪೂಜೆ ನಡೆಯಿತು.

ಫೆ.16ರಂದು ನಸುಕಿನಿಂದಲೇ ನದಿ ಸಂಗಮ ಸ್ಥಳದಲ್ಲಿ ಮಖೆ ತೀರ್ಥ ಸ್ನಾನವು ಸಾವಿರಾರು ಭಕ್ತಾದಿಗಳಿಂದ ನಡೆಯಿತು. ಶ್ರೀ ದೇವರು ಬಳಿಕ ಬಲಿ ಹೊರಟು ರಥ ಬೀದಿಯಲ್ಲಿ ಹಗಲು ರಥೋತ್ಸವವು ನಡೆಯಿತು. ಆ ಬಳಿಕ ಉತ್ಸವ, ದರ್ಶನ ಬಲಿ, ಬಟ್ಟಲು ಕಾಣಿಕೆ, ಮಹಾಪೂಜೆಯಾಗಿ ಪಿಡಬ್ಲ್ಯುಡಿ ಗುತ್ತಿಗೆದಾರ, ದೇವಳದ ವ್ಯವಸ್ಥಾಪನಾಸಮಿತಿಯ ಅಧ್ಯಕ್ಷ ಕೆ. ರಾಧಾಕೃಷ್ಣ ನ್ಯಾಕ್ ಸೇವಾರ್ಥ ಅನ್ನ ಸಂತರ್ಪಣೆ ನಡೆಯಿತು. ದೇವಾಲಯದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ರಾಧಾಕೃಷ್ಣ ನ್ಯಾಕ್, ಸಮಿತಿ ಸದಸ್ಯರಾದ ಹರೀಶ್ ಉಪಾಧ್ಯಾಯ, ಸೋಮನಾಥ, ಡಾ. ರಮ್ಯಾ ರಾಜಾರಾಮ್, ಅನಿತಾ ಕೇಶವ ಗೌಡ, ಗೋಪಾಲಕೃಷ್ಣ ರೈ, ಜಿ. ಕೃಷ್ಣ ರಾವ್ ಆರ್ತಿಲ, ದೇವಿದಾಸ್ ರೈ, ಎಂ. ವೆಂಕಪ್ಪ ಪೂಜಾರಿ, ದೇವಳದ ಕಾರ್ಯ ನಿರ್ವಹಣಾಕಾರಿ ಕವಿತ ಎಂ., ವ್ಯವಸ್ಥಾಪಕ ವೆಂಕಟೇಶ್ ರಾವ್, ಸಿಬ್ಬಂದಿ ಕೃಷ್ಣ ಪ್ರಸಾದ್ ಬಡಿಲ, ದಿವಾಕರ, ಪದ್ಮನಾಭ ವಿವಿಧ ಕಾರ್ಯಕ್ರಮಗಳನ್ನು ನಿರ್ವಹಿಸಿದರು. ವ್ಯವಸ್ಥಾಪನಾ ಸಮಿತಿ ಮಾಜಿ ಅಧ್ಯಕ್ಷ ಕರುಣಾಕರ ಸುವರ್ಣ, ಮಾಜಿ ಸದಸ್ಯರಾದ ಡಾ. ರಾಜಾರಾಮ ಕೆ.ಬಿ., ಕಂಗ್ವೆ ವಿಶ್ವನಾಥ ಶೆಟ್ಟಿ, ಹರಿರಾಮಚಂದ್ರ, ಉಷಾಚಂದ್ರ ಮುಳಿಯ, ಸುಂದರ ಗೌಡ, ಜ್ಯೋತಿ ಹೇರಂಭ ಶಾಸ್ತ್ರಿ ಪ್ರಮುಖರಾದ ಅರುಣ್ ಕುಮಾರ್ ಪುತ್ತಿಲ, ರಾಮಚಂದ್ರ ಮಣಿಯಾಣಿ ವಿದ್ಯಾಧರ ಜೈನ್, ಸುಧಾಕರ ಶೆಟ್ಟಿ, ಪ್ರಶಾಂತ್ ನೆಕ್ಕಿಲಾಡಿ, ಕೈಲಾರ್ ರಾಜಗೋಪಾಲ ಭಟ್, ಗೋಪಾಲ ಹೆಗ್ಡೆ, ಕೃಷ್ಣರಾಜ್, ತಿಮ್ಮಪ್ಪ ಗೌಡ, ಲಕ್ಷ್ಮೀಶ ನಾಯ್ಕ್, ಯು. ರಾಮ, ಲೋಕಾಯುಕ್ತ ಎಸ್ಪಿ ಸಿಎ ಸೈಮನ್ ಮತ್ತಿತರರು ಭಾಗವಹಿಸಿದ್ದರು.




ಮಹಾಶಿವರಾತ್ರಿ ಪ್ರಯುಕ್ತ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಳದಲ್ಲಿ ರಾತ್ರಿ ಶ್ರೀದೇವರ ಮಹಾಪೂಜೆ ಬಳಿಕ ಉತ್ಸವ ಬಲಿ, ಕಟ್ಟೆ ಪೂಜೆ, ಚಂದ್ರಮಂಡಲ ರಥೋತ್ಸವ, ಕೆರೆಯಲ್ಲಿ ಆಯನ ಸಾವಿರಾರು ಭಕ್ತರ ಸಮ್ಮುಖದಲ್ಲಿ ನಡೆಯಿತು. ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಈಶ್ವರ ಭಟ್ ಪಂಜಿಗುಡ್ಡೆ, ಕಾರ್ಯ ನಿರ್ವಹಣಾಧಿಕಾರಿ ಶ್ರೀನಿವಾಸ್ ಪಾಲ್ಗೊಂಡರು.

ಶಾರದಾ ವಿದ್ಯಾನಿಕೇತನ ಪದವಿಪೂರ್ವ ಕಾಲೇಜಿನಲ್ಲಿ ಮಾತೃ ಪಿತೃ ವಂದನ ಹಾಗೂ ಜ್ಯೋತಿಪ್ರದಾನ ಸಮಾರಂಭ
ಸಾಧಕ ವಿದ್ಯಾರ್ಥಿಗಳಿಗೆ ಪುರಸ್ಕಾರ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪಾರಿತೋಷಕ

ಮಂಗಳೂರು: ಶಾರದಾ ವಿದ್ಯಾನಿಕೇತನ ಪದವಿಪೂರ್ವ ಕಾಲೇಜಿನ ದೇವಿನಗರ, ತಲಪಾಡಿಯ ಭೂ ವರಾಹ ಸಭಾಂಗಣದಲ್ಲಿ 'ಮಾತೃ ಪಿತೃ ವಂದನ ಹಾಗೂ ಜ್ಯೋತಿಪ್ರದಾನ' ಕಾರ್ಯಕ್ರಮವು ಅತ್ಯಂತ ಭಾವನಾತ್ಮಕವಾಗಿ ಮತ್ತು ವೈಭವದಿಂದ ನಡೆಯಿತು. ಕಾರ್ಯಕ್ರಮವನ್ನು ಸಂಸ್ಥೆಯ ಅಧ್ಯಕ್ಷ ಪ್ರೊಫೆಸರ್ ಡಾ. ಎಂ.ಬಿ. ಪುರಾಣಿಕ್ ಅವರು ಉದ್ಘಾಟಿಸಿದರು. ಸಂಸ್ಥೆಯ ನಿರ್ದೇಶಕ ಸಮೀರ್ ಪುರಾಣಿಕ್ ಉಪಸ್ಥಿತರಿದ್ದು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಶಾರದಾ ರೆಸಿಡೆನ್ಶಿಯಲ್ ಸ್ಕೂಲಿನ ಪ್ರಾಂಶುಪಾಲೆ ಸುಷ್ಮಾ ದಿನ್ಕರ್, ಶಾರದಾ ಡೇ ಬೋರ್ಡಿಂಗ್ ಸ್ಕೂಲಿನ ಪ್ರಾಂಶುಪಾಲ ಮೋಹನದಾಸ್, ಶಾರದಾ ಡಿಗ್ರಿ ಕಾಲೇಜಿನ ಪ್ರಾಂಶುಪಾಲೆ ಮೀನಾ ಪಣಿಕ್ಕರ್ ಕಾರ್ಯಕ್ರಮದಲ್ಲಿ ಭಾಗವಹಿಸಿದರು.



ಆಡ್ಮಿನಿಸ್ಟ್ರೇಷನ್ ಮ್ಯಾನೇಜರ್ ಪ್ರಫುಲ್ ಕುಮಾರ್ ಮತ್ತು ಆಡ್ಮಿಶನ್ ಮ್ಯಾನೇಜರ್ ವಿವೇಕ್ ತಂತ್ರಿ ಉಪಸ್ಥಿತರಿದ್ದರು. ಅಕ್ಷತಾ ಪ್ರಾರ್ಥನೆ ಹಾಡಿದರು. ಪ್ರಾಂಶುಪಾಲೆ ವಿನಾಯಕ್ ಬಿ.ಜಿ. ಸ್ವಾಗತಿಸಿದರು. ಉಪಪ್ರಾಂಶುಪಾಲ ಸುರೇಶ್ ಭಟ್ ವಂದಿಸಿದರು. ಸಂಸ್ಕೃತ ಉಪನ್ಯಾಸಕ ಶುಭಕರ್ ಮಾತೃ ಪಿತೃ ವಂದನ ಕಾರ್ಯಕ್ರಮವನ್ನು ಹಾಗೂ ಕನ್ನಡ ಉಪನ್ಯಾಸಕ ಸುರೇಶ್ ರಾವ್ ಅವರು ಜ್ಯೋತಿಪ್ರದಾನ ಕಾರ್ಯಕ್ರಮವನ್ನು ಸಮರ್ಪಕವಾಗಿ ನಡೆಸಿಕೊಟ್ಟರು.

ರೋಮಾಂಚನ ಉಂಟು ಮಾಡಿದ ಕಾರ್ಯಕ್ರಮ

ಮಾತೃ ಪಿತೃ ವಂದನ ಕಾರ್ಯಕ್ರಮವು ವಿದ್ಯಾರ್ಥಿಗಳ ಹಾಗೂ ಪೋಷಕರ ಹೃದಯಗಳನ್ನು ಸ್ಪರ್ಶಿಸಿದ ದೃಶ್ಯವಾಗಿತ್ತು. ತಾಯಿಯ ಮಡಿಲಲ್ಲಿ, ತಂದೆಯ ತೋಳುಗಳಲ್ಲಿ ಆಸರೆಯಾದ ವಿದ್ಯಾರ್ಥಿಗಳ ನಿಟ್ಟುಸಿರು ಸಾರ್ಥಕತೆಯನ್ನು ಹೊರಹೊಮ್ಮಿಸಿದ ಕ್ಷಣಗಳು ಎಲ್ಲರಿಗೂ ರೋಮಾಂಚನ ಉಂಟು ಮಾಡುವಂತಿತ್ತು. ಈ ಭಾವನಾತ್ಮಕ ಕ್ಷಣಗಳು ಸಭಾಂಗಣದ ವಾತಾವರಣವನ್ನು ಕಂಗೊಳಿಸಿದವು.

ಅನಂತರ ನಡೆದ ವೇದಿಕಾ ಕಾರ್ಯಕ್ರಮದಲ್ಲಿ 2025–26ನೇ ಶೈಕ್ಷಣಿಕ ಸಾಲಿನಲ್ಲಿ ಶೈಕ್ಷಣಿಕ ಹಾಗೂ ಇತರ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ವಿದ್ಯಾಸಂಸ್ಥೆಯ ಕೀರ್ತಿಯನ್ನು ಹೆಚ್ಚಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪಾರಿತೋಷಕ ನೀಡಿ ಸನ್ಮಾನಿಸಲಾಯಿತು.

ಹಿರಿಯರು ಹಚ್ಚಿದ ಜ್ಞಾನದೀಪದಿಂದ ಕಿರಿಯರು ತಮ್ಮ ಜೀವನದ ದೀಪವನ್ನು ಹಚ್ಚಿ ಲೋಕವನ್ನು ಬೆಳಗುವ ಸಂಕೇತವಾಗಿ ಜ್ಯೋತಿಪ್ರದಾನ ಕಾರ್ಯಕ್ರಮ ಜರುಗಿತು. ವಿದ್ಯಾರ್ಥಿಗಳು ತಮ್ಮ ಪೋಷಕರೊಂದಿಗೆ ಸೇರಿ ಹಿರಿದೀಪದಿಂದ ತಮ್ಮ ಕೈಯಲ್ಲಿದ್ದ ಹಣತೆಯನ್ನು ಹಚ್ಚಿ, ಸುಂದರವಾಗಿ ಅಲಂಕರಿಸಲ್ಪಟ್ಟ ರಂಗೋಲಿಯಲ್ಲಿ ಅವುಗಳನ್ನು ಸಜ್ಜುಗೊಳಿಸಿ ಬೆಳಕಿನ ಕಳೆಯನ್ನು ಹರಡಿದರು. ಈ ದೃಶ್ಯ ಎಲ್ಲರ ಮನದಲ್ಲಿ ಅಮರವಾಗುವಂತಿತ್ತು.

ಕುತ್ತಾರು ರಾಜರಾಜೇಶ್ವರಿ ಸಿದ್ಧಿವಿನಾಯಕ ಕ್ಷೇತ್ರದಲ್ಲಿ ಸನಾತನ ಹಿಂದೂ ಸೇವಾ ಪ್ರತಿಷ್ಠಾನ ಉದ್ಘಾಟನೆ
ವಂದೇಮಾತರಂ ಗೀತೆ ಪೂರ್ಣ ಹಾಡಿ ಹಿಂದುತ್ವದ ಕೆಚ್ಚು ಹೆಚ್ಚಿಸೋಣ

ಉಳ್ಳಾಲ: ಇತ್ತೀಚಿಗಷ್ಟೆ ಕೇಂದ್ರ ಸರಕಾರವು ವಂದೇ ಮಾತರಂ ಗೀತೆಗೆ ಸಲ್ಲಬೇಕಾದ ನಿಜವಾದ ಸ್ಥಾನ ಮಾನ ಮತ್ತೆ ಕಲ್ಪಿಸಿ ಕೊಟ್ಟಿದೆ. ಎಲ್ಲಾ ಕಾರ್ಯಕ್ರಮಗಳಲ್ಲೂ ವಂದೇ ಮಾತರಂ ಗೀತೆಯನ್ನ ಪೂರ್ತಿಯಾಗಿ ಹಾಡುವ ಮೂಲಕ ನಾವೆಲ್ಲರೂ ಹೊಸ ಚೈತನ್ಯದೊಂದಿಗೆ ಹಿಂದುತ್ವದ ಕೆಚ್ಚು ಹೆಚ್ಚಿಸಬೇಕಿದೆ. ಸೇವಾ ಚಟುವಟಿಕೆ, ಯುವಕ, ಯುವತಿಯರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಹಿರಿಯರು ಸೇರಿ ಈ ಭಾಗದ ಅವಶ್ಯಕತೆ ಮನಗಂಡು ಸನಾತನ ಹಿಂದೂ ಸೇವಾ ಪ್ರತಿಷ್ಠಾನವೆಂಬ ನೂತನ ಸಂಘಟನೆ ಹುಟ್ಟು ಹಾಕಿದ್ದು ಬಹಳ ಸಂತಸದ ವಿಚಾರವಾಗಿದೆ ಎಂದು ಬೆಂಗಳೂರು ರಾಜಾಜಿನಗರದ ಶಾಸಕರು,ಮಾಜಿ ಸಚಿವರಾದ ಸುರೇಶ್ ಕುಮಾರ್ ಹೇಳಿದ್ದಾರೆ.

ಕುತ್ತಾರಿನ ಶ್ರೀ ರಾಜರಾಜೇಶ್ವರಿ ಸಿದ್ಧಿವಿನಾಯಕ ಕ್ಷೇತ್ರದ ದಿ.ಲೋಕಯ್ಯ ಗಟ್ಟಿ ವೇದಿಕೆಯಲ್ಲಿ ನೂತನವಾಗಿ ಅಸ್ತಿತ್ವಕ್ಕೆ ಬಂದ 'ಸನಾತನ ಹಿಂದೂ ಸೇವಾ ಪ್ರತಿಷ್ಠಾನ'ವನ್ನು ಭಾನುವಾರ ಉದ್ಘಾಟಿಸಿ ಅವರು ಮಾತನಾಡಿದರು. ನೂತನ ಸಂಘಟನೆಯ ಉದ್ದೇಶಗಳು ಹೆಚ್ಚು ಪ್ರಖರವಾಗಿ, ವಿಸ್ತಾರಗೊಂಡು



ಎಲ್ಲರ ಮನೆ,ಮನ ಮುಟ್ಟಬೇಕು.ಸನಾತನ ಹಿಂದೂ ಸೇವಾ ಪ್ರತಿಷ್ಠಾನದ ಮೂಲಕ ಕರಾವಳಿ ಭಾಗದಲ್ಲಿ ಹಿಂದೂ ಶಕ್ತಿ ಗಟ್ಟಿಗೊಳ್ಳಲೆಂದು ಆಶಿಸಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ದಕ್ಷಿಣ ಪ್ರಾಂತ ಸಹ ಕಾರ್ಯವಾಹಕರಾದ ಪಿ.ಎಸ್. ಪ್ರಕಾಶ್ ಅವರು ಸನಾತನ ಹಿಂದೂ ಸೇವಾ ಪ್ರತಿಷ್ಠಾನದ ಲಾಂಛನವನ್ನು ಲೋಕಾರ್ಪಣೆಗೊಳಿಸಿದರು.

ಎಂಭತ್ತು ವರುಷಗಳನ್ನು ಪೂರೈಸಿದ ಉಳ್ಳಾಲದ ಮಾಜಿ ಶಾಸಕರಾದ ಕೆ.ಜಯರಾಮ ಶೆಟ್ಟಿ ಅವರಿಗೆ ಪ್ರತಿಷ್ಠಾನದಿಂದ 'ಜಯರಾಮಾಭಿವಂದನೆ' ಸಲ್ಲಿಸಲಾಯಿತು.

ಮಾಜಿ ಸಂಸದರಾದ ನಳಿನ್ ಕುಮಾರ್ ಕಟೀಲು, ಜಾಗತಿಕ ಬಂಟರ ಸಂಘದ ಅಧ್ಯಕ್ಷರಾದ ಐಕಳ ಹರೀಶ್ ಶೆಟ್ಟಿ, ಕನ್ಯಾಕುಮಾರಿ ಕುಮಾರನ್ ಡೈವಲಪ್‌ಮೆಂಟ್ಸ್ ಪ್ರೈ.ಲಿ. ನಿರ್ದೇಶಕರಾದ ಅವಿನಾಶ್ ಕೆ.ಎಸ್., ಉದ್ಯಮಿಗಳಾದ ಅಶ್ವಿನ್ ಪುತ್ರನ್ ಬೋಳೂರು,ಹರೀಶ್ ಕುತ್ತಾರು,ಚಂದ್ರಶೇಖರ ಗಟ್ಟಿ ಗುಂಡ್ಯ, ಸಮಾಜ ಸೇವಕಿ ಪ್ರಫುಲ್ಲ ದೇವಾಡಿಗ ಮೊದಲಾದವರು ಉಪಸ್ಥಿತರಿದ್ದರು.

ಪ್ರತಿಷ್ಠಾನದ ಅಧ್ಯಕ್ಷರಾದ ಸುರೇಶ್ ಚೌಟ ಕಕ್ಕೆಮಜಲು ಸ್ವಾಗತಿಸಿ, ಸಂಚಾಲಕರಾದ ಪವಿತ್ರ ಕುಮಾರ್ ಗಟ್ಟಿ ಪ್ರಸ್ತಾವನೆಗೈದರು. ಡಾ.ಅರುಣ್ ಉಳ್ಳಾಲ್ ನಿರೂಪಿಸಿ, ಶಿವರಾಮ ಶೆಟ್ಟಿ ಕುಂಪಲ ವಂದಿಸಿದರು.

ಹಿಂದು ಶಕ್ತಿಯ ವರ್ಧನೆ ಆಗಬೇಕಿದೆ

ಉಳ್ಳಾಲ ಭಾಗದಲ್ಲಿ ಹಿಂದೂಗಳು ಅಲ್ಪಸಂಖ್ಯಾತರಾಗುತ್ತಿರುವ ಸನ್ನಿವೇಶ ದಲ್ಲಿ, ಹಿಂದುಗಳ ಜನಸಂಖ್ಯೆಯಿಂದ ಹಿಡಿದು ಹಿಂದು ಶಕ್ತಿಯ ವರ್ಧನೆಯಾಗಬೇಕಿದೆ. ಆ ನಿಟ್ಟಿನಲ್ಲಿ ಸನಾತನ ಹಿಂದೂ ಸೇವಾ ಪ್ರತಿಷ್ಠಾನ ಕಾರ್ಯ ಪ್ರವೃತ್ತ ಗೊಳ್ಳಬೇಕಿದೆ. ಎರಡು ಸಾವಿರ ವರುಷದ ನಿರಂತರ ಪರಕೀಯರ ದಾಳಿಯ ಹೊರತಾಗಿ ಇಂದಿಗೂ ಸಾವಿಲ್ಲದೆ ಜೀವಂತವಾಗಿರುವ ಸನಾತನ ಹಿದು ಸಮಾಜ ನಮ್ಮದಾಗಿದೆ.

● ಪಿ.ಎಸ್.ಪ್ರಕಾಶ್

ಸಹಾಯಧನ ವಿತರಣೆ

ಚೆಂಬುಗುಡ್ಡೆಯ ಪ್ರತೀಕ್ಷ ,ಗಾಯತ್ರಿ ಕುಟುಂಬದ ಮನೆ ದುರಸ್ತಿ, ಪಾರ್ಶ್ವವಾಯು ಪೀಡಿತ ಅಂಬ್ಲಮೊಗರಿನ ಕುಮಾರನ್, ಕಿಡ್ನಿ ವೈಫಲ್ಯದಿಂದ ಬಳಲುತ್ತಿರುವ ಕೋಟೆಕಾರಿನ ಮಹೇಂದ್ರ ಆಚಾರ್ ,ಹುಟ್ಟು ಅಂಗವೈಕಲ್ಯದಿಂದ ಬಳಲುತ್ತಿರುವ ರತಿದೇವಿ ಕಕ್ಕೆಮಜಲು, ಹಿರಿಯ ಹಿಂದೂ ಕಾರ್ಯಕರ್ತ ತೇಜ್ ಪಾಲ್ ಅಮೀನ್ ಅವರಿಗೆ ಪ್ರತಿಷ್ಠಾನದ ವತಿಯಿಂದ ಸಹಾಯಧನ ವಿತರಿಸಲಾಯಿತು.

ಸನಾತನಾಭಿವಂದನೆ

ಹಿರಿಯ ಧರ್ಮ ಸೇವಾಳುಗಳಾದ ಡಾ.ಎಂ.ಬಿ ಪುರಾಣಿಕ್, ಪ್ರೊ.ಪಿ.ಅನಂತಕೃಷ್ಣ ಭಟ್,ಮಾಜಿ ಶಾಸಕಿ ಶಕುಂತಳಾ ಶೆಟ್ಟಿ,ಉಳ್ಳಾಲ ಶ್ರೀಕರ ಕಿಣಿ,ವೆಂಕಪ್ಪ ಮಾಸ್ಟರ್ ಅಸೈಗೋಳಿ, ಸೀತಾರಾಮ ಬಂಗೇರ ಕೊಲ್ಯ, ಬಾಬು ಶೆಟ್ಟಿ ಕುತ್ತಾರು,ಉಳ್ಳಾಲ ತೇಜ್ ಪಾಲ್ ಅಮೀನ್ ಪರವಾಗಿ ಅವರ ಧರ್ಮ ಪತ್ನಿಗೆ ಸನಾತನಾಭಿವಂದನೆ ಸಲ್ಲಿಸಿ ಗೌರವಿಸಲಾಯಿತು.

ಸುತ್ತಮುತ್ತ

ಇಂದು ತಣ್ಣೀರುಬಾವಿಯಲ್ಲಿ ರಾಸಾಯನಿಕ ಸೋರಿಕೆ ಅಣಕು ಪ್ರದರ್ಶನ

ಮಂಗಳೂರು: ಅಪಾಯಕಾರಿ ರಾಸಾಯನಿಕ ಘಟಕಗಳಲ್ಲಿ ಅಪಘಾತಗಳ ನಿರ್ವಹಣೆ ಕುರಿತು ಅಣಕುಪ್ರದರ್ಶನ ಮಂಗಳವಾರ ತಣ್ಣೀರುಬಾವಿ ಐಎಂಸಿ ಘಟಕದಲ್ಲಿ ನಡೆಯಲಿದೆ. ಈ ಕುರಿತು ಪೂರ್ವಸಿದ್ಧತಾ ಸಭೆ ಸೋಮವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಅಪರ ಜಿಲ್ಲಾಧಿಕಾರಿ ರಾಜು ಅಧ್ಯಕ್ಷತೆಯಲ್ಲಿ ನಡೆಯಿತು. ತೈಲ ಮತ್ತು ಅಪಾಯಕಾರಿ ರಾಸಾಯನಿಕ ಸಂಗ್ರಹಣಾ ಘಟಕಗ ಳಲ್ಲಿ ಅಪಘಾತಗಳ ನಿರ್ವಹಣೆಯನ್ನು ಬಲಗೊಳಿಸಿ, ಸಂಬಂಧಿಸಿದ ಕೈಗಾರಿಕಾ ಘಟಕಗಳು, ವಿವಿಧ ಸರಕಾರಿ ಇಲಾಖೆಗಳು ಹಾಗೂ ವಿವಿಧ ಭಾಗೀದಾರೀ ಸಂಸ್ಥೆಗಳ ನಡುವೆ ಸಮನ್ವಯತೆಗೊಳಿಸಲು ಈ ಅಣಕು ಪ್ರದರ್ಶನ ನಡೆಯಲಿದೆ ಎಂದು ಅಪರ ಜಿಲ್ಲಾಧಿಕಾರಿ ತಿಳಿಸಿದರು. ಸಭೆಯಲ್ಲಿ ಕಾರ್ಖಾನೆಗಳ ಉಪನಿರ್ದೇಶಕ ರಾಜೇಶ್ ಮಿಶ್ರಕೋಟಿ, ಎನ್.ಡಿ.ಆರ್.ಎಫ್. ಮುಖ್ಯಸ್ಥ ಅಜಯ್, ಜಿಲ್ಲಾ ವಿಪತ್ತು ನಿರ್ವಹಣಾಧಿಕಾರಿ ವಿಜಯ ಕುಮಾರ್ ಮತಿತರರು ಉಪಸ್ಥಿತರಿದ್ದರು.

ಎಂಡೋಸಲ್ಫಾನ್ ಸಂತ್ರಸ್ತರಿಗೆ ಆರೋಗ್ಯ ಶಿಬಿರ

ಮಂಗಳೂರು: ಜಿಲ್ಲೆಯಲ್ಲಿ ಎಂಡೋಸಲ್ಫಾನ್ ಸಂತ್ರಸ್ತರಿಗಾಗಿ ನಡೆಯಲಿರುವ ವಿಶೇಷ ಆರೋಗ್ಯ ತಪಾಸಣಾ ಶಿಬಿರಗಳನ್ನು ಜಿಲ್ಲೆಯ ಖಾಸಗಿ ವೈದ್ಯಕೀಯ ಕಾಲೇಜ್‌ಗಳ ಸಹಯೋಗದೊಂದಿಗೆ ವಿವಿಧ ತಾಲೂಕುಗಳಲ್ಲಿ ಹಮ್ಮಿಕೊಳ್ಳಲಾಗಿದೆ. ಫೆ. 17 ರಂದು ಬೆಳ್ತಂಗಡಿ ತಾಲೂಕಿನ ಕಣಿಯೂರು, ಪುತ್ತೂರು ತಾಲೂಕಿನ ಕೊಯಿಲ, ಉಪ್ಪಿನಂಗಡಿ, ಸುಳ್ಯ ತಾಲೂಕಿನ ಬೆಳ್ಳಾರೆ, 18 ರಂದು ಬೆಳ್ತಂಗಡಿ ತಾಲೂಕಿನ ಕೊಕ್ಕಡ ಹಾಗೂ ಫೆ.21 ರಂದು ಪುತ್ತೂರು ತಾಲೂಕಿನ ಪಾಣಾಜೆ ಆರೋಗ್ಯ ಕೇಂದ್ರಗಳಲ್ಲಿ ಏರ್ಪಡಿಸಲಾಗಿದೆ. ಈ ಶಿಬಿರದ ಸದುಪಯೋಗವನ್ನು ಎಂಡೋಸಲ್ಫಾನ್ ಸಂತ್ರಸ್ತರು ಪಡೆದುಕೊಳ್ಳುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫೆ.25: ಬಿಡಿಎಸ್‌ಪಿ ಜಾಗೃತಿ ಕಾರ್ಯಾಗಾರ

ಮಂಗಳೂರು: ಎಂ.ಎಸ್.ಎಂ.ಇ ಗಳ ಕಾರ್ಯಕ್ಷಮತೆ ಹೆಚ್ಚಿಸಲು ಮತ್ತು ವೇಗಗೊಳಿಸುವುದು ಯೋಜನೆಯಡಿ ಜಿಲ್ಲಾ ಕೈಗಾರಿಕಾ ಕೇಂದ್ರ, ಮಂಗಳೂರು ಹಾಗೂ ಟೆಕ್ಸಾಕ್ ಸಹಯೋಗದಲ್ಲಿ ಕೈಗಾರಿಕೋದ್ಯಮಿಗಳಲ್ಲಿ ಅರಿವು ಮೂಡಿಸುವ ಸಲುವಾಗಿ ಕಾರ್ಯಾಗಾರ ಆಯೋಜಿಸಲಾಗಿದೆ. ಫೆ.25 ರಂದು ಬೆಳಿಗ್ಗೆ 9.30ಕ್ಕೆ ಬಿಸಿನೆಸ್ ಡೆವೆಲಪ್ ಮೆಂಟ್ ಸರ್ವೀಸ್ ಪ್ರೊವೈಡರ್ಸ್ (ಬಿಡಿಎಸ್‌ಪಿ) ಕಾರ್ಯಾಗಾರವನ್ನು ನಗರದ ಕೊಡಿಯಾಲ್ ಬೈಲ್‌ನಲ್ಲಿರುವ ಎಸಿ ಕಾನ್ಫರೆನ್ಸ್ ಹಾಲ್, ಮೊದಲ ಮಹಡಿ, ಎಸ್‌ಡಿಎಂ ಕಾಲೇಜ್ ಆಫ್ ಬಿಸಿನೆಸ್ ಮ್ಯಾನೇಜ್ಮೆಂಟ್ ಪೋಸ್ಟ್ ಗ್ರಾಜುಯೇಟ್ ಸೆಂಟರ್ ಫಾರ್ ಮೆನೇಜ್‌ಮೆಂಟ್ ಸ್ಟಡೀಸ್ ಆಂಡ್ ರಿಸರ್ಚ್ ಇಲ್ಲಿ ಹಮ್ಮಿಕೊಳ್ಳಲಾಗಿದ್ದು, ಜಿಲ್ಲೆಯ ನೋಂದಾಯಿತ ಒಖಒಇ ಗಳು ಭಾಗವಹಿಬಹುದು. ಮಾಹಿತಿಗೆ ಜಿಲ್ಲಾ ಕೈಗಾರಿಕಾ ಕೇಂದ್ರ, ಮಂಗಳೂರು ದೂ.ಸಂ. ಸಂಯೋಜಕರಾದ ತನಯ್–8660613368, ಪ್ರೀತಿ–8867150101 ಸಂಪರ್ಕಿಸಬಹುದೆಂದು ಜಿಲ್ಲಾ ಕೈಗಾರಿಕಾ ಕೇಂದ್ರದ ನಿರ್ದೇಶಕರು ತಿಳಿಸಿದ್ದಾರೆ.

ಕಾಗುಣಿತ ಕಲಿಕೆಯಿಂದ ಮಕ್ಕಳ ಮನಸ್ಸು ಉತ್ತೇಜಿತ

ಕಾಸರಗೋಡು: ಮಕ್ಕಳ ಮನಸ್ಸಿನಲ್ಲಿ ಸೃಜನಶೀಲತೆ ಬೀಜಗಳನ್ನು ಬಿತ್ತುವ ಗುರಿ ಹೊಂದಿರುವ ಕಾಞಂಗಾಡು ನಗರಸಭೆಯ ಎರಡು ದಿನಗಳ ಸಾಹಿತ್ಯ ಶಿಬಿರ ವಕೋಳಿ – 2026 ಉದ್ಘಾಟಿಸ ಲಾಗಿದೆ. ನಗರಸಭೆಯ 2025–26ರ ಪೀಪಲ್ಸ್ ಪ್ಲಾನಿಂಗ್ ಯೋಜನೆಯ ಭಾಗವಾಗಿ ಆಯೋಜಿಸ ಲಾಗುತ್ತಿರುವ ಈ ಶಿಬಿರವನ್ನು ಖ್ಯಾತ ಬರಹಗಾರ ಇ.ಪಿ.ರಾಜಗೋಪಾಲನ್ ಅವರು ಹೊಸದುರ್ಗದ ಎ.ಸಿ.ಕಣ್ಣನ್ ನಾಯರ್ ಪಾರ್ಕ್‌ನಲ್ಲಿ ಶನಿವಾರ ಉದ್ಘಾಟಿಸಿದರು. ನಗರಸಭಾ ಅಧ್ಯಕ್ಷ ವಿ.ವಿ. ರಮೇಶನ್ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭ ಇ.ಪಿ.ರಾಜಗೋಪಾಲನ್ ಅವರನ್ನು ಸನ್ಮಾನಿಸ ಲಾಯಿತು. ಎರಡು ದಿನಗಳ ಈ ಶಿಬಿರದಲ್ಲಿ ವಾರ್ಡ್ ಗಳಲ್ಲಿರುವ ವಿವಿಧ ಸಾರ್ವಜನಿಕ ಶಾಲೆಗಳಿಂದ ಆಯ್ಕೆಯಾದ 57 ಮಂದಿ ವಿದ್ಯಾರ್ಥಿಗಳು ಭಾಗವಹಿಸುತ್ತಿದ್ದಾರೆ. ನಗರಸಭಾ ಉಪಾಧ್ಯಕ್ಷೆ ಲತಾ ಬಾಲಕೃಷ್ಣನ್, ನಗರಸಭಾ ಸದಸ್ಯರಾದ ಪಿ.ವಿ.ಚಂದ್ರನ್, ಎಂ.ಸೇತು, ಟಿ.ಕೆ. ಸವಿತಕುಮಾರಿ ಮತ್ತು ಎಂಇಸಿ ಕಾರ್ಯದರ್ಶಿ ಉಷಾ ವಡಕ್ಕಂಪತ್ ಮಾತನಾಡಿದರು. ಶಿಬಿರದ ನಿರ್ದೇಶಕ ಡಾ.ಕೆ.ವಿ.ಸಜೀವನ್ ಯೋಜನೆ ವಿವರಿಸಿದರು. ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷ ವಿಜಯನ್ ಮಣಕ್ಕಾಟ್ ಸ್ವಾಗತಿಸಿ, ಡಾ.ಎ.ವಿ.ಸುರೇಶ್ ಬಾಬು ವಂದಿಸಿದರು. ಕವಿ ಮತ್ತು ನಟಿ ಸಿ.ಪಿ.ಶುಭ, ಸೀತಾದೇವಿ ಕರಿಯಟ್ ಮತ್ತು ವಿ.ಎಂ.ಮೃದುಲ್ ಅವರು ಸೃಜನಶೀಲ ಸಂವಾದದಲ್ಲಿ ಭಾಗವಹಿಸಿದ್ದರು.

ತೊಕ್ಕೊಟ್ಟು ಕಾಪಿಕಾಡು ಉಮಾಮಹೇಶ್ವರೀ ಕ್ಷೇತ್ರದಲ್ಲಿ ಶಿವರಾತ್ರಿ ಜಾಗರಣೆ, ಶಿವ ಭಜನೆ



ಉಳ್ಳಾಲ: ಪತಂಜಲಿ ಯೋಗ ಶಿಕ್ಷಣ ಸಮಿತಿ ಉಳ್ಳಾಲ ನಗರದ ವತಿಯಿಂದ ಭಾನುವಾರ ತೊಕ್ಕೊಟ್ಟು ಕಾಪಿಕಾಡುವಿನ ಶ್ರೀ ಉಮಾಮಹೇಶ್ವರೀ ಕ್ಷೇತ್ರದಲ್ಲಿ ನಡೆದ ಶಿವರಾತ್ರಿ ಜಾಗರಣೆ ಹಾಗೂ ಯೋಗ ಶಿವ ನಮಸ್ಕಾರದ ಕಾರ್ಯಕ್ರಮವನ್ನು ಕ್ಷೇತ್ರದ ಆಡಳಿತ ಮೊಕ್ತೇಸರ ಎ.ಜೆ.ಶೇಖರ್ ಮತ್ತು ಪೂರ್ಣಿಮಾ ಶೇಖರ್ ದಂಪತಿ ದೀಪ ಪ್ರಜ್ವಲಿಸಿ ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಉಮಾಮಹೇಶ್ವರಿ ಕ್ಷೇತ್ರದ ಪ್ರಧಾನ ಅರ್ಚಕ ಪರಮೇಶ್ವರ ಜೋಶಿ, ಮೊಕ್ತೇಸರರಾದ ಡಾ.ಆರ್. ಕೆ.ಶೆಟ್ಟಿ,ಪತಂಜಲಿ ಯೋಗ ಶಿಕ್ಷಣ ಸಮಿತಿಯ ಜಿಲ್ಲಾ ಲೆಕ್ಕಪತ್ರ ಪ್ರಮುಖರಾದ ಸುಬ್ರಹ್ಮಣ್ಯ ಭಟ್,ನಗರ ಸಂಚಾಲಕರಾದ ಸುಂದರ ಉಳ್ಳಾಲ್, ಜಿಲ್ಲಾ ಸಂಘಟನಾ ಪ್ರಮುಖರಾದ ಗೀತಾ ವಿಜಯ್, ವಲಯ ಪ್ರಮುಖರಾದ ಜಯರಾಮ ಚೆಂಬುಗುಡ್ಡೆ, ನಗರ ಶಿಕ್ಷಣ ಪ್ರಮುಖರಾದ ವಸಂತ ಪಜೀರ್, ಪ್ರಶಾಂತ್ ಕಂಬಳಪದವು, ರವಿಶಂಕರ ಸೋಮೇಶ್ವರ, ಕ್ಷೇತ್ರದ ಆಡಳಿತ ಮಂಡಳಿ ಪ್ರಧಾನ ಕಾರ್ಯದರ್ಶಿ ಗಣೇಶ್ ಕಾಪಿಕಾಡು, ಪ್ರಮುಖರಾದ ಆನಂದ ಶೆಟ್ಟಿ ಭಾಸ್ಕರ್ ಗಟ್ಟಿ ಮೊದಲಾದವರು ಉಪಸ್ಥಿತರಿದ್ದರು.

ಶಿಲ್ಪಾ ತಲಪಾಡಿ ನಿರೂಪಿಸಿ,ಕಾರ್ಯಕ್ರಮ ಸಂಚಾಲಕರಾದ ಅವಿನಾಶ್ ವಂದಿಸಿದರು.

1008 ಪಂಚಾಕ್ಷರಿ ಜಪ ಪಠಣೆ

ಶಿವರಾತ್ರಿ ಜಾಗರಣೆಯ ಸಂದರ್ಭದಲ್ಲಿ ಶಿವ ಭಜನೆ, ಕುಣಿತ ಭಜನೆ, ಮೃತ್ಯುಂಜಯ ಜಪ ಪಠಣೆ,ಶಿವ ಅಷ್ಟೋತ್ತರ ಶತನಾಮಾನಿ ಪಠಣೆ, 1008 ಪಂಚಾಕ್ಷರಿ ಜಪ ಪಠಣೆ ನಡೆಯಿತು. ಮುಂಜಾನೆ 4 ರಿಂದ ಅಮೃತವಚನ, ಪಂಚಾಂಗ ಪಠಣ,ಅಗ್ನಿಹೋತ್ರ, ಗಣಪತಿ ನಮಸ್ಕಾರ, ನಾಲ್ಕು ಸುತ್ತು ಯೋಗ ಶಿವನಮಸ್ಕಾರ ಮತ್ತು ಅಮೃತಾಸನವನ್ನು ನಗರದ ವಿವಿಧ ಶಾಖೆಗಳ ಯೋಗ ಬಂಧುಗಳು ನಡೆಸಿಕೊಟ್ಟರು.

ರಸ್ತೆ ಕಾಮಗಾರಿಯಿಂದ ಟ್ರಾಫಿಕ್ ಜಾಮ್: ಕಂಕನಾಡಿ-ಪಂಪ್‌ವೆಲ್ ರಸ್ತೆ ಕಾಮಗಾರಿ ಶುರು

ಮಂಗಳೂರು: ಅಂತೂ ಕಂಕನಾಡಿಯಿಂದ ಪಂಪ್‌ವೆಲ್‌ವರೆಗಿನ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಕಾಲ ಕೂಡಿಬಂದಿದೆ. ಸೋಮವಾರದಿಂದ ಕಾಮಗಾರಿ ಆರಂಭವಾಗಿದ್ದು, ಈ ಕಾಮಗಾರಿ ಪೂರ್ಣಗೊಂಡಲ್ಲಿ ಈ ಭಾಗದಲ್ಲಿ ಟ್ರಾಫಿಕ್ ದಟ್ಟಣೆಗೆ ಕಡಿವಾಣ ಬೀಳಲಿದೆ. ರಸ್ತೆ ಕಾಮಗಾರಿ ಆರಂಭವಾಗಿದ್ದರಿಂದ ಸೋಮವಾರ ಟ್ರಾಫಿಕ್ ದಟ್ಟನೆ ಈ ಭಾಗದಲ್ಲಿ ಕಂಡು ಬಂತು. ಆದಷ್ಟು ಶೀಘ್ರ ಕಾಮಗಾರಿ ಮುಗಿದರೆ ಈ ಭಾಗದಲ್ಲಿ ವಾಹನ ಸಂಚಾರ ಸುಗಮವಾಗಲಿದೆ.



- ಇಲ್ಲಿ ಏಕಮುಖ ಸಂಚಾರಕ್ಕೆ ಮಾತ್ರ ಅವಕಾಶ
- ಬದಲಿ ಮಾರ್ಗವಾಗಿ ಪಂಪ್‌ವೆಲ್‌ನಿಂದ ಕಂಕನಾಡಿ ಹಳೆ ರಸ್ತೆ ಮೂಲಕ ಬರಲು ವ್ಯವಸ್ಥೆ
- 4 ತಿಂಗಳ ಕಾಲ ರಸ್ತೆ ಬಂದ್

ಏಕಮುಖ ಸಂಚಾರ

ಸದ್ಯ ಒಂದು ರಸ್ತೆಯನ್ನು ಬಂದ್ ಮಾಡಿ ಕಾಮಗಾರಿ ಆರಂಭಿಸಲಾಗಿದ್ದು, ಏಕಮುಖ ಸಂಚಾರಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ಬೆಂದೂರ್‌ವೆಲ್ ಕಡೆಯಿಂದ ಪಂಪ್‌ವೆಲ್‌ನತ್ತ ಸಾಗುವ ವಾಹನಗಳಿಗಷ್ಟೇ ಅವಕಾಶವಿದೆ. ಪಂಪ್‌ವೆಲ್‌ನಿಂದ ಕಂಕನಾಡಿ ಕಡೆಗೆ ಬರುವ ರಸ್ತೆಯ ಕಾಮಗಾರಿಯನ್ನು ಕೈಗೆತ್ತಿಕೊಂಡಿರುವುದರಿಂದ ಬದಲಿ ಮಾರ್ಗವಾಗಿ ಪಂಪ್‌ವೆಲ್‌ನಿಂದ ಕಂಕನಾಡಿ ಹಳೆ ರಸ್ತೆ ಮೂಲಕ ಬರಲು ವ್ಯವಸ್ಥೆ ಮಾಡಲಾಗಿದೆ.

ನಡೆಯಲಿದೆ ಅಭಿವೃದ್ಧಿ ಕಾಮಗಾರಿ

ಇನ್ನು ಈ ರಸ್ತೆಗಲು ಸುಮಾರು ನಾಲ್ಕು ತಿಂಗಳ ಕಾಲ ಬಂದ್ ಆಗುವ ಸಾಧ್ಯತೆ ಇದೆ. ಒಳಚರಂಡಿ, ನಾಲ್ಕು ಪಥದ ಕಾಂಕ್ರೀಟ್ ರಸ್ತೆ, ಬೀದಿ ದೀಪದೊಂದಿಗೆ ಡಿವೈಡರ್, ಮಳೆ ನೀರಿನ ಚರಂಡಿ, ಫುಟ್‌ಪಾತ್ ಸಹಿತ ಹಲವು ಅಭಿವೃದ್ಧಿ ಕಾಮಗಾರಿಗಳು ನಡೆಯಲಿವೆ. ಪಂಪ್‌ವೆಲ್ ವೃತ್ತದಿಂದ ಬೆಂದೂರ್‌ವೆಲ್ ಜಂಕ್ಷನ್‌ವರೆಗೆ ಸುಮಾರು 750 ಮೀಟರ್ ರಸ್ತೆಯ ಅಭಿವೃದ್ಧಿಯಾಗಲಿದೆ. ಕಂಕನಾಡಿ ಹಳೆ ರಸ್ತೆಯಲ್ಲಿ ಏಕಮುಖ ಸಂಚಾರಕ್ಕೆ ಮಾತ್ರ ಅವಕಾಶವನ್ನು ಕಲ್ಪಿಸಲಾಗಿದೆ. ಅಲ್ಲದೆ, ರಸ್ತೆ ಬದಿಯಲ್ಲಿ ವಾಹನ ಪಾರ್ಕಿಂಗ್‌ನ್ನು ನಿಷೇಧಿಸಲಾಗಿದೆ.

ಫೆ.19: ಔಷಧಿ ವ್ಯಾಪಾರಿಗಳ ಸಂಘದ 'ಫಾರ್ಮಾ ಭವನ' ಲೋಕಾರ್ಪಣೆ

ಮಡಿಕೇರಿ: ಕೊಡಗು ಜಿಲ್ಲಾ ಔಷಧ ವ್ಯಾಪಾರಿಗಳ ಸಂಘದಿಂದ ನಿರ್ಮಿಸಲಾದ ಫಾರ್ಮಾ ಭವನದ ಉದ್ಘಾಟನಾ ಕಾರ್ಯಕ್ರಮ ಫೆ.19 ರಂದು ಬೆಳಗ್ಗೆ 9.30 ಗಂಟೆಗೆ ನಗರದ ಚೈನ್'ಗೇಟ್ ಬಳಿ ನಡೆಯಲಿದೆ.

ಕರ್ನಾಟಕ ಔಷಧ ವ್ಯಾಪಾರಿಗಳ ಸಂಘದ ಅಧ್ಯಕ್ಷರಾ ಆರ್. ರಘುನಾಥ ರೆಡ್ಡಿ ಫಾರ್ಮಾ ಭವನವನ್ನು ಉದ್ಘಾಟಿಸಲಿದ್ದು, ಕೊಡಗು ಜಿಲ್ಲಾ ಔಷಧ ವ್ಯಾಪಾರಿಗಳ ಸಂಘದ ಅಧ್ಯಕ್ಷ ಅಂಬೆಕಲ್ ಜೀವನ್ ಕುಶಾಲಪ್ಪ ಅಧ್ಯಕ್ಷತೆಯಲ್ಲಿ ಆಯೋಜಿತ ಸಮಾರಂಭದಲ್ಲಿ ಮೈಸೂರು ಪ್ರಾದೇಶಿಕ ಔಷಧ ನಿಯಂತ್ರಕರ ಕಛೇರಿಯ ಉಪ ಆಯುಕ್ತ ಬಿ.ಪಿ. ಅರುಣ್, ಕೊಡಗು ಜಿಲ್ಲಾ ಸಹಾಯಕ ಔಷಧ ನಿಯಂತ್ರಕ ಅಜಯ್ ರಾಜ್ ಷಾ, ಕರ್ನಾಟಕ ಔಷಧ ವ್ಯಾಪಾರಿಗಳ ಸಂಘದ ಖಜಾಂಜಿ ಬಿ. ಉಮೇಶ್, ಸಂಘದ ರಾಜ್ಯ ಕಾನೂನು ಸಲಹೆ ಗಾರ ಕೆ.ಹರೀಶ್, ಕೊಡಗು ಜಿಲ್ಲಾ ಔಷಧಿ ವ್ಯಾಪಾರಿಗಳ ಸಂಘದ ಗೌರವ ಕಾರ್ಯದರ್ಶಿ ಡಿ.ಐ. ಪುರುಷೋತ್ತಮ್, ಉಪಾಧ್ಯಕ್ಷರಾದ ಅಂಬೆಕಲ್ ವಿನೋದ್, ಮರ್ವಿನ್



ಫೆರ್ನಾಂಡೀಸ್, ಜಂಟಿ ಕಾರ್ಯದರ್ಶಿ ಕೆ.ವಸಂತ್ ಕುಮಾರ್, ಖಜಾಂಚಿ ಪ್ರಸಾದ್ ಗೌಡ ಪಾಲ್ಗೊಳ್ಳಲಿದ್ದಾರೆ.

ಫಾರ್ಮಾ ಭವನದ ಲೋಕಾರ್ಪಣೆ ಸಂದರ್ಭ ಕೊಡಗಿನ ಹಿರಿಯ ಔಷಧಿ ವ್ಯಾಪಾರಿಗಳಾದ ಸಂದರ್ಶನ್ ರೈ ಕುಶಾಲನಗರದ ಶ್ರೀಪತಿ ಎಸ್.ಎಲ್., ಸುಂಟಿಕೊಪ್ಪದ ಕೆ. ಗೋಪಾಲ ಭಟ್, ನಾಪೋಕ್ಲುವಿನ ಎಂ.ಎಂ.ನರೇಂದ್ರ, ಸೋಮವಾರಪೇಟೆ ಮರ್ವಿನ್ ಫೆರ್ನಾಂಡೀಸ್, ಮಡಿಕೇರಿ ಅಂಬೆಕಲ್ ಕುಶಾಲಪ್ಪ ಶನಿವಾರ ಸಂತೆ ವೆಚ್.ಎಸ್. ಸುರೇಶ್, ಕೊಡ್ಲಿಪೇಟೆ ಎಸ್.ಎಸ್. ಶ್ರೀನಿವಾಸ್, ಗೋಣಿಕೊಪ್ಪಲುವಿನ ಎನ್.ಯು. ಭೀಮಯ್ಯ ಸಂಘದ ಪೂರ್ವಾಧ್ಯಕ್ಷ ಮಡಿಕೇರಿ ಜಿ.ಎಸ್. ಬಸವರಾಜ್ ಅವರನ್ನು ಸನ್ಮಾನಿಸಲಾಗುವುದೆಂದು ಕೊಡಗು ಔಷಧಿ ವ್ಯಾಪಾರಸ್ಥರ ಸಂಘದ ಪ್ರಕಟಣೆ ತಿಳಿಸಿದೆ.

ಫೆ.19ರಂದು ಛತ್ರಪತಿ ಶಿವಾಜಿ ಜಯಂತಿ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾಡಳಿತ, ಜಿ.ಪಂ., ಕನ್ನಡ –ಸಂಸ್ಕೃತಿ ಇಲಾಖೆ, ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ ಮತ್ತು ಆರ್ಯ ಯಾನೆ ಮರಾಠ ಸಮಾಜ ಸಂಘ ಮಂಗಳೂರು ಇವರ ಜಂಟಿ ಆಶ್ರಯದಲ್ಲಿ ಫೆ.19 ರಂದು ಬೆಳಿಗ್ಗೆ 10.30ಕ್ಕೆ ಕುದ್ಮುಲ್ ರಂಗರಾವ್ ಪುರಭವನದಲ್ಲಿ ಛತ್ರಪತಿ ಶಿವಾಜಿ ಜಯಂತಿ ಹಮ್ಮಿಕೊಳ್ಳಲಾಗಿದೆ. ಸ್ಪೀಕರ್ ಯು.ಟಿ ಖಾದರ್ ಉಪಸ್ಥಿತಿಯಲ್ಲಿ, ದ.ಕ.ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮಂಗಳೂರು ದಕ್ಷಿಣ ಶಾಸಕ ಡಿ. ವೇದವ್ಯಾಸ ಕಾಮತ್ ಅಧ್ಯಕ್ಷತೆ ವಹಿಸಲಿದ್ದಾರೆ.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಮರುಚಾಲನೆ: ಅಧಿಕಾರಿಗಳ ಜೊತೆ ಶಾಸಕರಿಂದ ಪರಿಶೀಲನೆ



ಮಂಗಳೂರು: ಹಲವು ಸಮಯದ ನಂತರ ನಗರದ ಪಂಪ್‌ವೆಲ್ ವೃತ್ತದಿಂದ ಕರಾವಳಿ ಜಂಕ್ಷನ್‌ವರೆಗಿನ ಚತುಷ್ಪಥ ರಸ್ತೆಯ ಅಭಿವೃದ್ಧಿ ಕಾಮಗಾರಿಗೆ ಮರುಚಾಲನೆ ದೊರೆತಿದ್ದು, ಲೋಕೋಪಯೋಗಿ ಇಲಾಖೆ, ಮಹಾನಗರ ಪಾಲಿಕೆ, ಮೆಸ್ಕಾಂ, ಕೆಯುಐಫ್‌ಡಿಸಿ, ಪೊಲೀಸ್ ಇಲಾಖೆ, ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಶಾಸಕ ವೇದವ್ಯಾಸ ಕಾಮತ್ ಅವರು ಸ್ಥಳ ಪರಿಶೀಲನೆ ನಡೆಸಿದರು.

ನಂತರ ಮಾತನಾಡಿದ ಶಾಸಕರು, ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಈ ರಸ್ತೆ ಅಭಿವೃದ್ಧಿ ಕಾಮಗಾರಿಗಾಗಿ ಸುಮಾರು 4 ಕೋಟಿ ರೂ. ಅನುದಾನ ಮಂಜೂರುಗೊಳಿಸಿ ಗುದ್ದಲಿ ಪೂಜೆ ನೆರವೇರಿಸಲಾಗಿತ್ತು. ಆದರೆ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಎಲ್ಲಾ ಕಾಮಗಾರಿಗಳಿಗೆ ತಡೆ ನೀಡಿದ್ದರಿಂದ ಇಲ್ಲಿನ ರಸ್ತೆಯ ಅಭಿವೃದ್ಧಿಗೆ ಹಿನ್ನಡೆಯಾಗಿತ್ತು. ಪರಿಣಾಮ ಜನರು ಅನುಭವಿಸುತ್ತಿದ್ದ ಸಮಸ್ಯೆ ಬಗ್ಗೆ ಲೋಕೋಪಯೋಗಿ ಇಲಾಖೆಯ ಸಚಿವ ಸತೀಶ್ ಜಾರಕಿಹೊಳಿ ಅವರನ್ನು ಭೇಟಿಯಾಗಿ ಹಲವು ಬಾರಿ ಮನವಿ ಮಾಡಿದ ಕಾರಣ ಇಂದು ಈ ಕಾಮಗಾರಿಗೆ ಮತ್ತೆ ಚಾಲನೆ ದೊರೆತಿದೆ ಎಂದರು.

ಈ ಸ್ಥಳವು ನಗರದ ಪ್ರಮುಖ ಭಾಗವಾಗಿದ್ದು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ, ಜವಾಬ್ದಾರಿಯಿಂದ ಕಾರ್ಯನಿರ್ವಹಿಸುವುದು ಅಗತ್ಯವಾಗಿದೆ.ಹಾಗಾಗಿ ಎಲ್ಲರನ್ನು ಸ್ಥಳಕ್ಕೆ ಕರೆಯಿಸಿ ಕಾಮಗಾರಿ ಬಗ್ಗೆ ಹಲವು ಸೂಚನೆ ನೀಡಲಾಗಿದೆ ಎಂದರು.

ಈ ವೇಳೆ ಪಾಲಿಕೆ ನಿ.ಪೂ. ಸದಸ್ಯ ಸಂದೀಪ್ ಗರೋಡಿ, ಅಧಿಕಾರಿಗಳಾದ, ಪ್ರೀತಂ, ಭವ್ಯ, ಹೇಮಂತ್, ಶರತ್ ಗೌಡ, ಖಾದರ್, ಪೊಲೀಸ್ ಅಽಕಾರಿಗಳಾದ ಕೃಷ್ಣಾನಂದ ನಾಯಕ್, ಗೋಪಾಲಕೃಷ್ಣ ಭಟ್, ಗುತ್ತಿಗೆದಾರ ಸುಧಾಕರ್ ಪೂಂಜ, ಮೊದಲಾದವರು ಉಪಸ್ಥಿತರಿದ್ದರು.

ಕುಪ್ಪೆಪದವು ಶ್ರೀ ಯಕ್ಷಕಲಾ ಕೇಂದ್ರದ ವಾರ್ಷಿಕೋತ್ಸವ, ರಾಕೇಶ್ ರೈಗೆ ಸನ್ಮಾನ



ಕೈಕಂಬ: ಶ್ರೀ ದುರ್ಗೇಶ್ವರೀ ಯಕ್ಷಕಲಾ ಕೇಂದ್ರ ಕುಪ್ಪೆಪದವು ಇದರ ದ್ವಿತೀಯ ವಾರ್ಷಿಕೋತ್ಸವವು ಕುಪ್ಪೆಪದವು ಶ್ರೀ ದುರ್ಗೇಶ್ವರೀ ದೇವಸ್ಥಾನದ ವರ್ಷಾವಧಿ ಜಾತ್ರಾ ಮಹೋತ್ಸವದ ಸಂದರ್ಭ ಗುರುವಾರ ರಾತ್ರಿ ನಡೆಯಿತು.

ಕಾರ್ಯಕ್ರಮದಲ್ಲಿ ಯಕ್ಷಕಲಾ ಕೇಂದ್ರದ ಯಕ್ಷಗುರುಗಳಾದ ರಾಕೇಶ್ ರೈ ಅಡ್ಕರನ್ನು ಶಾಲು ಹೊದೆಸಿ ಸನ್ಮಾನಿಸಲಾಯಿತು.

ಅಭಿನಂದನೆ

ಯಕ್ಷಕಲಾ ಕೇಂದ್ರದ ಚಟುವಟಿಕೆಗಳು ಯಶಸ್ವಿಯಾಗಲು ನಿರಂತರವಾಗಿ ಶ್ರಮಿಸುತ್ತಿರುವ ಯಕ್ಷಕಲಾ ಕೇಂದ್ರದ ಕಾರ್ಯದರ್ಶಿ ಪ್ರಸಾದ್ ಶೆಟ್ಟಿ ಕುಟ್ಟೆಬ್ಬಾರ್ ಅವರನ್ನು ಅಭಿನಂದಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ದುರ್ಗೇಶ್ವರೀ ದೇವಸ್ಥಾನದ ಮೆನೇಜಿಂಗ್ ಟ್ರಸ್ಟಿ ಪ್ರವೀಣ್ ಕುಮಾರ್ ಅಗರಿ, ಯಕ್ಷಕಲಾ ಕೇಂದ್ರದ ಅಧ್ಯಕ್ಷ ವಿನಯ್ ಕಾರಂತ, ಗೌರವಾಧ್ಯಕ್ಷರಾದ ರಾಮಚಂದ್ರ ಸಾಲಿಯಾನ್ ತಾರಿಪಾಡಿ, ಜಗದೀಶ್ ಕುಲಾಲ್ ಪಾಕಜೆ, ಗೌರವ ಸಲಹೆಗಾರರಾದ ಗಂಗಾಧರ್ ಭಂಡಾರಿ ಅಗರಿ, ಚಂದ್ರಶೇಖರ ಪೂಜಾರಿ ತುಂಬೆಮಜಲು, ಉಪಾಧ್ಯಕ್ಷ ವಿನೋದ್ ಕುಮಾರ್ ಅಂಬೆಲೊಟ್ಟು, ಜೊತೆ ಕಾರ್ಯದರ್ಶಿ ದುರ್ಗಾಪ್ರಸಾದ್ ಸಾಲ್ಯಾನ್, ಸಂಘಟನಾ ಕಾರ್ಯದರ್ಶಿ ವಿಶ್ವನಾಥ ಪಂಜ, ಕೋಶಾಧಿಕಾರಿ ಶಿವರಾಜ್ ನಾರಳ, ಯಕ್ಷಕಲಾ ಕೇಂದ್ರದ ವಿದ್ಯಾರ್ಥಿಗಳು, ಪೋಷಕರು, ಯಕ್ಷಗಾನ ಪ್ರಿಯರು ಮೊದಲಾದವರು ಈ ಸಂದರ್ಭದಲ್ಲಿಉಪಸ್ಥಿತರಿದ್ದರು. ಯಶವಂತ ಅಗರಿ ಕಾರ್ಯಕ್ರಮ ನಿರೂಪಿಸಿದರು.

ಯಕ್ಷಗಾನ ಬಯಲಾಟ

ಬಳಿಕ ಕಲಾ ಶ್ರೀ ದುರ್ಗೇಶ್ವರೀ ಯಕ್ಷಕಲಾ ಕೇಂದ್ರ ವಿದ್ಯಾರ್ಥಿಗಳಿಂದ 'ಬಪ್ಪನಾಡು ಕ್ಷೇತ್ರ ಮಹಾತ್ಮೆ' ಯಕ್ಷಗಾನ ಬಯಲಾಟ ಪ್ರದರ್ಶನ ನಡೆಯಿತು.

ಪಾವಂಜೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಧ್ವಜಾರೋಹಣ



ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಪಾವಂಜೆ ಶ್ರೀ ಮಹಾಲಿಂಗೇಶ್ವರ ಮಹಾ ಗಣಪತಿ ದೇವಸ್ಥಾನದಲ್ಲಿ ಶಿವರಾತ್ರಿ ಹಾಗೂ ವರ್ಷಾವಧಿ ಜಾತ್ರಾ ಮಹೋತ್ಸವಕ್ಕೆ ಚಾಲನೆ ನೀಡಲಾಯಿತು.

ಕ್ಷೇತ್ರದ ಮಂತ್ರಿಗಳಾದ ಕೊಡವೂರು ರಾಧಾಕೃಷ್ಣ ಉಪಾಧ್ಯಾಯ ಮಾರ್ಗದರ್ಶನದಲ್ಲಿ ಅರ್ಚಕ ವಾಸುದೇವ ಭಟ್ ನೇತೃತ್ವದಲ್ಲಿ ಭಾನುವಾರ ವಿಶೇಷ ಪ್ರಾರ್ಥನೆ ನಡೆದು ಶ್ರೀ ದೇವರ ಧ್ವಜಾರೋಹಣ, ನವಕ ಪ್ರಧಾನ ಅಂಕುರಾರೋಹಣ ನಡೆಯಿತು. ರಾತ್ರಿ ಹೂವಿನ ಪೂಜೆ ಶತರುದ್ರಾಭಿಷೇಕ ರಾಶಿ ಪೂಜೆ, ರಂಗ ಪೂಜೆ ನಡೆಯಿತು.

ಈ ಸಂದರ್ಭ ವಿದ್ವಾನ್ ಕೃಷ್ಣ ಭಟ್, ಹಳೆಯಂಗಡಿ ಪಿಸಿಎ ಬ್ಯಾಂಕ್ ಅಧ್ಯಕ್ಷ ಸತೀಶ ಭಟ್ ಕೊಳುವೈಲು, ಕ್ಷೇತ್ರದ ಆಡಳಿತ ಮಂಡಳಿ ಅಧ್ಯಕ್ಷರು ಸದಸ್ಯರು ಗ್ರಾಮಸ್ಥರು ಉಪಸ್ಥಿತರಿದ್ದರು

ಫೆ.21ರಂದು ರಥೋತ್ಸವ

ಕ್ಷೇತ್ರದಲ್ಲಿ ಫೆ, 21ಕ್ಕೆ ಹಗಲು ರಥೋತ್ಸವ, ಮಹಾ ಅನ್ನಸಂತರ್ಪಣೆ, ಫೆ. 22ಕ್ಕೆ ಬೆಳಿಗ್ಗೆ ಕವಾಟೋದ್ಘಾಟನೆ, ಮಹಾ ರಥೋತ್ಸವ ನಡೆಯಲಿದೆ

ಅಂಬಲಪಾಡಿ ದೇವಳ: ಹಿಂದೂ ಸಂಗಮ, ಶೋಭಾಯಾತ್ರೆ

ಉಡುಪಿ: ಅಂಬಲಪಾಡಿ ದೇವಸ್ಥಾನದ ಬಳಿ ನೂರಾರು ಹಿಂದು ಭಾಂದವರ ಸಮಾಗಮ ದೊಂದಿಗೆ ನಡೆದ ಬೃಹತ್ ಶೋಭಾಯಾತ್ರೆಗೆ ಅಂಬಲಪಾಡಿ ಶ್ರೀ ಜನಾರ್ದನ ಮತ್ತು ಮಹಾಕಾಳಿ ದೇವಸ್ಥಾನದ ಧರ್ಮದರ್ಶಿ ಡಾ. ನಿ.ಬೀ. ವಿಜಯ ಬಲ್ಲಾಳ್ ಚಾಲನೆ ನೀಡಿದರು.

ಶೋಭಾಯಾತ್ರೆ ಅಂಬಲಪಾಡಿ ಮಹಾಕಾಳಿ ಮಾರ್ಗ, ಬೀಡು ಮಾರ್ಗ, ಆನಂದ ರಾವ್ ಮಾರ್ಗವಾಗಿ ಮುಖ್ಯ ರಸ್ತೆ ಮೂಲಕ ಸಾಗಿ ಅಂಬಲಪಾಡಿ ಬಸ್ ನಿಲ್ದಾಣದ ಬಳಿ ಸಮಾಪನಗೊಂಡಿತು. ಅಂಬಲಪಾಡಿಯ ಲಾಲ್ ಬಹಾದ್ದೂರ್ ಶಾಸ್ತ್ರಿ ಮೈದಾನದಲ್ಲಿ ನಡೆದ ಹಿಂದು ಸಂಗಮದ ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ಸಮಾಜ ಸೇವಕ ವಿಶುಕುಮಾರ್ ಶೆಟ್ಟಿ ಅಂಬಲಪಾಡಿ ವಹಿಸಿದ್ದರು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಉಡುಪಿ ಜಿಲ್ಲಾ ಸಹ ಕಾರ್ಯವಾಹ ಪ್ರಶಾಂತ್ ಅರೆಶೀರೂರು ಅವರು ಬೌದ್ಧಿಕ್ ನಡೆಸಿಕೊಟ್ಟರು.



ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಹಿರಿಯ ಕಾರ್ಯಕರ್ತ ಶೇಖರ ಶೆಟ್ಟಿಗಾರ್ ಅಂಬಲಪಾಡಿ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸ್ವಯಂ ಸೇವಕ ಜಯ ಭಂಡಾರಿ ಸ್ವಾಗತಿಸಿದರು. ರಮೇಶ್ ಸಾಲ್ಯಾನ್ ಅಂಬಲಪಾಡಿ ಪ್ರಸ್ತಾವನೆಗೈ ದರು. ಸಂಸ್ಕಾರ ಭಾರತಿ ಉಡುಪಿ ಜಿಲ್ಲಾ ಮುಖ್ಯ ಕಾರ್ಯದರ್ಶಿ ಗಣೇಶ್ ಶೆಣೈ ಅಂಬಲಪಾಡಿ ನಿರೂಪಿಸಿದರು. ಚೇತನ್ ಆಚಾರ್ಯ ಅಂಬಲಪಾಡಿ ವಂದಿಸಿದರು. ವಿಜಯ ಭಟ್ ಕಡೆಕಾರು ವಂದೇ ಮಾತರಂ ಹಾಡಿದರು. ಶಂಕರ ಅಂಬಲಪಾಡಿ ಮತ್ತು ಪದ್ಮನಾಭ ಅಂಬಲಪಾಡಿ ಅವರು ವೈಯಕ್ತಿಕ ಗೀತೆ ಹಾಡಿದರು. ಹಿರಿಯ ಸ್ವಯಂ ಸೇವಕ ಉಮೇಶ್ ಶೆಟ್ಟಿಗಾರ್ ಅಂಬಲಪಾಡಿ, ಸುಧಾಕರ್ ಶೆಟ್ಟಿ ಅಂಬಲಪಾಡಿ ಅತಿಥಿಗಳನ್ನು ಗೌರವಿಸಿದರು.

ಹಿಂದೂ ಸಂಗಮ: ಶೋಭಾಯಾತ್ರೆ, ಕುಣಿತ ಭಜನೆ, ಸನ್ಮಾನ

ಕುಂದಾಪುರ: ಹಿಂದೂ ಸಂಗಮ ಆಯೋಜನಾ ಸಮಿತಿ ಕುಂದಾಪುರ ತಾಲೂಕು ಕಾಳಾವರ ಮಂಡಲ ಇದರ ವತಿ ಯಿಂದ ಹಿಂದೂ ಸಂಗಮ ಕಾರ್ಯಕ್ರಮ ಕಾಳಾವರದಲ್ಲಿ ಭಾನುವಾರ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಂಡಲದ ಅಧ್ಯಕ್ಷ ರಘುವೀರ ಕೆ. ವಹಿಸಿದ್ದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಮಂಡಲದ ಗೌರವಾಧ್ಯಕ್ಷ ಶಾನಾಡಿ ಚಂದ್ರಶೇಖರ ಹೆಗ್ಡೆ ಮಾತನಾಡಿದರು. ಆರೆಸ್ಸೆಸ್‌ನ ಪರ್ಯಾವರಣ ಗತಿವಿಧಿಯ ಉಡುಪಿ ಜಿಲ್ಲಾ ಸಂಯೋಜಕ ಚೇತನ್ ಕುಮಾರ್ ಉಡುಪಿ ಮುಖ್ಯ ಭಾಷಣಕಾರರಾಗಿ ಮಾತನಾಡಿದರು. ಉಸ್ತುವಾರಿಯನ್ನು ಸ್ವಯಂ ಸೇವಕ ಗೋಪಾಲ ಜಿ.ಕೆ. ವಹಿಸಿದ್ದರು.

ಶೋಭಾಯಾತ್ರೆ

ಕಾರ್ಯಕ್ರಮದ ಅಂಗವಾಗಿ ನಡೆದ ಬೃಹತ್ ಶೋಭಾಯಾತ್ರೆಯಲ್ಲಿ ಗ್ರಾಮದ ಹಲವಾರು ಭಜನಾ ತಂಡಗಳು ತಮ್ಮ ಕುಣಿತ ಭಜನೆಯ ಮೂಲಕ ಮೆರುಗನ್ನು ತಂದರು. ವಕ್ವಾಡಿಯ ಚಂಡೆವಾದನ ತಂಡದ ಸದಸ್ಯರು ಮೆರವಣಿಗೆಗೆ ಅಬ್ಬರವನ್ನು ಹೆಚ್ಚಿಸಿದರು.

ರವೀಂದ್ರ ಶೆಟ್ಟಿಗಾರ್ ಸ್ವಾಗತಿಸಿದರು. ಸುರೇಂದ್ರ ಕುಂದಾಪುರ ಕಾರ್ಯಕ್ರಮ ನಿರೂಪಿಸಿದರು. ರಮೇಶ ಅಸೋಡು ವಂದಿಸಿದರು.



ಸನ್ಮಾನಿತರು

ಊರಿನ ಹಿರಿಯ ಸಾಹಿತಿ ಕೆ.ಕೆ.ಕಾಳಾವರ್ ಕಾರ್, ಅಂತಾರಾಷ್ಟ್ರೀಯ ಚೆಸ್ ಪಂದ್ಯ ದಲ್ಲಿ ದೇಶವನ್ನು ಪ್ರತಿನಿಧಿಸಲಿರುವ ಕಾಳಾವರದ ಕಿರಿಯ ಚೆಸ್ ಆಟಗಾರ್ತಿ ಆರಾಧ್ಯ ಶ್ರೀಕಾಂತ್ ಶೆಟ್ಟಿ, ಪ್ರತಿಭಾವಂತ ವಿದ್ಯಾರ್ಥಿನಿ ರಕ್ಷಿತಾ ರಾಜು ಶೆಟ್ಟಿಗಾರ್ ಅವರನ್ನು ಸನ್ಮಾನಿಸಲಾಯಿತು.

ಸುತ್ತಮುತ್ತ

ಏಳಿಂಜೆ ಶ್ರೀ ದೇವಿ ಮಹಿಳಾ ಮಂಡಲದ ವಾರ್ಷಿಕೋತ್ಸವ

ಕಿನ್ನಿಗೋಳಿ: ಮಹಿಳೆ ಸಂಘಟನೆಗಳು ಸಮಾಜಿಕವಾಗಿ ಸದೃಡವಾಗಿ ಸಶಕ್ತವಾಗಿ ಬೆಳೆದರೆ ಸಮಾಜದ ಅಭಿವೃದ್ಧಿ ಸಾಧ್ಯವಿದೆ ಎಂದು ಏಳಿಂಜೆ ಲಕ್ಷ್ಮೀಜನಾರ್ದನ ಮಹಾಗಣಪತಿ ದೇವಸ್ಥಾನ ಏಳಿಂಜೆ ಕೊಂಜಾಲು ಗುತ್ತು ಪ್ರಭಾಕರ ಶೆಟ್ಟಿ ಹೇಳಿದರು.
ಅವರು ಏಳಿಂಜೆ ಲಕ್ಷ್ಮೀ ಜನಾರ್ದನ ಮಹಾಗಣಪತಿ ದೇವಸ್ಥಾನದ ವಠಾರದಲ್ಲಿ ಏಳಿಂಜೆ ಶ್ರೀ ದೇವಿ ಮಹಿಳಾ ಮಂಡಲದ ವಾರ್ಷಿಕೋತ್ಸವದಲ್ಲಿಮಾತನಾಡಿದರು. ರತ್ನಾ ಪುಂಡರೀಕ ದೇವಾಡಿಗ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸುಧಾಕರ ಸಾಲಿಯಾನ್ ಸಂಕಲಕರಿಯ, ಅಂಬೆಡ್ಕರ್ ಫೇಲೋಶಿಪ್ ಪ್ರಶಸ್ತಿ ಪಡೆದ ಶಿವಪ್ರಸಾದ್‌ರನ್ನು ಸನ್ಮಾನಿಸಲಾಯಿತು.
ದಿವಾಕರ ಶೆಟ್ಟಿ ಕೋಂಜಾಲಗುತ್ತು, ಆದಿ ಜಾರಂದಾಯ ಬಂಟದೈವಸ್ಥಾನ ಇಲ್ಲಿನ ಆಡಳಿತ ಮೊಕ್ತೇಸರ ಸೀತಾರಾಮ ಶೆಟ್ಟಿ, ಅರ್ಚಕ ವೈ. ಗಣೇಶ್ ಭಟ್ ಏಳಿಂಜೆ, ಅನೀಲ್ ಶೆಟ್ಟಿ ಕೋಂಜಾಲಗುತ್ತು, ಬಾಲಕೃಷ್ಣ ಶೆಟ್ಟಿ ಕೋಂಜಾಲಗುತ್ತು, ನವಚೇತನ ಯುವಕ ಮಂಡಲದ ಅಧ್ಯಕ್ಷ ಪ್ರಭಾಕರ ಆಚಾರ್ಯ, ದಯಾನಂದ ಶೆಟ್ಟಿ ಕೊಂಜಾಲಗುತ್ತು, ಜಗದೀಶ್ ಶೆಟ್ಟಿ ಕೋಂಜಾಲಗುತ್ತು, ವತ್ಸಲಾ ಯೊಗೀಶ್ ರಾವ್, ಆಳ್ವಾಸ್ ವಿದ್ಯಾ ಸಂಸ್ಥೆಯ ಉಪನ್ಯಾಸಕಿ ಉಷಾ ಶರತ್ ಶೆಟ್ಟಿ, ನೇತ್ರಾವತಿ ಸಂಜೀವ ಶೆಟ್ಟಿ, ನಾಗಲಕ್ಷ್ಮೀ ಗಣೇಶ್ ಭಟ್ ಉಪಸ್ಥಿತರಿದ್ದರು.
ಸಂಸ್ಥೆಯ ಸಂಚಾಲಕಿ ಕೌಶಲ್ಯ ಶೆಟ್ಟಿ ಪ್ರಸ್ತಾವನೆಗೈದರು. ಸಂಸ್ಥೆಯ ಸದಸ್ಯರಿಗೆ ವಿವಿಧ ಆಟೋಟ ಸ್ಪರ್ಧೆಗಳನ್ನು ಆಯೋಜಿಸಿದ್ದು ಬಹುಮಾನ ವಿತರಿಸಲಾಯಿತು. ಕಾರ್ಯದರ್ಶಿ ಸೌಮ್ಯ ದಿನೇಶ್ ವರದಿ ವಾಚಿಸಿ ದರು. ರೇಖಾ ರಘುರಾಮ ಶೆಟ್ಟಿ ಸೆವ್ರಿನ್ ಲೋಬೋ ಸನ್ಮಾನಪತ್ರ ವಾಚಿಸಿದರು ಮಹಿಳಾ ಮಂಡಲದ ಅಧ್ಯಕ್ಷೆ ಪ್ರಮೀಳಾ ಸ್ವಾಗತಿಸಿ ಸುಜಾತಾ ಮೂಲ್ಯ ವಂದಿಸಿದರು. ಸವಿತಾ ಸದಾನಂದ ಕಾರ್ಯಕ್ರಮ ನಿರೂಪಿಸಿದರು.

ಮಾ. 12, 13: ನಿಡ್ಪಳ್ಳಿ ಶ್ರೀ ಶಾಂತದುರ್ಗಾ ದೇವಿ ಜಾತ್ರೆ

ನಿಡ್ಪಳ್ಳಿ: ಶ್ರೀ ಶಾಂತದುರ್ಗಾ ದೇವಸ್ಥಾನ ಶ್ರೀ ಕ್ಷೇತ್ರ ನಿಡ್ಪಳ್ಳಿ ಶ್ರೀ ಶಾಂತದುರ್ಗಾ ದೇವಿಯ ಪ್ರತಿಷ್ಠಾ ಉತ್ಸವ ಹಾಗೂ ಜಾತ್ರೆ ಪ್ರಯುಕ್ತ ಮಾ.12 ರಂದು ಬಲಿವಾಡು ಶೇಖರಣೆ ಹಾಗೂ ಹಸಿರುವಾಣಿ ಶೇಖರಣೆ ನೆರವೇರಲಿದೆ. ಮಾ.13ರಂದು ಬೆಳಿಗ್ಗೆ ಗಣಪತಿ ಹೋಮ, ಶ್ರೀ ದೇವರಿಗೆ ಪಂಚವಿಂಶತಿ ಕಲಶ, ನಂತರ ಭಜನಾ ಕಾರ್ಯಕ್ರಮ, ಮಧ್ಯಾಹ್ನ ಮಹಾಪೂಜೆ, ಪಲ್ಲಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ, ಸಂಜೆ ತಾಯಾಂಬಕ, ರಾತ್ರಿ ದರ್ಶನ ಬಲಿ, ಬಟ್ಟಲು ಕಾಣಿಕೆ, ರಾಜಾಂಗಣ ಪ್ರಸಾದ, ಮಹಾ ಅನ್ನಸಂತರ್ಪಣೆ ನಡೆಯಲಿದೆ.
ಉತ್ಸವದ ಆಮಂತ್ರಣ ಪತ್ರ ಬಿಡುಗಡೆ ಕಾರ್ಯಕ್ರಮ ದೇವಸ್ಥಾನದಲ್ಲಿ ನಡೆಯಿತು.
ದೇವಸ್ಥಾನದ ಪ್ರಧಾನ ಅರ್ಚಕ ನವೀನ್ ಹೆಬ್ಬಾರ್ ಪ್ರಾರ್ಥಿಸಿದರು. ದೇವಸ್ಥಾನದ ಆಡಳಿತ ಮಂಡಳಿ ಗೌರವಾಧ್ಯಕ್ಷ ಪ್ರಮೋದ್ ಆರಿಗ ನಿಡ್ಪಳ್ಳಿ ಗುತ್ತು ಆಮಂತ್ರಣ ಪತ್ರ ಬಿಡುಗಡೆ ಮಾಡಿದರು. ಶ್ರೀ ಶಾಂತದುರ್ಗಾ ಟ್ರಸ್ಟ್ ಅಧ್ಯಕ್ಷ ಆನಾಜೆ ರಾಧಾಕೃಷ್ಣ ರೈ ಕುಕ್ಕುಪುಣಿ ಉಪಸ್ಥಿತರಿದ್ದರು. ಆಡಳಿತ ಮಂಡಳಿ ಅಧ್ಯಕ್ಷ ನಾಗೇಶ ಗೌಡ ಪುಳಿತ್ತಡಿ ಸ್ವಾಗತಿಸಿ ವಂದಿಸಿದರು.

ಇಂದು ವಿದ್ಯುತ್ ವ್ಯತ್ಯಯ

ಉಡುಪಿ: ಉದ್ಯಾವರ ಉಪಕೇಂದ್ರದಿಂದ ಹೊರಡುವ ಮೇಲ್ಪೇಟೆ ಫೀಡರ್ ಮಾರ್ಗದಲ್ಲಿ ತುರ್ತು ನಿರ್ವಹಣೆ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಉದ್ಯಾವರ, ಮಠದಂಗಡಿ, ಅಂಕುದ್ರು, ಬೋಳಾರ್ ಗುಡ್ಡೆ, ಬೊಳ್ಜೆ ಕೆಮ್ಮೂರು, ಕೇದಾರ್, ಕೊರಂಗ್ರಪಾಡಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಫೆ.17ರಂದು ಬೆಳಿಗ್ಗೆ 9.30ರಿಂದ ಸಂಜೆ 5.30ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುತ್ತದೆ.
ಮಣಿಪಾಲ ವಿದ್ಯುತ್ ಉಪಕೇಂದ್ರದಿಂದ ಹೊರಡುವ ಮಣಿಪಾಲ ಟೌನ್, ಪ್ರಗತಿನಗರ, ಇಂಡಸ್ಟ್ರಿಯಲ್. ಕೆ.ಎಂ.ಎಫ್, ಉದ್ಯಾವರ–2, ಮೂಡುಬೆಳ್ಳೆ ಫೀಡರ್ ಮಾರ್ಗದಲ್ಲಿ ನಿರ್ವಹಣೆ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಮಣಿಪಾಲ ಟೌನ್, ವೇಣುಗೋಪಾಲ ಟೆಂಪಲ್, ಮೀಡಿಯಾ ನೆಟ್ ವರ್ಕ್, ಪ್ರಗತಿನಗರ, ಶಾಂತಿನಗರ, ರಾಜೀವ ನಗರ, 80 ಬಡಗುಬೆಟ್ಟು ಶಿವಳ್ಳಿ ಇಂಡಸ್ಟ್ರಿಯಲ್ ಏರಿಯಾ, ಈಶ್ವರನಗರ, ಸರಳೇಬೆಟ್ಟು ಗಣೇಶ್ ಭಾಗ್, ಕೊರಂಗ್ರಪಾಡಿ, ಮಾರ್ಪಳ್ಳಿ, ಕುಕ್ಕಿಕಟ್ಟೆ, ಉದ್ಯಾವರ, ಮಣಿಪುರ, ಮೂಡುಬೆಳ್ಳೆ, ಮರ್ಣೆ, ಕಟ್ಟಿಂಗೇರಿ, ಕೆಮ್ಮೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಫೆ. 17ರಂದು ಬೆಳಿಗ್ಗೆ 9ರಿಂದ ಸಂಜೆ 5ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ವಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಎಂ. ಭಾಸ್ಕರ ಪೈಗೆ ಶ್ರದ್ಧಾಂಜಲಿ

ಕುಂದಾಪುರ : ಇತ್ತೀಚೆಗೆ ನಿಧನರಾದ ಗುಜ್ಜಾಡಿ ಎಂ.ಭಾಸ್ಕರ ಪೈ ಸರಕಾರಿ ಪ್ರೌಢಶಾಲೆಯ ಶಾಲಾ ಸಂಸ್ಥಾಪನಾ ಮಹಾದಾನಿ ಎಂ. ಭಾಸ್ಕರ ಪೈ ಅವರಿಗೆ ಗುಜ್ಜಾಡಿ ಎಂ.ಭಾಸ್ಕರ ಪೈ ಸರಕಾರಿ ಪ್ರೌಢಶಾಲೆಯಲ್ಲಿ ಶನಿವಾರ ಶ್ರದ್ಧಾಂಜಲಿ ಸಲ್ಲಿಸಲಾಯಿತು.
ಎಸ್‌ಡಿಎಂಸಿ ಅಧ್ಯಕ್ಷ ಸದಾನಂದ ಮೊವಾಡಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಾಲೆಯ ಹಿತೈಷಿ ಸುಧಾಕರ ಆಚಾರ್ಯ, ನಿವೃತ್ತ ಮುಖ್ಯ ಶಿಕ್ಷಕ ಜಿ.ಮಹಮ್ಮದ್ ರಫೀಕ್, ಶಾಲೆಯ ಮುಖ್ಯ ಶಿಕ್ಷಕಿ ಅರ್ಚನಾ ಹೆಗ್ಡೆ, ಶಿಕ್ಷಕಿ ಶಶಿಕಲಾ ಶೆಟ್ಟಿ, ಸದಸ್ಯರಾದ ಗಣೇಶ ಪೂಜಾರಿ, ಮಾಲತಿ ಖಾರ್ವಿ, ಶಾಲೆಯ ಶಿಕ್ಷಕರು, ಎಸ್‌ಡಿಎಂಸಿ ಸದಸ್ಯರು, ಪೋಷಕರು ಹಾಗೂ ವಿದ್ಯಾಭಿಮಾನಿಗಳು ಪುಷ್ಪ ಮತ್ತು ನುಡಿ ನಮನ ಸಲ್ಲಿಸಿದರು.
ಶಿಕ್ಷಕರಾದ ವಾಸುದೇವ ಗಂಗೇರ ಸ್ವಾಗತಿಸಿದರು. ಬಬಿತಾರಾಣಿ ವಂದಿಸಿದರು. ಮೃತರ ಗೌರವಾರ್ಥ ಶುಕ್ರವಾರ ಶಾಲೆಗೆ ರಜೆ ಘೋಷಿಸಲಾಗಿತ್ತು.

ಗಿಳಿಯಾರಿನ ಜನಸೇವಾ ಟ್ರಸ್ಟ್ ಅಭಿಮತ ಸಂಭ್ರಮದ ಸನ್ಮಾನ ಸ್ವೀಕರಿಸಿದ ದಯಾನಂದ ನಾಯಕ್ ಆಶಯ

ಕಾನೂನಿನ ಜ್ಞಾನವಿದ್ದಲ್ಲಿ ಮಾತ್ರ ಅಪರಾಧ ಸಂಖ್ಯೆ ಇಳಿಮುಖ



ಬ್ರಹ್ಮಾವರ: ಬ್ರಿಟಿಷರು ತಮಗೆ ಬೇಕಾದ ಹಾಗೆ ಕಾನೂನು ರಚಿಸಿದ್ದರು. ಎಷ್ಟೋ ವರ್ಷಗಳಿಂದ ಅದನ್ನೇ ಬಳಸುತ್ತಿದ್ದೇವೆ. ಆದರೆ ಕಳೆದ ಒಂದು ವರ್ಷದ ಹಿಂದೆ ಅದನ್ನು ನಾವು ನಮ್ಮ ವ್ಯವಸ್ಥೆಗೆ ತಕ್ಕಂತೆ ಬದಲಿಸಿದ್ದೇವೆ. ಕಾನೂನು ಪುಸ್ತಕ ಕೇವಲ ಆ ಕ್ಷೇತ್ರದಲ್ಲಿ ಇರುವವರು ಮಾತ್ರ ಓದುವುದಲ್ಲ, ನಮ್ಮ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರೆಲ್ಲರೂ ಓದಬೇಕು. ಕಾನೂನಿನ ಜ್ಞಾನ ಇದ್ದಲ್ಲಿ ಮಾತ್ರ ಅಪರಾಧಗಳ ಸಂಖ್ಯೆ ಕಡಿಮೆಯಾಗಲಿದೆ. ನನ್ನನ್ನು ಕ್ರೈಂ ಸ್ಪೆಶಲಿಷ್ಟ್ ಎಂದು ಮಾಧ್ಯಮಗಳು ಬರೆದಿವೆ. ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಿದ್ದೇನೆ ಎಂದು ಕೀರ್ತಿ ಕಲಶ ಗೌರವ ಸ್ವೀಕರಿಸಿದ ಮುಂಬೈ ನಿವೃತ್ತ ಎಸಿಪಿ ದಯಾನಂದ ನಾಯಕ್ ನುಡಿದರು.
ಬ್ರಹ್ಮಾವರದ ಗಾಂಧಿ ಮೈದಾನದಲ್ಲಿ ಶನಿವಾರ ಕೋಟ ಗಿಳಿಯಾರಿನ ಜನಸೇವಾ ಟ್ರಸ್ಟ್ ವತಿಯಿಂದ ದಿ. ಅಪ್ಪಣ್ಣ ಹೆಗ್ಡೆ ವೇದಿಕೆಯಲ್ಲಿ ನಡೆದ 9ನೇ ವರ್ಷದ ಅಭಿಮತ ಸಂಭ್ರಮ ಕಾರ್ಯಕ್ರಮದಲ್ಲಿ ಅಭಿಮತ ಸಂಭ್ರಮದ ಕೀರ್ತಿ ಕಲಶ ಸನ್ಮಾನ ಸ್ವೀಕರಿಸಿ ಮಾತನಾಡಿದರು.
ವಿದೇಶಗಳಲ್ಲಿ ಪ್ರತಿಯೊಬ್ಬರಿಗೂ ಕಾನೂನಿನ ಇರುವುದರಿಂದ ಅಲ್ಲಿ ಅಪರಾಧ ಸಂಖ್ಯೆ ಕಡಿಮೆ ಇದೆ. ನಮ್ಮ ದೇಶದಲ್ಲಿಯೂ ಪ್ರತಿಯೊಬ್ಬರೂ ಕಾನೂನಿನ ಜ್ಞಾನ ಪಡೆಯಬೇಕು. ಇಂತಹ ಸಂಘ ಸಂಸ್ಥೆಗಳು ಶಾಲಾ ಕಾಲೇಜಿನ ವಿದ್ಯಾರ್ಥಿಗಳಿಗೆ ಮತ್ತು ನಾಗರಿಕರಿಗೆ ಕಾನೂನಿನ ಮಾಹಿತಿ ನೀಡುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿ ಎಂದು ಅವರು ಆಶಿಸಿದರು.
ಕೋಟ ಗೀತಾನಂದ ಫೌಂಡೇಶನ್‌ನ ಪ್ರವರ್ತಕ ಆನಂದ ಸಿ. ಕುಂದರ್ ಮಾತನಾಡಿ, ಅಶಕ್ತರನ್ನು ಗುರುತಿಸಿ ಹಣವನ್ನು ಇರುವವರಿಂದ ಸಂಗ್ರಹಿಸಿ ನೀಡುವ ಶ್ಲಾಘನೀಯ ಕೆಲಸ ಎಂದು ಹೇಳಿದರು.
ಇದಕ್ಕೂ ಮುನ್ನ ಉದ್ಯಮಿ ಬರೋಡ ಶಶಿಧರ ಶೆಟ್ಟಿ ಕಾರ್ಯಕ್ರಮ ಉದ್ಘಾಟಿಸಿದರು. ಮೂಡಬಿದಿರೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಮೋಹನ್ ಆಳ್ವ ಅಧ್ಯಕ್ಷತೆ ವಹಿಸಿದ್ದರು.
ಬ್ರಹ್ಮಾವರದ ಅಂಜಲಿ ವಿಜಯಲಕ್ಷ್ಮೀ ಸಾರೀಸ್‌ನ ಅಂಜಲಿ ವಿಜಯ್, ಹೊಟೇಲ್ ಉದ್ಯಮಿ

ಗೌರವಾರ್ಪಣೆ, ಮನೆ ಕೀ ಹಸ್ತಾಂತರ

ತುಳು ಜಾನಪದ ವಿದ್ವಾಂಸ ಬನ್ನಂಜೆ ಬಾಬು ಅಮೀನ್, ಹಿರಿಯ ಸೂಲಗಿತ್ತಿ ಲಕ್ಷ್ಮೀ ಪೂಜಾರಿ ಗುಂಡಿಗೋಳಿ ಮತ್ತು ತೆಕ್ಕಟ್ಟೆ ಕೊಮೆಯ ಯಶಸ್ವಿ ಕಲಾವೃಂದಕ್ಕೆ ಯಶೋಗಾಥೆ ಗೌರವ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕೋಟದ ದೇವಕಿ ಪೂಜಾರಿ ಅವರಿಗೆ ಸ್ವಂತ ಮನೆಯನ್ನು ನಿರ್ಮಿಸಿ ಕೊಟ್ಟು ಮನೆಯ ಕೀಯನ್ನು ಹಸ್ತಾಂತರಿಸಲಾಯಿತು.

ಮಾರಣಕಟ್ಟೆ ಕೃಷ್ಣ ಮೂರ್ತಿ ಮಂಜ, ಮುಂಬೈ ಭಾರತ್ ಕೋ ಆಪರೇಟಿವ್ ಬ್ಯಾಂಕ್ ಚೆಯರ್ ಮೆನ್ ಸೂರ್ಯಕಾಂತ ಜಯಸುವರ್ಣ, ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಸದಸ್ಯ ರಾಜೇಶ ಕಾರಂತ, ಯುನಿವರ್ಸಲ್ ಸಮೂಹ ಸಂಸ್ಥೆಯ ಚೆಯರ್‌ಮ್ಯಾನ್ ಉಪೇಂದ್ರ ಶೆಟ್ಟಿ, ಬೆಂಗಳೂರಿನ ಉದ್ಯಮಿ ಪ್ರಶಾಂತ ಶೆಟ್ಟಿ ಗಿಳಿಯಾರು ಕುಶಲ ಹೆಗ್ಡೆ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಉದಯ ಕೆ. ಹೆಗ್ಡೆ, ಉದ್ಯಮಿಗಳಾದ ಬೇಳೂರು ರಾಘವೇಂದ್ರ ಶೆಟ್ಟಿ ಸುಗ್ಗಿ ಸುಧಾಕರ ಶೆಟ್ಟಿ, ಆದರ್ಶ ಶೆಟ್ಟಿ ಮುಂಬೈ, ಬೆಂಗಳೂರು ಅಭಯ ಫೌಂಡೇಶನ್‌ನ ಪ್ರವರ್ತಕ ಉಮೇಶ ಶೆಟ್ಟಿ ಮಂದಾರ್ತಿ, ಬೆಂಗಳೂರಿನ ಕುಂದಾಪ್ರ ಕನ್ನಡ ಪ್ರತಿಷ್ಠಾನದ ಅಧ್ಯಕ್ಷ ಡಾ. ದೀಪಕ್ ಕುಮಾರ್ ಶೆಟ್ಟಿ ಬಾರ್ಕೂರು, ಬೆಂಗಳೂರಿನ ಪಟ್ಲ ಫೌಂಡೇಶನ್‌ನ ಅಮರ್ ಶೆಟ್ಟಿ ಮಂದಾರ್ತಿ ಇದ್ದರು.
ಜನಸೇವಾ ಟ್ರಸ್ಟ್‌ನ ವಸಂತ ಗಿಳಿಯಾರು ಪ್ರಾಸ್ತಾವಿಕವಾಗಿ ಮಾತನಾಡಿದರು. ಬೆಂಗಳೂರಿನ ಅಭಿನಂದನ ಸಾಂಸ್ಕೃತಿಕ ಟ್ರಸ್ಟ್‌ನ ರಾಘವೇಂದ್ರ ಕಾಂಚನ್ ಕಾರ್ಯಕ್ರಮ ನಿರೂಪಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮ

ಸಭಾ ಕಾರ್ಯಕ್ರಮಕ್ಕೂ ಮುನ್ನ ಕುಂದಾಪುರದ ನೃತ್ಯ ವಸಂತ ನಾಟ್ಯಾಲಯದ ಕಲಾವಿದರಿಂದ ನೃತ್ಯೋಪಾಸನೆ ಶಾಸ್ತ್ರೀಯ ಮತ್ತು ಅರೆ ಶಾಸ್ತ್ರೀಯ ನೃತ್ಯಗಳು ನಡೆಯಿತು. ನಂತರ ನಿರೂಪಕಿ ಅನುಶ್ರೀ ನಿರೂಪಣೆಯಲ್ಲಿ ಖ್ಯಾತ ಸಂಗೀತ ಕಲಾವಿದ ವಿಜಯ ಪ್ರಕಾಶ್ ಅವರಿಂದ ಸಿಂಗಾರ ಸಿರಿ ಸಂಗೀತ ರಸಮಂಜರಿ ನಡೆಯಿತು.

ತುಂಬೆ ಗ್ರಾಮ ಪಂಚಾಯತ್: ವಿವಿಧ ಕಾಮಗಾರಿಗಳ ಉದ್ಘಾಟನೆ



ಬಂಟ್ವಾಳ: ತುಂಬೆ ಗ್ರಾಮ ಪಂಚಾಯತ್ ಆವರಣದಲ್ಲಿ 2024–25 ಮತ್ತು 2025–26ನೇ ಸಾಲಿನ ಸ್ವಂತ ನಿಧಿ ಹಾಗೂ 15ನೇ ಹಣಕಾಸು ಅನುದಾನದಲ್ಲಿ ವಿವಿಧ ಕಾಮಗಾರಿಗಳ ಉದ್ಘಾಟನೆ ನೆರವೇರಿತು.
ತಡೆಗೋಡೆ ರಚನೆ, ವಾಹನ ನಿಲುಗಡೆ ಶೆಡ್, ಇಂಟರ್ ಲಾಕ್ ಕಾಮಗಾರಿಗಳ ಉದ್ಘಾಟನೆಯನ್ನು ಜಿ.ಪಂ. ಮಾಜಿ ಸದಸ್ಯ ಚಂದ್ರಪ್ರಕಾಶ್ ಶೆಟ್ಟಿ ನೆರವೇರಿಸಿದರು.
ಈ ಸಂದರ್ಭದಲ್ಲಿಅಧ್ಯಕ್ಷೆ ಜಯಂತಿ ಕೇಶವ, ಉಪಾಧ್ಯಕ್ಷ ಗಣೇಶ್ ಸಾಲ್ಯಾನ್, ತುಂಬೆ ನಿಕಟ ಪೂರ್ವ ಅಧ್ಯಕ್ಷ ಪ್ರವೀಣ್ ಬಿ. ತುಂಬೆ, ಗ್ರಾ.ಪಂ. ಸದಸ್ಯರಾದ ಹೇಮಲತಾ, ಅರುಣ್ ಕುಮಾರ್, ಕಿಶೋರ್, ಮಹಮ್ಮದ್ ಝುಹೂರ್, ಅಬ್ದುಲ್ ಅಝೀಜ್, ಇಬ್ರಾಹಿಂ, ಶಶಿಕಲಾ, ಮುನೀರಾ, ಅತಿಕ ಬಾನು, ಜಯಂತಿ ಶ್ರೀಧರ, ಜಯಂತಿ ನಾಗೇಶ್, ಮಾಜಿ ಸದಸ್ಯರಾದ ಮೋನಪ್ಪ ಮಜಿ, ಚಂದ್ರಹಾಸ ಕಡೆಗೋಳಿ, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶಿವುಲಾಲ್ ಚವ್ಹಾಣ್, ಪ್ರಮುಖರಾದ ಸದಾಶಿವ ಡಿ. ತುಂಬೆ, ಜಗದೀಶ್ ಗಟ್ಟಿ, ಆನಂದ ಸುವರ್ಣ, ದೇವದಾಸ್ ಪರ್ಲಕ್ಕೆ, ಗುತ್ತಿಗೆದಾರರಾದ ಪ್ರಶಾಂತ್ ಕೊಟ್ಟಾರಿ, ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು, ಸಮುದಾಯ ಆರೋಗ್ಯ ಕೇಂದ್ರ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು, ಗ್ರಾಮ ಆಡಳಿತಾಧಿಕಾರಿ ಪ್ರಶಾಂತ್, ಗ್ರಾಮ ಸಹಾಯಕ ಪುರುಷೋತ್ತಮ, ಉಪಸ್ಥಿತರಿದ್ದರು. ಲೆಕ್ಕ ಸಹಾಯಕಿ ಚಂದ್ರಕಲಾ ಜಿ, ಸ್ವಾಗತಿಸಿ ವಂದಿಸಿದರು.

ಕುಪ್ಪೆಪದವು ದೇಗುಲ ಜಾತ್ರೆ ಸಂಪನ್ನ



ಕೈಕಂಬ: ಕುಪ್ಪೆಪದವು ಶ್ರೀ ದುರ್ಗೇಶ್ವರೀ ದೇವಿ ದೇವಸ್ಥಾನದಲ್ಲಿ, ಎಡಪದವು ಬ್ರಹ್ಮಶ್ರೀ ರಾಧಾಕೃಷ್ಣತಂತ್ರಿಗಳ ನೇತೃತ್ವದಲ್ಲಿ, ದೇವಸ್ಥಾನದ ಪ್ರಧಾನ ಅರ್ಚಕ ಗುರುಪ್ರಸಾದ ಕಾರಂತರ ಉಪಸ್ಥಿತಿಯಲ್ಲಿ, ಮೂರು ದಿನಗಳ ಕಾಲ ವಿಜೃಂಭಣೆಯಿಂದ ನಡೆದ ವರ್ಷಾವಧಿ ಜಾತ್ರೆ ಭಾನುವಾರ ಸಂಪನ್ನಗೊಂಡಿತು.
ಗುರುವಾರ ಮಹಾಗಣಪತಿ ದೇವರಿಗೆ ರಂಗಪೂಜೆ ಶ್ರೀ ದೇವಿಗೆ ರಂಗಪೂಜೆ, ಉತ್ಸವ ಮಹಾಪೂಜೆ, ಉತ್ಸವ ಬಲಿ, ಕಟ್ಟೆಪೂಜೆ, ಸವಾರಿ, ಶ್ರೀ ದುರ್ಗೇಶ್ವರೀ ಯಕ್ಷ ಕಲಾ ಕೇಂದ್ರದ ದ್ವಿತೀಯ ವಾರ್ಷಿಕೋತ್ಸವದ ಅಂಗವಾಗಿ ಕೇಂದ್ರದ ವಿದ್ಯಾರ್ಥಿಗಳಿಂದ ಬಪ್ಪನಾಡು ಕ್ಷೇತ್ರ ಮಹಾತ್ಮೆ ಯಕ್ಷಗಾನ ಬಯಲಾಟ, ಉತ್ಸಾಹಿ ತರುಣರು ಕೊಳವೂರು ಇವರಿಂದ ಸಾಂಸ್ಕೃತಿಕ ಕಾರ್ಯಕ್ರಮ ಬಳಿಕ 'ಕಥೆ ಎರ್ ಬರೆವೆರ್' ತುಳು ನಾಟಕ, ಚಂಡಿಕಾ ಯಾಗ, ಉತ್ಸವ ಮಹಾಪೂಜೆ, ಉತ್ಸವ ಬಳಿ, ಕಟ್ಟೆಪೂಜೆ, ಮುತ್ತೂರು, ಮಾಣಿ ಪಲ್ಲ ಸವಾರಿ ಮತ್ತು ಕೊಡಮಣಿತ್ತಾಯ ದೈವದ ಭೇಟಿ, ರಾಮಕೃಷ್ಣ ಕಾಟುಕುಕ್ಕೆ ಬಳಗದವರಿಂದ ಭಕ್ತಿ ಗಾನಸುಧಾ, ಕುಪ್ಪೆಪದವು ಶ್ರೀ ದುರ್ಗೇಶ್ವರೀ ಯಕ್ಷಗಾನ ಮಂಡಳಿಹಾಗೂ ಅತಿಥಿ ಕಲಾವಿದರಿಂದ ಪಾಪಣ್ಣ ವಿಜಯ ಗುಣಸುಂದರಿ ಯಕ್ಷಗಾನ ಬಯಲಾಟ ಸಹಿತ ವಿವಿಧ ವೈದಿಕ ವಿಧಿ ವಿಧಾನಗಳು, ಸಾಂಸ್ಕೃತಿಕ ಕಾರ್ಯಕ್ರಮ, ಭಾನುವಾರ ಬೆಳಿಗ್ಗೆ ನವಕ ಪ್ರದಾನ, ಸಂಪ್ರೋಕ್ಷಣೆ ನೆರವೇರಿತು. ಆಡಳಿತ ಮೊಕ್ತೇಸರ ಪ್ರವೀಣ್ ಕುಮಾರ್ ಅಗರಿ ಪಾಲ್ಗೊಂಡಿದ್ದರು.



ಬಿಜೆಪಿ ಕೇರಳ ರಾಜ್ಯ ಘಟಕದ ಮಾಜಿ ಅಧ್ಯಕ್ಷ ಕೆ.ಸುರೇಂದ್ರನ್ ಅವರು ಶುಕ್ರವಾರ ರಾತ್ರಿ ಪೆರ್ಲ ಸಮೀಪದ ಪಡ್ರೆ ಸ್ವರ್ಗ ಮಲೆತ್ತಡ್ಕ ಶ್ರೀ ಜಟಾಧಾರಿ ಕ್ಷೇತ್ರದ ಮೂಲಸ್ಥಾನಕ್ಕೆ ಭೇಟಿ ನೀಡಿದರು.

ಫೆ.19: ತೊರೆನೂರು ವಿರಕ್ತಮಠ ಹಿರಿಯ ಸ್ವಾಮೀಜಿಗಳ ಸಂಸ್ಮರಣೆ

ಕುಶಾಲನಗರ: ಕುಶಾಲನಗರ ತಾಲೂಕಿನ ತೊರೆನೂರು ವಿರಕ್ತ ಮಠದ ಹಿರಿಯ ಶ್ರೀಗಳಾದ ಶ್ರೀ ಮಹಾಂತ ಸ್ವಾಮೀಜಿ ಅವರ 13ನೇ ವರ್ಷದ ಸಂಸ್ಮರಣೋತ್ಸವ ಫೆ.19ರಂದು ನಡೆಯಲಿದ್ದು, ಸುತ್ತೂರು ಮಠದ ಜಗದ್ಗುರು ಶ್ರೀ ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮೀಜಿ ಆಗಮಿಸಲಿದ್ದಾರೆ ಎಂದು ತೊರೆನೂರು ವಿರಕ್ತ ಮಠದ ಶ್ರೀ ಮಲ್ಲೇಶ ಸ್ವಾಮೀಜಿ ತಿಳಿಸಿದ್ದಾರೆ.
ಕುಶಾಲನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತೊರೆನೂರು ವಿರಕ್ತ ಮಠ ಶ್ರೀ ಮರುಳ ಸಿದ್ದೇಶ್ವರ ಸ್ವಾಮೀಜಿಯವರ ತಪೋಕ್ಷೇತ್ರವಾಗಿದ್ದು, ಶ್ರೀ ಮಠಕ್ಕೆ ಪುರಾತನವಾದ ಐತಿಹ್ಯವಿದೆ. ವಿರಕ್ತಮಠದ ಶ್ರೀ ಮರುಳಸಿದ್ದೇಶ್ವರ ಸ್ವಾಮಿಗಳು ಹಾಗೂ ನಿಕಟ ಪೂರ್ವ ಶ್ರೀ ಶ್ರೀ ಮಹಾಂತ ಸ್ವಾಮೀಜಿ ಯವರ 13ನೇ ವರ್ಷದ ಸಂಸ್ಮರಣೋತ್ಸವ ಫೆ.19ರಂದು ಬೆಳಿಗ್ಗೆ 10.30ಕ್ಕೆ ಜರುಗಲಿದೆ. ಸುತ್ತೂರು ಜಗದ್ಗುರುಗಳ ಸಾನಿಧ್ಯದಲ್ಲಿ ನಡೆಯುವ ಧಾರ್ಮಿಕ ಸಭೆಯನ್ನು ಅರಕಲಗೂಡು ಮಾಜಿ ಶಾಸಕ ಎ.ಟಿ.ರಾಮಸ್ವಾಮಿ ಉದ್ಘಾಟಿಸಲಿದ್ದು, ಶಾಸಕ ಡಾ.ಮಂಥರ್ ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಕೊಡಗು ವಿಶ್ವವಿದ್ಯಾಲಯದ ಕುಲಪತಿ ಡಾ.ಅಶೋಕ್ ಸಂಗಪ್ಪ ಆಲೂರ ಅನುಭಾವ ನುಡಿಗಳನ್ನಾಡಲಿದ್ದಾರೆ. ಮಡಿಕೇರಿ ಮಾಜಿ ಶಾಸಕ ಅಪ್ಪಚ್ಚು ರಂಜನ್ ಹಾಗೂ ಕೊಡಗು ಜಿಲ್ಲಾ ವೀರಶೈವ ಮಹಾಸಭಾ ಅಧ್ಯಕ್ಷ ಎಚ್.ವಿ. ಶಿವಪ್ಪ ಮುಖ್ಯ ಅತಿಥಿಗಳಾಗಿರುವರು.
ಈ ಸಂದರ್ಭ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ತೋರಿರುವ ಶಿರಂಗಾಲದ ಎಸ್.ವಿ. ನಂಜುಂಡಪ್ಪ, ಆಲೂರು ಸಿದ್ದಾಪುರದ ಜೆ.ಎಸ್. ವಿರೂಪಾಕ್ಷಯ್ಯ, ಹೆಬ್ಬಾಲೆಯ ಮರೂರಿನ ಹೆಚ್. ವಿ.ಶಿವರುದ್ರಪ್ಪ, ತೊರೆನೂರು ವೀರಶೈವ ಸಮಾಜದ ಅಧ್ಯಕ್ಷ ಟಿ.ಬಿ.ಜಗದೀಶ್, ಸಮಾಜದ ಸಂಪನ್ಮೂಲ ಶಿಕ್ಷಕಿ ಡಾ. ಜಿ.ಎಂ. ಹೇಮಲತಾ ಅವರನ್ನು ಸನ್ಮಾನಿಸಲಾಗುವುದು ಎಂದರು.
ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ಎಚ್.ವಿ.ಶಿವಪ್ಪ ಮಾತನಾಡಿ, ಪ್ರತಿ ತಿಂಗಳ ಹುಣ್ಣಿಮೆಯಂದು ಚಿಂತನಾಗೋಷ್ಠಿಗಳನ್ನು ಹಮ್ಮಿಕೊಂಡು ಕೃಷಿ, ಆರೋಗ್ಯ, ವಾಣಿಜ್ಯ ಶಿಕ್ಷಣ, ವಚನ ಸಾಹಿತ್ಯ ಮೊದಲಾದ ಕ್ಷೇತ್ರಗಳ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ ಏರ್ಪಡಿಸಲಾಗುತ್ತಿದೆ ಎಂದರು.
ಗೋಷ್ಠಿಯಲ್ಲಿ ಜಿಲ್ಲಾವೀರಶೈವಮಹಾಸಭಾ ಪ್ರಧಾನ ಕಾರ್ಯದರ್ಶಿ ಸಾಂಬಶಿವಯ್ಯ, ಖಜಾಂಚಿ ಉದಯಕುಮಾರ್, ಕೊಡಗು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಎಸ್. ಮೂರ್ತಿ, ಕುಶಾಲನಗರ ತಾಲೂಕು ವೀರಶೈವ ಮಹಾಸಭಾಧ್ಯಕ್ಷ ಹೆಚ್.ಎಂ. ಮಧುಸೂದನ್, ಸಮಾಜದಪ್ರಮುಖರಾದ ಎಂ.ಎಸ್. ಗಣೇಶ್ ಇದ್ದರು.

ಐರೋಡಿ ಗ್ರಾ.ಪಂ. ಮಹಿಳಾ ಮತ್ತು ಮಕ್ಕಳ ಹಕ್ಕುಗಳ ವಿಶೇಷ ಸಭೆ



ಕೋಟ: ಐರೋಡಿ ಗ್ರಾಮ ಪಂಚಾಯತನ 2025–26ನೇ ಸಾಲಿನ ಮಹಿಳಾ ಮತ್ತು ಮಕ್ಕಳ ಹಕ್ಕುಗಳ ವಿಶೇಷ ಸಭೆಯು ಇತ್ತೀಚೆಗೆ ಗ್ರಾಮ ಪಂಚಾಯತ ಅಧ್ಯಕ್ಷರಾದ ಸಕ್ಕು ಅಧ್ಯಕ್ಷತೆಯಲ್ಲಿ ಪಂಚಾಯತ್ ಸಭಾಂಗಣದಲ್ಲಿ ಜರುಗಿತು.
ಸಭೆಯಲ್ಲಿಸಮುದಾಯ ಆರೋಗ್ಯ ಕೇಂದ್ರ ಬ್ರಹ್ಮಾವರ ಇದರ ಮೇಲ್ವಿಚಾರಕರಾದ ಮಂಜುನಾಥ,ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮೇಲ್ವಿಚಾರಕಿ ಭಾಗೀರಥಿ,ಪೋಲೀಸ್ ಇಲಾಖೆಯ ಸಹಾಯಕ ಠಾಣಾಧಿಕಾರಿ ಸಂತೋಷ್ ಇವರು ಮಾಹಿತಿ ನೀಡಿದರು.
ಗ್ರಾಮ ಪಂಚಾಯಿತಿ ವತಿಯಿಂದ ಎಲ್ಲಾ ಶಾಲೆ ಮತ್ತು ಅಂಗನವಾಡಿಗಳಿಗೆ ಕ್ರೀಡಾ ಸಾಮಗ್ರಿಗಳನ್ನು ವಿತರಿಸಲಾಯಿತು.
ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ್ ಉಪಾಧ್ಯಕ್ಷರಾದ ಗೀತಾ ಶೆಟ್ಟಿ,ಸದಸ್ಯರಾದ ನವೀನ ಕಾರಂತ, ಶಿವರಾಮ ಶ್ರೀಯಾನ್, ನಟರಾಜ ಗಾಣಿಗ,ಸುಬ್ರಹ್ಮಣ್ಯ ಆಚಾರ್ಯ, ಸುಧಾಕರ ಪೂಜಾರಿ, ಶೇಖರ ಪೂಜಾರಿ, ಸುಲೋಚನಾ,ರಮ್ಯ, ಸರೋಜಾ, ಮೀನಾಕ್ಷಿ, ಅನುಸೂಯಾ,ನಾಗರತ್ನ, ಗ್ರಾಮ ಪಂಚಾಯತ ಸಿಬ್ಬಂದಿಯವರು ಶಾಲಾ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು, ಆರೋಗ್ಯ ಇಲಾಖೆಯ ನರ್ಸ್,ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಪುನರ್ವಸತಿ ಕಾರ್ಯಕರ್ತರು, ಗ್ರಂಥಾಲಯ ಮೇಲ್ವಿಚಾರಕಿ, ಸಂಜೀವಿನಿ ಒಕ್ಕೂಟದವರು ಗ್ರಾಮಸ್ಥರು ಉಪಸ್ಥಿತರಿದ್ದರು.ಪಿಡಿಒ ಪ್ರಶಾಂತ ಸ್ವಾಗತಿಸಿ, ಲೆಕ್ಕ ಸಹಾಯಕಿ ಪೂರ್ಣಿಮಾ ವಂದಿಸಿದರು. ಕಾರ್ಯದರ್ಶಿ ವಿಜಯಾ ಭಂಡಾರಿ ನಿರೂಪಿಸಿದರು.

ಗೋಳ್ತಮಜಲ್ ಗ್ರಾ.ಪಂ.ನಲ್ಲಿ ಆರೋಗ್ಯ ತಪಾಸಣಾ ಶಿಬಿರ




ಬಂಟ್ವಾಳ: ತಾಲೂಕಿನಗೋಳ್ತಮಜಲು ಗ್ರಾಮ ಪಂಚಾಯತ್ ಹಾಗೂ ಸಂಜೀವಿನಿ ಒಕ್ಕೂಟ ಆಶಯದಲ್ಲಿ ಲಯನ್ಸ್ ಕ್ಲಬ್ ಅಮ್ಟೂರು, ಆಶೀರ್ವಾದ ಸಂಜೀವಿನಿ ಒಕ್ಕೂಟ ಗೋಳ್ತಮಜಲು, ಪ್ರಾಥಮಿಕ ಆರೋಗ್ಯ ಕೇಂದ್ರ ಬಾಳ್ತಿಲ, ಆಯುಷ್ಮಾನ್ ಆರೋಗ್ಯ ಕೇಂದ್ರ ಗೋಳ್ತಮಜಲು, ಹಾಗೂ ವಿಜನ್ ಸ್ಪ್ರಿಂಗ್ ಆಶ್ರಯದಲ್ಲಿ ಆರೋಗ್ಯ ಶಿಬಿರವು ಗೋಳ್ತಮಜಲು ಗ್ರಾ.ಪಂ. ಸಭಾಭವನದಲ್ಲಿ ನಡೆಯೊತು.
ಶಿಬಿರದಲ್ಲಿ ರಕ್ತದ ಒತ್ತಡ, ಮಧುಮೇಹ, ಕಣ್ಣಿನ ತಪಾಸಣೆ ಹಾಗೂ ಅಭಾ ನೋಂದಣಿ ನಡೆಸಲಾಯಿತು. ಸಂಜೀವಿನಿ ಒಕ್ಕೂಟದ ಅಧ್ಯಕ್ಷ ವಿದ್ಯಾ ಕೊಟ್ಟಾರಿ ಅಧ್ಯಕ್ಷತೆ ವಹಿಸಿದ್ದರು. ಬಾಳ್ತಿಲ ಆರೋಗ್ಯ ಕೇಂದ್ರದ ವೈದ್ಯ ಡಾ. ಜಯಪ್ರಕಾಶ್ ಆರೋಗ್ಯದ ಮಹತ್ವದ ಬಗ್ಗೆ ಮಾಹಿತಿ ನೀಡಿದರು
ಪಂಚಾಯತ್ ಮಾಜಿ ಅಧ್ಯಕ್ಷೆ ಪ್ರೇಮ ಪುರುಷೋತ್ತಮ, ಅಮ್ಟೂರು ಲಯನ್ಸ್ ಕ್ಲಬ್ ಅಧ್ಯಕ್ಷ ಎಲಿಯಾಸ್ ಡಿಸೋಜಾ, ಪಿಡಿಒ ಸುನೀಲ್ ಕುಮಾರ್, ಸಮುದಾಯ ಆರೋಗ್ಯ ಅಧಿ ಕಾರಿ ಡಾ. ಆಕಾಶ್, ವಿಜನ್ ಸ್ಪ್ರಿಂಗ್ ಸಂಸ್ಥೆಯ ಇನ್‌ಚಾರ್ಜ್ ಜಲೀಲ್, ಸಂಜೀವಿನಿ ಅಭಿಯಾನ ಘಟಕದ ವಲಯ ಮೇಲ್ವಿಚಾರಕಿ ಕುಸುಮ, ತಾಲೂಕು ವ್ಯವಸ್ಥಾಪಕ ಪ್ರದೀಪ್ ಉಪಸ್ಥಿತರಿದ್ದರು. ಲಯನ್ಸ್ ಕ್ಲಬ್ ವತಿಯಿಂದ ಮೊದಲ 50 ಜನರಿಗೆ ಕನ್ನಡಕಗಳನ್ನು ವಿತರಿಸಲಾಯಿತು. ಕೃಷಿ ಸಖಿ ಪುಷ್ಪ ಸ್ವಾಗತಿಸಿದರು. ಒಕ್ಕೂಟದ ಮುಖ್ಯ ಪುಸ್ತಕ ಬರಹಗಾರರಾದ ಭವಾನಿ ನಿರೂಪಿಸಿದರು.

ವಕ್ವಾಡಿಯಲ್ಲಿ ಅಜ್ಜ-ಅಜ್ಜಿ ದಿನಾಚರಣೆ



ಕುಂದಾಪುರ: ವಕ್ವಾಡಿಯ ಗುರುಕುಲ ಪಬ್ಲಿಕ್ ಶಾಲೆಯಲ್ಲಿ ಶನಿವಾರ ಅಜ್ಜ-ಅಜ್ಜಿ ದಿನಾಚರಣೆ ನಡೆಯಿತು.
ಮಹಾತ್ಮಾ ಗಾಂಧಿ ಪ್ರೌಢಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯ ಎಂ.ವೀರಣ್ಣ ಶೆಟ್ಟಿ ಅತಿಥಿಯಾಗಿದ್ದರು. ಶಾಲೆಯ ಪ್ರಾಂಶುಪಾಲೆ ಡಾ.ರೂಪಾ ಶೆಣೈ ಕಾರ್ಯಕ್ರಮ ಉದ್ಘಾಟಿಸಿ, ನಮ್ಮ ಜೀವನದಲ್ಲಿ ಅಜ್ಜ-ಅಜ್ಜಿ ಅವರ ಮಹತ್ವದ ಬಗ್ಗೆ ಮಾತನಾಡಿದರು. ಮಾಂಟೆಸ್ಸೋರಿ ಮಕ್ಕಳ ಅಜ್ಜ-ಅಜ್ಜಿಯರು ವಿವಿಧ ಆಟಗಳು ಮತ್ತು ಚಟುವಟಿಕೆಗಳಲ್ಲಿ ಉತ್ಸಾಹದಿಂದ ಭಾಗವಹಿಸಿ ಕಾರ್ಯಕ್ರಮವನ್ನು ಇನ್ನಷ್ಟು ರಂಜಿಸಿದರು. ಮಕ್ಕಳು ತಮ್ಮ ಅಜ್ಜ-ಅಜ್ಜಿಯರ ಬಗ್ಗೆ ಮನಮುಟ್ಟುವ ಭಾಷಣಗಳನ್ನು ನೀಡಿ ಎಲ್ಲರ ಮನ ಗೆದ್ದರು. ಕೀರ್ತಿ ಶೆಟ್ಟಿ ಕಾರ್ಯಕ್ರಮ ನಿರ್ವಹಿಸಿದರು.



**ಕಾರ್ಕಳ ತಾಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರ ದೊಂಡೇರಂಗಡಿ, ಆಯುಷ್ಮಾನ್ ಆರೋಗ್ಯ ಕೇಂದ್ರ ಎಳ್ಳಾರೆ ಇದರ ಹೊಸ ಕಟ್ಟಡ ಕಾಮಗಾರಿಯ ಶಂಕು ಸ್ಥಾಪನೆಯು ನಡೆಯಿತು.
ಸಂಸದ ಕೋಟ ಶ್ರೀನಿವಾಸ ಪೂಜಾರಿ, ಕಾರ್ಕಳ ಶಾಸಕ ವಿ. ಸುನೀಲ್ ಕುಮಾರ್, ತಾಲೂಕು ಆರೋಗ್ಯ ಅಧಿಕಾರಿ ಡಾ. ಸಂಧೀಪ್ ಕುಡ್ವ ವೈದ್ಯಾಧಿಕಾರಿ ಡಾ.ಚಂದ್ರಿಕಾ ಕಿಣಿ ಉಪಸ್ಥಿತರಿದ್ದರು.**

ಪ್ರಕೃತಿ ಮಡಿಲ ಆಳಗುಂಡಿ ಬ್ರಹ್ಮಸ್ಥಾನದಲ್ಲಿ ಡಾ.ಜನಾರ್ದನ ಭಟ್ಟರ ಬೆರ್ಮೆರು, ಹೊಸಹೊಳಲು ಕೃತಿ ಬಿಡುಗಡೆ, ಸಂವಾದ

ತುಳುನಾಡಿನ ಪ್ರಧಾನ ದೈವವಾಗಿ ಆರಾಧನೆಗೊಳ್ಳುವ ಬೆರ್ಮೆರು ಚತುರ್ಮುಖ ಬ್ರಹ್ಮನಲ್ಲ



ಕಿನ್ನಿಗೋಳಿ: ತುಳುನಾಡಿನ ದೈವಾರಾಧನೆಯ ಕ್ಷೇತ್ರಗಳಲ್ಲಿ ಪ್ರಧಾನ ದೈವವಾಗಿ ಆರಾಧನೆಗೊಳ್ಳುವ ದೈವಿಕಶಕ್ತಿಯಾದ ಬೆರ್ಮೆರು ಚತುರ್ಮುಖ ಬ್ರಹ್ಮನಲ್ಲ ಎಂದು ಹೇಳಿದರು. ಬೆರ್ಮೆರು ಎನ್ನುವ ಪದ ತಮಿಳು ಭಾಷೆಯ ಪೆರುಮಾಳ್ ಪದದ ಹಾಗೆ ದೇವರು' ಎಂಬ ಅರ್ಥ ಕೊಡುವ ರೂಢನಾಮವಾಗಿದೆ. ಬೆರ್ಮೆರು' ಪದವನ್ನು 'ಬ್ರಹ್ಮ' ಎಂದು ಬರೆಯುವ ಕ್ರಮ ತುಳುಪದಗಳನ್ನು ಕನ್ನಡದಲ್ಲಿ ಬರೆಯುವ ಕ್ರಮದಂತೆ ಬಂದಿದೆ. ತುಳುವರ ಪ್ರಧಾನ ದೈವ ಬೆರ್ಮೆರು ಅಂದರೆ ಶಾಸ್ತಾವು ಅಥವಾ ಶಾತವಾಹನ ಎಂದು ಖ್ಯಾತ ಸಾಹಿತಿ ಡಾ. ಬಿ. ಜನಾರ್ದನ ಭಟ್ ಹೇಳಿದ್ದಾರೆ.
ಅವರು ಸಚ್ಚೇರಿಪೇಟೆ ಸೇತುವೆ ಬಳಿಯ ಶಾಂಭವಿ ನದಿ ತಟದಲ್ಲಿರುವ ಆಳಗುಂಡಿ ಬ್ರಹ್ಮಸ್ಥಾನದಲ್ಲಿ ದ.ಕ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮೂಲ್ಕಿ ತಾಲೂಕು ಘಟಕದ ವತಿಯಿಂದ ಡಾ.ಬಿ. ಜನಾರ್ದನ ಭಟ್ ಬರೆದ ತುಳುನಾಡಿನ ಬೆರ್ಮೆರು ಹಾಗೂ ಹೊಸಹೊಳಲು ಕೃತಿಗಳ ಬಿಡುಗಡೆ ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕಾರಣಿಕದ ದೈವವಾಗಿದ್ದಾನೆ

ಜೈನರ ಬ್ರಹ್ಮ ಯಕ್ಷನೂ ತುಂಬಾ ಕಾರಣಿಕದ ದೈವವಾಗಿದ್ದಾನೆ. ಮೊದಲು ಕೆಂಪುಕಲ್ಲು, ಆಮೇಲೆ ಗ್ರಾನೈಟ್ ಕಲ್ಲು, ಪದ್ಮಕಲ್ಲುಗಳಲ್ಲಿ ನಾಗಬೆರ್ಮೆರನ್ನು ನಂಬುವುದನ್ನು ಕಾಣುತ್ತೇವೆ. ಬೆರ್ಮೆರಿಗೆ ಸಾಂಕೇತಿಕವಾಗಿ ಪ್ರಧಾನ ದೈವವೆಂದು ಆರಾಧನೆ ಇರುತ್ತದೆ. ದೇವಸ್ಥಾನಗಳಲ್ಲಿ ನೈಋತ್ಯ ಭಾಗದಲ್ಲಿ ಶಾಸ್ತಾವು ಬೆರ್ಮೆರ ಆರಾಧನೆ ಇದೆ ಎನ್ನುವುದನ್ನು ಗುರುತಿಸಬಹುದು. ಚಿತ್ತಾರಿ ಹೆಸರಿನ ದೇವಸ್ಥಾನ ಅಥವಾ ದೈವಸ್ಥಾನಗಳು ಉಡುಪಿ ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡು ಬರುತ್ತವೆ. ಇವು ಬೆರ್ಮೆರ್ ದೈವದ ಮೂಲ ಆರಾಧನಾ ಸ್ಥಳವಾಗಿರಬೇಕು. ಕೆಲವು ಕಡೆ ಬೆರ್ಮೆರಿಗೆ ದೈವಕ್ಕೆ ಸಲ್ಲುವಂತಹ ಕೋಲ ಅಥವಾ ಕೋಲಬಲಿ ನಡೆಯು ತ್ತದೆ ಎಂದು ಬೆರ್ಮೆರ್ ಕುರಿತಾಗಿ ತನ್ನ ಕ್ಷೇತ್ರಕಾರ್ಯ , ಅಧ್ಯಯನ ಆಧರಿಸಿ ಅನೇಕ ಸಂಗತಿಗಳನ್ನು ಹೇಳಿದರು.
ತುಳುನಾಡಿನ ಬೆರ್ಮೆರು ಕೃತಿಯನ್ನು ಪೊಸ್ರಾಲು ದೇವಳ ಅರ್ಚಕ ರಾಘವೇಂದ್ರ ಭಟ್, ಮುಂಡ್ಕೂರು ದೇಗುಲದ ವ್ಯವಸ್ಥಾಪನಾ ಸಮಿತಿ ಸದಸ್ಯ ಜಗದೀಶ ಶೆಟ್ಟಿ ನಡಿಗುತ್ತು ಬಿಡುಗಡೆಗೊಳಿಸಿದರು.

ಅಭಿನಂದನೀಯ

ಜನಾರ್ದನ ಭಟ್ಟರ ಹೊಸಹೊಳಲು' ಪುಸ್ತಕವನ್ನು ಬಿಡುಗಡೆಗೊಳಿಸಿದ ಇತಿಹಾಸ ತಜ್ಞ ಡಾ. ಪುಂಡಿಕಾಯಿ ಗಣಪಯ್ಯ ಭಟ್ ಮಾತನಾಡಿ, ಜನಾರ್ದನ ಭಟ್ಟರು ಕಾದಂಬರಿ, ಕಥಾಗಾರರಾಗಿಯ ಅಲ್ಲದೆ, ಇತಿಹಾಸದ ಕುರಿತಾಗಿ ವಿಶೇಷ ಆಸಕ್ತಿ ವಹಿಸಿ ಕೃತಿಗಳನ್ನು ರಚಿಸಿರುವುದು ಅಭಿನಂದನೀಯ ಎಂದರು.

ನಮ್ಮನ್ನು ನಾವು ಎತ್ತರಿಸಿಕೊಳ್ಳೋಣ

ಮುಂಡ್ಕೂರು ಗ್ರಾ.ಪಂ. ಮಾಜಿ ಅಧ್ಯಕ್ಷ ಸತ್ಯಶಂಕರ ಶೆಟ್ಟಿ ಬೆರ್ಮಸ್ಥಾನದಲ್ಲಿ ಪ್ರಕೃತಿಯೊಂದಿಗೆ ಕೃತಿ ಬಿಡುಗಡೆ, ಸಂವಾದ ಕಾರ್ಯಕ್ರಮ ವಿಶಿಷ್ಟ ಅನುಭೂತಿ ಕೊಡುತ್ತಿದೆ. ಕೃತಿ ಕೊಂಡು ಓದಿ, ಹೊಸವಿಚಾರ ತಿಳಿದು ಕೊಂಡು ನಮ್ಮನ್ನು ನಾವು ಎತ್ತರಿಸಿಕೊಳ್ಳೋಣ ಎಂದರು.
ಬಳಿಕ ಸಂವಾದ ನಡೆಯಿತು. ಕಸಾಪ ಮೂಲ್ಕಿ ಘಟಕಾಧ್ಯಕ್ಷ ಮಿಥುನ ಕೊಡೆತ್ತೂರು, ಪದಾಧಿಕಾರಿಗಳಾದ ವೀಣಾ ಶಶಿಧರ್, ಹೆರಿಕ್ ಪಾಯಸ್, ಪ್ರಕಾಶ್ ಆಚಾರ್, ಸ್ವರಾಜ್ ಶೆಟ್ಟಿ, ದೇವದಾಸ ಮಲ್ಯ, ಕೃಷ್ಣರಾಜ ಭಟ್, ಮಾಧವ ಕೆರೆಕಾಡು, ಪಂ.ಸದಸ್ಯ ಜಿತೇಂದ್ರ ಕರ್ಕೇರ ಮತ್ತಿತರರಿದ್ದರು.

ಸುತ್ತ ಮುತ್ತ

ಇಂದು ವಾರ್ಷಿಕೋತ್ಸವ

ಕುಂಬಳೆ: ಪುತ್ತಿಗೆ ಪೊನ್ನಂಗಳ ಬೇರ್ಯ ಶ್ರೀಕೃಷ್ಣ ನಗರದಲ್ಲಿರುವ ಶ್ರೀಕೃಷ್ಣ ಭಜನಾ ಮಂದಿರದಲ್ಲಿ 21ನೇ ವರ್ಷದ ಪ್ರತಿಷ್ಠಾ ವಾರ್ಷಿಕೋತ್ಸವವು ಫೆ.17ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಬೆಳಗ್ಗೆ 7ಗಂಟೆಗೆ ಗಣಪತಿ ಹೋಮ, 9ಕ್ಕೆ ಶ್ರೀ ಸತ್ಯನಾರಾಯಣ ಪೂಜೆ ಆರಂಭ, ಮಧ್ಯಾಹ್ನ 12ಗಂಟೆಗೆ ಮಂಗಳಾರತಿ, ಸಂಜೆ 6ಕ್ಕೆ ಭಜನೆ, ರಾತ್ರಿ 9ಕ್ಕೆ ಚಿತ್ರಾಯ ಬಾಲ ವಿಹಾರ್ ಮಕ್ಕಳಿಂದ ನೃತ್ಯ ವೈವಿಧ್ಯ ನಡೆಯಲಿದೆ.

ಫೆ.21ರಂದು ಪ್ರತಿಷ್ಠಾ ದಿನಾಚರಣೆ

ಮಂಜೇಶ್ವರ: ಬಾಯಾರು ಸಮೀಪದ ಮಾಣಿಲಬೀಡು ಶ್ರೀ ವಿಷ್ಣುಮೂರ್ತಿ ದೇವಾಲಯದಲ್ಲಿ ಪ್ರತಿಷ್ಠಾ ದಿನಾಚರಣೆ ಮತ್ತು ರಂಗಪೂಜೆಯು ಫೆ.21ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಬೆಳಗ್ಗೆ 8ಗಂಟೆಗೆ ಗಣಪತಿ ಹವನ, 9ಕ್ಕೆ ನವಕ ಕಲಶಪೂಜೆ, ಪವಮಾನಾಭಿಷೇಕ, ಭಜನೆ, ಮಧ್ಯಾಹ್ನ ಮಹಾಪೂಜೆ, ಅನ್ನಸಂತರ್ಪಣೆ, ಸಂಜೆ 6.30ಕ್ಕೆ ಭಜನೆ, ರಾತ್ರಿ 8ಕ್ಕೆ ರಂಗಪೂಜೆ, ಅನ್ನಸಂತರ್ಪಣೆ ನಡೆಯಲಿದೆ. 9ಗಂಟೆಗೆ 'ಜೋಡು ಜೀಟಿಗೆ' ನಾಟಕ ಪ್ರದರ್ಶನಗೊಳ್ಳಲಿದೆ.

ಮಾ.1ರಂದು ಮಂಗಲ್ಪಾಡಿ ಪಂಚಾಯತ್ ಮಟ್ಟದ ಹಿಂದೂ ಸಮಾಜೋತ್ಸವ

ಉಪ್ಪಳ: ಮಂಗಲ್ಪಾಡಿ ಪಂಚಾಯತ್ ಮಟ್ಟದ ಹಿಂದೂ ಸಮಾಜೋತ್ಸವ ಮಾರ್ಚ್ 1ರಂದು ಸಂಜೆ ಪ್ರತಾಪನಗರದ ಶಿವಶಕ್ತಿ ಮೈದಾನದಲ್ಲಿ ಜರಗಲಿದೆ. ಸಮಿತಿಯ ರಕ್ಷಾಧಿಕಾರಿ ಕೊಂಡೆವೂರು ಶ್ರೀ ನಿತ್ಯಾನಂದ ಯೋಗಾಶ್ರಮ ಮಠದ ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿ ಆಶೀರ್ವಚನ ನೀಡುವರು. ಮಂಗಲ್ಪಾಡಿ ಮನೆತನದ ಹಿರಿಯರಾದ ಬಿ.ಸುಭಾಷಿಣಿ ನಾಯಕ್ ಅಧ್ಯಕ್ಷತೆ ವಹಿಸುವರು. ಕರ್ನಾಟಕ ರಾಜ್ಯ ದೇವಾಲಯ ಸಂವರ್ಧನ ಸಮಿತಿ ಸಂಯೋಜಕ್ ಮನೋಹರ್ ಮಠದ್ ದಿಕ್ಸೂಚಿ ಭಾಷಣ ಮಾಡುವರು. ಅಪರಾಹ್ನ 3 ಗಂಟೆಗೆ ಶಾಂತಿಗುರಿ ಶ್ರೀ ಮಹಾಂಕಾಳಿ ಕ್ಷೇತ್ರದಿಂದ ಬೃಹತ್ ಶೋಭಾಯಾತ್ರೆ ಹೊರಡಲಿದೆ. ಹಿಂದೂ ಸಮಾಜೋತ್ಸವದಲ್ಲಿ ದೇವಸ್ಥಾನ, ದೈವಸ್ಥಾನಗಳ ಮುಖಂಡರು, ಸಂಘ ಸಂಸ್ಥೆಗಳು, ಮಹಿಳಾ ಸಂಘ, ಭಜನಾ ಸಂಘ ಹಾಗೂ ಮಕ್ಕಳ ಸಹಿತ ಎಲ್ಲರೂ ಒಟ್ಟಾಗಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಸಮಿತಿ ಅಧ್ಯಕ್ಷ ಸಿ.ಎಸ್. ಕೃಷ್ಣಪ್ಪ ಐಲ್, ಪದಾಧಿಕಾರಿಗಳು ವಿನಂತಿಸಿದ್ದಾರೆ.

ಸಂಸ್ಥೆಗಳಿಂದ ಅರ್ಜಿ ಆಹ್ವಾನ

ಕಾಸರಗೋಡು: ಪರಿಶಿಷ್ಟ ಜಾತಿ ಅಭಿವೃದ್ಧಿ ಇಲಾಖೆಯಿಂದ ಜಾರಿಗೆ ತಂದಿರುವ ವಿಷನ್ ಮತ್ತು ವಿಷನ್ ಪ್ಲಸ್ ಯೋಜನೆಯಡಿ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಪ್ರವೇಶ ಪರೀಕ್ಷೆಯ ತರಬೇತಿ ನೀಡಲು ಅರ್ಹ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಸಂಸ್ಥೆಗಳು ಸಂಸ್ಥೆ ಸ್ಥಾಪನೆಯ ವರ್ಷ, ಹಿಂದಿನ ಪರೀಕ್ಷಾ ತರಬೇತಿ ವಿಜೇತರ ಬಗ್ಗೆ ಮಾಹಿತಿ ಮತ್ತು ವಿಜೇತರ ಸಮಗ್ರ ಮಾಹಿತಿ ಒಳಗೊಂಡಿರುವ ಸಂಸ್ಥೆ ಕರಪತ್ರದೊಂದಿಗೆ ಫೆ.28ರೊಳಗೆ ಜಿಲ್ಲಾ ಪರಿಶಿಷ್ಟ ಜಾತಿ ಅಭಿವೃದ್ಧಿ ಇಲಾಖೆ ಕಚೇರಿಗೆ ಅರ್ಜಿ ಸಲ್ಲಿಸಬೇಕು. ಮಾಹಿತಿಗೆ 04994256162 ಕರೆ ಮಾಡಬಹುದು.

ಸಾಹಿತ್ಯಾಮೃತ ಗಾನಾಮೃತ ಕಾರ್ಯಕ್ರಮ

ಕಾಸರಗೋಡು: ಪೆರ್ಲ ಇಡಿಯಡ್ಕ ಶ್ರೀ ದುರ್ಗಾಪರಮೇಶ್ವರಿ ವಿಷ್ಣುಮೂರ್ತಿ (ಉಳ್ಳಾಲ್ತಿ) ಕ್ಷೇತ್ರದ ವಾರ್ಷಿಕ ಜಾತ್ರಾ ಮಹೋತ್ಸವ ಅಂಗವಾಗಿ ಕಾಸರಗೋಡಿನ ಡಾ.ವಾಣಿಶ್ರೀ ಸಾರಥ್ಯದ ಗಡಿನಾಡ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಸಂಸ್ಥೆ ವತಿಯಿಂದ 171ನೇ ಸಾಂಸ್ಕೃತಿಕ ಕಾರ್ಯಕ್ರಮ ವಿಜೃಂಭಣೆಯಿಂದ ಜರಗಿತು. ಆದರಂತೆ ಹಮ್ಮಿಕೊಳ್ಳಲಾಗಿದ್ದ ಸಾಹಿತ್ಯಾಮೃತ ಗಾನಾಮೃತ ಕಾರ್ಯಕ್ರಮವಾದ ಕನ್ನಡ ಕೋಗಿಲೆಗಳ ಸ್ವರ ನಿನಾದ ಕಾರ್ಯಕ್ರಮದಲ್ಲಿ ಸಂಸ್ಥೆ ಸಂಗೀತ ಕಲಾವಿದರಾದ ವಿಶ್ವನಾಥ ಪುತ್ತಿಗೆ, ದಿವಾಕರ ಕಾಸರಗೋಡು, ಮುರಳಿ ನೀರ್ಚಾಲು, ಮಧುಲತಾ ಪುತ್ತೂರು ಕೇಶವ ಗಾಯನ ಪ್ರಸ್ತುತಪಡಿಸಿದರು. ಡಾ.ವಾಣಿಶ್ರೀ ಅವರು ಸಾಹಿತ್ಯ ಸಾದರಪಡಿಸಿದರು. ಗಡಿನಾಡ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಸಂಸ್ಥೆಯ ಗಾಯನವು ನೆರೆದಿದ್ದ ಜನರ ಕಣ್ಮನ ಸೆಳೆಯಿತು. ದೇವಸ್ಥಾನದ ಪ್ರಮುಖರಾದ ಪ್ರಸಾದ ಪೆರ್ಲ ಅವರು ಸಂಸ್ಥೆ ಮುಖ್ಯಸ್ಥೆ ಡಾ.ವಾಣಿಶ್ರೀ ಕಾಸರಗೋಡು ಅವರನ್ನು ಗೌರವಿಸಿ ಸಂಸ್ಥೆಗೆ ಶುಭಹಾರೈಸಿದರು.

ಪುರಸ್ಕಾರ

ಎಲ್ಲಾ ಕಲಾಮಾಣಿಕ್ಯಗಳಿಗೆ ಸಂಸ್ಥೆಯ ವತಿಯಿಂದ ಗೌರವ ಧನ ಹಾಗೂ ಪುಸ್ತಕ ನೀಡಿ ಪುರಸ್ಕರಿಸಲಾಯಿತು. ವೇದಿಕೆಯಲ್ಲಿ ಗಣ್ಯರಾದ ಅಚ್ಯುತ ಭಟ್, ಶಿವಪ್ರಸಾದ, ಶಶಿಕಲಾ ಮುಂತಾದವರು ಉಪಸ್ಥಿತರಿದ್ದರು.

ಶ್ರೀ ವಿಶ್ವಕರ್ಮ ಭಜನಾ ಸಂಘದ 69ನೇ ಭಜನಾ ವಾರ್ಷಿಕೋತ್ಸವ

ಕಾಸರಗೋಡು: ಶ್ರೀ ವಿಶ್ವಕರ್ಮ ಭಜನಾ ಸಂಘದ 69ನೇ ಭಜನಾ ವಾರ್ಷಿಕೋತ್ಸವವು ಕರಂದಕ್ಕಾಡು ಶ್ರೀ ವಿಶ್ವಕರ್ಮ ಮಂದಿರದಲ್ಲಿ ಸಂಘದ ಧ್ವಜಾರೋಹಣ ಮತ್ತು ಶ್ರೀಗಣಪತಿ ಹೋಮದೊಂದಿಗೆ ಆರಂಭಗೊಂಡಿತು. ಸಂಜೆ ಮಾಯಿಪ್ಪಾಡಿ ಪುರೋಹಿತ್ ಕೇಶವ ಆಚಾರ್ಯರಿಂದ ದೀಪ ಪ್ರತಿಷ್ಠೆಯೊಂದಿಗೆ ಭಜನೆ ಆರಂಭಗೊಂಡು, ಪುರೋಹಿತ ಧರ್ಮೇಂದ್ರ ಆಚಾರ್ಯ ದುರ್ಗಿಪಳ್ಳರಿಂದ ಮಹಾಪೂಜೆ ಹಾಗೂ ಭಾನುವಾರ ಬೆಳಗ್ಗೆ ಭಜನಾ ಸಮಾಪ್ತಿಯೊಂದಿಗೆ ದೀಪ ವಿಸರ್ಜನೆ ನಡೆಯಿತು. ಶನಿವಾರ ರಾತ್ರಿ ನಗರದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನ ಪರಿಸರದಿಂದ ಹೊರಟ ಉಲ್ಪೆ ಮೆರವಣಿಗೆ ಹಾಗೂ ಮಂದಿರದ ಕಾರ್ಯಕ್ರಮದಲ್ಲಿ ಊರ ಪರವೂರ ಮಹನೀಯರು ಹಾಗೂ ಸಮಾಜ ಬಾಂಧವರು ಭಾಗವಹಿಸಿದ್ದರು.

ಜಿಲ್ಲೆಯ ವಿವಿಧ ಶಿವನ ದೇವಸ್ಥಾನದಲ್ಲಿ ವಿಶೇಷ ಪೂಜೆ | ಸಾಂಸ್ಕೃತಿಕ ಕಾರ್ಯಕ್ರಮ

ಕಿದೂರು ಶ್ರೀ ಮಹಾದೇವ ಕ್ಷೇತ್ರದಲ್ಲಿ ಶಿವರಾತ್ರಿ ಆಚರಣೆ






ಕಾಸರಗೋಡು: ಶಿವರಾತ್ರಿ ಮಹೋತ್ಸವದ ಅಂಗವಾಗಿ ಜಿಲ್ಲೆಯ ವಿವಿಧ ಶಿವನ ದೇವಸ್ಥಾನದಲ್ಲಿ ವಿಶೇಷ ಪೂಜೆ , ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಕಿದೂರು ಶ್ರೀ ಮಹಾದೇವ ಕ್ಷೇತ್ರ

ಕಿದೂರು ಶ್ರೀ ಮಹಾದೇವ ಕ್ಷೇತ್ರದಲ್ಲಿ ಶಿವರಾತ್ರಿ ಮಹೋತ್ಸವದ ಅಂಗವಾಗಿ ಅತ್ತಾಳ ಪೂಜೆ ನಡೆಯಿತು. ಬಳಿಕ ಕಿದೂರು ಶಿವ ಸೇವಾ ವೃಂದ ಪ್ರಾಯೋಜಕತ್ವದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಜರಗಿತು.

ಕಾರ್ಯಕ್ರಮವನ್ನು ಕ್ಷೇತ್ರದ ಗುರಿಕ್ಕಾರರಾದ ಶ್ರೀಕೃಷ್ಣ ಭಟ್ ಮಾಳಿಗೆ ಮನೆ ದೀಪ ಬೆಳಗಿಸಿ ಉದ್ಘಾಟಿಸಿದರು. ವೇದಿಕೆಯಲ್ಲಿ ಕ್ಷೇತ್ರದ ಆಡಳಿತ ಟ್ರಸ್ಟಿ ಸದಸ್ಯ ಮನೋರಾಜ್ ರೈ ಕಿದೂರು ಗುತ್ತು, ಕಾಸರಗೋಡು ಗಡಿನಾಡು ಸಾಂಸ್ಕೃತಿಕ ಕಲಾವೇದಿಕೆ ಕಾರ್ಯದರ್ಶಿ ಗುರುರಾಜ್ ಕಾಸರಗೋಡು, ಸಂಘದ ಅಧ್ಯಕ್ಷ ಸದಾಶಿವ ರೈ ಕಿದೂರು ಮೇಗಿನ ಮನೆ, ಉಪಾಧ್ಯಕ್ಷ ಉಮೇಶ ಪಿ., ಜೊತೆ ಕಾರ್ಯದರ್ಶಿ ಹರಿಪ್ರಸಾದ್, ಸಂಘದ ಸಾಂಸ್ಕೃತಿಕ ಕಾರ್ಯದರ್ಶಿ ಶ್ರೀಧರ ಪುಣಿಯೂರು, ಸದಸ್ಯರಾದ ಧೀರಜ್ ಪಿ. ಉಪಸ್ಥಿತರಿದ್ದರು. ಕಾರ್ಯಕ್ರಮದ ಯಶಸ್ವಿಗಾಗಿ ಹಮ್ಮಿಕೊಂಡ ಜಾಹೀರಾತು ಸಂಗ್ರಹದಲ್ಲಿ ಅತಿ ಹೆಚ್ಚು ಜಾಹೀರಾತು ಸಂಗ್ರಹಿಸಿದ ಸಂಘದ ಸದಸ್ಯರನ್ನು ಗೌರವಿಸಲಾಯಿತು.

ಸಂಘದ ಕಾರ್ಯದರ್ಶಿ ಭರತ್‌ರಾಜ್ ಸ್ವಾಗತಿಸಿ, ಕೋಶಾಧಿಕಾರಿ ನಿತಿನ್‌ಕುಮಾರ್ ವಂದಿಸಿದರು. ಅಶೋಕ ಪುಣಿಯೂರು ನಿರೂಪಿಸಿದರು. ಬಳಿಕ ಗಡಿನಾಡು ಸಾಂಸ್ಕೃತಿಕ ಕಲಾ ವೇದಿಕೆ ಕಾಸರಗೋಡು ಇವರಿಂದ ನೃತ್ಯ ಕಾರ್ಯಕ್ರಮ , ಯಶಸ್ವಿ ಕಲಾವಿದರು ಮಂಜೇಶ್ವರ ಅಭಿನಯಿಸಿದ ಅಬ್ಬರ ತುಳು ಹಾಸ್ಯಮಯ ನಾಟಕ ಜರಗಿತು.

ಗುಡ್ಡೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ

ಶಿವರಾತ್ರಿ ಮಹೋತ್ಸವ ಅಂಗವಾಗಿ ಕಾಸರಗೋಡು ಗುಡ್ಡೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ 65ನೇ ಭಜನಾ ಮಹೋತ್ಸವ ಆಯೋಜಿಸಲಾಯಿತು. ಬೆಳಗ್ಗೆ ದೇವಸ್ಥಾನದಲ್ಲಿ ಗಣಪತಿಹೋಮ, ದೀಪ ಪ್ರತಿಷ್ಠೆ ನಡೆಯಿತು. ವಿವಿಧ ಭಜನಾ ತಂಡಗಳಿಂದ ಭಜನೆ, ಗುಡ್ಡೆ ಶ್ರೀ ಮಹಾಲಿಂಗೇಶ್ವರ ಸನಾತನ ಧರ್ಮ ಪಾಠಶಾಲೆ ಮಕ್ಕಳಿಂದ ನೃತ್ಯ ಭಜನೆ ನಡೆಯಿತು. ಬಳಿಕ ದೇವಳದಲ್ಲಿ ನಾಗತಂಬಿಲ, ಮಹಾಪೂಜೆ, ತುಲಾಭಾರ, ದೀಪಾವರಣ ಪ್ರಸಾದ ನಡೆಯಿತು. ಸಂಜೆ ಕೇಳುಗುಡ್ಡೆ ಶ್ರೀ ಅಯ್ಯಪ್ಪ ಭಜನಾ ಮಂದಿರ , ಅಡ್ಕತ್ತಬೈಲು ಶ್ರೀ ಸುಬ್ರಹ್ಮಣ್ಯ ಭಜನಾ ಮಂದಿರದಿಂದ ಹಸಿರುವಾಣಿ ಸಮರ್ಪಣೆ ಹಾಗೂ ಮಹಾಪೂಜೆ ನಡೆಯಿತು.

ಕುಣಿತ ಭಜನೆ

ಶಿವರಾತ್ರಿ ಮಹೋತ್ಸವದ ಅಂಗವಾಗಿ ಕಾಸರಗೋಡು ಗುಡ್ಡೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಸನಾತನ ಧರ್ಮ ಪಾಠಶಾಲೆ ಮಕ್ಕಳಿಂದ ಕುಣಿತ ಭಜನೆ ಜರಗಿತು.

ಕುಂಬಳೆ ಶೇಡಿಕಾವು ದೇವಸ್ಥಾನ

ಕುಂಬಳೆ ಶೇಡಿಕಾವು ಶ್ರೀ ಶಂಕರನಾರಾಯಣ ದೇವಳದಲ್ಲಿ ಶಿವರಾತ್ರಿ ಮಹೋತ್ಸವದ ಅಂಗವಾಗಿ ಶ್ರೀ ದೇವರ ಬಲಿ, ವಿಶೇಷ ಪೂಜೆ ಸಹಿತ ವಿವಿಧ ವೈದಿಕ, ಧಾರ್ಮಿಕ ಕಾರ್ಯಕ್ರಮ ನೆರವೇರಿಸಲಾಯಿತು.

ಪೈವಳಿಕೆ ಸರಕಾರಿ ಶಾಲೆ: ಹಳೆ ವಿದ್ಯಾರ್ಥಿಗಳ ಸುವರ್ಣ ಮಿಲನ, ಗುರುವಂದನೆ ಸಂಭ್ರಮ



ಉಪ್ಪಳ: ಪೈವಳಿಕೆ ಸರಕಾರಿ ಉನ್ನತ ಪ್ರೌಢಶಾಲೆ 1973–74ರ ಹಳೆ ವಿದ್ಯಾರ್ಥಿಗಳು 50 ವರ್ಷದ ಬಳಿಕ ಮತ್ತೆ ಸೇರಿಕೊಂಡ ಸುವರ್ಣ ಮಿಲನದ ಸಂದರ್ಭ ತಮಗೆ ವಿದ್ಯೆಯನ್ನಿತ್ತ ಗುರುಗಳಿಗೆ ಗುರುವಂದನಾ ಕಾರ್ಯಕ್ರಮ ಶಾಲೆಯಲ್ಲಿ ಹಮ್ಮಿಕೊಂಡರು.

ನಿವೃತ್ತ ಜಿಲ್ಲಾ ಶಿಕ್ಷಣಾಧಿಕಾರಿ ಟಿ.ತಲೆಂಗಳ ನಾರಾಯಣ ಭಟ್, ನಿವೃತ್ತ ಉಪಜಿಲ್ಲಾಧಿಕಾರಿ ಇಬ್ರಾಹಿಂ, ನಿವೃತ್ತ ಪ್ರೌಢಶಾಲಾ ಮುಖ್ಯೋಪಾಧ್ಯಾಯ ಶ್ರೀನಿವಾಸ ಭಟ್ ಹಾಗೂ ನಿವೃತ್ತ ಮುಖ್ಯೋಪಾಧ್ಯಾಯ ಸುಬ್ಬಣ್ಣ ಭಟ್ ಅವರನ್ನು ಎಲ್ಲಾ ಹಳೆ ವಿದ್ಯಾರ್ಥಿಗಳು 52 ವರ್ಷದ ಪ್ರೌಢಶಾಲಾ ವಿದ್ಯಾರ್ಥಿಗಳಾಗಿ ತಮ್ಮ ನೆಚ್ಚಿನ ನಾಲ್ಕು ಮಂದಿ ಗುರುವರ್ಯರನ್ನು ಸನ್ಮಾನಿಸಿದರು. ಸನ್ಮಾನ ಸ್ವೀಕರಿಸಿದ ಗುರುಗಳು ಇಷ್ಟು ವರ್ಷದ ಮೇಲೂ ತಮ್ಮನ್ನು ನೆನಪಿಸಿಕೊಂಡು ಸನ್ಮಾನಿಸಿದ ವಿದ್ಯಾರ್ಥಿಗಳನ್ನು ತುಂಬು ಮನಸ್ಸಿನಿಂದ ಹರಸಿ ಆಶೀರ್ವದಿಸಿದರು.

ಅತಿಥಿಗಳಾಗಿ ಶಾಲಾ ಮುಖ್ಯೋಪಾಧ್ಯಾಯಿನಿ ಭಾಗ್ಯಲಕ್ಷ್ಮಿ, ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷ ಆದಂ ಬೆಳ್ಳೂರು, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ರಾಘವ ಚೇರಾಲ್ ಉಪಸ್ಥಿತರಿದ್ದರು. ವಿಜಯಪ್ರಭಾ ಪ್ರಾರ್ಥಿಸಿ, ಇಬ್ರಾಹಿಂ ಪ್ರಸ್ತಾವನೆಗೈದರು. ಹಮೀದ್, ರಮೇಶ್ ಬಾಯಾರ್, ಶಂಕರ ಕಾಮತ್, ಜಯಲಕ್ಷ್ಮಿ ಸನ್ಮಾನ ಫಲಕಗಳನ್ನು ವಾಚಿಸಿದರು. ಲಕ್ಷ್ಮಿಕುಮಾರ್ ಸ್ವಾಗತಿಸಿದರು. ಡಾ.ಮೀನಾಕ್ಷಿ ರಾಮಚಂದ್ರ ವಂದಿಸಿದರು. ಲೀಲಾವತಿ ಚೇರಾಲ್ ನಿರೂಪಿಸಿದರು.

ಶಾಲೆ ಸಂಸ್ಥಾಪಕ ದಿ.ಕುಂಡೇರಿ ನಾರಾಯಣ ಭಟ್‌ರ ಪುತ್ರಿ ಶಂಕರಿ ಕುಂಡೇರಿ ಉಪಸ್ಥಿತರಿದ್ದರು. ರಾಧಾಕೃಷ್ಣ, ಡಾ.ನಾರಾಯಣ ಭಟ್, ರಾಘವ, ದಾಮೋದರ, ಈಶ್ವರ ಭಟ್, ಸೀತಾ, ಮೊಯ್ದುಕುಟ್ಟಿ ಮಾಸ್ಟರ್, ಸುಗಂ, ಲತಾ ಎಸ್.ಶೆಟ್ಟಿ ಮತ್ತಿತರರಿದ್ದರು.

ಮೀಂಜದಲ್ಲಿ ಹಿಂದೂ ಸಮಾಜೋತ್ಸವ: ಪೂರ್ವಭಾವಿ ದ್ವಿಚಕ್ರ ವಾಹನ ಜಾಥಾ



ಮಂಜೇಶ್ವರ: ಹಿಂದು ಸಮಾಜೋತ್ಸವ ಮೀಂಜ ಪಂಚಾಯತ್ ಸಮಿತಿಯಿಂದ ಫೆ.22ರಂದು ಹಿಂದು ಸಮಾಜೋತ್ಸವ ಜರಗಲಿದ್ದು ಈ ಕಾರ್ಯಕ್ರಮದ ಪೂರ್ವಭಾವಿಯಾಗಿ ದ್ವಿಚಕ್ರ ವಾಹನ ಜಾಥಾ ಭಾನುವಾರ ನಡೆಯಿತು.

ಚಿಗುರುಪಾದೆ ಶ್ರೀ ಮೊಗೇರ ದೈವಸ್ಥಾನದಿಂದ ಹೊರಟು ಮೀಂಜ ಗ್ರಾ.ಪಂ.ನ ಎಲ್ಲಾ ಕೇಂದ್ರಗಳಿಗೆ ಪ್ರಮುಖ ಮಾರ್ಗಗಳಲ್ಲಿ ಸಂಚರಿಸಿ ದುರ್ಗಿಪಳ್ಳ ಚೌಕಾರು ಶ್ರೀ ಗುಳಿಗ ದೈವಸ್ಥಾನದ ಎದುರು ಭಾಗದ ಮೈದಾನದಲ್ಲಿ ಬೈಕ್ ಜಾಥಾ ಸಮಾರೋಪಗೊಂಡಿತು.

ಶ್ರೀ ಮೊಗೇರ ದೈವಸ್ಥಾನದಲ್ಲಿ ಪ್ರಾರ್ಥನೆ ಸಲ್ಲಿಸಿ ಸಮಿತಿ ಸದಸ್ಯರಾದ ನಾರಾಯಣ ಸಿ., ಶಂಕರ ಸಿ. ಮತ್ತು ಭಗಿನಿ ಶ್ರಾವ್ಯ ಅವರು ಸಮಾಜೋತ್ಸವ ಸಮಿತಿ ಸದಸ್ಯರಾದ ಹರೀಶ ಮೀಯಪದವು, ಯಜ್ಞೇಶ ಬೇರಿಕೆ, ಪ್ರೀತಿ ನಿಶಾಂತ್ ರೈ ಅವರಿಗೆ ಓಂಕಾರ ಧ್ವಜವನ್ನು ಹಸ್ತಾಂತರಿಸುವ ಮೂಲಕ ದ್ವಿಚಕ್ರ ವಾಹನ ರ್‍ಯಾಲಿಯನ್ನು ಶುಭಾರಂಭಗೊಳಿಸಿದರು.

ಸಮಿತಿಯ ಅಧ್ಯಕ್ಷ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ, ಗೌರವ ಸಲಹೆಗಾರ ಪದ್ಮನಾಭ ರೈ ಉಂಬಲ್ತೋಡಿ, ಉಪಾಧ್ಯಕ್ಷ ಉದಯಶಂಕರ ಬಳ್ಳಕ್ಕುರಾಯ ಕುಳೂರು, ರಾಷ್ಟ್ರೀಯ ಸ್ವಯಂಸೇವಕ ಸಂಘದ ಮಂಜೇಶ್ವರ ತಾ.ಸಂಘಚಾಲಕ್ ಟಿ.ಸದಾಶಿವ ಭಟ್ ಮೀಯಪದವು, ಸಾಮಾಜಿಕ ಕಾರ್ಯಕರ್ತ ಎಂ.ಹರಿಶ್ಚಂದ್ರ ಮಂಜೇಶ್ವರ ಮುಂತಾದ ಪ್ರಮುಖರು ಉಪಸ್ಥಿತರಿದ್ದು ಶುಭಹಾರೈಸಿದರು.

ಆಕರ್ಷಕ ಜಾಥಾ

ಉತ್ಸಾಹಿ ಹಿರಿಯರಾದ ರಾಮಚಂದ್ರ ರಾವ್, ಮಾತಾ ಭಗಿನಿಯರು, ತರುಣರನ್ನು ಸೇರಿಕೊಂಡು 115 ದ್ವಿಚಕ್ರ ವಾಹನಗಳಲ್ಲಿ ಮೀಂಜ ಪಂ.ವ್ಯಾಪ್ತಿಯಲ್ಲಿ ಭವ್ಯ ಹಾಗೂ ಆಕರ್ಷಕ ಜಾಥಾ ಹಮ್ಮಿಕೊಳ್ಳಲಾಯಿತು.

ಮೀಯಪದವು ವಿದ್ಯಾವರ್ಧಕ ಶಾಲೆ: ವಾರ್ಷಿಕೋತ್ಸವ ಸಂಭ್ರಮ



ಮಂಜೇಶ್ವರ: ಮೀಯಪದವು ಇಲ್ಲಿನ ವಿದ್ಯಾವರ್ಧಕ ಪ್ರೌಢ ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವ ಸಮಾರಂಭ ಶಾಲಾ ರಾಮಕೃಷ್ಣ ರಾವ್ ಸಭಾಂಗಣದಲ್ಲಿ ಜರಗಿತು. ಶಾಲಾ ಸಂಚಾಲಕಿ ಎಂ.ರಾಜೇಶ್ವರಿ ಎಸ್.ರಾವ್ ಧ್ವಜಾರೋಹಣ ನೆರವೇರಿಸಿದರು.

ಬಳಿಕ ಶಾಲಾ ವಿದ್ಯಾರ್ಥಿಗಳಿಂದ ವೈವಿಧ್ಯ ಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ರಂಗೇರಿದವು. ಅಪರಾಹ್ನ ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಂಜೇಶ್ವರ ಉಪಜಿಲ್ಲಾ ಶಿಕ್ಷಣಾಧಿಕಾರಿಗಳಾದ ಜೋರ್ಜ್ ಕ್ರಾಸ್ತಾ ಸಿ. ಎಚ್. ವಹಿಸಿ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಶಾಲಾ ಆಡಳಿತ ಸಲಹೆಗಾರ ಶ್ರೀಧರ ರಾವ್ ಆರ್. ಎಂ. ಸ್ವಾಗತಿಸಿ, ಮುಖ್ಯೋಪಾಧ್ಯಾಯರಾದ ಅರವಿಂದಾಕ್ಷ ಭಂಡಾರಿ ಶಾಲಾ ವಾರ್ಷಿಕ ವರದಿ ಮಂಡಿಸಿದರು.

ಅತಿಥಿಗಳಾಗಿ ಮಂಗಳೂರು ಸಂತ ಅಲೋಶಿಯಸ್ ವಿವಿ ನಿವೃತ್ತ ಪ್ರಾಧ್ಯಾಪಕ , ವಿಜ್ಞಾನ ವಿಭಾಗದ ನಿರ್ದೇಶಕ ಡಾ.ನಾರಾಯಣ ಭಟ್ ಮರುವಳ ಮಾತನಾಡಿ, ಶಿಕ್ಷಣದಿಂದ ಮಕ್ಕಳು ಉತ್ತಮ ಜೀವನ ರೂಪಿಸಿ ಕೊಳ್ಳುವ ಕೌಶಲ್ಯ ಬೆಳೆಸಿಕೊಳ್ಳಬೇಕೆಂದರು.

ಸನ್ಮಾನ

ಈ ಸಂದರ್ಭ ಶಾಲಾ ನಿವೃತ್ತ ಅಧ್ಯಾಪಕರಾದ ಜೋಕಿ ಮೊಂತೆರೋ ಅವರನ್ನು ಗಣ್ಯರ ಸಮಕ್ಷಮದಲ್ಲಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಸನ್ಮಾನಿತರ ಪರಿಚಯವನ್ನು ಶಾಲಾ ಅಧ್ಯಾಪಕರಾದ ಹರೀಶ್ ಸುಲಾಯ ಒಡ್ಡಂಬೆಟ್ಟು ವಾಚಿಸಿದರು. ಸನ್ಮಾನಿತರು ತಮ್ಮ ಶಾಲಾ ವೃತ್ತಿ ಜೀವನದ ಅನುಭವಗಳನ್ನು ಹಂಚಿಕೊಂಡರು.

ಮಂಜೇಶ್ವರ ಬಿಆರ್‌ಸಿ ಯೋಜನಾಧಿಕಾರಿ ರಾಜಗೋಪಾಲ್ ಪಿ., ಶಾಲಾ ಸಂಚಾಲಕಿ ರಾಜೇಶ್ವರಿ ಎಸ್.ರಾವ್, ಪಿಟಿಎ ಅಧ್ಯಕ್ಷ ಜಗದೀಶ್ ಸಿ.ಶೆಟ್ಟಿಗಾರ್, ಎಂಪಿಟಿಎ ಅಧ್ಯಕ್ಷೆ ಆಶ್ಲೇಷಾ ಜಿ. ರಾವ್ ಕಾರ್ಯಕ್ರಮಕ್ಕೆ ಶುಭ ಕೋರಿದರು.

ವಾರ್ಷಿಕೋತ್ಸವದ ಅಂಗವಾಗಿ ನಡೆಸಿದ ಸ್ಪರ್ಧೆ, ಪ್ರತೀ ತರಗತಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಕಳೆದ ವರ್ಷ ಉತ್ತಮ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ದಿ. ಗೋಪಾಲಕೃಷ್ಣ ರಾವ್ ಸ್ಮರಣಾರ್ಥ ಹಾಗೂ ದಿ.ದುಗ್ಗಣ್ಣ ಭಟ್ ಸ್ಮರಣಾರ್ಥ ನೀಡುವ ಧನಸಹಾಯ ನೀಡಲಾಯಿತು.

ಅಧ್ಯಾಪಕಿ ದಿವ್ಯಶ್ರೀ ಕೆ. ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಅಧ್ಯಾಪಕ ರಾಮಚಂದ್ರ ಕೆ.ಎಂ. ವಂದಿಸಿದರು. ಶಾಲಾ ಅಧ್ಯಾಪಕರಾದ ಕೃಷ್ಣ ಶರ್ಮ ಕೆ. ನಿರೂಪಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಮಕ್ಕಳಿಂದ ಸಿಬಿಐ ಸೇತುರಾಮ್ ಅಯ್ಯರ್ ತುಳು ಹಾಸ್ಯಮಯ ನಾಟಕ ಪ್ರದರ್ಶನಗೊಂಡಿತು. ಸಾಂಸ್ಕೃತಿಕ ಕಾರ್ಯಕ್ರಮವನ್ನು ವಿಘ್ನೇಶ ಎಸ್. , ವಿದ್ಯಾರ್ಥಿಗಳು ನಿರ್ವಹಿಸಿದರು.

ನುಳ್ಳಿಪ್ಪಾಡಿ ಶ್ರೀ ಅಯ್ಯಪ್ಪ ಸ್ವಾಮಿ ಕ್ಷೇತ್ರದ ಬ್ರಹ್ಮಕಲಶ: ಪೂರ್ವಭಾವಿ ಸಮಿತಿ ಸಭೆ



ಕಾಸರಗೋಡು: ನುಳ್ಳಿಪ್ಪಾಡಿ ಶ್ರೀ ಅಯ್ಯಪ್ಪ ಸ್ವಾಮಿ ಕ್ಷೇತ್ರದಲ್ಲಿ ಬ್ರಹ್ಮಕಲಶೋತ್ಸವವು ಏಪ್ರಿಲ್ 18ರಿಂದ 23ರ ವರೆಗೆ ವಿವಿಧ ವೈದಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಬಹಳ ವಿಜೃಂಭಣೆಯಿಂದ ಜರಗಲಿದೆ.

ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಬ್ರಹ್ಮಕಲಶೋತ್ಸವ ಸಮಿತಿ ಸಭೆಯು ಭಾನುವಾರ ಸಂಜೆ ನುಳ್ಳಿಪ್ಪಾಡಿ ಕ್ಷೇತ್ರ ಪರಿಸರದಲ್ಲಿ ಜರಗಿತು.

ಸಭೆಯಲ್ಲಿ ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ ಬಾಲಕೃಷ್ಣನ್ ಚೆನ್ನಿಕ್ಕರೆ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಚಟುವಟಿಕೆಗಳ ಮಾಹಿತಿ

ಶ್ರೀ ಕ್ಷೇತ್ರ ಸಮಿತಿ ಅಧ್ಯಕ್ಷ ಗಣೇಶ್ ಅಮ್ಮೆ ಅವರು ಮುಂದೆ ಕೈಗೊಳ್ಳಬೇಕಾದ ಕಾರ್ಯ ಚಟುವಟಿಕೆ ಕುರಿತು ಮಾಹಿತಿ ನೀಡಿದರು. ಬ್ರಹ್ಮಕಲಶೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ಕೃಷ್ಣಪ್ರಸಾದ್ ಕೋಟೆಕಣಿ, ಉಪಾಧ್ಯಕ್ಷ ರಾಮನ್ ಚೆನ್ನಿಕ್ಕರೆ, ಮಹಿಳಾ ಸಮಿತಿ ಅಧ್ಯಕ್ಷೆ ಶೋಭಾ ಅರವಿಂದ ನಾಯ್ಕ್, ಶಿಲ್ಪಾ ವರಪ್ರಸಾದ್ ಮೊದಲಾದವರು ಈ ಸಂದರ್ಭದಲ್ಲಿ ಮಾತನಾಡಿದರು.

ಶ್ರೀ ಕ್ಷೇತ್ರದ ಗುರು ಸ್ವಾಮಿಗಳಾದ ಗೋಪಾಲ ಗುರುಸ್ವಾಮಿ, ನಾರಾಯಣ ಗುರುಸ್ವಾಮಿ, ಮಹಿಳಾ ಸಮಿತಿ ಪದಾಧಿಕಾರಿಗಳು, ವಿವಿಧ ಸಮಿತಿಗಳ ಪದಾಧಿಕಾರಿಗಳು ಹಾಗೂ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸಲಹೆ ಸೂಚನೆ ನೀಡಿದರು.

ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯದರ್ಶಿ ಸಂಜಯ್ ಕುಮಾರ್ ಸ್ವಾಗತಿಸಿ, ಕಿಶೋರ್ ಕುಮಾರ್ ವಂದಿಸಿದರು. ಬ್ರಹ್ಮಕಲಶೋತ್ಸವ ಸಮಿತಿ ಕೋಶಾಧಿಕಾರಿ ದೇವದಾಸ್ ನುಳ್ಳಿಪ್ಪಾಡಿ ಕಾರ್ಯಕ್ರಮ ನಿರೂಪಿಸಿದರು.

ಬೇಕೂರು ಮಾಣಿಬೆಟ್ಟು ರಸ್ತೆಗೆ ಅಳವಡಿಸಿದ ಬೀದಿ ದೀಪಗಳು ಉಪಯೋಗ ಶೂನ್ಯ!



ಮಂಜೇಶ್ವರ: ಮಂಗಲ್ಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಬೇಕೂರು ಮಾಣಿಬೆಟ್ಟು ರಸ್ತೆಯಲ್ಲಿ ಅಳವಡಿಸಲಾದ ಬೀದಿ ದೀಪಗಳು ಉರಿಯದೆ ಕೆಲವು ತಿಂಗಳುಗಳು ಕಳೆದರೂ ಇದುವರೆಗೂ ದುರಸ್ತಿಗೊಳಿಸಲಾಗಿಲ್ಲ. ಇದರಿಂದಾಗಿ ರಾತ್ರಿ ವೇಳೆಯಲ್ಲಿ ಕತ್ತಲೆಯಲ್ಲೇ ನಡೆದುಕೊಂಡು ಹೋಗಬೇಕಾದ ಪರಿಸ್ಥಿತಿ ತಲೆದೋರಿದೆ ಎಂಬುದಾಗಿ ಸ್ಥಳೀಯರು ದೂರಿದ್ದಾರೆ.

6 ದೀಪಗಳು ಉರಿಯುತ್ತಿಲ್ಲ

ಈ ರಸ್ತೆಯುದ್ದಕ್ಕೂ 6 ಬೀದಿದೀಪಗಳು ಉರಿಯದೆ ಕೆಲವು ತಿಂಗಳು ಕಳೆದಿರುವುದಾಗಿ ಆರೋಪಿಸಲಾಗಿದೆ. ಪ್ರಸ್ತುತ ರಸ್ತೆಯ ಇಕ್ಕೆಲಗಳಲ್ಲಿ ಕಾಡುಪೊದೆಗಳು ತುಂಬಿಕೊಂಡು ಪ್ರಾಣಿಗಳ ಅಲೆದಾಟದಿಂದ ರಾತ್ರಿ ಹೊತ್ತು ಸ್ಥಳೀಯರಿಗೆ ಸಂಚರಿಸಲು ಭಯದ ವಾತಾವರಣ ಸೃಷ್ಟಿಸುತ್ತಿರುವುದಾಗಿ ದೂರಲಾಗಿದೆ. ಈ ಪರಿಸರದಲ್ಲಿ ಸರಕಾರಿ ಶಾಲೆ, ಆರೋಗ್ಯ ಕೇಂದ್ರ, ಹಲವಾರು ಮನೆಗಳಿದ್ದು ದಾರಿದೀಪ ಉರಿಯದೇ ಇರುವುದರಿಂದ ಸ್ಥಳೀಯರು ಅಪಾರ ಸಮಸ್ಯೆಯನ್ನು ಅನುಭವಿಸುತ್ತಿದ್ದಾರೆ.

ಎಚ್ಚೆತ್ತುಕೊಳ್ಳಬೇಕಿದೆ ಅಧಿಕಾರಿಗಳು

ಬೀದಿದೀಪಗಳನ್ನು ಸರಿಪಡಿಸಿ ಜನರು ಅನುಭವಿಸುತ್ತಿರುವ ತೊಂದರೆಗಳಿಗೆ ಶಾಶ್ವತ ಪರಿಹಾರ ಕೈಗೊಳ್ಳುವ ನಿಟ್ಟಿನಲ್ಲಿ ಸಂಬಂಧಪಟ್ಟ ಪಂಚಾಯತ್ ಅಧಿಕಾರಿಗಳು ಕೂಡಲೇ ಎಚ್ಚೆತ್ತುಕೊಳ್ಳಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಪ್ರತಿಭಟನೆಯ ಎಚ್ಚರಿಕೆ

ಇಲ್ಲಿನ ಸಮಸ್ಯೆ ಇದೇ ರೀತಿ ಮುಂದುವರಿದಲ್ಲಿ ಪಂಚಾಯತ್ ಕಚೇರಿಗೆ ಮುತ್ತಿಗೆ ಸಹಿತ ವಿವಿಧ ಪ್ರತಿಭಟನೆ ಗಳನ್ನು ಹಮ್ಮಿಕೊಳ್ಳಬೇಕಾದೀತು ಎಂದು ನಾಗರಿಕ ವಲಯ ಎಚ್ಚರಿಸಿದೆ.

ಮಾನಸಿಕ ಆರೋಗ್ಯ ತಜ್ಞರ ಸೇವೆ

ಕಾಸರಗೋಡು: ಕಾಸರಗೋಡು ವಿದ್ಯಾನಗರ ಸಿವಿಲ್ ಸ್ಟೇಷನ್‌ನಲ್ಲಿರುವ ಮಹಿಳಾ ರಕ್ಷಣಾ ಕಚೇರಿಯಲ್ಲಿ ಮಾನಸಿಕ ಆರೋಗ್ಯ ತಜ್ಞರ ಉಚಿತ ಸೇವೆಯು ಫೆ.24ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 2ರ ವರೆಗೆ ಲಭ್ಯವಿರುತ್ತದೆ. ಸೇವೆಯ ಆಗತ್ಯವಿರುವವರು ಫೆ.23ರೊಳಗೆ 8281999065 ಅಥವಾ 9847000302 ಕರೆ ಮಾಡಿ ಹೆಸರು ನೋಂದಾಯಿಸಿಕೊಳ್ಳಬೇಕು.



ಕುಂಬಳೆ ಪಂಚಾಯತ್ ಮಟ್ಟದ ಹಿಂದು ಏಕತಾ ಸಮ್ಮೇಳನದ ಆಮಂತ್ರಣ ಪತ್ರಿಕೆಯನು ನಾಯ್ಕಾಪು ಶ್ರೀ ಶಾಸ್ತಾರ ಬನದಲ್ಲಿ ಭಾನುವಾರ ಬಿಡುಗಡೆಗೊಳಿಸಿ ಮನೆ ಮನೆ ಸಂಪರ್ಕಕ್ಕೆ ಚಾಲನೆ ನೀಡಲಾಯಿತು. ಹಲವು ಮಂದಿ ಗಣ್ಯರು ಭಾಗವಹಿಸಿದ್ದರು.

ಅನುಷ್ಠಾನಕ್ಕೆ ಬಾರದ ತಾಲೂಕು ಸಮಿತಿ ನಿರ್ಧಾರ | ತಾಲೂಕು ಅಭಿವೃದ್ಧಿ ಸಮಿತಿ ಸದಸ್ಯರಿಂದ ತಹಶೀಲ್ದಾರ್‌ಗೆ ದೂರು

ಕುಂಬಳೆ ರೈಲು ನಿಲ್ದಾಣ ಮುಂಭಾಗ ರಸ್ತೆಯಲ್ಲಿ ಕೆಎಸ್ಆರ್‌ಟಿಸಿ ಬಸ್ ನಿಲುಗಡೆಗೆ ಒತ್ತಾಯ

ಕುಂಬಳೆ: ಕುಂಬಳೆ ರೈಲು ನಿಲ್ದಾಣದ ಮುಂದೆ ಕೆಎಸ್‌ಆರ್‌ಟಿಸಿ ಬಸ್‌ಗಳಿಗೆ ನಿಲುಗಡೆಗೊಳಿಸಲು ಅನುಮತಿ ನೀಡುವ ಬಗ್ಗೆ ಮಂಜೇಶ್ವರ ತಾಲೂಕು ಅಭಿವೃದ್ಧಿ ಸಮಿತಿ ಈ ಹಿಂದೆ ತೆಗೆದುಕೊಂಡ ನಿರ್ಧಾರವನ್ನು ಜಾರಿಗೆ ತಾರದಿರುವುದನ್ನು ವಿರೋಧಿಸಿ ತಾಲೂಕು ಅಭಿವೃದ್ಧಿ ಸಮಿತಿ ಸದಸ್ಯ ತಾಜುದ್ದೀನ್ ಮೊಗ್ರಾಲ್ ಅವರು ಮತ್ತೆ ತಹಶೀಲ್ದಾರ್‌ಗೆ ದೂರು ನೀಡಿದ್ದಾರೆ.

ನಿರ್ಧಾರದಲ್ಲಿ ನಿಧಾನಗತಿಯ ಪ್ರಗತಿ ತಾಜುದ್ದೀನ್ ಮೊಗ್ರಾಲ್ ಅವರು ಈ ವಿಷಯವನ್ನು ತಾಲೂಕು ಅಭಿವೃದ್ಧಿ ಸಮಿತಿ ಸಭೆಯಲ್ಲಿ ಪ್ರಸ್ತಾಪಿಸಿದ್ದರು. 2024ರ ಅಕ್ಟೋಬರ್ 5ರಂದು ಜರಗಿದ ಸಮಿತಿ ಸಭೆಯು ಇದಕ್ಕೆ ಸಂಬಂಧಿಸಿದ ವಿಷಯಗಳನ್ನು ಪರಿಶೀಲಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲು



ನಿರ್ಧರಿಸಿತ್ತು. ಆದರೆ ಇದುವರೆಗೆ ಈ ನಿರ್ಧಾರವನ್ನು ಜಾರಿಗೆ ತರಲು ಸಾಧ್ಯವಾಗದ ಕಾರಣ ಪ್ರಯಾಣಿಕರು ಎದುರಿಸುತ್ತಿರುವ ದೊಡ್ಡ ತೊಂದರೆಯನ್ನು ಉಲ್ಲೇಖಿಸಿ ತಾಜುದ್ದೀನ್ ಮೊಗ್ರಾಲ್ ಅವರು ತಹಶೀಲ್ದಾರ್‌ಗೆ ಮತ್ತೆ ದೂರು ಸಲ್ಲಿಸಿದ್ದಾರೆ.

ಸದಸ್ಯರ ದೂರುಗಳು

ಮಂಜೇಶ್ವರ ಮತ್ತು ಕಾಸರಗೋಡು ತಾಲೂಕು ಅಭಿವೃದ್ಧಿ ಸಮಿತಿಗಳು ತೆಗೆದುಕೊಳ್ಳುವ ನಿರ್ಧಾರಗಳನ್ನು ಜಾರಿಗೆ ತರಲು ಬಹಳ ಸಮಯ ತೆಗೆದುಕೊಳ್ಳುತ್ತಿದೆ ಎಂಬ ಆರೋಪ ಅಭಿವೃದ್ಧಿ ಸಮಿತಿಗಳ ಸದಸ್ಯರಲ್ಲಿದೆ. ಸದಸ್ಯರು ಆಗಾಗ ಸಭೆಗಳಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಅಭಿವೃದ್ಧಿ ಸಮಿತಿಯ ನಿರ್ಧಾರಗಳನ್ನು ತ್ವರಿತಗೊಳಿಸಬೇಕು ಮತ್ತು ಜನರ ಬೇಡಿಕೆಗಳನ್ನು ಕಡತಗಳಿಗೆ ಮಾತ್ರ ಸೀಮಿತಗೊಳಿಸಬಾರದು ಎಂದು ಸದಸ್ಯರು ಒತ್ತಾಯಿಸಿದ್ದಾರೆ.

ಸಮಸ್ಯೆಯಲ್ಲಿ ಪ್ರಯಾಣಿಕರು!

ಕುಂಬಳೆ ಪೇಟೆಯಲ್ಲಿ ಗ್ರಾ.ಪಂ. ತಂದಿರುವ ಸಂಚಾರ ಸುಧಾರಣೆ, ಕುಂಬಳೆ ಬಸ್ ಕಾಯುವ ಕೇಂದ್ರ ಮತ್ತು ರೈಲು ನಿಲ್ದಾಣದ ನಡುವೆ 1.3 ಕಿ.ಮೀಗಿಂತ ಹೆಚ್ಚು ಅಂತರವಿದೆ. ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಕುಂಬಳೆ ನಿಲ್ದಾಣದಲ್ಲಿ ರೈಲು ಹತ್ತಲು ಕುಂಬಳೆಗೆ ಆಗಮಿಸುವ ಪ್ರಯಾಣಿಕರಿಗೆ ನಿಲ್ದಾಣದ ಪ್ರದೇಶದಲ್ಲಿ ನಿಲುಗಡೆ ಇಲ್ಲದಿರುವುದು ದೊಡ್ಡ ಬಿಕ್ಕಟ್ಟು ಸೃಷ್ಟಿಸುವಂತಾಗಿದೆ.

ಕ್ರಮಕ್ಕೆ ಆಗ್ರಹ

ಜನರು ಬಸ್ ನಿಲ್ದಾಣದಲ್ಲಿ ಇಳಿದು ರೈಲ್ವೆ ನಿಲ್ದಾಣ ತಲುಪಲು ಆಟೋ ರಿಕ್ಷಾದಲ್ಲಿ ತೆರಳಬೇಕಾಗಿದೆ. ಇದು ಪ್ರಯಾಣಿಕರಿಗೆ ಆರ್ಥಿಕ ಮತ್ತು ದೈಹಿಕ ತೊಂದರೆಯನ್ನುಂಟು ಮಾಡುತ್ತಿದೆ. ಆದ್ದರಿಂದ ಸಮಿತಿ ಈ ಹಿಂದೆ ತೆಗೆದು ಕೊಂಡ ನಿರ್ಧಾರ ಆದಷ್ಟು ಬೇಗ ಜಾರಿಗೆ ತರಲು ಕ್ರಮ ಕೈಗೊಳ್ಳಬೇಕೆಂದು ತಹಶೀಲ್ದಾರ್‌ಗೆ ಸಲ್ಲಿಸಲಾದ ದೂರಿನಲ್ಲಿ ತಿಳಿಸಲಾಗಿದೆ.

ಪುಟ ಸಂಖ್ಯೆ | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಮಂಗಳವಾರ 17, ಫೆಬ್ರವರಿ 2026

ಸುತ್ತಮುತ್ತ

ಶಿವರಾತ್ರಿ ಉತ್ಸವ

ಕಾರ್ಕಳ: ಮಹಾಶಿವರಾತ್ರಿ ಪ್ರಯುಕ್ತ ಕಾರ್ಕಳ ತಾಲೂಕಿನ ಪ್ರಮುಖ ಶಿವ ದೇವಾಲಯಗಳಲ್ಲಿ ವಿಶೇಷ ಪೂಜೆ ಹಾಗೂ ಧಾರ್ಮಿಕ ಕಾರ್ಯಕ್ರಮಗಳು ಶ್ರದ್ಧಾಭಕ್ತಿಯಿಂದ ಜರುಗಿತು. ಕಾರ್ಕಳದ ಶ್ರೀ ವಿಶ್ವೇಶ್ವರ ವೇಣುಗೋಪಾಲ ದೇವಸ್ಥಾನ, ಪೆರ್ವಾಜೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಕೈಲಾಜೆ ಶ್ರೀ ಉಮಾ ಮಹೇಶ್ವರ ದೇವಸ್ಥಾನ, ಶಿವತೀಕೆರೆ ಶ್ರೀ ಉಮಾ ಮಹೇಶ್ವರ ದೇವಸ್ಥಾನ, ಮಿಯಾರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಕೆರ್ವಾಶೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಮತ್ತು ಬೋಳ ಶ್ರೀ ಮಹಾಲಿಂಗೇಶ್ವರ ದೇವಸ್ಥಾನಗಳಲ್ಲಿ ಶಿವರಾತ್ರಿಯ ಅಂಗವಾಗಿ ವಿಶೇಷ ಪೂಜೆಗಳು ನಡೆದವು. ಎಲ್ಲಾ ಕ್ಷೇತ್ರಗಳಲ್ಲಿ ಬೆಳಗ್ಗೆಯಿಂದಲೇ ರುದ್ರಾಭಿಷೇಕ, ಶತರುದ್ರಾಭಿಷೇಕ, ಎಳನೀರು ಅಭಿಷೇಕ ಹಾಗೂ ವಿಶೇಷ ಪುಷ್ಪಾಲಂಕಾರ ಪೂಜೆಗಳು ನಡೆಯಿತು. ರಾತ್ರಿಯಿಡೀ ಭಜನೆ, ಶಿವನಾಮ ಸಂಕೀರ್ತನೆ ಹಾಗೂ ಜಾಗರಣೆಯ ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಆಯೋಜನೆಗೊಂಡಿತು. ಕೆಲವು ಕ್ಷೇತ್ರಗಳಲ್ಲಿ ವಿಶೇಷ ಅನ್ನಸಂತರ್ಪಣೆ ಹಾಗೂ ತೀರ್ಥಪ್ರಸಾದ ವಿನಿಯೋಗದ ವ್ಯವಸ್ಥೆ ಮಾಡಲಾಗಿತ್ತು.

ರಾಜ್ಯ ಮಾನವ ಹಕ್ಕುಗಳ ಆಯೋಗ ಜಿಲ್ಲೆಗೆ ಭೇಟಿ

ಉಡುಪಿ: ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಕಾರ್ಯನಿರ್ವಹಣಾ ಅಧ್ಯಕ್ಷ ಡಾ.ಟಿ. ಶಾಂ ಭಟ್, ಸದಸ್ಯ ಎಸ್.ಕೆ. ವಂಟಿಗೋಡಿ ಫೆ. 18 ಮತ್ತು 19 ರಂದು ಜಿಲ್ಲೆಗೆ ಭೇಟಿ ನೀಡಲಿದ್ದಾರೆ. ಫೆ. 18 ರಂದು ಸಂಜೆ ಉಡುಪಿಗೆ ಆಗಮಿಸಲಿರುವ ಇವರುಗಳು ಸರ್ಕ್ಯೂಟ್ ಹೌಸ್‌ನಲ್ಲಿ ವಾಸ್ತವ್ಯ ಮಾಡಲಿದ್ದಾರೆ. ಫೆ. 19 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 12 ರ ವರೆಗ ಸ್ಥಳೀಯ ಭೇಟಿ, ಮ. 12 ರಿಂದ 1 ಗಂಟೆಯ ವರೆಗೆ ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾ ಪಂಚಾಯತ್ ಡಾ. ವಿ.ಎಸ್ ಆಚಾರ್ಯ ಸಭಾಂಗಣದಲ್ಲಿ ಪೂರ್ಣ ಪೀಠ ಸಭೆ, ಮ. 1ರಿಂದ 2 ಗಂಟೆಯವರೆಗೆ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಂವಾದ ಕಾರ್ಯಕ್ರಮ, ಮ.3 ರಿಂದ 4 ರ ವರೆಗೆ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿ ನಂತರ ಮಂಗಳೂರಿಗೆ ಪ್ರಯಾಣ ಬೆಳೆಸಲಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಕಾರ್ಕಳ: ತುರ್ತು ನಿರ್ವಹಣಾ ಕಾಮಗಾರಿ ಯನ್ನು ಹಮ್ಮಿಕೊಂಡಿರುವುದರಿಂದ ಕೇಮಾರ್ ವಿದ್ಯುತ್ ಕೇಂದ್ರದಿಂದ ಹೊರಡುವ ಬಜಗೋಳಿ, ಹೊಸ್ಮಾರು, ಮಿಯ್ಯಾರು, ಸಾಣೂರು, ಇರ್ವತ್ತೂರು ಫೀಡರ್‌ಗಳಲ್ಲಿ, ಕಾರ್ಕಳ ಉಪಕೇಂದ್ರದಿಂದ ಹೊರಡುವ ನೆಲ್ಲಿಕಟ್ಟೆ, ಮುಂಡ್ಲಿ, ದುರ್ಗಾ ಫೀಡರ್‌ಗಳಲ್ಲಿ, ಬೆಳ್ಮಣ್ ವಿದ್ಯುತ್ ಉಪಕೇಂದ್ರದಿಂದ ಹೊರಡುವ ಮುಂಡ್ಕೂರು ಫೀಡರ್‌ನಲ್ಲಿ ಕಾರ್ಕಳ ತಾಲೂಕಿನ ಬಜಗೋಳಿ, ಮುಡ್ರಾಲು, ಕಡಾರಿ, ಮುಳ್ಳೂರು, ಮಾಳ, ಗುರ್ಗಲ್ ಗುಡ್ಡೆ, ಚೌಕಿ, ಹುಕ್ರಟ್ಟೆ, ನೆಲ್ಲಿಕಾರು, ಹೊಸ್ಮಾರು, ಈದು, ನಲ್ಲೂರು, ಜೋಡುಕಟ್ಟೆ, ಮಿಯ್ಯಾರು, ಕುಂಟಿಬೈಲು, ರೆಂಜಾಳ, ಬೊರ್ಕಟ್ಟೆ, ರಾಮೇರಗುತ್ತು, ಕಾಜರಬೈಲು, ಅಡ್ಕರಪಲ್ಕೆ, ನೆಲ್ಲಿಗುಡ್ಡೆ, ಮಂಜಡ್ಕ, ಮಿಯ್ಯಾರ್ ಇಂಡಸ್ಟ್ರಿಯಲ್ ಏರಿಯಾ, ಕಡಂಬಲ, ನಾರ್ಕಟ್ಟೆ, ಮಲೆಬೆಟ್ಟು, ಪೊಲ್ಲಾರು, ತೆಳ್ಳಾರು, ಮುಂಡ್ಲಿ, ಪಲಾಯಿಬಾಕ್ಯಾರು, ಚಿಕ್ಕಲ್ ಬೆಟ್ಟು, ಮಂಗಿಲಾರು, ನೆಲ್ಲಿಕಟ್ಟೆ, ಎರ್ಲಪಾಡಿ, ಗೋವಿಂದೂರು, ಕಾಂತರಗೋಳಿ, ಕೆರ್ವಾಶೆ, ಮಾಳ, ಕಳತ್ರಪಾದೆ, ಬೈಪಾಸ್, ಮುರತ್ತಂಗಡಿ, ಇರ್ವತ್ತೂರು, ಸಾಣೂರು, ಕುಂಟಲ್ಪಾಡಿ, ದೇಂದಬೆಟ್ಟು, ಪರ್ಪಲೆ, ಪಡ್ಡಾಯಿಗುಡ್ಡೆ, ಮುದ್ದಣ್ಣ ನಗರ, ಬಾವಗುತ್ತು, ಶುಂಠಿಗುಡ್ಡೆ ಚಿಲಿಂಬಿ, ಮುಂಡ್ಕೂರು, ಮುಲ್ಲಡ್ಕ, ಕೊಡಿಮಾರ್, ನಾನಿಲ್ ತಾರ್, ಜಾರಿಗೆಕಟ್ಟೆ, ಸಂಕಲಕರಿಯ, ಸಚ್ಚರಿಪೇಟೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಫೆ. 17ರಂದು ಬೆಳಿಗ್ಗೆ 9ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ವಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಮೊದಲನೇ ಪುಟದಿಂದ

ರೈತರ ಆಕ್ರೋಶ

ನೀರಾವರಿ ನಿಗಮದ ಈ ನಿರ್ಧಾರದಿಂದ ಹಾರಂಗಿಯಿಂದ ಶಿರಂಗಾಲದವರೆಗಿನ ಅಣೆಕಟ್ಟೆಯ ನೀರನ್ನು ಆವಲಂಬಿತರಾಗಿರುವ ರೈತರಿಗೆ ತೀರಾ ಸಂಕಷ್ಟ ಉಂಟಾಗಲಿದೆ. ಅಲ್ಲದೆ ಸೋಮವಾರಪೇಟೆ ಸೇರಿದಂತೆ ಹಾರಂಗಿ ಮತ್ತು ಸುತ್ತಮುತ್ತಲಿನ ಪ್ರದೇಶಗಳ ಜನರು ಕುಡಿಯುವುದಕ್ಕೂ ಈ ಅಣೆಕಟ್ಟೆಯ ನೀರನ್ನು ಅವಲಂಬಿತರಾಗಿರುವುದರಿಂದ ಈ ಕೂಡಲೇ ಜಿಲ್ಲಾಡಳಿತ ಮತ್ತು ಸರ್ಕಾರ ಇತ್ತ ಗಮನ ಹರಿಸಿ ನದಿಗೆ ಹರಿಸುತ್ತಿರುವ ನೀರನ್ನು ನಿಲ್ಲಿಸಬೇಕು. ಇಲ್ಲವಾದಲ್ಲಿ ಅಣೆಕಟ್ಟೆಯ ಎದುರು ಉಗ್ರ ಹೋರಾಟವನ್ನು ಮಾಡುವುದಾಗಿ ಅವರು ಎಚ್ಚರಿಕೆ ನೀಡಿದ್ದಾರೆ. ಈ ಸಂಬಂಧ ಹಾರಂಗಿ ನೀರಾವರಿ ಇಲಾಖೆಯ ಕಾರ್ಯಪಾಲಕ ಅಭಿಯಂತರ ಪುಟ್ಟಸ್ವಾಮಿ ಅವರ ಅಭಿಪ್ರಾಯ ಬಯಸಿದಾಗ, ಕಾವೇರಿ ನೀರಾವರಿ ನಿಗಮದ ಸೂಚನೆಯಂತೆ ಎರಡು ದಿನಗಳಲ್ಲಿ ನೀರು ಹರಿಸಲಾಗಿದೆ. ಇಂದು ಸ್ಥಗಿತಗೊಳಿಸಲಾಗುವುದು ಎಂದು ಪ್ರತಿಕ್ರಿಯಿಸಿದ್ದಾರೆ.


ಶಿಕ್ಷಕರು

ಅಂಗನವಾಡಿ ಕಾರ್ಯಕರ್ತೆಯರನ್ನು ಇದಕ್ಕೆ ನೇಮಿಸಿದ ಪರಿಣಾಮ ಅಂಗನವಾಡಿಗಳಲ್ಲಿ ಮಕ್ಕಳನ್ನು ನೋಡಿಕೊಳ್ಳುವ, ಗರ್ಭಿಣಿಯರಿಗೆ ಹಾಗೂ ಬಾಣಂತಿಯರಿಗೆ ಆಹಾರ ವಿತರಿಸುವ ಕಾರ್ಯಕ್ಕೂ ಅಡಚಣೆ ಉಂಟಾಗಿದೆ. ಈ ಮೊದಲು ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯನ್ನು ಮುಗಿಸುವ ಕಾರ್ಯಕ್ಕೂ ಅಂಗನವಾಡಿ ಕಾರ್ಯಕರ್ತೆಯರನ್ನೇ ಬಳಸಿಕೊಳ್ಳಲಾಗಿತ್ತು. ಹೆಚ್ಚುವರಿ ಕೆಲಸಗಳನ್ನೇ ಶಿಕ್ಷಕರು ಹಾಗೂ ಅಂಗನವಾಡಿ ಕಾರ್ಯಕರ್ತೆಯರಿಗೆ ನೀಡುತ್ತಿರುವುದು ಶಿಕ್ಷಣ ವ್ಯವಸ್ಥೆ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವಂತೆ ಮಾಡಿದೆ ಎಂಬ ಆರೋಪ ಕೇಳಿ ಬರುತ್ತಿದೆ.

ಜಾಗತಿಕ ಉದ್ಯಮಿಗಳಿಂದ ಪ್ರಶಂಸೆಗೊಳಗಾದ ಸಮುದ್ರತೀರ | ಪ್ರವಾಸೋದ್ಯಮಕ್ಕಿದೆ ಉತ್ತಮ ಅವಕಾಶ

ದೂರದೃಷ್ಟಿ ಜೊತೆ ಅಭಿವೃದ್ಧಿಯಾಗಲಿ ಸೋಮೇಶ್ವರ ಬೀಚ್





ಉಪ್ಪುಂದ: ಪಡುವರಿ ಗ್ರಾಮದ ಸೋಮೇಶ್ವರ ಕಡಲ ತೀರ ಪ್ರವಾಸಿಗರ ಪಾಲಿಗೆ ಸ್ವರ್ಗ ಸಮಾನವಾದ ಹಿರಿಮೆ, ನದಿ, ಸಾಗರ, ಸಂಗಮದ ಜೊತೆಗೆ ಬಳುಕುವ ಕಡಲನ್ನು ತೋಳು ಬಾಚಿ ಹಿಡಿದ ಗುಡ್ಡದ ಸಾಲು, ಕಣ್ಣಳತೆಗೂ ಮೀರಿದಷ್ಟು ಅನುಭವಿಸಬಹುವುದಾದ ಕಡಲತಡಿ. ಒಟ್ಟಾರೆ ಬೈಂದೂರು ಸೋಮೇಶ್ವರ ಕಡಲತೀರ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿರುವ ನಯನ ಮನೋಹರವಾದ ತಾಣವಾಗಿದೆ.

ರಾಜ್ಯದಪ್ರಮುಖಕಡಲತೀರಗಳಲ್ಲಿಜಾಗತಿಕಮನ್ನಣೆ ಗಳಿಸಿಕೊಂಡಿರುವ ಹಿರಿಮೆ ಇರುವುದು ಬೈಂದೂರಿನ ಸೋಮೇಶ್ವರ ಕಡಲ ಕಿನಾರೆಯದ್ದಾಗಿದೆ. ಉಳಿದೆಲ್ಲಾ ಕಡಲ ಆರಂಭದ ಆಳ ಅಧಿಕವಾಗಿರುತ್ತದೆ. ಆದರೆ ಇಳಿತದ ಸಮಯದಲ್ಲಿ ಸೋಮೇಶ್ವರದಲ್ಲಿ ಸುಮಾರು ಮೂರರಿಂದ ನಾಲ್ಕು ಕಿ.ಮೀ ಬಯಲಿನಂತೆ ಬಾಸವಾಗುವುದರಿಂದ ಈ ಭಾಗದಲ್ಲಿ ಅಪಾಯ ಕಡಿಮೆ. ಈ ರೀತಿಯ ಬೀಚ್‌ಗಳು ಜಗತ್ತಿನಲ್ಲಿ ಅತ್ಯಂತ ವಿರಳವಾಗಿದೆ. ಹೀಗಾಗಿ ಅನೇಕ ಜಾಗತಿಕ ಮಟ್ಟದ ಉದ್ಯಮಿಗಳು ಕೂಡ ಬೈಂದೂರಿನ ಸೋಮೇಶ್ವರ ಬೀಚನ್ನು ಪ್ರಶಂಸಿದ್ದಾರೆ. ಮಾತ್ರವಲ್ಲದೆ ಧಾರ್ಮಿಕ ಹಿನ್ನೆಲೆ, ನೈಸರ್ಗಿಕ ಸೌಂದರ್ಯದಿಂದ ಸೋಮೇಶ್ವರ ಕಡಲತೀರ ದೂರದೃಷ್ಟಿತ್ವದ ಚಿಂತನೆಯೊಂದಿಗೆ ಅಭಿವೃದ್ಧಿಪಡಿಸಿದರೆ ಬೈಂದೂರಿನ ಭೌಗೋಳಿಕ ಬೆಳವಣಿಗೆಗೆ ಬಹುದೊಡ್ಡ ಕೊಡುಗೆ ನೀಡಲಿದೆ.

ಸ್ಥಳೀಯರ ಮನಸ್ಥಿತಿ ಬದಲಾಗಬೇಕಿದೆ

ಇಂದು ಪ್ರತಿದಿನ ಸಾವಿರಾರು ಪ್ರವಾಸಿಗಳು ಆಗಮಿಸುತ್ತಾರೆ. ಹೀಗಾಗಿ ಪಾರ್ಕಿಂಗ್, ಹೋಟೆಲ್, ಉದ್ಯೋಗವಕಾಶ, ಹೋಂಸ್ಟೇಮುಂತಾದಅಭಿವೃದ್ಧಿಗೆ ಉತ್ತಮ ಅವಕಾಶಗಳಿವೆ. ಆದರೆ ಸ್ಥಳೀಯರ ಸಹಕಾರ ಇದ್ದಾಗ ಇನ್ನಷ್ಟು ಪ್ರಗತಿ ಸಾಧ್ಯವಾಗಿರುವುದರಿಂದ ಸರ್ಕಾರದ ಯೋಜನೆಗಳಿಗೆ ಪೂರಕ ಸ್ಪಂದನೆ ದೊರೆಯಬೇಕಿದೆ. ಈಗಿರುವ ಸೋಮೇಶ್ವರ ಬೀಚ್ ವ್ಯಾಪ್ತಿ ಸಣ್ಣದಿದೆ. ಒಂದೊಮ್ಮೆ ನದಿ, ಸಾಗರ, ಸಂಗಮವಾದ ಪ್ರದೇಶಕ್ಕೆ ತೂಗುಸೇತುವೆ ನಿರ್ಮಾಣವಾದರೆ ತಾರಾಪತಿಯವರೆಗೆ ಬೀಚ್ ವ್ಯಾಪ್ತಿ ಬೆಳೆಯುತ್ತದೆ. ಈ ಪ್ರದೇಶದಲ್ಲಿ ಜನವಸತಿ ಇಲ್ಲದಿರುವ ಕಾರಣ ಪ್ರವಾಸೋದ್ಯಮ ಅಭಿವೃದ್ದಿಗೆ ಅನುಕೂಲವಾಗುತ್ತದೆ. ಇದರ ಜೊತೆಗೆ ಇತ್ತೀಚೆಗೆ ಅಭಿವೃದ್ಧಿಯಾದ ಬೀಚ್ ರಸ್ತೆಯನ್ನು ಪಡುವರಿ ಕಸ್ಟಮ್ ರಸ್ತೆಗೆ ಸಂಪರ್ಕಿಸಿ ರಿಂಗ್ ರೋಡ್ ಕೂಡ ಮಾಡಬೇಕಿದೆ. ಸೋಮೇಶ್ವರ ಕಡಲತೀರಕ್ಕೆ ಸ್ಕೂಬಾ ಡೈವಿಂಗ್ ಹಾಗೂ ಕುಂದಾಪುರದಿಂದ ಪ್ರವಾಸಿಗರು ಬರುತ್ತಾರೆ. ಹೀಗಾಗಿ ಈ ಕಡಲತಡಿಯಲ್ಲಿ ಜಟ್ಟಿ ನಿರ್ಮಾಣವಾದರೆ ಪ್ರವಾಸಿಗರಿಗೆ ಸ್ಕೂಬಾ ಡೈವಿಂಗ್‌ಗೆ ಸಾಗುವ ಸ್ಥಳ ಹತ್ತಿರವಾಗುತ್ತದೆ.

> **ಪ್ರಸ್ತಾವನೆ ಸಲ್ಲಿಸಲಾಗಿದೆ**
> ಡಬಲ್ ಇಂಜಿನ್ ಸರ್ಕಾರದ ಅವಧಿಯಲ್ಲಿ ಮಂಜೂರಾದ ರೂ 10 ಕೋಟಿಯಲ್ಲಿ ಸೋಮೇಶ್ವರ ಬೀಚ್ ಅಭಿವೃದ್ಧಿಪಡಿಸಲಾಗಿದೆ. ಕೊಲ್ಲೂರು- ಸೋಮೇಶ್ವರ- ಮರವಂತೆ ಅಭಿವೃದ್ಧಿಗೆ, ಸೀ ಪ್ಲೇನ್ ಯೋಜನೆ, ಬಂದರು ಹಾಗೂ ಕಿರು ವಿಮಾನ ನಿಲ್ದಾಣಕ್ಕೆ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ರಾಜ್ಯ ಸರ್ಕಾರದಿಂದ ಜಮೀನು ಹಸ್ತಾಂತರ ತ್ವರಿತಗತಿಯಲ್ಲಿ ಆಗಬೇಕಾಗಿದೆ.
> ● ಬಿ. ವೈ. ರಾಘವೇಂದ್ರ, ಸಂಸದರು

ಕ್ಷಿತಿಜ ನೇಸರಧಾಮ

ಸೋಮೇಶ್ವರ ಕಡಲತೀರಕ್ಕೆ ಹೊಂದಿಕೊಂಡಂತೆ ಇರುವ ಗುಡ್ಡ ಪ್ರದೇಶದ ಕ್ಷಿತಿಜ ನೇಸರಧಾಮ ಅಂತಾರಾಷ್ಟ್ರೀಯ ಮಟ್ಟದ ಸೌಲಭ್ಯದೊಂದಿಗೆ ಅಭಿವೃದ್ಧಿಯಾಗಬೇಕು. ಇತ್ತೀಚೆಗೆ ಭೇಟಿ ನೀಡಿದ ಕೇಂದ್ರ ಪ್ರವಾಸೋದ್ಯಮ ಸಚಿವ ಗಜೇಂದ್ರಸಿಂಗ್ ಶೇಖಾವತ್ ಕೂಡ ಸೋಮೇಶ್ವರ ಅಭಿವೃದ್ಧಿಗೆ ವಿಶೇಷ ಆಸಕ್ತಿ ವಹಿಸಿದ್ದಾರೆ. ಕೇವಲ ಸೋಮೇಶ್ವರ ಕಡಲತೀರದ ಪ್ರವಾಸಿಗರಿಂದಲೇ ಬೈಂದೂರಿನ ಪ್ರಗತಿಯಾಗಲಿದೆ ಎನ್ನುವುದು ಇಲ್ಲಿನ ಮುಂದಾಳುಗಳ ಅಭಿಪ್ರಾಯ.

ಒಟ್ಟಾರೆಯಾಗಿ ಬೈಂದೂರಿನ ಸೋಮೇಶ್ವರ ಕಡಲತೀರ ನೈಸರ್ಗಿಕ ಸೌಂದರ್ಯದ ಅತ್ಯಂತ ಅಪರೂಪದ ಕಡಲತೀರ ಮಾತ್ರವಲ್ಲದೆ ಬೈಂದೂರಿನ ಪಾಲಿನ ನಿಸರ್ಗದತ್ತ ಕೊಡುಗೆ. ಹೀಗಾಗಿ ಭವಿಷ್ಯದ ಬೆಳವಣಿಗೆಯ ದೃಷ್ಟಿಯಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರ ಇದರ ಅಭಿವೃದ್ದಿಗೆ ನೀಲನಕಾಶೆ ಸಿದ್ದಪಡಿಸಬೇಕಿದೆ.

ರಾಜ್ಯ, ರಾಷ್ಟ್ರಮಟ್ಟ ಕ್ರೀಡಾಪಟುಗಳಿಗೆ, ಕ್ರೀಡಾ ಪೋಷಕರಿಗೆ ಗೌರವಾರ್ಪಣೆ



ಶಿರ್ವ: ರಾಜ್ಯ ದೈಹಿಕ ಶಿಕ್ಷಣ ಶಿಕ್ಷಕರ ಸಂಘ ಉಡುಪಿ ತಾಲೂಕು ಘಟಕದ ವತಿಯಿಂದ ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕರಿಗೆ ಸನ್ಮಾನ, ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಪ್ರಶಸ್ತಿ ವಿಜೇತ ಕ್ರೀಡಾಪಟುಗಳಿಗೆ ಹಾಗೂ ಕ್ರೀಡಾ ಪೋಷಕರಿಗೆ ಅಭಿನಂದನಾ ಕಾರ್ಯಕ್ರಮ ಶನಿವಾರ ಕಟಪಾಡಿ ಎಸ್.ವಿ.ಎಸ್.ಪ.ಪೂ. ಕಾಲೇಜಿನ ಸಭಾಂಗಣದಲ್ಲಿ ಜರುಗಿತು.

ಅಧ್ಯಕ್ಷತೆಯನ್ನು ಉಡುಪಿ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಡಾ.ಎಲ್ಲಮ್ಮ ವಹಿಸಿದ್ದರು. ಕಕಟಪಾಡಿ ಎಸ್‌ವಿಎಸ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಚಾಲಕ ಕೆ.ಸತ್ಯೇಂದ್ರ ಪೈ ಉದ್ಘಾಟಿಸಿದರು. ಜಿಲ್ಲಾ ಅಮೆಚೂರ್ ಅತ್ಲೇಟಿಕ್ ಅಸೋಸಿಯೇಶನ್ ಅಧ್ಯಕ್ಷ ಹರಿಪ್ರಸಾದ್ ರೈ ಮುಖ್ಯ ಅತಿಥಿಗಳಾಗಿದ್ದರು. ಕಾಪು ಉದ್ಯಮಿ ಯೋಗೀಶ್ ಶೆಟ್ಟಿ ಕಟಪಾಡಿ ಗ್ರಾ.ಪಂ. ಅಧ್ಯಕ್ಷೆ ಪ್ರಭಾ ಬಿ.ಶೆಟ್ಟಿ ಕಾಪು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಬಿ. ಪುಂಡಲೀಕ ಮರಾತೆ ಶುಭ ಹಾರೈಸಿದರು. ನಿವೃತ್ತರಾದ ದೈ.ಶಿ.ಶಿಕ್ಷಕರಾದ ಪ್ರವೀಣ್ ಕುಮಾರ್ ಕಡಿಯಾಳಿ ಕಮಲಾ ಬ್ಯಾ ಪ್ರೌಢ ಶಾಲಾ ದೈ.ಶಿ.ಶಿಕ್ಷಕರಾದ ಸುದರ್ಶನ್ ನಾಯಕ್ ಇವರನ್ನು ಸನ್ಮಾನಿಸಲಾಯಿತು. ಉಡುಪಿ ವಲಯದಲ್ಲಿ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಪ್ರಶಸ್ತಿ ವಿಜೇತ ಕ್ರೀಡಾಪಟುಗಳಿಗೆ ಹಾಗೂ ಕ್ರೀಡಾ ಪೋಷಕರಿಗೆ ಸನ್ಮಾನಿಸಲಾಯಿತು. ತಾಲೂಕು ಯುವಜನ ಸೇವಾ ಕ್ರೀಡಾ ಇಲಾಖೆ ಅಧಿಕಾರಿ ರಿತೇಶ್ ಶೆಟ್ಟಿ ಸೂಡ, ಎಸ್‌ವಿಎಸ್ ಪ್ರೌಢ ಶಾಲಾ ವಿಭಾಗದ ಮುಖ್ಯ ಶಿಕ್ಷಕಿ ಜಯಲಕ್ಷ್ಮೀ ಶಾನುಭೋಗ್, ಗ್ರೇಡ್ 2 ಸಂಘದ ಜಯಲಕ್ಷ್ಮೀ, ಗ್ರೇಡ್ 1 ಸಂಘದ ಕಾರ್ಯದರ್ಶಿ ಪ್ರಸಾದ್ ಸುವರ್ಣ ಇದ್ದರು. ಕೆ.ಸತ್ಯೇಂದ್ರ ಪೈ, ಡಾ. ಎಲ್ಲಮ್ಮ ಅವರನ್ನು ಸನ್ಮಾನಿಸಲಾಯಿತು. ಸಂಘದ ಅಧ್ಯಕ್ಷ ಕಿರಣ್ ಕುಮಾರ್ ಶೆಟ್ಟಿ ಸ್ವಾಗತಿಸಿದರು. ದೈ.ಶಿ.ಪರಿವೀಕ್ಷಣಾಧಿಕಾರಿ ರವೀಂದ್ರ ನಾಯಕ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿವನಗೌಡ ಹಿರೇಗೌಡರ ವಂದಿಸಿದರು. ನವೀನ್ ಶೆಟ್ಟಿ ನಿರೂಪಿಸಿದರು.

ಪಡುಪರ್ಕಳ: ಗೋವುಕಲ್ಲು, ಪ್ರಾಣಿ ಪಕ್ಷಿ ಬಾಯಾರಿಕೆ ನಿವಾರಣಾ ಕೇಂದ್ರ ಉದ್ಘಾಟನೆ



ಹೆಬ್ರಿ: ಮನೆ ಮನದಲ್ಲಿ ದೇವರು ಇದ್ದಾಗ ಮಾತ್ರ ನಮಗೆ ಜನರ ಸೇವೆ ಮಾಡುವ ಮನಸ್ಸು ಬರುತ್ತದೆ. ಹಿರಿಯರ ಸ್ಮರಣೆ ಇರುತ್ತದೆ. ಹಲವು ಕಡೆಗಳಲ್ಲಿ ಮನೆಗಳಲ್ಲಿ ದೇವರು ಇರುವುದಿಲ್ಲ, ಪಡುಪರ್ಕಳದ ಹರೀಶ ಶೆಟ್ಟಿಯವರ ಮನೆ ಮನದಲ್ಲಿ ದೇವರು ಇದ್ದಾರೆ ಎಂಬುದಕ್ಕೆ ಅವರ ಮನೆ ಮತ್ತು ಜನಸೇವೆಯ ಮನಸಾಕ್ಷಿಯೇ ಪ್ರಮುಖ ಕಾರಣವಾಗಿದೆ ಎಂದು ಮಧ್ವಾಚಾರ್ಯ ಮಹಾಸಂಸ್ಥಾನ ಉಡುಪಿ ಕಾಣಿಯೂರು ಮಠಾದೀಶ ಶ್ರೀ ವಿದ್ಯಾವಲ್ಲಭ ತೀರ್ಥ ಶ್ರೀಪಾದರು ಮೆಚ್ಚುಗೆ ವ್ಯಕ್ತಪಡಿಸಿದರು.

ಅವರು ಇತ್ತೀಚೆಗೆ ಪಡುಕುಡೂರು ಪಡುಪರ್ಕಳದಲ್ಲಿ ಜಾಗತಿಕ ಬಂಟರ ಸಂಘಗಳ ಒಕ್ಕೂಟದ ನಿರ್ದೇಶಕ ಮುಂಬೈ ಉದ್ಯಮಿ ಪಡುಪರ್ಕಳ ಹರೀಶ ಶೆಟ್ಟಿಯವರ ತಂದೆ ಕುರ್ಪಾಡಿ ಸಂಜೀವ ಶೆಟ್ಟಿಯವರ ಸ್ಮರಣಾರ್ಥ ಗೋವು ಕಲ್ಲು ಮತ್ತು ಪ್ರಾಣಿ ಪಕ್ಷಿಗಳ ಬಾಯಾರಿಕೆ ನಿವಾರಣಾ ಕೇಂದ್ರವನ್ನು ಉದ್ಘಾಟಿಸಿ ಆಶೀರ್ವಚನ ನೀಡಿದರು.

ಪಡುಪರ್ಕಳದ ಹರೀಶ ಶೆಟ್ಟಿ ಮತ್ತು ತಾಯಿ ಸುನಂದ ಶೆಟ್ಟಿ ಹಾಗೂ ಪಡುಪರ್ಕಳ ಕುಟುಂಬಸ್ಥರು ಸ್ವಾಮೀಜಿಯವರ ಪಾದಪೂಜೆ ನೆರವೇರಿಸಿದರು.

ಮುನಿಯಾಲು ಉದಯ ಕೃಷ್ಣಯ್ಯ ಶೆಟ್ಟಿ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಉದಯ ಕುಮಾರ್ ಶೆಟ್ಟಿ, ಪಡುಪರ್ಕಳ ಶಂಕರ ಶೆಟ್ಟಿ, ಮುನಿಯಾಲು ಗೋಪಿನಾಥ ಭಟ್, ಜಗದೀಶ ಹೆಗ್ಡೆ ಪಡುಕುಡೂರು, ಅಶೋಕ ಎಂ.ಶೆಟ್ಟಿ, ಪ್ರಸನ್ನ ಶೆಟ್ಟಿ ಪಡುಕುಡೂರು, ಸುರೇಶ ಶೆಟ್ಟಿ ಶಿವಪುರ ಸೇರಿದಂತೆ ಪ್ರಮುಖರು, ಗಣ್ಯರು, ಸಂಘಸಂಸ್ಥೆಗಳ ಪ್ರಮುಖರು, ಪಡುಪರ್ಕಳ ಕುಟುಂಬಸ್ಥರು ಉಪಸ್ಥಿತರಿದ್ದರು.

ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯ ಶಿವರಾತ್ರಿ ಸಂಭ್ರಮ



ಕಾರ್ಕಳ : ನಗರದ ಎಸ್‌ವಿಟಿ ಶಾಲಾ ರಸ್ತೆಯ ಪ್ರಜಾಪಿತಾ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯದಲ್ಲಿ ಮಹಾ ಶಿವರಾತ್ರಿ ಹಬ್ಬದ ಸಲುವಾಗಿ ಸಹಸ್ರ ಲಿಂಗ ದರ್ಶನ ವಿನುತನ ಕಾರ್ಯಕ್ರಮ ಜರಗಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಎನ್. ಪಿ. ಗ್ರೂಪ್‌ನ ಚೇರ್ಮನ್ ಹಾಗೂ ಮನೆಜಿಂಗ್ ಡೈರೆಕ್ಟರ್ ಎನ್. ವಾಸುದೇವ್ ಭಟ್ ನೆರವೇರಿಸಿದರು. ಶಿವರಾತ್ರಿಯ ಈ ಸಂದರ್ಭದಲ್ಲಿ ಸಹಸ್ರ ಲಿಂಗ ದರ್ಶನದಿಂದ ಸರ್ವರಿಗೂ ಪರಮಾತ್ಮ ಶಿವನ ಅನುಗ್ರಹ ವಾಗಲಿ ಎಂದು ಅವರು ಹೇಳಿದರು.

ಉಡುಪಿ ಜಿಲ್ಲಾ ಧಾರ್ಮಿಕ ಹಾಗೂ ದತ್ತಿ ಇಲಾಖೆಯ ಸದಸ್ಯ ಕೃಷ್ಣಮೂರ್ತಿ ಮಾತನಾಡಿ, ನಂಬಿಕೆ ಹಾಗೂ ವಿಶ್ವಾಸದಿಂದ ದೇವರಿಂದ ಇಷ್ಟಾರ್ಥ ಸಿದ್ದಿಸುತ್ತದೆ ಎಂದರು.

ಭಾರತೀಯ ಜೇಸಿಸ್ ನ ಜೋನ್ 15ರ ವಲಯ ಕಾರ್ಯದರ್ಶಿ, ಸಮದ್ ಖಾನ್ ರವರು ಧರ್ಮ ಶರೀರಕ್ಕೆ ಸಂಬಂಧಪಟ್ಟ ವಿಷಯ. ನಾವೆಲ್ಲ ಒಬ್ಬ ಪರಮಾತ್ಮನ ಮಕ್ಕಳು ಎಂದರು. ಕಾರ್ಕಳ ರೋಟರಿ ಕ್ಲಬ್ ಅಧ್ಯಕ್ಷ ನವೀನಚಂದ್ರ ಶೆಟ್ಟಿ ಮಾತನಾಡಿ, ಧ್ಯಾನ ಮಂದಿರದ ವಾತಾವರಣದಲ್ಲಿ ಪರಮಾತ್ಮನ ಅನುಭುತಿ ಸಹಜವಾಗಿ ಪ್ರಾಪ್ತಿಯಾಗುತ್ತದೆ ಎಂದರು.

ಕಾರ್ಕಳ ಸೇವಾ ಕೇಂದ್ರದ ಸಂಚಾಲಕಿ ರಾಜಯೋಗಿನಿ ಬ್ರಹ್ಮಕುಮಾರಿ ವಿಜಯಲಕ್ಷ್ಮಿ ಮಾತನಾಡಿ, ಪರಮಾತ್ಮನು ಸರ್ವ ಧರ್ಮದವರಿಗೂ ಓಬ್ಬರೇ ಆಗಿದ್ದಾರೆ. ಪರಮಾತ್ಮನನ್ನು ಬೇರೆ ಬೇರೆ ಧರ್ಮದವರು ಬೇರೆ ಬೇರೆ ಹೆಸರಿನಿಂದ ಕರೆಯುತ್ತಿದ್ದು ಧರ್ಮಗ್ಲಾನಿಯ ಈ ಸಮಯದಲ್ಲಿ ಪರಮಾತ್ಮನು ಧರೆಗೆ ಇಳಿದು ಪ್ರಜಾಪಿತ ಬ್ರಹ್ಮನ ಶರೀರದಲ್ಲಿ ಪ್ರವೇಶಿಸಿ ಈಶ್ವರೀಯ ವಿಶ್ವ ವಿದ್ಯಾಲಯವನ್ನು ಸ್ಥಾಪಿಸಿದ್ದಾರೆ. ಇಂದು ಈಶ್ವರೀಯ ವಿಶ್ವ ವಿದ್ಯಾಲಯವು ನೂರ ನಾಲ್ವತ್ತು ರಾಷ್ಟಗಳಲ್ಲಿ ತನ್ನ ಸೇವಾ ಕೇಂದ್ರದ ಮೂಲಕ ಮನಃಶಾಂತಿಯ ಜೊತೆಗೆ ವಿಶ್ವ ಶಾಂತಿಯ ಕಾರ್ಯವನ್ನು ಮಾಡುತ್ತಿದ್ದಾರೆ. ಸಂಸ್ಥೆಯು ವಿಶ್ವ ಸಂಸ್ಥೆಯಯಿಂದ ವಿಶ್ವಶಾಂತಿಗಾಗಿ ಸಲಹೆಗಾರ ಸಂಸ್ಥೆಯಾಗಿ ಮಾನ್ಯತೆ ಪಡೆದಿದೆ. ಇಂದು ಲಕ್ಷಾಂತರ ಜನರು ಸಂಸ್ಥೆಯಿಂದ ಲಾಭ ಪಡೆಯುತ್ತಿದ್ದು ಸಾರ್ವಜನಿಕರು ಇಲ್ಲಿ ಉಚಿತವಾಗಿ ಕಲಿಸಿಕೊಡುವಂತಹ ರಾಜಯೋಗ ಶಿಕ್ಷಣವನ್ನು ಪಡೆದುಕೊಳ್ಳಬೇಕಾಗಿ ವಿನಂತಿಸಿದರು. ಬಿ.ಕೆ ಶಾಂತ ಸ್ವಾಗತಿಸಿದರು. ಬಿ.ಕೆ ಗಾಯತ್ರಿ ಧನ್ಯವಾದ ಅರ್ಪಿಸಿದರು. ಬಿ.ಕೆ ವರದರಾಯ ಪ್ರಭು ಕಾರ್ಯಕ್ರಮ ನಿರ್ದೇಶಿಸಿದರು.

ಪ್ರಸಾದ್ ನೇತ್ರಾಲಯ, ನಮೋ ಫ್ರೆಂಡ್ಸ್ ವತಿಯಿಂದ ನೇತ್ರ ತಪಾಸಣೆ ಕನ್ನಡಕ ವಿತರಣೆ



ಉಡುಪಿ: ಪ್ರಸಾದ್ ನೇತ್ರಾಲಯ, ನೇತ್ರಜ್ಯೋತಿಚಾರಿಟೇಬಲ್ ಟ್ರಸ್ ನಮೋ ಫ್ರೆಂಡ್ಸ್, ದೊಡ್ಡಣಗುಡ್ಡೆ, ಮಹಿಳಾ ಮಂಡಳಿ, ದೊಡ್ಡಣಗುಡ್ಡೆ, ಬೆಂಗಳೂರು ಆಲೋಕಾ ವಿಷನ್ ಫೌಂಡೇಶನ್, ನಮ್ಮ ಕ್ಲಿನಿಕ್‌ದೊಡ್ಡಣಗುಡ್ಡೆ, ಜಿಲ್ಲಾಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದೊ೦ದಿಗೆ, ದೊಡ್ಡಣಗುಡ್ಡೆ ಯಕೋಯಲ್ ಕಾಂಪ್ಲೆಕ್ಸ್‌ನಲ್ಲಿ ಉಚಿತ ನೇತ್ರ ತಪಾಸಣೆ ಹಾಗೂ ಉಚಿತಕನ್ನಡಕ ವಿತರಣಾ ಶಿಬಿರ ನಡೆಯಿತು.

ಪ್ರಸಾದ್ ನೇತ್ರಾಲಯ ಸೂಪರ್ ಸ್ಪೆಷಾಲಿಟಿ ಸಮೂಹ ಕಣ್ಣಿನ ಆಸ್ಪತ್ರೆಗಳ ವೈದ್ಯಕೀಯ ನಿರ್ದೇಶಕ ಡಾ. ಕೃಷ್ಣಪ್ರಸಾದ್‌ಕೂಡ್ಲು ಶಿಬಿರಕ್ಕೆ ಚಾಲನೆ ನೀಡಿ, ದೇಹದ ಎಲ್ಲಾ ಅಂಗಾಂಗಗಳು ಚೆನ್ನಾಗಿದ್ದು, ಕಣ್ಣಿನ ದೃಷ್ಟಿಯಲ್ಲಿ ನ್ಯೂನ್ಯತೆ ಇದ್ದರೆ ಯಾವ ಕೆಲಸವನ್ನೂ ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಿಲ್ಲ, ಹಾಗಾಗಿಕಣ್ಣಿನತೊಂದರೆಗಳನ್ನು ನಿರ್ಲಕ್ಷಿಸಬಾರದು ಎಂದರು.

ನಗರ ಸಭಾಧ್ಯಕ್ಷ, ನಮೋ ಫ್ರೆಂಡ್ಸ್ ಸ್ಥಾಪಕಾಧ್ಯಕ್ಷ ಪ್ರಭಾಕರ ಪೂಜಾರಿ ಅಧ್ಯಕ್ಷತೆ ವಹಿಸಿದ್ದರು. ನಮೋ ಫ್ರೆಂಡ್ಸ್ ಅಧ್ಯಕ್ಷ ರಾಜೇಶ್, ಮಾಜಿ ಅಧ್ಯಕ್ಷ ವಿನಯ ಪೂಜಾರಿ, ಬಿಲ್ಲವ ಸಂಘದ ಅಧ್ಯಕ್ಷ ನಾರಾಯಣ ಪೂಜಾರಿ, ನಮ್ಮ ಕ್ಲಿನಿಕ್‌ನ ವೈದ್ಯ ಡಾ. ರಕ್ಷಣ್, ಉಡುಪಿ ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷ ರುಡಾಲ್ಫ್, ದೊಡ್ಡಣಗುಡ್ಡೆ ಮಹಿಳಾ ಮಂಡಳಿ ಅಧ್ಯಕ್ಷೆ ರಶ್ಮಿತಾ ಬಾಲಕೃಷ್ಣ ಶೆಟ್ಟಿ ಇದರು. ಕೋಯಲ್ ನಿರೂಪಿಸಿದರು, ರತನ್ ವಂದಿಸಿದರು. 216 ಜನರು ನೇತ್ರ ತಪಾಸಣೆಗೆ ಒಳಗಾದರು. 17 ಜನರನ್ನು ಕಣ್ಣಿನ ಉಚಿತ ಪೊರೆ ಶಸ್ತ್ರಚಿಕಿತ್ಸೆಗಾಗಿ ಶಿಫಾರಸು ಮಾಡಲಾಯಿತು. 168 ಜನರನ್ನು ಉಚಿತ ಕನ್ನಡಕ ವಿತರಣೆಗೆ ಆಯ್ಕೆ ಮಾಡಲಾಯಿತು.

ಕಲ್ಲಟ್ಟು ಶ್ರೀ ಮಹಾಲಿಂಗೇಶ್ವರ ದೇಗುಲದಲ್ಲಿ ಶಿವರಾತ್ರಿ, ಧಾರ್ಮಿಕ ಸಭೆ



ಕೋಟ: ಕಲ್ಲಟ್ಟು ಶ್ರೀ ಮಹಾಲಿಂಗೇಶ್ವರ ದೇಗುಲ ಪುರಾತನವಾದ ಕಾರಣಿಕ ಕ್ಷೇತ್ರಗಳಲ್ಲೊಂದಾಗಿದೆ. ಈ ನಿಟ್ಟಿನಲ್ಲಿ ಭಕ್ತ ಸಮುದಾಯ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವುದು ಸಾಕ್ಷಿಯಾಗಿದೆ ಎಂದು ಸಮಾಜ ಸೇವಕ ಪಾರಂಪಳ್ಳಿ ರವೀಂದ್ರ ಐತಾಳ್ ಹೇಳಿದರು.

ಭಾನುವಾರ ಕೋಟದ ಹರ್ತಟ್ಟು ಕಲ್ಲಟ್ಟು ಶ್ರೀ ಮಹಾಲಿಂಗೇಶ್ವರ ದೇಗುಲದಲ್ಲಿ ಶಿವರಾತ್ರಿ ಉತ್ಸವದ ಅಂಗವಾಗಿ ಹಮ್ಮಿಕೊಂಡ ಧಾರ್ಮಿಕ ಸಮಾರಂಭದಲ್ಲಿ ಮಾತನಾಡಿ, ಧಾರ್ಮಿಕ ಕ್ಷೇತ್ರಗಳ ಅಭಿವೃದ್ಧಿ ಪ್ರತಿಯೊರ್ವರ ಸಹಕಾರ ಅವಶ್ಯ. ಈ ನಿಟ್ಟಿನಲ್ಲಿ ಆನಂದ್ ಸಿ. ಕುಂದರ್ ದೇಗುಲಗಳ ಅಭಿವೃದ್ಧಿಗೆ ಸಾಕಷ್ಟು ದೇಣಿಗೆಗಳನ್ನು ನೀಡುತ್ತಿದ್ದಾರೆ. ಅಂತಯೇ ಈ ದೇಗುಲಕ್ಕೆ ತನ್ನ ವತಿಯಿಂದ 25ಸಾವಿರ ರೂ. ಅಭಿವೃದ್ಧಿಗೆ ನೀಡುವುದಾಗಿ ಘೋಷಿಸಿದರು. ಅಧ್ಯಕ್ಷತೆಯನ್ನು ದೇಗುಲದ ಅಧ್ಯಕ್ಷ ಸುರೇಶ್ ಗಾಣಿಗ ಶೇವಧಿ ವಹಿಸಿದ್ದರು. ದೇಗುಲದ ಗೌರವಾಧ್ಯಕ್ಷ ಆನಂದ್ ಸಿ. ಕುಂದರ್ ಉದ್ಘಾಟಿಸಿದರು. ದೇಗುಲದ ಸೇವೆಯಲ್ಲಿ ನಿರತರಾದ ಸುಜಾತ ಶ್ರೀಧರ ದೇವಾಡಿಗ, ಜೀವನ್ ಸಮೃದ್ಧ್, ದೇವಿ ಮಂಜುನಾಥ ದೇವಾಡಿಗ ಇವರುಗಳನ್ನು ಸನ್ಮಾನಿಸಲಾಯಿತು. ಮುಖ್ಯ ಅಭ್ಯಾಗತರಾಗಿ ಕೋಟ ಪಂಚಾಯತ್ ಉಪಾಧ್ಯಕ್ಷರಾದ ಪಾಂಡು ಪೂಜಾರಿ, ಸದಸ್ಯರಾದ ಅಜಿತ್ ದೇವಾಡಿಗ,ಸಾಮಾಜಿಕ ಕಾರ್ಯಕರ್ತ ದಿನೇಶ್ ಗಾಣಿಗ, ಕೋಟ ಅಮೃತೇಶ್ವರೀ ದೇಗುಲದ ಟ್ರಸ್ಟಿ ಸುಭಾಷ್ ಶೆಟ್ಟಿ ಗುತ್ತಿಗೆದಾರ ಹೋಬಳಿಮನೆ ರಾಜು ಪೂಜಾರಿ, ದೇಗುಲದ ಕಾರ್ಯದರ್ಶಿ ಹರೀಶ್ ದೇವಾಡಿಗ ಮತ್ತಿತರರು ಇದ್ದರು. ಕಾರ್ಯಕ್ರಮವನ್ನು ದೀಪಿಕಾ ರವಿ ಸ್ವಾಗತಿಸಿ ನಿರೂಪಿಸಿ, ವಂದಿಸಿದರು.

ಗೋಳಿಹೊಳೆ ಶ್ರೀ ಸಿದ್ಧಲಿಂಗೇಶ್ವರ ದೇವಸ್ಥಾನದಲ್ಲಿ ಮಹಾ ಶಿವರಾತ್ರಿ



ಬೈಂದೂರು: ತಾಲೂಕಿನ ಗೋಳಿಹೊಳೆ ಸಮೀಪದ ತಾಯಿನಾಡು ಶ್ರೀ ಅಮೃತೇಶ್ವರೀ, ಶ್ರೀ ಸಿದ್ಧಲಿಂಗೇಶ್ವರ ದೇವಸ್ಥಾನದಲ್ಲಿ ಮಹಾ ಶಿವರಾತ್ರಿ ಉತ್ಸವ ವೇ.ಮೂ. ನಾಗರಾಜ್ ಐತಾಳ್ ನಾಗೂರು ನೇತೃತ್ವದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಬೆಳಿಗ್ಗೆ ಗಣಪತಿ ದೇವರಿಗೆ ಆರು ಕಾಯಿ ಗಣಹೋಮ, ಶ್ರೀ ದೇವಿಗೆ ದುರ್ಗಾ ಹೋಮ, ಶ್ರೀ ವಿಷ್ಣುದೇವರಿಗೆ ವಿಷ್ಣು ಸಹಸ್ರನಾಮ ಪಾರಾಯಣ ನಡೆಯಿತು. ಮಧ್ಯಾಹ್ನ ಮಹಾಪೂಜೆ, ತೀರ್ಥ, ಬಳಿಕ ಮಹಾ ಅನ್ನಸಂತರ್ಪಣೆ ನೆರವೇರಿತು.

ಸಂಜೆ 6.30ರಿಂದ ಶ್ರೀ ಸಿದ್ಧಲಿಂಗೇಶ್ವರ ದೇವರಿಗೆ ಏಕಾದಶ ರುದ್ರಾಭಿಷೇಕ, ಬಿಲ್ವಾರ್ಚನೆ,ಮಹಾಪೂಜೆನಡೆಯಿತು. ರಾತ್ರಿ ಗಂಟೆ 10ರಿಂದ ಮಧ್ಯ ರಾತ್ರಿಯ ತನಕ ಸ್ಥಳೀಯ ಭಜನಾ ಮಂಡಳಿ ಅವರಿಂದ ಭಜನಾ ಕಾರ್ಯಕ್ರಮ ನೆರವೇರಿತು. ಈ ಸಂದರ್ಭದಲ್ಲಿ ದೇಗುಲದ ಮುಖ್ಯಸ್ಥ ಜಯರಾಮ ಪೂಜಾರಿ ಉಪಸ್ಥಿತರಿದ್ದರು.

ಬೈಂದೂರು ತಾ.ಪಂ. ಸಭಾಂಗಣದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷಾ ಪೂರ್ವ ಸಿದ್ಧತಾ ಸಭೆ | ಶಾಸಕ ಗುರುರಾಜ ಗಂಟಿಹೊಳೆ ಸೂಚನೆ

ಕಡಿಮೆ ಶೈಕ್ಷಣಿಕ ಸಾಧನೆ ತೋರಿದ ಶಾಲೆಗಳಲ್ಲಿ ಹೆಚ್ಚಿನ ಫಲಿತಾಂಶಕ್ಕೆ ಪ್ರಯತ್ನವಿರಲಿ

ಉಪ್ಪುಂದ: ಈಗಾಗಲೇ ಬೈಂದೂರು ವ್ಯಾಪ್ತಿಯ ಕೆಲವು ಶಾಲೆಗಳು ಕಳೆದ ಸಾಲಿನ ಫಲಿತಾಂಶದಲ್ಲಿ ಹಿನ್ನಡೆ ಕಂಡಿದ್ದು, ಅಂತಹ ಶಾಲೆಗಳು ಈ ಸಾಲಿನಲ್ಲಿ ಸುಧಾರಿತ ಕ್ರಮಗಳ ಬಗ್ಗೆ ಚಿಂತನೆ ನಡೆಸಿದ್ದಾರೆ. ಕಳೆದ ಸಾಲಿನಲ್ಲಿ ಕಡಿಮೆ ಶೈಕ್ಷಣಿಕ ಸಾಧನೆ ತೋರಿದ ಶಾಲೆಗಳಲ್ಲಿ ಹೆಚ್ಚಿನ ಫಲಿತಾಂಶ ಕಾಣುವ ಪ್ರಯತ್ನ ಮಾಡಬೇಕಾಗಿದೆ. ಪಾಲಕರ, ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಸಮ್ಮಿಳಿತದ ಪ್ರಯತ್ನದಲ್ಲಿ ಪ್ರತೀ ಪ್ರೌಢಶಾಲೆಯೂ ಉತ್ತಮ ಫಲಿತಾಂಶದ ಗುರಿಯೆಡೆಗೆ ಸಾಗಬೇಕು. ಕೇವಲ ಫಲಿತಾಂಶಕ್ಕಾಗಿ ಶಿಕ್ಷಣದ ಮೌಲ್ಯವೂ ಕಡಿಮೆಯಾಗಬಾರದು ಜತೆಗೆ ಶಿಕ್ಷಕರ ಸಮಸ್ಯೆಗಳು ಕೂಡ ಮಕ್ಕಳ ಭವಿಷ್ಯಕ್ಕೆ ಮಾರಕವಾಗಬಾರದು ಎಂದು ಶಾಸಕ ಗುರುರಾಜ ಗಂಟಿಹೊಳೆ ಹೇಳಿದರು.



ಬೈಂದೂರುತಾಲೂಕುಪಂಚಾಯತ್‌ಸಭಾಂಗಣದಲ್ಲಿ ಸೋಮವಾರ ನಡೆದ ಎಸ್ಸೆಸ್ಸೆಲ್ಸಿ ಪರೀಕ್ಷಾ ಪೂರ್ವ ಸಿದ್ದತಾ ಸಭೆಯಲ್ಲಿ ಮಾತನಾಡಿದರು.

ಎರಡು ದೃಷ್ಟಿಕೋನವಿರಲಿ

ಕುಂದಾಪುರ ಹಾಗೂ ಬೈಂದೂರು ಕ್ಷೇತ್ರ ಶಿಕ್ಷಣಾಧಿಕಾರಿಗಳು ಈಗಾಗಲೇ ಒಂದಿಷ್ಟು ಪರೀಕ್ಷಾ ತಯಾರಿ ಮಾಡಿಕೊಂಡಿದ್ದು ಯಾವ ವಿದ್ಯಾರ್ಥಿಯೂ ಅನುತ್ತೀರ್ಣನಾಗಬಾರದು ಎಂಬುದು ಒಂದು ರೀತಿಯಾದರೆ, ರ್‍ಯಾಂಕ್ ಬರುವ ವಿದ್ಯಾರ್ಥಿಗಳೂ ರ್‍ಯಾಂಕ್ ಪಡೆಯಬೇಕು ಎಂಬ ಎರಡೂ ದೃಷ್ಟಿಕೋನದಿಂದ ಕಾಳಜಿವಹಿಸಬೇಕು ಎಂಬ ನೆಲೆಯಲ್ಲಿ ಇಂದಿನ ಮುಖ್ಯಶಿಕ್ಷಕರ ಸಭೆಯನ್ನು ನಡೆಸಲಾಗಿದೆ ಎಂದರು.

ಮುಂಬರುವ ಎಸ್ಸೆಸ್ಸೆಲ್ಸಿ ಪರೀಕ್ಷೆ ಎದುರಿಸುವ, ಕಲಿಕೆಯಲ್ಲಿ ಹಿಂದಿರುವ ವಿದ್ಯಾರ್ಥಿಗಳ ಸಾಮರ್ಥ್ಯ ವೃದ್ಧಿಗೆ ಬೈಂದೂರು ವಲಯದಲ್ಲಿ ವಿಶೇಷ ಕ್ರಮಕ್ಕೆ ಚಿಂತನೆ ಮಾಡಲಾಗಿದೆ. ವಿವಿಧ ಶಾಲೆಗಳ ಅಂತಹ ವಿದ್ಯಾರ್ಥಿಗಳಿಗೆ ವಿಶೇಷ ಪರಿಣತಿ ಹೊಂದಿದ ಮತ್ತು ಬೋಧನಾ ಸಾಧನೆ ಮಾಡಿರುವ ಶಿಕ್ಷಕರಿಂದ, ಇಲಾಖೆಯಿಂದ, ಸಂಪನ್ಮೂಲ ವ್ಯಕ್ತಿಗಳ ಸಹಕಾರದಿಂದ ಮಕ್ಕಳಲ್ಲಿ ಧೈರ್ಯ ತುಂಬುವ, ಪರೀಕ್ಷೆಯ ಭಯ ದೂರ ಮಾಡುವ ಬಗ್ಗೆ ವಿಶೇಷ ತರಗತಿ ಆಯೋಜಿಸಬೇಕಾಗುತ್ತದೆ ಎಂದರು.

ಡಿಡಿಪಿಐ ಲೋಕೇಶ್, ಬೈಂದೂರು ಬಿಇಒ ನಾಗೇಶ ಕೆ. ನಾಯ್ಕ್, ಕುಂದಾಪುರ ಬಿಇಒ ಶೋಭಾ ಶೆಟ್ಟಿ, ತಾಲೂಕು ಪ್ರೌಢಶಾಲಾ ಮುಖ್ಯಶಿಕ್ಷಕರ ಸಂಘದ ಅಧ್ಯಕ್ಷ ಸುರೇಂದ್ರ ಶೆಟ್ಟಿ, ಸಹಶಿಕ್ಷಕರ ಸಂಘದ ಅಧ್ಯಕ್ಷ ಸದಾನಂದ ಶೆಟ್ಟಿ ಇದ್ದರು. ಒಟ್ಟು 20 ಪ್ರೌಢಶಾಲಾ ಮುಖ್ಯಸಿಕ್ಷಕರು, ಸಿಆರ್‌ಪಿ, ಬಿಆರ್‌ಪಿ, ಬಿಆರ್‌ಸಿ ಸಭೆಯಲ್ಲಿದ್ದರು.

> **ಉತ್ತಮ ಫಲಿತಾಂಶ ನಿರೀಕ್ಷೆ**
> ಕ್ಷೇತ್ರದ ಪ್ರತಿಯೊಬ್ಬ ಶಿಕ್ಷಕರೂ ಕೂಡ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದು, ಅವರ ಪರಿಶ್ರಮವು ಉತ್ತಮ ಫಲಿತಾಂಶ ತರುವ ನೀರೀಕ್ಷೆಯಿದೆ.
> ● ಗುರುರಾಜ ಗಂಟಿಹೊಳೆ, ಶಾಸಕ